www.KannadaPrabha.in | ಮಂಗಳವಾರ 5.05.2026 | • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ | Kannada Prabha • Daily • Tuesday • 05.05.2026 • Volume 60 • Issue 124 • Pages 14+2 | • Price ₹7 | Mangaluru

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಮೋದಿಯ ಮುಂದೆ ಮಂಕಾದ ದೀದಿ

ಮೊದಲ ಯತ್ನದಲ್ಲೇ ವಿಜಯದ ವಿಶಲ್

ಪಂಚರಾಜ್ಯಗಳ ಚುನಾವಣೆಯಲ್ಲಿ ಐತಿಹಾಸಿಕ ಫಲಿತಾಂಶ

ಬಿಜೆಪಿ ಪರ ಬಂಗಾಳ ಪರಿವರ್ತನೆ | ಹಳೆ ದ್ರಾವಿಡ ಪಕ್ಷಗಳ ತಿರಸ್ಕರಿಸಿ ತ.ನಾಡು ಪರಿವರ್ತನೆ

ಪೊರಿಬೊರ್ತನ್!

ಮೋದಿ-ಶಾ ಆರ್ಭಟ: ದೀದಿ ಧೂಳೀಪಟ | 206 ಸೀಟು ಗೆದ್ದು ಬಂಗಾಳದಲ್ಲಿ ಮೊದಲ ಸಲ ಬಿಜೆಪಿ ಸರ್ಕಾರ

ತ.ನಾಡಿಗೆ ವಿಜಯ್ ಜನನಾಯಕ | 60 ವರ್ಷದಲ್ಲೇ ಡಿಎಂಕೆ, ಅಣ್ಣಾಡಿಎಂಕೆ ಬಿಟ್ಟು ಮೂರನೆ ಪಕ್ಷಕ್ಕೆ ಗದ್ದುಗೆ

10 ವರ್ಷಗಳ ಬಳಿಕ ಕೇರಳ ಕೈವಶ | ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ | ಪುದುಚೇರ್‌ಗೆ ಮತ್ತೊಮ್ಮೆ ರಂಗಸ್ವಾಮಿ

34 ವರ್ಷ ಬಂಗಾಳದಲ್ಲಿ ಅಧಿಕಾರದಲ್ಲಿದ್ದ ಎಡರಂಗವನ್ನು ಕಿತ್ತೊಗೆಯಲು 2011ರಲ್ಲಿ ಮಮತಾ ಬ್ಯಾನರ್ಜಿ ಬಂಗಾಳಿ ಭಾಷೆಯಲ್ಲಿ 'ಪೊರಿಬೊರ್ತನ್' (ಪರಿವರ್ತನೆ) ಎಂಬ ಘೋಷಣೆ ಮೊಳಗಿಸಿದ್ದರು. ಆ ವರ್ಷ ಬಂಗಾಳದಲ್ಲಿ ಪರಿವರ್ತನೆಯೇ ಆಗಿತ್ತು. 15 ವರ್ಷಗಳ ಬಳಿಕ ಬಂಗಾಳದಲ್ಲಿ ಮತ್ತೆ ಪರಿಬೊರ್ತನ್ ಆಗಿದೆ. ಫಲವಾಗಿ, ಬಿಜೆಪಿ ಮೊದಲ ಬಾರಿ ಅಧಿಕಾರಕ್ಕೇರಿದೆ. ಇತ್ತ ತ.ನಾಡಿನಲ್ಲೂ ಪೊರಿಬೊರ್ತನ್ ಆಗಿದೆ. ದೇಶವನ್ನೇ ವಿಜಯ್ ಅಚ್ಚರಿಗೆ ದೂಡಿದ್ದಾರೆ.

ತಮಿಳುನಾಡು — ಒಟ್ಟು ಸ್ಥಾನ: 234 | ಬಹುಮತಕ್ಕೆ: 118

ಪಕ್ಷ	2026	2021	ಲಾಭ/ನಷ್ಟ
ಟಿವಿಕೆ	107	----	+107
ಡಿಎಂಕೆ+	74	159	-85
ಎಡಿಎಂಕೆ+	52	75	-23
ಇತರರು	1	0	+1

ಪಶ್ಚಿಮ ಬಂಗಾಳ — ಒಟ್ಟು ಸ್ಥಾನ: 294 | ಬಹುಮತಕ್ಕೆ: 148

ಪಕ್ಷ	2026	2021	ಲಾಭ/ನಷ್ಟ
ಬಿಜೆಪಿ	206	77	+129
ಟಿಎಂಸಿ	81	214	-133
ಕಾಂಗ್ರೆಸ್	2	0	+2
ಇತರರು	4	2	+2

ಕೇರಳ — ಒಟ್ಟು ಸ್ಥಾನ: 140 | ಬಹುಮತಕ್ಕೆ: 71

ಪಕ್ಷ	2026	2021	ಲಾಭ/ನಷ್ಟ
ಯುಡಿಎಫ್	89	40	+49
ಎಲ್‌ಡಿಎಫ್	35	92	- 57
ಬಿಜೆಪಿ	03	0	+3
ಇತರರು	13	8	+5

ಅಸ್ಸಾಂ — ಒಟ್ಟು ಸ್ಥಾನ: 126 ಬಹುಮತಕ್ಕೆ: 64

ಪಕ್ಷ	2026	2021	ಲಾಭ/ನಷ್ಟ
ಬಿಜೆಪಿ	102	73	+29
ಕಾಂಗ್ರೆಸ್	21	31	- 10
ಎಐಯುಡಿಎಫ್	02	16	- 14
ಇತರರು	01	06	-5

ಪುದುಚೇರಿ — ಒಟ್ಟು ಸ್ಥಾನ: 30 ಬಹುಮತಕ್ಕೆ: 16

ಪಕ್ಷ	2026	2021	ಲಾಭ/ನಷ್ಟ
ಎಐಎನ್‌ಆರ್‌ಸಿ	18	16	+2
ಡಿಎಂಕೆ+	06	08	- 2
ಟಿವಿಕೆ	04	00	+ 4
ಇತರರು	03	06	-3


ದೇಶದಲ್ಲಿ ಎಲ್ಲೂ ಇಲ್ಲ ಎಡರಂಗ ಸರ್ಕಾರ



ಕೇರಳದಲ್ಲಿ ಎಡರಂಗದ ಸೋಲಿನೊಂದಿಗೆ ಯಾವುದೇ ರಾಜ್ಯದಲ್ಲಿ ಎಡಪಕ್ಷಗಳ ಸರ್ಕಾರ ಅಸ್ತಿತ್ವದಲ್ಲಿ ಇಲ್ಲದಂತಾಗಿದೆ. ಈ ರೀತಿ ಆಗಿದ್ದು 50 ವರ್ಷದಲ್ಲೇ ಮೊದಲು. 1977ರಿಂದ ದೇಶದ ಎಲ್ಲಾದರೂ 1 ಕಡೆ ಎಡರಂಗ ಸರ್ಕಾರ ಇರುತ್ತಿತ್ತು.

ಹಿಂದು ಕಲಿಗಳ ತವರಲ್ಲಿ ಹಿಂದು ಪಕ್ಷ ಅಧಿಕಾರಕ್ಕೆ





ಹಿಂದು ಧರ್ಮ ಪ್ರಚಾರಕ ಸ್ವಾಮಿ ವಿವೇಕಾನಂದರು ಹಾಗೂ ಬಿಜೆಪಿಯ ಪೂರ್ವಾಶ್ರಮ ಜನಸಂಘದ ಸ್ಥಾಪಕ ಶ್ಯಾಮಪ್ರಸಾದ ಮುಖರ್ಜಿ ಅವರ ತವರು ಬಂಗಾಳ. ದೇಶದ ಉದ್ದಗಲಕ್ಕೂ ಗೆಲುವಿನ ಪತಾಕೆ ಹಾರಿಸಿದ ಬಿಜೆಪಿಯು ಹಿಂದು ಪಕ್ಷ ಎನಿಸಿಕೊಂಡಿದ್ದರೂ ಬಂಗಾಳ ಪ್ರವೇಶ ಕಷ್ಟವಾಗಿತ್ತು. ಈಗ ಅಲ್ಲೂ ಗೆಲ್ಲುವ ಮೂಲಕ ಹಿಂದು ಕಲಿಗಳ ತವರಲ್ಲಿ ಚುಕ್ಕಾಣಿಗೇರಿದಂತಾಗಿದೆ.

ಪ.ಬಂಗಾಳ ಗೆಲುವಿಂದ ಬಾಂಗ್ಲಾದೇಶಕ್ಕೆ ನಡುಕ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆದ್ದಿರುವುದು ಆ ರಾಜ್ಯದ ಜತೆ ಗಡಿ ಹಂಚಿಕೊಂಡಿರುವ ಬಾಂಗ್ಲಾದೇಶಕ್ಕೆ ನಡುಕ ಹುಟ್ಟಿಸಿದೆ. ಬಾಂಗ್ಲಾ ಅಕ್ರಮ ವಲಸಿಗ ವಿಚಾರವನ್ನೇ ಮುಂದಿಟ್ಟು ಕೊಂಡು ಬಿಜೆಪಿ ಚುನಾವಣೆ ಎದುರಿಸಿತ್ತು. ಹೀಗಾಗಿ ಬಂಗಾಳದಿಂದ ಬಾಂಗ್ಲಾಕ್ಕೆ ಸಾಮೂಹಿಕ ವಲಸೆ ಆರಂಭವಾಗ ಬಹುದು, ಅದನ್ನು ನಿರ್ವಹಿಸು ವುದು ಹೇಗೆಂಬ ಚಿಂತೆ ಬಾಂಗ್ಲಾದೇಶದ್ದು.

ಮೋದಿ- ಅಮಿತ್ ಶಾ ಎಲೆಕ್ಷನ್ ಜೋಡೆತ್ತು



2014ರ ನಂತರ ಬಿಜೆಪಿಯದ್ದು ಸುವರ್ಣ ಯುಗ. ಮೋದಿ- ಅಮಿತ್ ಶಾ ಜೋಡಿ ಬಿಜೆಪಿ ಎಂದಿಗೂ ಗೆಲ್ಲದ ರಾಜ್ಯಗಳ ಲ್ಲೆಲ್ಲಾ ಏಕಾಂಗಿಯಾಗಿ ಪಕ್ಷವನ್ನು ಅಧಿಕಾರಕ್ಕೆ ತಂದಿದೆ. ಅಧಿಕಾರದಲ್ಲಿರುವ ರಾಜ್ಯಗಳನ್ನೂ ಉಳಿಸಿಕೊಂಡು ಹೋಗುತ್ತಿದೆ. ಅಮೆರಿಕ ಚುನಾವಣೆಯಲ್ಲೂ ಮೋದಿ ಹೆಸರು ಪ್ರಸ್ತಾ ಪವಾಗುವಂತಾಗಿದೆ. ಹೀಗಾಗಿ ಈ ಜೋಡಿ ಎಲೆಕ್ಷನ್‌ಗಳನ್ನು ಗೆಲ್ಲುವ ಜೋಡೆತ್ತಿನಂತಾಗಿದೆ!

ವಿಜಯ್ ಕಾರು ಚಾಲಕನ ಮಗನೂ ಈಗ ಎಂಎಲ್‌ಎ!

ಆಟೋ ಚಾಲಕನೂ ಈಗ ಶಾಸಕ

ವಿಜಯ್ ಅವರ ಕಾರು ಚಾಲಕ ರಾಜೇಂದ್ರನ್ ಪುತ್ರ ಶಬರಿನಾಥನ್ (30) ಟಿವಿಕೆ ಶಾಸಕರಾಗಿ ಆಯ್ಕೆಯಾಗಿದ್ದಾರೆ. 3 ದಶಕದಿಂದ ತಮ್ಮ ಬಳಿ ರಾಜೇಂದ್ರನ್ ಚಾಲಕ ಆಗಿರುವ ಹಿನ್ನೆಲೆಯಲ್ಲಿ ಅವರ ಪುತ್ರಗೆ ವಿಜಯ್ ಟಿಕೆಟ್ ಕೊಟ್ಟಿದ್ದರು. ಇನ್ನು ವಿಜಯ್ ಪಕ್ಷದಿಂದ ಸ್ಪರ್ಧಿಸಿದ್ದ ಆಟೋ ಚಾಲಕನೊಬ್ಬ 14 ಸಾವಿರ ಮತಗಳಿಂದ ಗೆದ್ದಿದ್ದಾನೆ.


ವಿಜಯ್ ಗೆಲುವಿನ ಹಿಂದೆ ಸಿದ್ದು ಮಾಜಿ ಸಲಹೆಗಾರ! ↘ 08

ಎಡ, ದೀದಿ ಬಳಿಕ ಈಗ ಬಲಪಂಥಕ್ಕೆ ಬಂಗಾಳ

34 ವರ್ಷದಿಂದ ಅಧಿಕಾರ ದಲ್ಲಿದ್ದ ಎಡರಂಗವನ್ನು ಕಿತ್ತೊಗೆಯಲು ಮಮತಾ ಬ್ಯಾನರ್ಜಿ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಮಮತಾರನ್ನು ಕೂಡ ಅಷ್ಟೇ ಶ್ರಮ ಹಾಕಿ ಈಗ ಬಿಜೆಪಿ ಕೆಳಗಿಳಿಸಿದೆ. ಈ ರೂಪಾಂತರ ದಿಂದಾಗಿ, ಎಡಪಂಥವನ್ನು ಬೆಂಬಲಿಸುತ್ತಿದ್ದ ಬಂಗಾಳ, ಮಮತಾ ಸಿದ್ಧಾಂತಕ್ಕೆ ವಾಲಿತ್ತು. ಈಗ ಬಲಪಂಥೀಯ ಸಿದ್ಧಾಂತಕ್ಕೆ ಆಕರ್ಷಿತವಾಗಿದೆ.

ಗಂಗಾ ನದಿಯ ಮಡಿಲು ಈಗ ಬಿಜೆಪಿಯ ತೊಟ್ಟಿಲು

ಗಂಗೋತ್ರಿ–ಗಂಗಾಸಾಗರ ಕೇಸರಿ



ಪಶ್ಚಿಮ ಬಂಗಾಳವನ್ನೂ ಬಿಜೆಪಿ ಗೆಲ್ಲುವುದರೊಂದಿಗೆ ಜಾರ್ಖಂಡ್ ಬಿಟ್ಟು ಗಂಗಾ ನದಿ ಹರಿಯುವ ಎಲ್ಲ ರಾಜ್ಯಗಳೂ ಕೇಸರಿ ಪಕ್ಷದ ವಶವಾದಂತಾಗಿದೆ. ಉತ್ತರಾಖಂಡ, ಉತ್ತರಪ್ರದೇಶ, ಬಿಹಾರ, ಜಾರ್ಖಂಡ್, ಪಶ್ಚಿಮ ಬಂಗಾಳದಲ್ಲಿ ಗಂಗಾ ನದಿ ಹರಿಯುತ್ತದೆ.


ರಜನಿ, ಕಮಲ್ ಕೈಯಲ್ಲಿ ಆಗದ್ದನ್ನು ಸಾಧಿಸಿದ ವಿಜಿಲ್



ತಮಿಳುನಾಡು ಹೇಳಿಕೇಳಿ ಅಗಾಧ ಸಿನಿಮಾ ಪ್ರಭಾವ ಹೊಂದಿರುವ ರಾಜ್ಯ. ಎಂ.ಜಿ.ಆರ್. ಅವರು ತಮ್ಮ ಸಿನಿಮಾ ಪ್ರಭಾವದಿಂದಲೇ ಡಿಎಂಕೆಯಂತಹ ದೈತ್ಯ ಪಕ್ಷವನ್ನು ಮಣಿಸಿ 10 ವರ್ಷ ಮುಖ್ಯಮಂತ್ರಿಯಾದವರು. ಇದೀಗ ಅಲ್ಲಿ ವಿಜಯ್ ರೂಪದಲ್ಲಿ ಮತ್ತೊಂದು ಪರ್ಯಾಯ ಸಿಕ್ಕಿದೆ. ರಜನೀಕಾಂತ್, ಕಮಲಹಾಸನ್, ವಿಜಯಕಾಂತ್ ಅವರ ಕೈಯಲ್ಲಿ ಆಗದ್ದನ್ನು ಅವರೀಗ ಮಾಡಿ ತೋರಿಸಿದ್ದಾರೆ.

ಕೇರಳದಲ್ಲಿ ಬಿಜೆಪಿಗೆ ಐತಿಹಾಸಿಕ 3 ಸೀಟು

ರಾಜೀವ್ ಚಂದ್ರಶೇಖರ್ ಸಾಧನೆ



ಕೇರಳದಲ್ಲಿ ಬಿಜೆಪಿ ಈ ಬಾರಿ 3 ಸ್ಥಾನ ಗೆದ್ದು ಇತಿಹಾಸ ಸೃಷ್ಟಿಸಿದೆ. ರಾಜ್ಯದಲ್ಲಿ ಬಿಜೆಪಿ ಖಾತೆ ತೆರೆದಿದ್ದೇ 2016ರಲ್ಲಿ ಆಗ 1 ಸ್ಥಾನ ಗೆದ್ದಿತ್ತು. 2021ರಲ್ಲಿ ಶೂನ್ಯ ಸಂಪಾದಿಸಿತ್ತು. ಇದೀಗ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ನೇತೃತ್ವದಲ್ಲಿ ಅವರು ಸೇರಿ ಮೂವರು ಗೆದ್ದಿದ್ದಾರೆ. ತನ್ಮೂಲಕ ಭವಿಷ್ಯದಲ್ಲಿ ಬಂಗಾಳ ರೀತಿ ಕೇರಳದಲ್ಲೂ ಫಲಿತಾಂಶ ತರುವ ಸುಳಿವು ಕೊಟ್ಟಿದ್ದಾರೆ.

ವಿಜಯದ ಹಿಂದಿದೆ 17 ವರ್ಷದ ರಹಸ್ಯ!

ತಮಿಳುನಾಡಿನಲ್ಲಿ ವಿಜಯ್ ಸಾಧಿಸಿದ ಗೆಲುವು ಏಕಾಏಕಿ ಸಿಕ್ಕಿದ್ದಲ್ಲ. 17 ವರ್ಷಗಳಿಂದ ಹಾಕಿದ ಶ್ರಮಕ್ಕೆ ಫಲ ಸಿಕ್ಕಿದೆ. ವಿಜಯ್ ಅವರು 2009 ರಿಂದಲೇ ಆರಂಭಿಸಿದ ಚಟುವಟಿಕೆ ಈಗ ಅವರನ್ನು ಸಿಎಂ ಸ್ಥಾನಕ್ಕೆ ತಂದು ನಿಲ್ಲಿಸಿದೆ. ವಿವರ ↘ 7

3 ಸಿಎಂಗಳ ಸೋಲು

ಪಂಚ ರಾಜ್ಯ ಚುನಾವಣೆಯಲ್ಲಿ ಬಂಗಾಳದ ಮಮತಾ, ತಮಿಳುನಾಡಿನ ಸ್ಟಾಲಿನ್, ಕೇರಳದ ಪಿಣರಾಯಿ ಅಧಿಕಾರ ಕಳೆದು ಕೊಂಡಿದ್ದಾರೆ.

ವಿಜಿ ಜತೆ ಹೋಗೋಣ ಎಂದಿದ್ದ ರಾಗಾ, ಬೇಡ ಎಂದಿದ್ದ ಖರ್ಗೆ, ಚಿದು!

ವಿಧಾನಸಭೆ ಚುನಾವಣೆಗೂ ಮುನ್ನ ನಟ ವಿಜಯ್ ಪಕ್ಷದ ಜತೆ ಮೈತ್ರಿ ಮಾಡಿಕೊಳ್ಳಲು ರಾಹುಲ್ ಬಯಸಿದ್ದರು. ಆದರೆ ಹಳೆಯ ಮಿತ್ರನಾಗಿರುವ ಡಿಎಂಕೆ ಜತೆಯೇ ಇರೋಣ ಎಂದು ಖರ್ಗೆ ಹಾಗೂ ಚಿದಂಬರಂ ಹೇಳಿದ್ದರು. ಅದು ಈಗ ಮುಳುವಾಗಿದೆ.

ವಿಶೇಷ ಪುಟಗಳು 5, 6, 7, 8

ಉಪಸಮರ | ದಾವಣಗೆರೆಯಲ್ಲಿ ಶಾಮನೂರು ಶಿವಶಂಕರಪ್ಪ, ಬಾಗಲಕೋಟೆಯಲ್ಲಿ ಎಚ್.ವೈ. ಮೇಟಿ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದಿದ್ದ ಉಪಚುನಾವಣೆ ಫಲಿತಾಂಶ ಪ್ರಕಟ | ಆಡಳಿತಾರೂಢ ಪಕ್ಷಕ್ಕೆ ಗೆಲುವು

ದಾವಣಗೆರೆ, ಬಾಗಲಕೋಟೆ ಎರಡೂ ಕ್ಷೇತ್ರದಲ್ಲಿ ಕಾಂಗ್ರೆಸ್ ಜಯಭೇರಿ

ಮುಸ್ಲಿಂ ಒಳ ಹೊಡೆತವಿದ್ದರೂ ಶಾಮನೂರು ಮೊಮ್ಮಗ ಜಯ

ಬಿಜೆಪಿಯ ವಿರುದ್ಧ ಸಮರ್ಥ್‌ಗೆ 5708 ಮತದ ಗೆಲುವು

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಸಮರ್ಥ ಎಂ.ಶಾಮನೂರು, ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಶ್ರೀನಿವಾಸ ಟಿ.ದಾಸಕರಿಯಪ್ಪ ವಿರುದ್ಧ 5708 ಮತಗಳ ಅಂತರದಲ್ಲಿ ಜಯ ಸಾಧಿಸಿದ್ದಾರೆ.

ಸಮರ್ಥ 69578 ಮತ ಪಡೆದರೆ, ಬಿಜೆಪಿಯ ದಾಸಕರಿಯಪ್ಪ 63,870 ಮತಗಳನ್ನು ಪಡೆದರು. ಉಳಿದಂತೆ ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್‌ಕೊಡ್ಲಿಪೇಟೆ 18,975 ಮತ ಪಡೆದು, ತೃತೀಯ ಸ್ಥಾನ ಪಡೆದಿದ್ದಾರೆ. ↘ 14





ಸಮರ್ಥ್ ಶಾಮನೂರು	ಶ್ರೀನಿವಾಸ ದಾಸಕರಿಯಪ್ಪ
69578	63870
ಗೆಲುವು	ಸೋಲು

ನಿರೀಕ್ಷೆಯಂತೆಯೇ ಕಾಂಗ್ರೆಸ್‌ನ ಮೇಟಿ ಪುತ್ರಗೆ ಸುಲಭ ಜಯ

ಉಮೇಶ್ ಮೇಟಿಗೆ 22332 ಮತಗಳಿಂದ ವಿಜಯ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ, ತಮ್ಮ ಸಮೀಪದ ಪ್ರತಿಸ್ಪರ್ಧಿ ಬಿಜೆಪಿಯ ಡಾ. ವೀರಣ್ಣ ಚರಂತಿಮಠ ವಿರುದ್ಧ 22,332 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಉಮೇಶ ಮೇಟಿ 98,919 ಮತ ಪಡೆದು ಗೆಲುವು ಸಾಧಿಸಿದರೆ, ಬಿಜೆಪಿಯ ವೀರಣ್ಣ ಚರಂತಿಮಠ 76,587 ಮತ ಪಡೆದು ಪರಾಜಯ ಹೊಂದಿದ್ದಾರೆ. ↘ 14





ಉಮೇಶ ಮೇಟಿ	ವೀರಣ್ಣ ಚರಂತಿಮಠ
98919	76587
ಗೆಲುವು	ಸೋಲು

2 ಕ್ಷೇತ್ರದಲ್ಲಿ ಗೆದ್ದರೂ ಕೈಗೆ ಎಚ್ಚರಿಕೆ ಕರೆಗಂಟೆ!

- ಆಡಳಿತ ವಿರೋಧಿ ಅಲೆ ಇಲ್ಲ ಎಂಬ ಸಂದೇಶ ರವಾನಿಸುವಲ್ಲಿ 2 ಕ್ಷೇತ್ರಗಳ ಗೆಲುವು ಯಶಸ್ವಿ
- ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿವೆ, ನೆರವಾಗಿವೆ ಎಂದು ಪಕ್ಷಕ್ಕೆ ವಿಶ್ವಾಸ
- ಆದರೆ ಅನುಕಂಪದ ಅಲೆ, ಸರ್ಕಾರದ ಬಲ ಇದ್ದರೂ ದಾವಣಗೆರೆಯಲ್ಲಿ ಮತ ಇಳಿಕೆ
- ದಾವಣಗೆರೇಲಿ ಅಂತರ ಇಳಿಕೆ, ಅಲ್ಪಸಂಖ್ಯಾತರ ಮತ ಚದುರಿದ್ದು ಪಕ್ಷಕ್ಕೆ ಕಳವಳಕಾರಿ
- ಇದರಿಂದ ಪಕ್ಷದ ನಾಯಕತ್ವಕ್ಕೆ ಆತ್ಮವಿಮರ್ಶೆ ಮಾಡಬೇಕಾದ ಸಂದೇಶ ರವಾನೆ
- ಆದರೆ ಫಲಿತಾಂಶ ರಾಜಕೀಯ ಬೆಳವಣಿಗೆಗೆ ಮುನ್ನುಡಿ ಬರೆಯುವಷ್ಟು ಪ್ರಭಾವ ಹೊಂದಿಲ್ಲ

ಬಿಕ್ಕಟ್ಟು ಇತ್ಯರ್ಥ ಆದ್ರೂ ಬಿಜೆಪಿಗೆ ಗೆಲುವು ಸಿಗ್ಲಿಲ್ಲ

- 2 ಕ್ಷೇತ್ರಗಳ ಪೈಕಿ ಬಾಗಲಕೋಟೆಗಿಂತ ದಾವಣಗೆರೆ ಗೆಲ್ಲುವ ಸಾಧ್ಯತೆ ಬಗ್ಗೆ ಬಿಜೆಪಿಗೆ ವಿಶ್ವಾಸ
- ಕಾಂಗ್ರೆಸ್‌ನ ಆಂತರಿಕ ಬಿಕ್ಕಟ್ಟು ಪಕ್ಷಕ್ಕೆ ನೆರವಾಗ ಬಹುದೆಂಬುದು ಬಿಜೆಪಿಗರ ಲೆಕ್ಕಾಚಾರವಾಗಿತ್ತು
- ಹೀಗಾಗಿ ಭಿನ್ನಾಭಿಪ್ರಾಯ ಮರೆತು ಎರಡು ಕಡೆ ಪಕ್ಷದ ನಾಯಕರು ಒಟ್ಟಾಗಿ ಕೆಲಸ ಮಾಡಿದ್ದರು
- ಆದರೆ ನಾಯಕರ ಶ್ರಮ ಕಾಂಗ್ರೆಸ್‌ಗೆ ಸುಲಭ ಗೆಲುವು ತಪ್ಪಿಸಿತು. ಪಕ್ಷಕ್ಕೆ ಗೆಲುವು ತರಲಿಲ್ಲ
- ಈ ಹಿಂದಿನ ಸುರಪುರ, ಶಿಗ್ಗಾವಿ, ಸಂಡೂರು ಉಪಚುನಾವಣೆಯಲ್ಲೂ ಬಿಜೆಪಿಗೆ ಜಯವಿಲ್ಲ
- ಚನ್ನಪಟ್ಟಣದಲ್ಲಿ ಮಿತ್ರ ಪಕ್ಷ ಜೆಡಿಎಸ್ ಕಣಕ್ಕೆ ಇಳಿಸಿದ್ದರೂ ಅಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿತ್ತು

25ನೇ ವರ್ಷದ ಸಂಭ್ರಮ
ಕರಾವಳಿ ಪ್ರಭಾವಳಿ

ಗರಿಷ್ಠ 32°c | ಕನಿಷ್ಠ 28°c

ಕಾಸರಗೋಡು ಜಿಲ್ಲೆಯಲ್ಲೂ ಬೀಸಿದ ಯುಡಿಎಫ್ ಅಲೆ

ಮಂಜೇಶ್ವರ, ಕಾಸರಗೋಡು ಮುಸ್ಲಿಂ ಲೀಗ್ ತೆಕ್ಕೆಗೆ | ಹಲವು ದಶಕಗಳ ಬಳಿಕ ಉದುಮ, ತ್ರಿಕ್ಕರಿಪುರ ಕೈವಶ

• **ದುರ್ಗಾಕುಮಾರ್‌ನಾಯರ್‌ಕೆರೆ**
ಕನ್ನಡಪ್ರಭ ವಾರ್ತೆ ಕಾಸರಗೋಡು

ಕೇರಳಂ ವಿಧಾನಸಭಾ ಚುನಾವಣೆಯಲ್ಲಿ ಈ ಬಾರಿ ಯು.ಡಿ.ಎಫ್. ಅಲೆ ಬೀಸಿದ್ದು ನೂರಕ್ಕೂ ಅಧಿಕ ಸ್ಥಾನ ಗಳಿಸಿ ಸ್ಪಷ್ಟ ಬಹುಮತದೊಂದಿಗೆ ಅಧಿಕಾರಕ್ಕೇರಿದೆ. ಕಾಸರಗೋಡು ಜಿಲ್ಲೆಯಲ್ಲೂ ಯು.ಡಿ.ಎಫ್. ಅಲೆ ಬೀಸಿದ್ದು, ತನ್ನ ತೆಕ್ಕೆಯಲ್ಲಿದ್ದ ಮಂಜೇ ಶ್ವರ, ಕಾಸರ ಗೋಡು ಕ್ಷೇತ್ರ ವನ್ನು ಉಳಿಸಿಕೊಳ್ಳುವುದರ ಜತೆಗೆ ಹಲವು ದಶಕದ ಬಳಿಕ ಉದುಮ ಮತ್ತು ತ್ರಿಕ್ಕರಿಪುರ ಕ್ಷೇತ್ರದಲ್ಲೂ ವಿಜಯಿಯಾಗಿದೆ. ಕಾಞಂಗಾಡ್ ಕ್ಷೇತ್ರ ಮಾತ್ರ ಎಲ್.ಡಿ.ಎಫ್. ಪಾಲಾಗಿದೆ.

ಮಂಜೇಶ್ವರ: ಪ್ರತಿಷ್ಠಿತ ಕಣವಾಗಿದ್ದ ಮಂಜೇಶ್ವರ ವಿಧಾನ ಸಭಾ ಕ್ಷೇತ್ರದಲ್ಲಿ ಮುಸ್ಲಿಂ ಲೀಗ್ ಮತ್ತು ಬಿಜೆಪಿ ಅಭ್ಯರ್ಥಿ ಗಳ ನಡು ವಿನ ಪೈಪೋಟಿಯಲ್ಲಿ ಹಾಲಿ ಶಾಸಕ ಎ.ಕೆ .ಎಂ. ಅಶ್ರಫ್ ಗೆಲವು ಸಾಧಿಸಿದ್ದಾರೆ. ಯುಡಿಎಫ್ ಭಾಗವಾಗಿರುವ ಇಂಡಿಯನ್ ಮುಸ್ಲಿಂ ಲೀಗ್ ನ ಅಶ್ರಫ್ ಅವರು ಎನ್.ಡಿ.ಎ. ಭಾಗವಾಗಿರುವ ಬಿಜೆಪಿಯ ಕೆ. ಸುರೇಂದ್ರನ್ ಅವರನ್ನು 29252 ಮತಗಳ ಅಂತರದಲ್ಲಿ ಸೋಲಿಸಿದ್ದಾರೆ.

ಕಾಸರ ಗೋಡು: ಕಾಸರಗೋಡು ವಿಧಾನ ಸಭಾ ಕ್ಷೇತ್ರವನ್ನು ಯು.ಡಿ. ಎಫ್. ಭಾಗವಾಗಿರುವ ಇಂಡಿಯನ್ ಮುಸ್ಲಿಂ ಲೀಗ್ ಉಳಿಸಿಕೊಂಡಿದೆ.







ಗೆಲವಿನ ಅಂತರ

- ಮಂಜೇಶ್ವರ 29252
- ಕಾಸರಗೋಡು – 22689
- ಉದುಮ – 4847
- ಕಾಞಂಗಾಂಡ್ – 15316
- ತೃಕ್ಕರಿಪುರ – 4431

ಹೊಸ ಮುಖ ಕಲ್ಲಟ್ರ ಮಾಹಿನ್ ಹಾಜಿಯವರು ಎನ್.ಡಿ. ಎ. ಭಾಗವಾಗಿರುವ ಬಿಜೆಪಿ ಅಭ್ಯರ್ಥಿ ಎಂ.ಎಲ್. ಅಶ್ವಿನಿ ಅವರನ್ನು 22689 ಮತಗಳ ಅಂತರದಲ್ಲಿ ಪರಾಭವಗೊಳಿಸಿದ್ದಾರೆ.

ಉದುಮ: ಉದುಮ ವಿಧಾನ ಸಭಾ ಕ್ಷೇತ್ರವನ್ನು 40 ವರ್ಷಗಳ ಬಳಿಕ ಯು.ಡಿ.ಎಫ್. ತೆಕ್ಕೆಗೆ ತೆಗೆದುಕೊಂಡಿದೆ. ಎಲ್. ಡಿ.ಎಫ್. ಭಾಗವಾಗಿರುವ ಸಿಪಿಎಂ ಅಭ್ಯರ್ಥಿ, ಹಾಲಿ ಶಾಸಕ ಸಿ.ಎಚ್. ಕುಂಞಂಬು ಅವರನ್ನು ಯು.ಡಿ.ಎಫ್. ಭಾಗವಾಗಿರುವ ಕಾಂಗ್ರೆಸ್ ಅಭ್ಯರ್ಥಿ ಕೆ. ನೀಲಕಂಠನ್ ಅವರು 4847 ಮತಗಳ ಅಂತರದಲ್ಲಿ ಸೋಲಿಸಿದ್ದಾರೆ.

ಕಾಞಂಗಾಡ್: ಕಾಞಂಗಾಡ್ ವಿಧಾನ ಸಭಾ ಕ್ಷೇತ್ರವನ್ನು ಎಲ್.ಡಿ.ಎಫ್. ಉಳಿಸಿಕೊಂಡಿದೆ. ಇಲ್ಲಿ ಸಿಪಿಐ ಅಭ್ಯರ್ಥಿ ಗೋವಿಂದನ್ ಪಳ್ಳಿಕಾಪಿಲ್ ಅವರು ಯು.ಡಿ.ಎಫ್. ಭಾಗವಾಗಿರುವ ಕೇರಳ ಕಾಂಗ್ರೆಸ್ ಜೋಸೆಫ್ ವಿಭಾಗದ ಶೈಜಿ ಓಟಪ್ಪಳ್ಳಿ ಅವರನ್ನು 15316 ಮತಗಳಿಂದ ಸೋಲಿಸಿದ್ದಾರೆ.

ತ್ರಿಕ್ಕರಿಪುರ: ತ್ರಿಕ್ಕರಿಪುರ ವಿಧಾನಸಭಾ ಕ್ಷೇತ್ರವನ್ನು ಕೂಡಾ ಎಲ್.ಡಿ.ಎಫ್. ಕೈಯಿಂದ ಬರೋಬ್ಬರಿ 66 ವರ್ಷಗಳ ಬಳಿಕ ಯುಡಿ.ಎಫ್. ಕಸಿದುಕೊಂಡಿದೆ. . ಸಿಪಿಎಂನ ವಿ.ಪಿ.ಪಿ. ಮುಸ್ತಾಫ ಅವರನ್ನು ಕಾಂಗ್ರೆಸ್ ನ ಸಂದೀಪ್ ವಾರ್ಯರ್ ಅವರು 4431 ಮತಗಳ ಅಂತರದಲ್ಲಿ ಸೋಲಿಸಿದ್ದಾರೆ.

ಕೆ. ಸುರೇಂದ್ರನ್ ಗೆ ನಾಲ್ಕನೇ ಸೋಲು

ಮಂಜೇಶ್ವರ ವಿಧಾನ ಸಭಾ ಕ್ಷೇತ್ರದಲ್ಲಿ ನಾಲ್ಕನೇ ಬಾರಿ ಸ್ಪರ್ಧಿಸಿದ್ದ ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷ ಕೆ. ಸುರೇಂದ್ರನ್ ಪರಾಭವಗೊಂಡಿದ್ದಾರೆ. ಕಳೆದ ಚುನಾವಣೆಗಳಲ್ಲಿ ಅಲ್ಪ ಮತಗಳ ಅಂತರದಲ್ಲಿ (845 ಮತ್ತು 89) ಪರಾಭವ ಕಾಣುತ್ತಿದ್ದ ಸುರೇಂದ್ರನ್ ಈ ಸಲ ಬಾರೀ ಮತಗಳ ಅಂತರದಲ್ಲಿ ಸೋಲು ಕಂಡಿದ್ದಾರೆ.

ಯುಡಿಎಫ್ ಅಲೆಯಲ್ಲಿ ಕೊಚ್ಚಿಹೋದ ಎಲ್‌ಡಿಎಫ್, ಎನ್‌ಡಿಎ

ಕಾಸರಗೋಡು ಜಿಲ್ಲೆಯ ಮಟ್ಟಿಗೆ ಈ ಚುನಾವಣೆಯಲ್ಲಿ ಯು.ಡಿ.ಎಫ್. ಅಧಿಕಾರಯುತ ಜಯ ಪಡೆದಿದೆ. ಆಡಳಿತ ವಿರೋಧಿ ಅಲೆಗೆ ಎಲ್.ಡಿ.ಎಫ್. ಹೀನಾಯ ಸೋಲು ಕಂಡರೆ, ಎನ್.ಡಿ.ಎ. ಕೂಡಾ ಭಾರೀ ಅಂತರದಲ್ಲಿ ಸೋತಿದೆ.

ಕಳೆದ ಬಾರಿ ಚುನಾವಣೆ ನಡೆದಾಗ ಜಿಲ್ಲೆಯ ಮೂರು ಕ್ಷೇತ್ರಗಳು ಯುಡಿಎಫ್ ಗೆದ್ದಿದ್ದರೆ, ಎರಡು ಸ್ಥಾನಗಳು ಯುಡಿಎಫ್ ಪಾಲಾಗಿತ್ತು. ಆದರೆ ಈ ಬಾರಿ ನಾಲ್ಕು ಸ್ಥಾನಗಳು ಯುಡಿಎಫ್ ಪಾಲಾಗಿದ್ದು, ಏಕೈಕ ಸ್ಥಾನ ಎಡರಂಗ ಪಡೆದಿದೆ.

ತ್ರಿಕ್ಕರಿಪುರ ಕ್ಷೇತ್ರ ಅಸ್ತಿತ್ವಕ್ಕೆ ಬಂದ ಬಳಿಕ ಇಲ್ಲಿ ಯುಡಿಎಫ್ ವಿಜಯಿಯಾಗಿರಲಿಲ್ಲ. ಈ ಹಿಂದಿನ ನೀಲೇಶ್ವರ ಕ್ಷೇತ್ರ ಇರುವಾಗ 1960 ರಲ್ಲಿ ಕಾಂಗ್ರೆಸ್ ಗೆದ್ದದ್ದೇ ಕೊನೆ. 66 ವರ್ಷಗಳ ಬಳಿಕ ಇಲ್ಲಿ ಕಾಂಗ್ರೆಸ್ ಗೆಲುವಾಗಿದ್ದು ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಸೇರಿದ್ದ ಸಂದೀಪ್ ವಾರ್ಯರ್‌ವಿಜಯವಾಗಿದೆ. 40 ವರ್ಷಗಳ ಬಳಿಕ ಉದುಮ ಕ್ಷೇತ್ರದಲ್ಲಿ ಯುಡಿಎಫ್ ಗೆಲುವಾಗಿದೆ.

ಕಾಸರಗೋಡು ಮತ್ತು ಮಂಜೇಶ್ವರ ಕ್ಷೇತ್ರಗಳಲ್ಲಿ ಈ ಹಿಂದಿನ ಕೆಲವು ಚುನಾವಣೆಗಳಲ್ಲಿ ಬಿಜೆಪಿ ಅಲ್ಪ ಮತಗಳ ಅಂತರದಲ್ಲಿ ಸೋಲು ಕಾಣುತ್ತಿದ್ದರೆ, ಈ ಬಾರಿ ಎರಡೂ ಕ್ಷೇತ್ರಗಳಲ್ಲಿ ಸೋಲು ಗೆಲುವಿನ ಅಂತರ 22 ಸಾವಿರಕ್ಕೂ ಹೆಚ್ಚಿದೆ.

ಸುದ್ದಿ ಸಿಂಚನ

ಫಲಿತಾಂಶ ಹರ್ಷ ತಂದಿದೆ: ಸಂಸದ ಕೋಟ



ಉಡುಪಿ: ನಿರೀಕ್ಷೆ ಮೀರಿದ ಪಶ್ಚಿಮ ಬಂಗಾಳದ ಗೆಲುವು ದೇಶ ಗೆದ್ದ ಅನುಭವ ಕೊಟ್ಟಿದೆ. ದೀದಿ ಸರ್ಕಾರ, ಕೇವಲ ಬಿಜೆಪಿ ಮತ್ತು ಮೋದಿ ವಿರೋಧಿಯಾಗಿರಲಿಲ್ಲ, ಬದಲಾಗಿ ರಾಷ್ಟ್ರ ವಿರೋಧಿಯಾಗಿತ್ತು. ಸ್ತ್ರೀ ವಿರೋಧಿ, ಹಿಂದೂ ವಿರೋಧಿ, ದೇಶವಿರೋಧಿ ಸರ್ಕಾರವೊಂದರ ನಿರ್ಗಮನ ದೇಶ ಮೊದಲು ಎಂಬ ರಾಷ್ಟ್ರ ಭಕ್ತರು ನಿಟ್ಟಿಸಿರು ಬಿಡುವಂತಾಗಿದೆ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ. ಅಸ್ಸಾಂ, ಪುದುಚೇರಿಯ ಗೆಲುವು ತಮಿಳುನಾಡು, ಕೇರಳದ ಫಲಿತಾಂಶ ಏನೇ ಆದರೂ ಎನ್.ಡಿ.ಎ ತಮ್ಮ ಶಕ್ತಿ ವೃದ್ಧಿಸಿಕೊಂಡಿದೆ ಎಂದು ಕೋಟ ಹೇಳಿದ್ದಾರೆ. ಕರ್ನಾಟಕದ ಫಲಿತಾಂಶದ ಬಗ್ಗೆ ಮಾತನಾಡಿದ ಅವರು ಆಡಳಿತ ಪಕ್ಷ ಗೆದ್ದಿದೆ ಎನ್ನುವುದಕ್ಕಿಂತ ಹಣಬಲ ಗೆದ್ದಿದೆ ಎಂದು ವರದಿಗಳು ತಿಳಿಸುತ್ತಿವೆ. ಒಟ್ಟಾರೆ ಫಲಿತಾಂಶವನ್ನು ಗೌರವಿಸುತ್ತೇವೆ. ಹಾಗೂ ಇಂದಿನ ಚುನಾವಣೆ ಭಾರತೀಯ ಜನತಾ ಪಕ್ಷದ ಸಂಘಟನಾ ಶಕ್ತಿ ಹೆಚ್ಚಿಸಲಿದೆ ಎಂದಿದ್ದಾರೆ.

ಮೋದಿ, ಶಾ ನೈತಿಕ ಶ್ರಮಕ್ಕೆ ಸಂದ ಗೌರವ: ಹರಿಕೃಷ್ಣ ಬಂಟ್ವಾಳ

ಬಂಟ್ವಾಳ: ಪಂಚ ರಾಜ್ಯಗಳಲ್ಲಿ ನಡೆದ ಚುನಾವಣೆಯಲ್ಲಿ ಪ. ಬಂಗಾಲ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಎನ್ ಡಿಎ ಪಕ್ಷ ವಿಜಯ ಗಳಿಸಿ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ಪ್ರಧಾನಿ ನರೇಂದ್ರಮೋದಿ, ಗೃಹ ಸಚಿವ ಅಮಿತ್ ಶಾ ಜೋಡಿಯ ರಾಜಕಾರಣದ ನೈತಿಕ ಶ್ರಮಕ್ಕೆ ಸಂದ ಗೌರವವಾಗಿದೆ ಎಂದು ರಾಜ್ಯ ಕಿಯೋನಿಕ್ಸ್ ನಿಗಮದ ಮಾಜಿ ಅಧ್ಯಕ್ಷ, ಬಿಜೆಪಿ ಮುಖಂಡ ಹರಿಕೃಷ್ಣ ಬಂಟ್ವಾಳ್ ತಿಳಿಸಿದ್ದಾರೆ. ಪ. ಬಂಗಾಲದ ಮುಖ್ಯಮಂತ್ರಿಯಾಗಿದ್ದ ಮಮತಾ ಬ್ಯಾನರ್ಜಿಯ ಹಿಂಸಾ ರಾಜಕಾರಣ, ದರ್ಪ, ಅಹಂಕಾರ, ದಬ್ಬಾಳಿಕೆ, ಬಾಂಗ್ಲಾ ಮತ್ತು ಮ್ಯಾನ್ಮರ್ ನಿಂದ ಬರುವ ನುಸುಳುಕೋರರಿಗೆ ಆಶ್ರಯಧಾತೆಯಾಗಿ, ದೇಶ ವಿರೋಧಿ ಕೃತ್ಯಗಳಿಗೆ ಬೆಂಬಲ ನೀಡಿದ್ದಲ್ಲದೆ ಹಿಂದೂ ವಿರೋಧಿಯಾಗಿ 'ಜಿನ್ನಾ ಸಂಸ್ಕೃತಿ'ಯನ್ನುಅಳವಡಿಸಿಕೊಂಡಿದ್ದ ದೀದಿಯನ್ನು ಚುನಾವಣೆಯಲ್ಲಿ ಅಲ್ಲಿನ ಮತದಾರರು ಮಣ್ಣು ಮುಕ್ಕಿಸಿದ್ದಾರೆ. ಪ. ಬಂಗಾಲದ ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತರನ್ನು ಪ್ರತಿಯೊಬ್ಬ ಭಾರತೀಯನು ಅಭಿನಂದಿಸಬೇಕಾಗಿದೆ ಎಂದು ಅವರು ಮಾಧ್ಯಮಗಳಿಗೆ ಬಿಡುಗಡೆಗೊಳಿಸಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಲಾಯಿಲ ಅರಳಿ: 17ರಂದು ಕನ್ನಡ ಸಾಹಿತ್ಯ ಸಂಭ್ರಮ, ಬಹುಭಾಷಾ ಕವಿ ಗೋಷ್ಠಿ



ಸುದ್ದಿಗೋಷ್ಠಿಯಲ್ಲಿ ಕ್ಲಬ್ ಅಧ್ಯಕ್ಷ ಡಾ. ಪ್ರಕಾಶ ಪ್ರಭು ಮೊದಲಾದವರು ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಬೆಳ್ತಂಗಡಿ

ರೋಟರಿ ಕ್ಲಬ್ ಬೆಳ್ತಂಗಡಿ ವತಿಯಿಂದ ಮೇ 17 ರಂದು ಲಾಯಿಲ ಗ್ರಾಮದ ಅರಳಿ ಎಂಬಲ್ಲಿರುವ ರೋಟರಿ ಭವನದಲ್ಲಿ ಕನ್ನಡ ಸಾಹಿತ್ಯ ಸಂಭ್ರಮ ಮತ್ತು ಬಹುಭಾಷಾ ಕವಿ ಗೋಷ್ಠಿಯನ್ನು ಆಯೋಜಿಸಲಾಗಿದೆ ಎಂದು ಕ್ಲಬ್ ಅಧ್ಯಕ್ಷ ಡಾ. ಪ್ರಕಾಶ ಪ್ರಭು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳ್ತಂಗಡಿ ಕ್ಲಬ್ ಇತಿಹಾಸದಲ್ಲಿ ಮೊದಲ ಬಾರಿಗೆ ಸಾಹಿತ್ಯ ಸೇವೆಗೆ ಹೊರಟಿದೆ. ಕನ್ನಡ ಸಾಹಿತ್ಯ ಸಂಭ್ರಮದ ಅಧ್ಯಕ್ಷರಾಗಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಯದುಪತಿ ಗೌಡ, ಬಹುಭಾಷಾ ಕವಿ ಗೋಷ್ಠಿಯ ಅಧ್ಯಕ್ಷರಾಗಿ ಡಾ. ಎಂ. ಎಂ. ದಯಾಕರ್, ಒಟ್ಟು ಸಭೆಯ ಅಧ್ಯಕ್ಷರಾಗಿ ಡಾ. ಪ್ರಕಾಶ್ ಪ್ರಭು ಇರಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ಕ.ಸಾ.ಪ.ದ ನಿಕಟಪೂರ್ವ ಜಿಲ್ಲಾಧ್ಯಕ್ಷ ಪ್ರದೀಪ ಕಲ್ಕೂರ ಮಾಡಲಿದ್ದಾರೆ. ಸಮಾರೋಪದಲ್ಲಿ ಕ.ಸಾ.ಪ.ದ ಜಿಲ್ಲಾಧ್ಯಕ್ಷ ಡಾ. ಎಂ.ಪಿ. ಶ್ರೀನಾಥ್ ಭಾಗವಹಿಸಲಿದ್ದಾರೆ ಎಂದರು.

ಮೊದಲನೇ ಗೋಷ್ಠಿಯಲ್ಲಿ ಉಜಿರೆ ಶ್ರೀ ಧ.ಮಂ. ಕಾಲೇಜಿನ ಕನ್ನಡ ಪ್ರಾಧ್ಯಾಪಕ ಹಳೆಮನೆ ರಾಜಶೇಖರ್ ಅವರು ಹೊಸ ತಲೆಮಾರು ಮತ್ತು ಓದಿನ ಅಭಿರುಚಿ ಬಗ್ಗೆ, ಪ್ರಾಧ್ಯಾಪಕ ದಿವಾಕರ ಕೊಕ್ಕಡ ಅವರು ಮನುಜ ಮತ ವಿಶ್ವ ಪಥ ಎಂಬ ಕುರಿತು, ಜನಪದ ವಿದ್ವಾಂಸ ರವೀಶ ಪಡುಮಲೆ ಅವರು ತುಳುನಾಡಿನ ದೈವಾರಾಧನೆಯ ಆಗು ಹೋಗುಗಳ ವಿಚಾರವಾಗಿ ಮಾತನಾಡಲಿದ್ದಾರೆ. ಈ ಸಂದರ್ಭ ಡಾ. ಪ್ರಕಾಶ ಪ್ರಭು ಅವರ ಕಥಾ ಸಂಕಲನ ಬಿಡುಗಡೆಗೊಳ್ಳಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಛಾಯಾಚಿತ್ರ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಅತ್ಯುತ್ತಮ ತಂಡಕ್ಕೆ ನಗದು ಬಹುಮಾನವಿದೆ. ಸ್ಪರ್ಧೆಯು ತಂಡವಾಗಿ ಇರುತ್ತದೆ. ತಂಡದಲ್ಲಿ ಕನಿಷ್ಠ 7 ಮಂದಿ ಇರಬೇಕು. ಸಮವಸ್ತ್ರ ಧರಿಸಿರಬೇಕು. ನಾಡಹಬ್ಬಕ್ಕೆ ಪೂರಕವಾಗಿ ಪ್ರದರ್ಶನ ಇರಬೇಕು. ಬೆಳಿಗ್ಗೆ 9.30 ರಿಂದ ಸಂಜೆ ತನಕ ತಂಡ ಇರಬೇಕು. ಅಪರಾಹ್ನ ಸಮೂಹ ಫೋಟೊ ತೆಗೆದು ಅಥವಾ ರೀಲ್ಸ್ ಮಾಡಿ 9448060206 ಸಂಖ್ಯೆಗೆ ಕಳುಹಿಸಬೇಕು ಎಂದು ಅವರು ತಿಳಿಸಿದರು.

ಗೋಷ್ಠಿಯಲ್ಲಿ ಡಾ.ಯದುಪತಿ ಗೌಡ, ಸಂಚಾಲಕ ಬಿ. ಸೋಮಶೇಖರ ಶೆಟ್ಟಿ ಇದ್ದರು.

'ಸಿದ್ದರಾಮಯ್ಯರ ಯೋಜನೆಗಳು ಜನರಿಗೆ ಭರವಸೆ'

ಮಂಗಳೂರು: ಕರ್ನಾಟಕದ ಎರಡೂ ಕ್ಷೇತ್ರಗಳ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅದ್ಭುತ ಗೆಲವು ಸಾಧಿಸಿದ್ದು, ಬಿಜೆಪಿ ಪಕ್ಷ ತಮ್ಮದೇ ಗೆಲುವು ಎಂದು ಕಾಂಗ್ರೆಸ್‌ನ ಮತ ಪಡೆಯಲು ಕೋಮವಾದಿ ಪಕ್ಷಗಳ ಸಂಬಂಧ ಬೆಳೆಸಿ, ಕಾಂಗ್ರೆಸ್ ಪಕ್ಷವನ್ನು ಎತ್ತಿಕಟ್ಟುವ ಕೆಲಸ ಮಾಡಿದ್ದು, ಇದನ್ನು ಲೆಕ್ಕಿಸದೇ ಇಂದು ಕರ್ನಾಟಕದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ, ಸಿದ್ದರಾಮಯ್ಯನವರ ಯೋಜನೆಗಳು ಜನರಿಗೆ ಹೊಸ ಭರವಸೆಯನ್ನು ಹಾಗೂ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವಲ್ಲಿ ವಿಶ್ವಾಸ ಮೂಡಿಸಿದೆ ಎಂದು ವಿಧಾನ ಪರಿಷತ್ ಶಾಸಕ ಐವನ್ ಡಿಸೋಜಾ ತಿಳಿಸಿದ್ದಾರೆ. ಈ ಫಲಿತಾಂಶ ಬಿಜೆಪಿ ರಾಜ್ಯದಲ್ಲಿ ಮುಂದೆಂದೂ ಅಧಿಕಾರಕ್ಕೆ ಬರಲಾರದು ಎಂಬ ಸೂಚನೆ ನೀಡಿದೆ. ಕಾಂಗ್ರೆಸ್ ಮುಂದಿನ ಭವಿಷ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬರುವುದು ಖಚಿತ. ಅದ್ಭುತ ಗೆಲವು ಸಾಧಿಸಿದ ಅಭ್ಯರ್ಥಿಗಳಿಗೆ ಹಾಗೂ ಮತ ನೀಡಿದ ಮತದಾರರಿಗೆ ಅಭನಂದನೆ ಎಂದಿದ್ದಾರೆ.

ಜನರ ಹಿತಾಸಕ್ತಿ ಕಾಪಾಡಲು ಯುಡಿಎಫ್‌ಗೆ ಗೆಲುವು: ಕೇರಳದಲ್ಲಿ ಯುಡಿಎಫ್ ಮಿತ್ರಕೂಟ ಕೇರಳದಲ್ಲಿ ಅದ್ಭುತ ಗೆಲುವು ಸಾಧಿಸಿದೆ. ನಾನು ಕೇರಳದಲ್ಲಿ 18 ದಿನಗಳ ಕಾಲ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿ, ಜನರ ನಾಡಿ ಮಿಡಿತವನ್ನು ಕಂಡಿದ್ದೇನೆ. ಸರಕಾರದ ಭ್ರಷ್ಟಾಚಾರ ಮತ್ತು ಆಡಳಿತ ವಿರೋಧಿ ನೀತಿಯನ್ನು ಎದುರಿಸುತ್ತಿರುವ ಜನರ ಹಿತಾಸಕ್ತಿಯನ್ನು ಕಾಪಾಡಲು ಯುಡಿಎಫ್ ಇಂದು ಅದ್ಭುತ ಗೆಲುವು ಸಾಧಿಸಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಂಟ್ವಾಳ ಬಿಜೆಪಿ ಸಂಭ್ರಮಾಚರಣೆ



• **ಕನ್ನಡಪ್ರಭ ವಾರ್ತೆ** ಬಂಟ್ವಾಳ

ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಪೂರ್ಣಪ್ರಮಾಣದಲ್ಲಿ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ಬಿಸಿರೋಡಿನಲ್ಲಿ ಬಂಟ್ವಾಳ ಬಿಜೆಪಿ ವತಿಯಿಂದ ಪಟಾಕಿ ಸಿಡಿಸಿ ಸಂಭ್ರಮಾಚರಿಸಿದರು.

ಬಿಜೆಪಿ ಪರವಾಗಿ ಘೋಷಣೆ ಕೂಗಿದ ಬಿಜೆಪಿ ಪಕ್ಷದ ಕಾರ್ಯಕರ್ತರು ಸಿಹಿತಿಂಡಿ ಹಂಚಿದರು.

ಬಂಟ್ವಾಳ ಮಂಡಲ ಬಿಜೆಪಿ ಅಧ್ಯಕ್ಷ ಚೆನ್ನಪ್ಪ ಆರ್. ಕೋಟ್ಯಾನ್, ಪ್ರಧಾನ ಕಾರ್ಯದರ್ಶಿಗಳಾದ ಸುದರ್ಶನ ಬಜ, ಶಿವಪ್ರಸಾದ್ ಶೆಟ್ಟಿ, ರಾಜ್ಯ ನಾಯಕಿ ಸುಲೋಚನ ಜಿ.ಕೆ. ಭಟ್, ಬಿಜೆಪಿ ಪ್ರಮುಖರಾದ ವಿಕಾಸ್ ಪುತ್ತೂರು, ದೇವಪ್ಪ ಪೂಜಾರಿ, ದಿನೇಶ್ ಅಮ್ಟೂರು, ರಾಮದಾಸ್ ಬಂಟ್ವಾಳ, ಪುರುಷೋತ್ತಮ ಶೆಟ್ಟಿ ವಾಮದಪದವು, ಮೋನಪ್ಪ ದೇವಶ್ಯ, ಪ್ರಭಾಕರ್‌ಪ್ರಭು, ದಿನೇಶ್ ಶೆಟ್ಟಿ ದಂಬೆದಾರ್, ಗಣೇಶ್ ದಾಸ್, ಪ್ರಣಾಮ್ ಅಜ್ಜಿಬೆಟ್ಟು, ಮಹೇಶ್ ಶೆಟ್ಟಿ, ಭಾಸ್ಕರ ಟೈಲರ್, ಕಾರ್ತಿಕ್ ಬಲ್ಲಾಳ್, ಸದಾನಂದ ಹಳೆಗೇಟು, ಕೇಶವ ದೈಪಲ, ಮನೋಜ್ ಕಳ್ಳಿಗೆ, ಪ್ರೇಮನಾಥ ಶೆಟ್ಟಿ, ಸುನಿಲ್ ರೋಡ್ರಿಗಸ್, ಎಲಿಯಾಸ್ ಮತ್ತಿತರರು ಉಪಸ್ಥಿತರಿದ್ದರು.

ಉಪ್ಪಿನಂಗಡಿ ಬಿಜೆಪಿ ವಿಜಯೋತ್ಸವ

ಉಪ್ಪಿನಂಗಡಿ: ಪಂಚ ರಾಜ್ಯಗಳ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿ ಕೂಟವು ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಅಧಿಕಾರಕ್ಕೆ ಬಂದಿದ್ದು, ಕೇರಳ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಹಿನ್ನೆಲೆಯಲ್ಲಿ ಉಪ್ಪಿನಂಗಡಿಯ ಬಸ್ ನಿಲ್ದಾಣ ಬಳಿ ಬಿಜೆಪಿ ವತಿಯಿಂದ ವಿಜಯೋತ್ಸವ ನಡೆಯಿತು. ಈ ಸಂದರ್ಭ ಮಾತನಾಡಿದ ಮಾಜಿ ಶಾಸಕ ಸಂಜೀವ ಮಠಂದೂರು, ಈ ಗೆಲುವು ಪ್ರಜಾತಂತ್ರ ವ್ಯವಸ್ಥೆ ಭದ್ರವಾಗುತ್ತಿದೆ ಎನ್ನುವುದಕ್ಕೆ ಸಾಕ್ಷಿ. ಎನ್‌ಡಿಎ ಮೈತ್ರಿಕೂಟದ ಈ ಗೆಲುವಿ ಇಡೀ ಜಗತ್ತು ಭಾರತವನ್ನು ತಿರುಗಿ ನೋಡುವಂತೆ ಮಾಡಿದೆ ಎಂದರು. ಬಿಜೆಪಿ ಮುಖಂಡರು ಹಾಜರಿದ್ದರು.

ಹಿಂದೂ ವಿರೋಧಿಗಳಿಗೆ ಪಾಠ: ಕುಂಪಲ



ಮಂಗಳೂರು: ಪಂಚರಾಜ್ಯಗಳ ಚುನಾವಣಾ ಫಲಿತಾಂಶ ದೇಶದ ರಾಜಕೀಯ ದಿಕ್ಕನ್ನು ಸ್ಪಷ್ಟವಾಗಿ ತೋರಿಸಿವೆ. ವಿಶೇಷವಾಗಿ ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಹಿಂದೂ ವಿರೋಧಿ ನೀತಿಗಳನ್ನು ಅನುಸರಿಸಿಕೊಂಡು ಬಂದಿದ್ದ ರಾಜಕೀಯ ಪಕ್ಷಗಳಿಗೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷ ಸತೀಶ್ ಕುಂಪಲ ತಿಳಿಸಿದ್ದಾರೆ.

ಪುದುಚೇರಿಯಲ್ಲಿ ಎನ್.ಡಿ.ಎ. ಮೈತ್ರಿ ಆಡಳಿತ ಸ್ಥಾಪನೆಗೆ ಮುನ್ನಡೆಯುತ್ತಿದೆ. ಕೇರಳದಲ್ಲಿಯೂ ಭಾರತೀಯ ಜನತಾ ಪಕ್ಷ ತನ್ನ ಮತಶೇರ್‌ಅನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿದ್ದು, ಅಲ್ಲಿನ ಕಮ್ಯುನಿಸ್ಟ್ ಸರ್ಕಾರದ ವಿರುದ್ಧ ಜನಾಭಿಪ್ರಾಯ ವ್ಯಕ್ತವಾಗಿದೆ. ಈ ಫಲಿತಾಂಶ ಅವಲೋಕಿಸಿದಾಗ, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರದ ಜನಪ್ರಿಯತೆ ದೇಶದಾದ್ಯಂತ ಸುನಾಮಿಯಂತೆ ವ್ಯಕ್ತ ವಾಗಿರುವುದು ಗೋಚರಿಸುತ್ತದೆ. ಜನತೆಯ ಮನೋಭಾವ ಬಿಜೆಪಿ ಪರವಾಗಿ ರೂಪುಗೊಂಡಿರುವುದು ಈ ಚುನಾವಣಾ ಫಲಿತಾಂಶಗಳ ಮೂಲಕ ಸ್ಪಷ್ಟವಾಗಿದೆ. ಈ ಬಾರಿ ಫಲಿತಾಂಶ ಬಹುತೇಕ ಎಲ್ಲಾ ಎಕ್ಸಿಟ್ ಪೋಲ್‌ಗಳ ಅಂದಾಜುಗಳನ್ನು ಮೀರಿರುವುದು ಗಮನಾರ್ಹವಾಗಿದೆ ಎಂದು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಗೆಲವಿಗೆ ಉದಯ ಶೆಟ್ಟಿ ಹರ್ಷ



ಕಾರ್ಕಳ: ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಜನಬೆಂಬಲದ ಸಂಕೇತವಾಗಿದೆ ಎಂದು ಕಾರ್ಕಳ ಕಾಂಗ್ರೆಸ್ ನಾಯಕ ಉದಯ ಶೆಟ್ಟಿ ಮುನಿಯಾಲು ಹೇಳಿದ್ದಾರೆ. ಉಮೇಶ್ ಮೇಟಿ ಮತ್ತು ಸಮರ್ಥ್ ಶ್ಯಾಮನೂರ್ ಅವರಿಗೆ ಅಭಿನಂದನೆ ಸಲ್ಲಿಸಿ, ಪಂಚ ಗ್ಯಾರಂಟಿ ಯೋಜನೆಗಳು ಜನಮನ ಗೆದ್ದಿವೆ ಎಂದು ತಿಳಿಸಿದ್ದಾರೆ.

ಆದಿ ಗುರು ಶಂಕರಾಚಾರ್ಯ ಜಯಂತಿ ಉತ್ಸವ



ಮಂಗಳೂರು: ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ಸಂಗೀತ ಶಾರದಾ ಶೃಂಗೇರಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ದ.ಕ., ಭರತಾಂಜಲಿ ಕೊಟ್ಟಾರ ಇವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ಮಂಗಳೂರಿನ ಸುಬ್ರಹ್ಮಣ್ಯ ಸಭಾದಲ್ಲಿ ಶ್ರೀ ಆದಿ ಗುರು ಶಂಕರಾಚಾರ್ಯ ಜಯಂತಿ ಉತ್ಸವ ನಡೆಯಿತು. ಬೆಂಗಳೂರಿನ ವಿದುಷಿ ವಂದನಾ ರಾಣಿ, ಮಂಗಳೂರಿನ ವಿದುಷಿ ಮಾನಸ ಕಾರಂತ್, ಚೆನ್ನೈನ ವಿದುಷಿ ರಮ್ಯ ಮಂಗಳಲಕ್ಷ್ಮಿ ಇವರಿಂದ ಶಂಕರ ಸ್ತೋತ್ರ ರತ್ನ ಸಮರ್ಪಣಾ ಕಾರ್ಯಕ್ರಮ ನಡೆಯಿತು. ಪಕ್ಕವಾದ್ಯದಲ್ಲಿ ಮೃದಂಗನಲ್ಲಿ ವಿದ್ವಾನ್ ಮನೋಹರ ರಾವ್, ವಯೋಲಿನ್‌ನಲ್ಲಿ ವಿದುಷಿ ಧನಶ್ರೀ ಶಬರಾಯ ಸಹಕರಿಸಿದರು.

ವಿತರಣೆ ನೇರ ಪಾವತಿ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮತ್ತು ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಆರೋಗ್ಯ ವಿಮೆ ಕಾರ್ಡ್ ವಿತರಣೆ

'ವಿಮೆ ಕಾರ್ಡ್ ಬಳಸಿಕೊಂಡು ಪೌರಕಾರ್ಮಿಕರು ಆರೋಗ್ಯ ಕಾಪಾಡಿಕೊಳ್ಳಿ'

• **ಕನ್ನಡಪ್ರಭ ವಾರ್ತೆ** ಮಂಗಳೂರು

ನಗರಗಳನ್ನು ಸ್ವಚ್ಛವಾಗಿಡುವ ಕೆಲಸವನ್ನು ಮಾಡಿ ಸಮಾಜದ ಜನರ ಆರೋಗ್ಯವನ್ನು ಕಾಪಾಡಿಕೊಂಡು ಬರುವ ಪೌರಕಾರ್ಮಿಕರ ಆರೋಗ್ಯವೂ ಕೂಡ ಉತ್ತಮವಾಗಿರಬೇಕು. ಪೌರ ಕಾರ್ಮಿಕರಿಗೆ ಉತ್ತಮವಾದ ಆರೋಗ್ಯ ವಿಮಾ ಪಾಲಿಸಿಯನ್ನು ವಿನ್ಯಾಸಗೊಳಿಸಲಾಗಿದೆ. ಸರ್ಕಾರ ಜಾರಿಗೆ ತಂದ ಆರೋಗ್ಯ ವಿಮೆ ಕಾರ್ಡ್ ಬಳಸಿಕೊಂಡು ಪೌರಕಾರ್ಮಿಕರು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರಳಿ ಅಶೋಕ ಸಾಲಪ್ಪ ಹೇಳಿದರು.

ಅವರು ಗುರುವಾರ ನಗರದ ಕುದ್ಮುಲ್ ರಂಗರಾವ್ ಪುರಭವನದಲ್ಲಿ ನಡೆದ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಮತ್ತು ಮಂಗಳೂರು ಮಹಾನಗರ ಪಾಲಿಕೆ ಇವರ ಸಂಯುಕ್ತ ಆಶ್ರಯದಲ್ಲಿ ನೇರಪಾವತಿ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮತ್ತು ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಆರೋಗ್ಯ ವಿಮೆ ಕಾರ್ಡ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಅರಿವು ಮೂಡಿಸುವ ಕಾರ್ಯಕ್ರಮ ಹಾಗೂ ಆರೋಗ್ಯ ವಿಮೆ ಕಾರ್ಡ್ ವಿತರಣೆ ಕಾರ್ಯಕ್ರಮ ನಡೆಯಿತು.

ಪೌರಕಾರ್ಮಿಕರು ನೈರ್ಮಲ್ಯದ ಕೆಲಸ ಮಾಡುವುದರಿಂದ ಅನೇಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಾರೆ. ಪೌರಕಾರ್ಮಿಕರು ಅನಾರೋಗಕ್ಕೀಡಾದಾಗ ಆಸ್ಪತ್ರೆಯಲ್ಲಿ ಹೆಚ್ಚು ಹಣ ವ್ಯಯ ಮಾಡಬಾರದು ಎಂಬ ಕಾರಣದಿಂದ ಸರ್ಕಾರ ನಗದುರಹಿತ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, ಎಲ್ಲಾ ಪೌರಕಾರ್ಮಿಕರು ಇದನ್ನು ಬಳಕೆ ಮಾಡಿಕೊಳ್ಳಬೇಕು. ಆರೋಗ್ಯ ವಿಮೆ ಯೋಜನೆಯಡಿ ಪೌರಕಾರ್ಮಿಕರಿಗೆ ರು.5 ಲಕ್ಷದವರೆಗೆ ಯಾವುದೇ ಆಸ್ಪತ್ರೆಯಲ್ಲಿ ನಗದುರಹಿತ ಚಿಕಿತ್ಸೆ ಪಡೆಯಬಹುದು ಎಂದು ಅವರು ಹೇಳಿದರು. ಪೌರಕಾರ್ಮಿಕರು ಅಗತ್ಯವಾದ ಸುರಕ್ಷತಾ ಸಾಧನಗಳನ್ನು ಬಳಸಿಕೊಂಡು ಕಾರ್ಯ ನಿರ್ವಹಿಸಬೇಕು. ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದರು.


ಮಹಾನಗರಪಾಲಿಕೆ ಆಯುಕ್ತ ರವಿಚಂದ್ರ ನಾಯಕ್ ಮಾತನಾಡಿ, ಪೌರ ಕಾರ್ಮಿಕರ ಆರೋಗ್ಯ ಹದಗೆಟ್ಟರೆ ಮಂಗಳೂರು ನಗರದ ನೈರ್ಮಲ್ಯೀಕರಣ ಕುಂಠಿತಗೊಳ್ಳುತ್ತದೆ. ಅಸುರಕ್ಷಿತ ಪರಿಸರದಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ಅನಾರೋಗ್ಯ ಉಲ್ಬಣಗೊಳ್ಳುತ್ತದೆ. ಆದ್ದರಿಂದ ಪೌರ ಕಾರ್ಮಿಕರು ದುಶ್ಚಟಗಳಿಗೆ ಬಲಿಯಾಗದೆ ತಮ್ಮ ವೈಯಕ್ತಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಪೌರ ಕಾರ್ಮಿಕರಿಗೆ ನೀಡಿರುವ ಕಾರ್ಡನ್ನು ಸ್ಕ್ಯಾನ್ ಮಾಡಿದರೆ ಕಾರ್ಮಿಕರಿಗೆ ಸಂಬಂಧಿಸಿದ ಎಲ್ಲ ಮಾಹಿತಿಗಳು ಲಭ್ಯವಾಗುತ್ತವೆ. ಇಂತಹ ವಿಮಾ ಯೋಜನೆಗಳನ್ನು ನಗರದ ವಿವಿಧ ಕಾರ್ಪೊರೇಟ್ ಕಂಪನಿಗಳು ನೌಕರರಿಗೆ ನೀಡುತ್ತಿದ್ದು, ಈಗ ಪೌರ ಕಾರ್ಮಿಕರಿಗೂ ಈ ಆರೋಗ್ಯ ವಿಮೆ ಯೋಜನೆಯನ್ನು ಒದಗಿಸಲಾಗಿದ್ದು, ಇದರ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು ಎಂದರು.

ನೇರ ಪಾವತಿ ಪೌರ ಕಾರ್ಮಿಕರಿಗೆ ಇದೇ ವೇಳೆ ಆರೋಗ್ಯ ವಿಮೆ ಕಾರ್ಡ್ ವಿತರಿಸಲಾಯಿತು.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಟಿ.ಕುಮಾರ್, ವಿಮಾ ಸಂಸ್ಥೆಯ ಸಂಯೋಜಕ ಟಿ.ಎಲ್.ಕೃಷ್ಣಮೂರ್ತಿ, ನಿಗಮದ ಹೆಲ್ತ್ ಇನ್ಸೂರೆನ್ಸ್ ಕನ್ಸಲ್ಟೆಂಟ್ ಡಾ.ಜಯಪ್ರಕಾಶ್ ಇದ್ದರು.

ಮಹಾನಗರಪಾಲಿಕೆ ಪರಿಸರ ಎಂಜಿನಿಯರ್‌ದೀಪ್ತಿ ಸ್ವಾಗತಿಸಿ, ಡಾ. ಬಿ. ಆರ್. ಅಂಬೇಡ್ಕರ್‌ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಡಾ.ಮನೀಶ್ ನಾಯಕ್ ವಂದಿಸಿದರು. ನವನೀತ್ ನಿರೂಪಿಸಿದರು.

ಬೆಳ್ತಂಗಡಿ ಬಿಜೆಪಿ ವಿಜಯೋತ್ಸವ



• **ಕನ್ನಡಪ್ರಭ ವಾರ್ತೆ** ಬೆಳ್ತಂಗಡಿ

ಪಂಚ ರಾಜ್ಯಗಳ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಬಹುಮತ ಪಡೆಯುತ್ತಿದ್ದಂತೆ ಬೆಳ್ತಂಗಡಿ ಬಿಜೆಪಿ ಮಂಡಲ ಸಮಿತಿ ವತಿಯಿಂದ ವಿಜಯೋತ್ಸವ ಬೆಳ್ತಂಗಡಿ ಬಿಜೆಪಿ ಕಚೇರಿ ಎದುರು ನಡೆಯಿತು.

ಬೆಳ್ತಂಗಡಿ ಬಿಜೆಪಿ ಮಂಡಲ ಅಧ್ಯಕ್ಷ ಶ್ರೀನಿವಾಸ್ ರಾವ್ ಮಾತನಾಡಿ, ಪಂಚ ರಾಜ್ಯಗಳಲ್ಲಿ ಅಭೂತಪೂರ್ವ ಕೆಲವು ಸಾಧಿಸಿದೆ. ಪಶ್ಚಿಮ ಬಂಗಾಳದಲ್ಲಿ ಭಯೋತ್ಪಾದನೆಯ 15 ವರ್ಷದ ಆಡಳಿತವನ್ನು ಜನಸಾಮಾನ್ಯರು ಕಿತ್ತು ಬಿಜೆಪಿಗೆ 200 ಸ್ಥಾನಗಳನ್ನು ಕೊಟ್ಟು ಗೆಲವು ಸಾಧಿಸಿದ್ದಾರೆ ಎಂದರು.

ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಎಂ ಪಾರೆಂಕಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಬೆಳಾಲು, ಪಟ್ಟಣ ಪಂಚಾಯತ್ ಸ್ಥಾಯಿ ಸಮಿತಿ ನಿಕಟ ಪೂರ್ವ ಅಧ್ಯಕ್ಷ ಶರತ್, ಅರವಿಂದ್ ಲಾಯಿಲ, ಗಣೇಶ್ ಲಾಯಿಲ, ಜಗದೀಶ್, ಉಮೇಶ್ ಕುಲಾಲ್ ಪ್ರಮುಖರು ಇದ್ದರು

> ಪಂಚರಾಜ್ಯ ಚುನಾವಣಾ ಫಲಿತಾಂಶವು ಎನ್‌ಡಿಎ ಮೈತ್ರಿಕೂಟದ ವಿಶ್ವಾಸಾರ್ಹತೆ ಹಾಗೂ ಪಾರದರ್ಶಕ ಆಡಳಿತದ ವಿಜಯವಾಗಿದೆ. ಬಿಜೆಪಿ ವ್ಯಾಪ್ತಿಯನ್ನು ಈ ಜಯವು ಮತ್ತಷ್ಟು ವಿಸ್ತರಿಸಿದ್ದು, ರಾಷ್ಟ್ರದ ಪ್ರಗತಿಯ ಹಾದಿಯಲ್ಲಿ ಜನರು ಮೋದಿ ನಾಯಕತ್ವವನ್ನು ಸಂಪೂರ್ಣ ಒಪ್ಪಿಕೊಂಡಿರುವುದಕ್ಕೆ ಸಾಕ್ಷಿಯಿದು.
>
> • **ಕ್ಯಾ.ಬ್ರಿಜೇಶ್ ಚೌಟ** ದಕ್ಷಿಣ ಕನ್ನಡ ಸಂಸದ.

ಸೈದ್ಧಾಂತಿಕ ನಿಲುವಿಗೆ ಸಂದ ಜನಮನ್ನಣೆ: ಸಂಸದ ಚೌಟ

ಪಂಚ ರಾಜ್ಯ ಚುನಾವಣೆಯಲ್ಲಿ ಹಲವೆಡೆ ಗೆಲುವು ಹಿನ್ನಲೆ | ಮಂಗಳೂರಿನಲ್ಲಿ ಬಿಜೆಪಿ ಸಂಭ್ರಮ, ವಿಜಯೋತ್ಸವ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಪಂಚರಾಜ್ಯಗಳಿಗೆ ನಡೆದ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮಂಗಳೂರು ನಗರದ ಪಿವಿಎಸ್ ವೃತ್ತ ಬಳಿಯ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಾಲಯ ಮುಂಭಾಗ ಬಿಜೆಪಿ ಕಾರ್ಯಕರ್ತರು ಸೋಮವಾರ ವಿಜಯೋತ್ಸವ ಆಚರಿಸಿದರು.

ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿ, ಹಿಂದು ವಿರೋಧಿ ವರ್ತನೆ ತೋರಿದವರಿಗೆ ಈ ಚುನಾವಣಾ ಫಲಿತಾಂಶದಲ್ಲಿ ಜನತೆ ಉತ್ತರ ನೀಡಿದ್ದಾರೆ. ಅಸ್ಸಾಂನಲ್ಲಿ ಬಿಜೆಪಿ ಮತ್ತೆ ಬಹುಮತ ಪಡೆದಿದೆ. ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ನೇತೃತ್ವದಲ್ಲಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತಿದೆ. ಹಿಂದುತ್ವದ ವಿರುದ್ಧ ಅಧಿಕಾರ ಚಲಾಯಿಸಿದ್ದ ಮಮತಾ ಬ್ಯಾನರ್ಜಿ ಪಕ್ಷ ಸೋತಿದೆ. ತಮಿಳುನಾಡಿನಲ್ಲಿ ಹಿಂದುತ್ವದ ವಿರುದ್ಧ ಮಾತನಾಡುತ್ತಿದ್ದ ಸ್ಟಾಲಿನ್, ಉದಯನಿಧಿ ಸರ್ಕಾರಕ್ಕೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ ಎಂದರು.

ಸಂಸದ ಕ್ಯಾ.ಬ್ರಿಜೇಶ್ ಚೌಟ ಮಾತನಾಡಿ, ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಗೆಲುವು ನಮ್ಮ ಸೈದ್ಧಾಂತಿಕ ನಿಲುವಿಗೆ ದೊರೆತ ಜನಮನ್ನಣೆಯಾಗಿದೆ. ಹಿಂದುತ್ವ, ಸನಾತನ ಧರ್ಮದ ವಿರುದ್ಧ ಇದ್ದ ಟಿಎಂಸಿ ಮತ್ತು ಡಿಎಂಕೆ ಸೋತಿದೆ. ಬಿಜೆಪಿ ಜನಪರ ಪಕ್ಷ ಎಂಬುದು ಸಾಬೀತಾಗಿದೆ. ರಾಜ್ಯದ 2028ರ ಚುನಾವಣೆಗೆ ಈ ಗೆಲುವು ಶಕ್ತಿ ತುಂಬಲಿದೆ ಎಂದರು.

ಶಾಸಕ ವೇದವ್ಯಾಸ ಕಾಮತ್ ಮಾತನಾಡಿ, ಬಿಜೆಪಿ ಅಸ್ಸಾಂ, ಪುದುಚೇರಿ ಉಳಿಸಿಕೊಂಡು, ಪಶ್ಚಿಮ ಬಂಗಾಳದಲ್ಲಿ ಅಭೂತಪೂರ್ವ ಗೆಲುವು ಪಡೆದಿದೆ. ತಮಿಳುನಾಡಿನಲ್ಲಿ ಇಂಡಿ ಒಕ್ಕೂಟ ನೆಲಕಚ್ಚಿದೆ. ಮೋದಿ- ಅಮಿತ್ ಶಾ ನೇತೃತ್ವದಲ್ಲಿ ’ ಕಾರ್ಯಕರ್ತರ ಶ್ರಮದಿಂದ ಗೆಲುವು ಸಾಧ್ಯವಾಗಿದೆ ಎಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಯತೀಶ್ ಆರ್ವಾರ್, ಪ್ರೇಮಾನಂದ ಶೆಟ್ಟಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಮಂಜುಳಾ ರಾವ್, ಯುವ ಮೋರ್ಚಾ ಜಿಲ್ಲಾಧ್ಯಕ್ಷ ನಂದನ್ ಮಲ್ಯ, ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ಮಹೇಶ್ ಜೋಗಿ, ಮಂಗಳೂರು ನಗರ ದಕ್ಷಿಣ ಮಂಡಲ ಅಧ್ಯಕ್ಷ ರಮೇಶ್ ಕಂಡೆಟ್ಟು, ಮುಖಂಡರಾದ ವಿಕಾಸ್ ಪುತ್ತೂರು, ರವಿಶಂಕರ್ ಮಿಜಾರ್, ರವೀಂದ್ರ ಶೆಟ್ಟಿ ಉಳಿದೊಟ್ಟು, ಪೂರ್ಣಿಮಾ, ತಿಲಕ್ ರಾಜ್ ಕೃಷ್ಣಾಪುರ, ಸುನೀಲ್ ಆಳ್ವ, ಕವಿತಾ ಸನಿಲ್, ಪ್ರಸನ್ನ ದರ್ಬೆ, ಮನಪಾ ಮಾಜಿ ಸದಸ್ಯರು, ಮತ್ತಿತರರು ಇದ್ದರು.



ಚುನಾವಣೆಯಲ್ಲಿ ಗೆಲುವು ಸಾಧಿಸಿದ ಹಿನ್ನಲೆಯಲ್ಲಿ ಬಿಜೆಪಿ ವತಿಯಿಂದ ಮಂಗಳೂರಿನಲ್ಲಿ ವಿಜಯೋತ್ಸವ ಆಚರಿಸಲಾಯಿತು.

ಚುರುಮುರಿ ಹಂಚಿ ಸಂಭ್ರಮ!

- ಪಶ್ಚಿಮ ಬಂಗಾಲದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರ ಸಂದರ್ಭ ಜಲ್ ಮುರಿ ಅಂಗಡಿಗೆ ಭೇಟಿ ನೀಡಿ ಜಲ್‌ಮುರಿ ಸವಿದಿರುವುದು ಚುನಾವಣಾ ಪ್ರಚಾರದಲ್ಲಿ ವ್ಯಾಪಕ ಜನಪ್ರಿಯತೆ ಗಳಿಸಿದ ಹಿನ್ನೆಲೆಯಲ್ಲಿ ಬಿಜೆಪಿ ವಿಜಯೋತ್ಸವ ಸಂದರ್ಭದಲ್ಲೂ ಕಾರ್ಯಕರ್ತರು ಚುರುಮುರಿ ಹಂಚಿ ಸಂಭ್ರಮಿಸಿದರು. ಗೆಲುವಿಗೆ ಜಯ ಘೋಷಣೆಗಳನ್ನು ಕೂಗಿ ಸಂಭ್ರಮಿಸಿ, ವಿಜಯೋತ್ಸವ ಆಚರಿಸಿದರು. ಮಹಿಳಾ ಕಾರ್ಯಕರ್ತರು ಕುಣಿದು ಸಂತಸ ಹಂಚಿಕೊಂಡರು. ಸಿಹಿ ಹಂಚಿದರು.

ಸುದ್ದಿ ಸಿಂಚನ

ಟಿಎಂಸಿ ದುರಾಡಳಿತ ಕೊನೆ: ಶಾಸಕ ಕಾಮತ್



ಮಂಗಳೂರು: ಅಸ್ಸಾಂ, ಪುದುಚೇರಿ ಜೊತೆಗೆ ವಿಶೇಷವಾಗಿ ಪಶ್ಚಿ ಬಂಗಾಳದಲ್ಲಿ ಬಿಜೆಪಿ ಚರಿತ್ರೆಯಲ್ಲಿ ದಾಖಲಾಗುವಂತಹ ಅದ್ಭುತ ಗೆಲುವು ಸಾಧಿಸಿದ್ದು ಟಿಎಂಸಿಯ ದುರಾಡಳಿತ ಕೊನೆಗೊಂಡಿದೆ ಎಂದು ಶಾಸಕ ವೇದವ್ಯಾಸ ಕಾಮತ್ ಹರ್ಷ ವ್ಯಕ್ತಪಡಿಸಿದ್ದಾರೆ. ಟಿಎಂಸಿ ಹಾಗೂ ಕಮ್ಯುನಿಸ್ಟ್ ಎಂಬ ಒಂದೇ ನಾಣ್ಯದ ಎರಡು ಮುಖಗಳು ಬಂಗಾಳದಲ್ಲಿ ಹಿಂದೂಗಳನ್ನು ಗುರಿಯಾಗಿಸಿಕೊಂಡು ನಡೆಸಿದ ಮಾರಣಹೋಮ, ಮಿತಿ ಮೀರಿದ ಓಲೈಕೆ, ದೇಶದ ಭದ್ರತೆಗೆ ಸವಾಲು ಇವೆಲ್ಲವೂ ಬಿಜೆಪಿ ಗೆಲುವಿನಿಂದ ಅಂತ್ಯಗೊಂಡಿದೆ. ಭಾರತೀಯ ಜನಸಂಘದ ಸಂಸ್ಥಾಪಕರಾಗಿದ್ದ ಶ್ಯಾಮ್ ಪ್ರಸಾದ್ ಮುಖರ್ಜಿ ನಾಡಿನಲ್ಲಿ ಕಮಲ ಅರಳಿರುವುದು ಇಡೀ ದೇಶದ ಬಿಜೆಪಿ ಕಾರ್ಯಕರ್ತರಲ್ಲಿ ಹುಮ್ಮಸ್ಸು ತಂದಿದೆ. ಈ ಅಭೂತಪೂರ್ವ ಜಯಕ್ಕೆ ಕಾರಣೀಭೂತರಾದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್, ನರೇಂದ್ರ ಮೋದಿ, ಅಮಿತ್ ಶಾ, ಸುವೆಂದು ಅಧಿಕಾರಿ ಸಹಿತ ಎಲ್ಲಾ ಬಿಜೆಪಿ ಪ್ರಮುಖರು, ಕಾರ್ಯಕರ್ತರು, ವಿಶೇಷವಾಗಿ ಬಂಗಾಳದ ಜನತೆ ಯಾವುದೇ ಭಯವಿಲ್ಲದೇ ಮತದಾನ ನಡೆಸಲು ಅವಕಾಶ ಮಾಡಿಕೊಟ್ಟ ಭದ್ರತಾ ಪಡೆಗಳಿಗೆ ಹೇಳಿಕೆಯಲ್ಲಿ ಅಭಿನಂದನೆ ತಿಳಿಸಿದ್ದಾರೆ.

ಬಿಜೆಪಿ ಸಾಧನೆಗೆ ಸುನಿಲ್ ಕುಮಾರ್‌ಪ್ರಶಂಸೆ



ಕಾರ್ಕಳ: ಪಂಚ ರಾಜ್ಯಗಳ ಚುನಾವಣಾ ಫಲಿತಾಂಶ ಕುರಿತು ಪ್ರತಿಕ್ರಿಯಿಸಿದ ಕಾರ್ಕಳ ಶಾಸಕ ಹಾಗೂ ಮಾಜಿ ಸಚಿವ ವಿ. ಸುನಿಲ್ ಕುಮಾರ್, ಪಶ್ಚಿಮ ಬಂಗಾಳದಲ್ಲಿ ದೀರ್ಘ ಕಾಲದ ಅರಾಜಕತೆಗೆ ಮತದಾರರು ಅಂತ್ಯ ಹಾಡಿದ್ದಾರೆ ಎಂದು ಹೇಳಿದ್ದಾರೆ. ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರತಿಕ್ರಿಯೆ ನೀಡಿದ್ದಾರೆ. ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಕನಸು ಸಾಕಾರಗೊಂಡಿದ್ದು, ಮಮತಾ ಬ್ಯಾನರ್ಜಿ ಅವರ ಆಡಳಿತಕ್ಕೆ ಜನತೆ ತಕ್ಕ ಉತ್ತರ ನೀಡಿದ್ದಾರೆ ಎಂದು ಅಭಿಪ್ರಾಯಪಟ್ಟರು. ಪ್ರಧಾನಮಂತ್ರಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ರಾಷ್ಟ್ರೀಯ ನಾಯಕತ್ವದ ನಿರಂತರ ಪ್ರಯತ್ನದಿಂದ ಈ ಫಲಿತಾಂಶ ಸಾಧ್ಯವಾಗಿದೆ ಎಂದರು. ಅಸ್ಸಾಂನಲ್ಲಿ ಸತತ ಮೂರನೇ ಬಾರಿ ಬಿಜೆಪಿ ಗೆಲುವು ಸಾಧಿಸಿರುವುದನ್ನೂ, ಪುದುಚೇರಿಯಲ್ಲಿ ಎನ್‌ಡಿಎ ಅಭೂತಪೂರ್ವ ಜಯ ಗಳಿಸಿರುವುದನ್ನೂ ಅವರು ಪ್ರಶಂಸಿಸಿದರು. ಪಂಚ ರಾಜ್ಯಗಳಲ್ಲಿ ಬಿಜೆಪಿ ಮೂರು ರಾಜ್ಯಗಳಲ್ಲಿ ಅಧಿಕಾರ ಹಿಡಿದಿರುವುದಕ್ಕೆ ಕಾರ್ಯಕರ್ತರ ಅವಿಶ್ರಾಂತ ಶ್ರಮವೇ ಕಾರಣ ಎಂದು ಹೇಳಿ, ಅವರಿಗೆ ಅಭಿನಂದನೆ ಸಲ್ಲಿಸಿದರು.

ಬಿಜೆಪಿ ಗೆಲವು ವಿಕಸಿತ ಭಾರತ ಸಂಕಲ್ಪಕ್ಕೆ ಸಂದ ಜಯ: ಸಂಸದ ಕ್ಯಾ.ಚೌಟ



ಮಂಗಳೂರು: ಪಶ್ಚಿಮ ಬಂಗಾಳದ ಚಾರಿತ್ರಿಕ ಗೆಲುವು, ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು ಸಾಧಿಸಿರುವುದು ಹಾಗೂ ಪುದುಚೇರಿಯಲ್ಲಿ ಎನ್‌ಡಿಎ ಮೈತ್ರಿಕೂಟ ಸ್ಪಷ್ಟ ಬಹುಮತ ಪಡೆದಿರುವುದು ಹಾಗೂ ಕೇರಳದಲ್ಲಿ ಉತ್ತಮ ಸಾಧನೆ ಮಾಡಿರುವುದು ಪ್ರಧಾನಮಂತ್ರಿ ಮೋದಿ ಅವರ ಸರ್ಕಾರದ ಮೇಲಿರುವ ಜನರ ವಿಶ್ವಾಸಕ್ಕೆ ಹಾಗೂ ‘ವಿಕಸಿತ ಭಾರತ’ದ ಸಂಕಲ್ಪಕ್ಕೆ ಮತ್ತಷ್ಟು ಶಕ್ತಿಯನ್ನು ತುಂಬಿದೆ ಎಂದು ಸಂಸದ ಕ್ಯಾ.ಬ್ರಿಜೇಶ್ ಚೌಟ ತಿಳಿಸಿದ್ದಾರೆ. ಪಶ್ಚಿಮ ಬಂಗಾಲದಲ್ಲಿ ಬಿಜೆಪಿಯ ಗೆಲುವು ಇಡೀ ದೇಶದಲ್ಲಿರುವ ಬಿಜೆಪಿ ಕಾರ್ಯಕರ್ತರಿಗೆ ಸಂದ ಗೆಲುವು. ಪಶ್ಚಿಮ ಬಂಗಾಲದಲ್ಲಿ ತೃಣಮೂಲ ಕಾಂಗ್ರೆಸ್‌ನ ಗೂಂಡಾ ರಾಜ್ಯದಲ್ಲಿ ಕಮಲ ಅರಳಿಸುವುದು ಸುಲಭವಿರಲಿಲ್ಲ. ಈ ಗೆಲುವಿನ ಹಿಂದೆ ಕಾರ್ಯಕರ್ತರ ತ್ಯಾಗ-ಬಲಿದಾನ ಅಡಗಿದೆ. ಬಿಜೆಪಿಯ ಕಾರ್ಯಕರ್ತರ ಮೇಲೆ ದೌರ್ಜನ್ಯ ನಡೆದರೂ ಎದೆಗುಂದದೆ ಪಕ್ಷ ಅಧಿಕಾರಕ್ಕೆ ತರಲೇಬೇಕೆಂಬ ಕಠಿಣ ಪರಿಶ್ರಮ, ಹೋರಾಟಕ್ಕೆ ಹಾಗೂ ಬಿಜೆಪಿ ಸೈದಾಂತಿಕ ನಿಲುವಿಗೆ ಸಿಕ್ಕ ಐತಿಹಾಸಿಕ ಜಯ ಇದಾಗಿದೆ. ಐದು ರಾಜ್ಯಗಳಲ್ಲಿನ ಬಿಜೆಪಿಯ ಅದ್ಭುತ ಸಾಧನೆಯ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಅಪ್ರತಿಮ ಕಾರ್ಯತಂತ್ರ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಸಹಯೋಗ ಇದೆ ಎಂದು ಕ್ಯಾ. ಚೌಟ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದ.ಕ. ಬಿಜೆಪಿ ಆರ್ಥಿಕ ಪ್ರಕೋಷ್ಟ ಸಂಚಾಲಕ ಎಸ್.ಎಸ್.ನಾಯಕ್

• **ಕನ್ನಡಪ್ರಭ ವಾರ್ತೆ** ಮಂಗಳೂರು

ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಆರ್ಥಿಕ ಪ್ರಕೋಷ್ಠದ ಸಂಚಾಲಕರಾಗಿ ಚಾರ್ಟರ್ಡ್ ಅಕೌಂಟೆಂಟ್ ಸಿ.ಎ. ಎಸ್.ಎಸ್.ನಾಯಕ್ ಅವರನ್ನು ನೇಮಕ ಮಾಡಲಾಗಿದೆ. ಬಿಜೆಪಿ ಜಿಲ್ಲಾ ಅಧ್ಯಕ್ಷ ಸತೀಶ್ ಕುಂಪಲ ಅವರು ಸಿ.ಎ. ಎಸ್. ಎಸ್.ನಾಯಕ್ ಅವರನ್ನು ಪಕ್ಷದ ಶಾಲು ಹೊದಿಸಿ ಗೌರವಿಸಿ, ಸ್ವಾಗತಿಸಿದರು.

ಸಿ.ಎ. ಎಸ್.ಎಸ್.ನಾಯಕ್ ಅವರು ಬಿಜೆಪಿ ಪಕ್ಷದೊಂದಿಗೆ ಸಹ ಸಂಚಾಲಕರಾಗಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, ಕೇಂದ್ರ ಬಜೆಟ್, ತೆರಿಗೆ ಸುಧಾರಣೆಗಳು, ವಿಕಸಿತ ಭಾರತ ಪರಿಕಲ್ಪನೆ, ಭಾರತೀಯ ಆರ್ಥಿಕತೆ, ಎಂಎಸ್‌ಎಂಇ ಹಾಗೂ ಸ್ಟಾರ್ಟ್‌ಅಪ್ ಗಳಿಗೆ ಮಾರ್ಗದರ್ಶನ ನೀಡುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ತಮ್ಮ ವಿಶಿಷ್ಟ ಕೊಡುಗೆಗಳ ಮೂಲಕ ಹಲವು ಸಂಸ್ಥೆಗಳಲ್ಲಿ ಗುರುತಿಸಿಕೊಂಡಿದ್ದಾರೆ.

ಸಿ.ಎಸ್.ನಾಯಕ್ ಅವರು ಮಂಗಳೂರು ಪ್ರೊಡಕ್ಟಿವಿಟಿ ಕೌನ್ಸಿಲ್‌ನಲ್ಲಿ ಮಹಾಪೋಷಕರಾಗಿ, ಜಿಎಸ್‌ಬಿ ಹಿತರಕ್ಷಣ ವೇದಿಕೆಯ ವಿದ್ಯಾ ಪೋಷಕ ನಿಧಿ ಅಧ್ಯಕ್ಷರಾಗಿ, ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಮಂಗಳೂರು ಶಾಖೆಯ ಅಧ್ಯಕ್ಷರಾಗಿ, ನಿಟ್ಟೆ ಅಟಲ್ ಇಂಕ್ಯುಬೇಷನ್ ಸೆಂಟರ್‌ನಲ್ಲಿ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸಿರುತ್ತಾರೆ. ಐಸಿಎಐ ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿಯ ಎಂಎಸ್‌ಎಂಇ ಮತ್ತು ಸ್ಟಾರ್ಟ್‌ಅಪ್ ಸಮಿತಿಯ ಸಹ ಆಯ್ಕೆಯ ಸದಸ್ಯರಾಗಿ, ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ದಕ್ಷಿಣ ಕನ್ನಡ ಜಿಲ್ಲಾ ಗೌರವಾಧ್ಯಕ್ಷರಾಗಿ, ಇಸ್ಕಾನ್ ಮಂಗಳೂರು ದೇವಾಲಯ ಸಲಹಾ ಸಮಿತಿಯ ಸದಸ್ಯರಾಗಿ, ಇಬ್ರೋಸ್ ಕಾಂಪ್ಲೆಕ್ಸ್ ಅಸೋಸಿಯೇಷನ್‌ನ ಉಪಾಧ್ಯಕ್ಷ ಹಾಗೂ ಅಧ್ಯಕ್ಷರಾಗಿ, 14 ಎಂಎಸ್‌ಎಂಇ ಸಮಾವೇಶಗಳ ನಿರ್ದೇಶಕರಾಗಿ ಮತ್ತು ಐಸಿಎಐ ವತಿಯಿಂದ ಎಂಎಸ್‌ಎಂಇ ಕನ್ಸಲ್ಟೆಂಟ್ ಗಳಿಗೆ ಮಾಸ್ಟರ್‌ಟ್ರೈನರ್‌ಆಗಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸಿ.ಎ. ಎಸ್.ಎಸ್. ನಾಯಕ್ ಅವರು ಸಂಚಾಲಕ ರಾಗಿ ನೇಮಕಗೊಂಡಿರುವುದಕ್ಕೆ ವಿವಿಧ ವಲಯಗಳಿಂದ ಅಭಿನಂದನೆ ಸಲ್ಲಿಸಿದ್ದಾರೆ. ತಮಗೆ ಕೊಟ್ಟ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಸಿಎಸ್ ನಾಯಕ್ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.



ಸಿಎಸ್ ನಾಯಕ್ ಅವರನ್ನು ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ ಸ್ವಾಗತಿಸಿದರು.

ವಿವೇಕಾನಂದ ಪಾಲಿಟೆಕ್ನಿಕ್‌ನಲ್ಲಿ ಮೂರು ಹೊಸ ಕೋರ್ಸ್ ಶುರು



ಸುದ್ದಿಗೋಷ್ಠಿಯಲ್ಲಿ ಆಡಳಿತ ಮಂಡಳಿ ಅಧ್ಯಕ್ಷ ವಿಶ್ವೇಶ್ವರ ಭಟ್ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಪುತ್ತೂರು

ಪುತ್ತೂರಿನ ವಿವೇಕಾನಂದ ಪಾಲಿಟೆಕ್ನಿಕ್ ಕಾಲೇಜ್ ಯಶಸ್ವಿಯಾಗಿ 4 ದಶಕಗಳ ಶೈಕ್ಷಣಿಕ ವರ್ಷಗಳನ್ನು ಪೂರೈಸಿದ್ದು, ಇದೀಗ 3 ಹೊಸ ಕೋರ್ಸ್ ಗಳನ್ನು ಆರಂಭಿಸಲಾಗಿದೆ. 2026-27ನೇ ಶೈಕ್ಷಣಿಕ ಸಾಲಿನಿಂದ ಆಟೋಮೇಷನ್ ಆಂಡ್ ರೊಬೋಟಿಕ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸಿ ಆಂಡ್ ಮೆಷಿನ್ ಲರ್ನಿಂಗ್ (ಕೃತಕ ಬುದ್ದಿಮತ್ತೆ), ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಆಂಡ್ ಎಲೆಕ್ಟ್ರಿಕಲ್ ವೆಹಿಕಲ್ ಟೆಕ್ನೋಲಜಿಗಳನ್ನು ಸೇರ್ಪಡೆಗೊಳಿಸಲಾಗಿದೆ ಎಂದು ಆಡಳಿತ ಮಂಡಳಿ ಅಧ್ಯಕ್ಷ ವಿಶ್ವೇಶ್ವರ ಭಟ್ ಬಂಗಾರಡ್ಕ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತಕನಾಡಿದ ಅವರು, ವಿವೇಕಾನಂದ ಪಾಲಿಟೆಕ್ನಿಕ್ ಕಾಲೇಜು ಆಧುನಿಕ ವಿದ್ಯಾಮಾನಕ್ಕೆ ಸರಿಯಾದ ಬೇಡಿಕೆಯಲ್ಲಿರುವ ಈ ಮೂರು ಹೊಸ ಕೋರ್ಸಗಳಿಗೆ ನವದೆಹಲಿಯ ಎಐಸಿಟಿಇ ಮಾನ್ಯತೆ ನೀಡಿದೆ. ವಿವೇಕಾನಂದ ಪಾಲಿಟೆಕ್ನಿಕ್ ಸಂಸ್ಥೆಯು ತಾಂತ್ರಿಕ ಪರೀಕ್ಷಾ ಮಂಡಳಿ ಬೆಂಗಳೂರು ಅವರೊಂದಿಗೆ ಸಂಯೋಜನೆಗೊಂಡಿದೆ. ಕೋರ್ಸ್ ಸೇರ್ಪಡೆ ಸಂಬಂಧಿಸಿ ಇಲಾಖೆಗಳಿಂದ ಅನುಮತಿ ಕೊಡಿಸುವಲ್ಲಿ ಶಾಸಕ ಅಶೋಕ್ ಕುಮಾರ್‌ರೈ ಸಹಕಾರ ನೀಡಿದ್ದಾರೆ ಎಂದರು.

ಸಂಸ್ಥೆಯ ಸಂಚಾಲಕ ಮಣಿಲ ಮಹಾದೇವ ಶಾಸ್ತ್ರೀ, ಆಡಳಿತ ಮಂಡಳಿ ಸದಸ್ಯರಾದ ರವಿ ಮುಂಗ್ಲಿ ಮನೆ, ಈಶ್ವರಚಂದ್ರ, ಪ್ರಶಾಂತ್, ಪ್ರಾಂಶುಪಾಲ ಮುರಳೀಧರ, ಸಿವಿಲ್ ವಿಭಾಗದ ಮುಖ್ಯಸ್ಥ ರವಿರಾಮ ಸಿದ್ಧಮೂಲೆ, ಕಂಪ್ಯೂಟರ್‌ವಿಭಾಗದ ಮುಖ್ಯಸ್ಥೆ ಪುಷ್ಪಾ ಉಪಸ್ಥಿತರಿದ್ದರು.

- ಮೂರು ಹೊಸ ಕೋರ್ಸ್ ಗಳಲ್ಲಿ ತಲಾ 30 ಸೀಟುಗಳು ಲಭ್ಯವಿವೆ. ಡಿಪ್ಲೋಮಾ ಶಿಕ್ಷಣ ಪಡೆಯಲು ಕನಿಷ್ಠ ವಿದ್ಯಾರ್ಹತೆ ಎಸ್‌ಎಸ್ ಎಲ್‌ಸಿ ಆಗಿರಬೇಕು. ಡಿಪ್ಲೊಮಾ ಪದವಿ ಪಡೆದವರು 3 ವರ್ಷಗಳ ಪಾಲಿಟೆಕ್ನಿಕ್ ಕೋರ್ಸ್ ಬಳಿಕ ಎಂಜಿನಿಯರಿಂಗ್ 2ನೇ ವರ್ಷಕ್ಕೆ ಪ್ರವೇಶ, ಪಿಯುಸಿ ವಿಜ್ಞಾನ ಮತ್ತು ಐಟಿಐ ಪಾಸಾದವರಿಗೆ ಡಿಪ್ಲೋಮಾದ 2ನೇ ವರ್ಷಕ್ಕೆ ನೇರ ದಾಖಲಾತಿ ಅವರಕಾಶ ಇದೆ ಎಂದು ತಿಳಿಸಿದರು.

ಇಂದು ಪುತ್ತೂರು ಬಸ್ ನಿಲ್ದಾಣದಲ್ಲಿ ಕನ್ನಡ ರಸಪ್ರಶ್ನೆ, ಪುಸ್ತಕ ಬಹುಮಾನ

• **ಕನ್ನಡಪ್ರಭ ವಾರ್ತೆ** ಪುತ್ತೂರು

ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನ ಪುತ್ತೂರು ತಾಲೂಕು ಘಟಕ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಮಂಗಳವಾರ ಸಂಜೆ 4.00 ಗಂಟೆಗೆ ಪುತ್ತೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸಂಚರಿಸುವ ಸಾರ್ವಜನಿಕರಿಗಾಗಿ ‘ಕನ್ನಡ ರಸಪ್ರಶ್ನೆ ಹಾಗೂ ಪುಸ್ತಕ ಬಹುಮಾನ’ ಕಾರ್ಯಕ್ರಮ ಆಯೋಜಿಸಲಾಗಿದೆ.

ಪುತ್ತೂರು ಕೆಎಸ್‌ಆರ್‌ಟಿಸಿ ಮುಖ್ಯ ಪ್ರಬಂಧಕ ಸುಬ್ರಹ್ಮಣ್ಯ ಪ್ರಕಾಶ್ ಉದ್ಘಾಟಿಸಲಿದ್ದಾರೆ. ತಾಲೂಕು ಕಸಾಪ ಅಧ್ಯಕ್ಷ ಪುತ್ತೂರು ಉಮೇಶ್ ನಾಯಕ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಸಾಪ ಕಾರ್ಯಕಾರಿ ಸಮಿತಿ ಸದಸ್ಯ ಅಬೂಬಕ್ಕರ್‌ಆರ್ಲಪದವು ಆಶಯ ನುಡಿಯನ್ನಾಡಲಿದ್ದಾರೆ. ರಂಗಕರ್ಮಿ ರಂಗಯ್ಯ ಬಲ್ಲಾಳ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ರಸಪ್ರಶ್ನೆ ನಡೆಸಿಕೊಡಲಿದ್ದಾರೆ.

ಈ ಬಾರಿ ಜನಸಾಮಾನ್ಯರ ನಡುವೆ ಬಸ್ ನಿಲ್ದಾಣದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಬಸ್ ನಿಲ್ದಾಣದಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಹಾಗೂ ಪ್ರಯಾಣಿಕರಿಗೆ ಸ್ಥಳದಲ್ಲೇ ಕನ್ನಡಕ್ಕೆ ಸಂಬಂಧಿಸಿದ ರಸಪ್ರಶ್ನೆಗಳನ್ನು ಕೇಳಲಾಗುವುದು. ಸರಿಯಾದ ಉತ್ತರ ನೀಡಿದವರಿಗೆ ಸ್ಥಳದಲ್ಲೇ ಪುಸ್ತಕಗಳನ್ನು ಬಹುಮಾನವಾಗಿ ನೀಡಿ ಪ್ರೋತ್ಸಾಹಿಸಲಾಗುವುದು. ಕನ್ನಡ ನಾಡು-ನುಡಿ ಬಗ್ಗೆ ಜಾಗೃತಿ ಮೂಡಿಸುವ ಈ ವಿಶೇಷ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹಾಗೂ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಪ್ರಕಟಣೆ ಮೂಲಕ ವಿನಂತಿಸಿದ್ದಾರೆ.



ಪುತ್ತೂರು ಉಮೇಶ್ ನಾಯಕ್

ಇಂದು ಗ್ಲೋಬಲ್ ಡಿಗ್ರಿಸ್ ಮಂಗಳೂರು ಉದ್ಘಾಟನೆ



ಸಂಸ್ಥೆಯ ಸಹ ಸಂಸ್ಥಾಪಕ ಶಿಜೊಮೋನ್ ಯೇಸುಧಾಸ್ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಮಂಗಳೂರು

ಅಂತಾರಾಷ್ಟ್ರೀಯ ಶಿಕ್ಷಣ ಸಲಹಾ ಸಂಸ್ಥೆ ಗ್ಲೋಬಲ್ ಡಿಗ್ರಿಸ್ ಮಂಗಳೂರು ಮೇ 5ರಂದು ಮಂಗಳೂರಿನಲ್ಲಿ ಉದ್ಘಾಟನೆಗೊಳ್ಳಲಿದೆ ಎಂದು ಸಂಸ್ಥೆಯ ಕೋ-ಫೌಂಡರ್ ಶಿಜೊಮೋನ್ ಯೇಸುಧಾಸ್ ತಿಳಿಸಿದರು.

ಅವರು ಸೋಮವಾರ ಮಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಮಂಗಳೂರಿನ ಎಂ.ಜಿ.ರಸ್ತೆಯ ಮಾನಸ ಟವರ್‌ನ ಪ್ರಥಮ ಮಹಡಿಯಲ್ಲಿ ಸಂಸ್ಥೆ ಕಾರ್ಯಾಚರಿಸಲಿದೆ. ಸಂಸ್ಥೆಯ ಉದ್ಘಾಟನಾ ಕಾರ್ಯಕ್ರಮ ಮೇ 5ರಂದು ಸಂಜೆ 4ಕ್ಕೆ ಮಂಗಳೂರಿನ ಎ.ಜೆ.ಗ್ರಾಂಡ್ ಹೋಟೆಲ್‌ನಲ್ಲಿ ನಡೆಯಲಿದೆ. ಜಾಗತಿಕ ಶಿಕ್ಷಣವನ್ನು ಮಕ್ಕಳಿಗೆ ಸುಲಭವಾಗಿ, ರಚನಾತ್ಮಕವಾಗಿ ಮತ್ತು ಒತ್ತಡ ರಹಿತವಾಗಿಸಲು ಆರಂಭಿಸಲಾಗುತ್ತಿದೆ. ಮಾಹಿತಿಯುಕ್ತ ಮತ್ತು ಆತ್ಮವಿಶ್ವಾಸದ ನಿರ್ಧಾರ ತೆಗೆದುಕೊಳ್ಳುವಿಕೆಯತ್ತ ಮಹಾತ್ವಾಕಾಂಕ್ಷೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿಲು ವಿನ್ಯಾಸಗೊಳಿಸಲಾದ ವಿದ್ಯಾರ್ಥಿ ಕೇಂದ್ರಿತ ಪರಿಸರ ವ್ಯವಸ್ಥೆ ಇದಾಗಿದೆ ಎಂದು ಸಂಸ್ಥೆಯ ಬಗ್ಗೆ ಮಾಹಿತಿ ನೀಡಿದರು.

ಸಂಸ್ಥೆಯ ಕೋ-ಫೌಂಡರ್‌ದೀಪಾ ಪ್ರಭು, ದಿಯಾ ಇದ್ದರು.

ಧರ್ಮಸ್ಥಳ ಭಗವಾನ್ ಚಂದ್ರನಾಥ ಸ್ವಾಮಿ ಬಸದಿ ವಾರ್ಷಿಕೋತ್ಸವ

• **ಕನ್ನಡಪ್ರಭ ವಾರ್ತೆ** ಬೆಳ್ತಂಗಡಿ

ಧರ್ಮಸ್ಥಳದಲ್ಲಿ ಭಗವಾನ್ ಚಂದ್ರನಾಥ ಸ್ವಾಮಿ ಬಸದಿಯ ವಾರ್ಷಿಕೋತ್ಸವದ ಅಂಗವಾಗಿ ಗುರುವಾರ ದೇವರಿಗೆ ಸಹಸ್ರನಾಮ ಪುಷ್ಪಾರ್ಚನೆ ನಡೆಯಿತು.

ಶ್ರದ್ಧಾ ಅಮಿತ್ ಮತ್ತು ಊರಿನ ಶ್ರಾವಕರು, ಶ್ರಾವಕಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ತೋರಣಮುಹೂರ್ತ, ವಿಮಾನ ಶುದ್ಧಿ, ನಾಂದಿಮಂಗಲ, ವಾಸ್ತು ಪೂಜಾ ವಿಧಾನ, ನವಗ್ರಹ ಮಹಾಶಾಂತಿ ಮೊದಲಾದ ಧಾರ್ಮಿಕ ವಿಧಿ- ವಿಧಾನಗಳನ್ನು ನಡೆಸಲಾಯಿತು.



ವಾರ್ಷಿಕೋತ್ಸವದ ಅಂಗವಾಗಿ ಗುರುವಾರ ಊರಿನ ಶ್ರಾವಕರು, ಶ್ರಾವಕಿಯರಿಂದ ದೇವರಿಗೆ ಸಹಸ್ರನಾಮ ಪುಷ್ಪಾರ್ಚನೆ ನಡೆಯಿತು.

ಪುತ್ತೂರು | ಫುಡ್ ಫೆಸ್ಟ್ ನಲ್ಲಿ ರುಚಿಯಾದ ಅನೇಕ ಖಾದ್ಯ ಪ್ರದರ್ಶನ

ಅಕ್ಷಯ ಪದವಿ ಕಾಲೇಜ್ ತಸ್ತ್ರೀಯ ಫುಡ್ ಫೆಸ್ಟ್ ಸಂಭ್ರಮ

• **ಕನ್ನಡಪ್ರಭ ವಾರ್ತೆ** ಪುತ್ತೂರು

ಅಕ್ಷಯ ಪದವಿ ಕಾಲೇಜಿನಲ್ಲಿ ಬಿಎಚ್‌ಎಸ್ ವಿಭಾಗದ ವತಿಯಿಂದ ತಸ್ತ್ರೀಯ ಫುಡ್ ಫೆಸ್ಟ್ ಅಮೆರಿಕಾದ ರಘುನಾಥ್ ಮೂರ್ತಿ ಪ್ರಾಯೋಜಕತ್ವದಲ್ಲಿ ಸಂಪನ್ನಗೊಂಡಿತು.

ಮುಖ್ಯ ಅತಿಥಿ ಮಾಸ್ಟರ್‌ಶೆಫ್ ಆಗಿರುವ ಮಹಮ್ಮದ್ ಆಶಿಕ್ಕಾ ಕಾರ್ಯಕ್ರಮಕ್ಕೆ ಶುಭಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಅಧ್ಯಕ್ಷ ಜಯಂತ್ ನಡುಬೈಲು, ಇಂದಿನ ಕಾರ್ಯಕ್ರಮಕ್ಕೆ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳ ಶ್ರಮ ಸಾರ್ಥಕವಾಗಿದೆ. ಮತ್ತು ಅಕ್ಷಯ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ ಮತ್ತು ಶೇ. 100 ಪ್ಲೇಸ್ಮೆಂಟ್ ಆಗಿರುವುದು ಅಕ್ಷಯ ಕಾಲೇಜಿನ ಯಶಸ್ಸು ಮತ್ತು ಹೆಮ್ಮೆ ಎಂದರು.

ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕಿ ಕಲಾವತಿ ಜಯಂತ್, ಅಕ್ಷಯ ಪದವಿ ಕಾಲೇಜಿನ ಪ್ರಾಂಶುಪಾಲ ಸಂಪತ್ ಕೆ ಪಕ್ಕಳ, ಆಡಳಿತ ಅಧಿಕಾರಿಯಾದ ಅರ್ಪಿತ್ ಟಿ. ಎ, ಶೈಕ್ಷಣಿಕ ಮಾರ್ಗದರ್ಶಕರಾದ ಅಭಿಲಾಶ್ ಕ್ಷತ್ರಿಯ ಮತ್ತು ಕಾಯು ಸಂಘದ ಅಧ್ಯಕ್ಷರಾಗಿರುವ ಗಗನ್ ಉಪಸ್ಥಿತರಿದ್ದರು.

ಸಾಂಸ್ಕೃತಿಕ ವೈವಿಧ್ಯ: ಚೆಂಡೆ, ನೃತ್ಯ, ಹಾಡು ಸೇರಿದಂತೆ ವಿವಿಧ ರೀತಿಯ ಸಾಂಸ್ಕೃತಿಕ ವೈವಿಧ್ಯ ಕಾರ್ಯಕ್ರಮಗಳು ನಡೆದವು.

ವಿಚಾರ ಗೋಷ್ಠಿ: ಮಂಗಳೂರು ಅಡುಗೆ ಶೈಲಿಯ ಸಾಂಸ್ಕೃತಿಕ ಮಹತ್ವ, ಆಧುನಿಕ ಪ್ರಭಾವಗಳು, ಆಧುನಿಕ ಪದಾರ್ಥಗಳ ತಯಾರಿಕಾ ವಿಧಾನಗಳನ್ನು ಉಳಿಸುವ ಅಗತ್ಯ, ಹಾಗೂ ಈ ಶ್ರೀಮಂತ ಆಹಾರ ಪರಂಪರೆಯನ್ನು ಮುಂದಿನ ಪೀಳಿಗೆಯವರು ಹೇಗೆ ಕಾಪಾಡಬಹುದು ಎಂಬ ವಿಚಾರಗಳ ಕುರಿತಾಗಿ ವಿಚಾರ ಗೋಷ್ಠಿ ನಡೆಯಿತು.

ಫುಡ್ ಫೆಸ್ಟ್ ನಲ್ಲಿ ರುಚಿಯಾದ ಅನೇಕ ಖಾದ್ಯಗಳು ಇದ್ದು ನೂರಾರು ಮಂದಿ ಇದನ್ನು ಸವಿದರು. ಬಿಎಚ್‌ಎಸ್ ವಿಭಾಗದ ಎಚ್ ಓಡಿಯಾದ ಅವಿನಾಶ್ ಸ್ವಾಗತಿಸಿ, ಪ್ರಜ್ವಲ್ ವಂದಿಸಿ, ಉಪನ್ಯಾಸಕಿ ಶ್ರತ ಅತಿಥಿಗಳ ಪರಿಚಯ ವಾಚಿಸಿ ನಿರೂಪಿಸಿದರು



ಮುಖ್ಯ ಅತಿಥಿ ಮಾಸ್ಟರ್‌ಶೆಫ್ ಆಗಿರುವ ಮಹಮ್ಮದ್ ಆಶಿಕ್ಕಾ ಸಹಿತ ಗಣ್ಯರು ಉದ್ಘಾಟಿಸಿದರು.

- ಚೆಂಡೆ, ನೃತ್ಯ, ಹಾಡು ಸೇರಿದಂತೆ ವಿವಿಧ ರೀತಿಯ ಸಾಂಸ್ಕೃತಿಕ ವೈವಿಧ್ಯ ಪ್ರದರ್ಶನಗೊಂಡವು.

ಡಾ.ಲತಾ ಸುರೇಂದ್ರನ್ ತಂಡ ‘ರಾಧಾಮಾಧವಂ’

• **ಕನ್ನಡಪ್ರಭ ವಾರ್ತೆ** ಮಂಗಳೂರು

ಕಾಸರಗೋಡಿನ ಬೇಕಲ ಗೋಕುಲಂ ಗೋಶಾಲೆಯಲ್ಲಿ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಮೂರನೇ ‘ವೈಶಾಖ ನಟನಂ’ ರಾಷ್ಟ್ರೀಯ ನೃತ್ಯೋತ್ಸವದಲ್ಲಿ, ಮುಂಬೈನ ಡಾ.ಲತಾ ಸುರೇಂದ್ರನ್ ಮತ್ತು ತಂಡದವರಿಂದ ‘ರಾಧಾಮಾಧವಂ’ ನೃತ್ಯ ರೂಪಕ ನಡೆಯಿತು. ನೃತ್ಯ ರೂಪಕವು ವೃಂದಾವನದ ರಾಸಲೀಲೆಯನ್ನುನೆನಪಿಸುವಂತೆಅತ್ಯಂತಮನೋಜ್ಞವಾಗಿ ಮೂಡಿಬಂದಿತು. ತಮ್ಮ 72ನೇ ವಯಸ್ಸಿನಲ್ಲೂ ಲತಾ ಸುರೇಂದ್ರನ್ ಅವರು ಎರಡು ಗಂಟೆಗಳ ಕಾಲ ಸುದೀರ್ಘವಾಗಿ ನಡೆದ ನೃತ್ಯ ನಾಟಕದಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಳ್ಳುವ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು.


ಉತ್ಸವದಮೂರನೇದಿನದಪ್ರಮುಖಆಕರ್ಷಣೆಯಾಗಿ ಪದ್ಮಶ್ರೀ ಮೀನಾಕ್ಷಿ ಚಿತ್ತರಂಜನ್ ಅವರ ಭರತನಾಟ್ಯ ಪ್ರದರ್ಶನ ಜರುಗಿತು. ಪಂದನಲ್ಲೂರು ನೃತ್ಯ ಶೈಲಿಯನ್ನು ಪೋಷಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಅವರ ನೃತ್ಯ ಕಲೆಯ ವೈಭವವನ್ನು ಕಣ್ತುಂಬಿಕೊಳ್ಳಲು ನೃತ್ಯ ಕಲಾವಿದರು ಸೇರಿದಂತೆ ಅಪಾರ ಸಂಖ್ಯೆಯ ಕಲಾಭಿಮಾನಿಗಳು ಉಪಸ್ಥಿತರಿದ್ದರು.



ಕನ್ನಡಪ್ರಭ
ನೇರ. ದಿಟ್ಟ. ನಿರಂತರ



ಉಪಕದನ



ನಾ ಭವಿಷ್ಯ ನುಡಿದಂತೆಯೇ ಬಿಜೆಪಿ, ಜೆಸಿಬಿ ಮನೆಗೆ ಹೋದವು: ಎಂಬಿಪಾ

ವಿಜಯಪುರ: ನಾನು ಮೊದಲೇ ಹೇಳಿದ್ದೆ, ಬಾಗಲಕೋಟೆಯಲ್ಲಿ ಬಿಜೆಪಿ ಹಾಗೂ ಜೆಸಿಬಿ ಎರಡೂ ಮನೆಗೆ ಹೋಗುತ್ತವೆ ಎಂದು. ಉಪಚುನಾವಣೆಯ ಫಲಿತಾಂಶ ಹಾಗೆ ಆಗಿದೆ ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು. ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಜನರು ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಕೈ ಹಿಡಿದಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಸಹಜವಾಗಿಯೇ ಆಡಳಿತ ವಿರೋಧಿ ಅಲೆಯಿದೆ. ತಮಿಳುನಾಡಿನಲ್ಲಿ ನಟ ವಿಜಯ ಸಿನೆಮಾ ಜನಪ್ರಿಯತೆ ಮೂಲಕ ಯುವಕರು, ಮಹಿಳೆಯರ ವಿಶ್ವಾಸ ಸಂಪಾದಿಸಿ ಇತಿಹಾಸ ಸೃಷ್ಟಿಸಿದ್ದಾರೆ. ಅಸ್ಸಾಂನಲ್ಲಿ ಬಿಜೆಪಿ ಸರ್ಕಾರ ಇದೆ, ಕೇರಳದಲ್ಲಿ ನಾವು ಸರ್ಕಾರ ರಚಿಸಲಿದ್ದೇವೆ ಎಂದು ಹೇಳಿದರು.




ಗೆಲ್ಲದಿದ್ರೂ ಜನರ ವಿಶ್ವಾಸ ಗಳಿಸಲು ಯಶಸ್ವಿ: ಬಿವೈವಿ

ಈ ಸೋಲು ಮುಂದೆ ಗೆಲುವಿನ ಮೆಟ್ಟಿಲಾಗಲಿದೆ | ಕಾರ್ಯಕರ್ತರ ಶ್ರಮ ನಿಷ್ಫಲವಾಗುವುದಿಲ್ಲ: ಬಿಜೆಪಿ ಅಧ್ಯಕ್ಷ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವಿನ ಗೆರೆ ದಾಟದಿದ್ದರೂ ಗಣನೀಯ ಪ್ರಮಾಣದಲ್ಲಿ ಜನರ ವಿಶ್ವಾಸ ಪಡೆಯಲು ಯಶಸ್ವಿಯಾಗಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಎರಡೂ ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಕಾರ್ಯಕರ್ತರ ಅವಿರತ ಪರಿಶ್ರಮ, ದಿಟ್ಟ ಹೋರಾಟದ ಫಲವಾಗಿ ಪಕ್ಷದ ಅಭ್ಯರ್ಥಿಗಳು ಗೆಲುವಿನ ಸಮೀಪ ಬಂದಿದ್ದಾರೆ. ಇದು ಮುಂದಿನ ದಿನಗಳ ಗೆಲುವಿಗೆ ಮೆಟ್ಟಿಲಾಗಲಿದೆ.




ಮುಂ ಬರುವ ಚುನಾವಣೆಯಲ್ಲಿ ಜನಾಶೀರ್ವಾದ ಪಡೆಯುವ ನಿಟ್ಟಿನಲ್ಲಿ ನಮ್ಮ ನಿರಂತರ ಪ್ರಯತ್ನ ಮುಂದುವರಿಸೋಣ ಎಂದರು.

2 ಕ್ಷೇತ್ರಗಳಲ್ಲಿ ಯಾವುದೇ ಸಣ್ಣ ಒಡಕಿಲ್ಲದೇ, ಸ್ಥಳೀಯ ಮುಖಂಡರು ತಮ್ಮ ಸಮಸ್ಯೆಗಳನ್ನು ಬದಿಗಿಟ್ಟು ಪಕ್ಷದ ಅಭ್ಯರ್ಥಿ ಪರವಾಗಿ ಶ್ರಮ ಹಾಕಿದ್ದಾರೆ. ನಾವು ಕೂಡ ಕೈಜೋಡಿಸಿದ್ದೇವೆ. ಕಾರ್ಯಕರ್ತರೂ ಹಗಲೂ ರಾತ್ರಿ ಶ್ರಮ ಹಾಕಿದ್ದಾರೆ ಎಂದು ತಿಳಿಸಿದರು.

ಈ ಹಿನ್ನಡೆಯಿಂದ ಧೃತಿಗೆಡುವ ಅವಶ್ಯಕತೆಯಿಲ್ಲ. ನಮ್ಮ ಅಭ್ಯರ್ಥಿಗಳೂ ಸೇರಿದಂತೆ ಚುನಾವಣಾ ಪ್ರಚಾರದಲ್ಲಿ ತೊಡಗಿಕೊಂಡಿದ್ದ ಎಲ್ಲಾ ನಮ್ಮ ಕಾರ್ಯಕರ್ತರು, ಪ್ರಮುಖರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುವ ಜೊತೆಗೆ ಪಕ್ಷ ಎಂದೆಂದಿಗೂ ನಿಮ್ಮೊಂದಿಗೆ ನಿಂತಿದೆ. ಪಕ್ಷವನ್ನು ಬೆಂಬಲಿಸಿ ಆಶೀರ್ವದಿಸಿದ ಎರಡೂ ಕ್ಷೇತ್ರಗಳ ಸಮಸ್ತ ಮತದಾರ ಬಂಧುಗಳಿಗೂ ಕೃತಜ್ಞತಾಪೂರ್ವಕ ವಂದನೆಗಳು. ನಿಮ್ಮ ನಿರೀಕ್ಷೆಗೆ ತಕ್ಕಂತೆ, ನಮ್ಮ ಸೇವೆ, ಸಂಘಟನೆ ಮತ್ತು ಹೋರಾಟಗಳನ್ನು ಮತ್ತಷ್ಟು ಹೆಚ್ಚು ಶಕ್ತಿ ಹಾಗೂ ಹುಮ್ಮಸ್ಸಿನಿಂದ ಮುಂದುವರಿಸುತ್ತೇವೆ ಎಂದರು.

ದೇಶದಲ್ಲೇ ಕಾಂಗ್ರೆಸ್ ಅಸ್ತಿತ್ವ ಶೂನ್ಯ, ಮುಂದೆ ರಾಜ್ಯದಲ್ಲೂ ಮನೆಗೆ: ಜೋಶಿ


ನವದೆಹಲಿ: 'ಕೇರಳ ಬಿಟ್ಟರೆ ದೇಶದಲ್ಲಿ ಕಾಂಗ್ರೆಸ್ ಅಸ್ತಿತ್ವ ಶೂನ್ಯ. ಮುಂಬರುವ ಚುನಾವಣೆಯಲ್ಲಿ ಕರ್ನಾಟಕದಲ್ಲಿಯೂ ಇದೇ ಸ್ಥಿತಿ ಎದುರಾಗಲಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಭವಿಷ್ಯ ನುಡಿದರು. ದೆಹಲಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಪಂಚರಾಜ್ಯ ಚುನಾವಣೆ ಫಲಿತಾಂಶ ಕುರಿತು ಪ್ರತಿಕ್ರಿಯಿಸಿ, ದುರಾಡಳಿತ, ಮಿತಿಮೀರಿದ ತುಷ್ಟೀಕರಣ, ಭ್ರಷ್ಟಾಚಾರ, ಗೂಂಡಾಗಿರಿ ವಿರುದ್ಧ ಅತ್ಯಂತ ಸ್ಪಷ್ಟ ಜನಾದೇಶ ಇದಾಗಿದೆ. ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ–ಬಿಜೆಪಿ ಆಡಳಿತಕ್ಕೆ ಬಹುದೊಡ್ಡ ಗೆಲುವು ತಂದುಕೊಟ್ಟಿದ್ದಾರೆಂದು ಹೇಳಿದರು. ರಾಷ್ಟ್ರೀಯ ಪಕ್ಷವಾಗಿ ಕಾಂಗ್ರೆಸ್ ದೇಶಾದ್ಯಂತ ಶೂನ್ಯಕ್ಕೆ ತಳ್ಳಲ್ಪಟ್ಟಿದೆ. ಕಾಂಗ್ರೆಸ್ ಇಷ್ಟರ ಮಟ್ಟಿಗೆ ನೆಲಕಚ್ಚಲು ಸದಾ ನಕರಾತ್ಮಕ ಪ್ರಚಾರ, ಪ್ರಧಾನಿ ಮೋದಿ ಅವರ ನಿಂದನೆಯಲ್ಲಿ ತೊಡಗಿದ್ದೇ ಮುಳುವಾಗಿದೆ ಎಂದರು.



ಸುದ್ದಿ ಸಿಂಚನ

ಎನ್‌ಡಿಎ ಅಭೂತಪೂರ್ವ ಗೆಲುವು: ಎಚ್‌ಡಿಕೆ ಸಂತಸ

ಬೆಂಗಳೂರು: ಎನ್‌ಡಿಎ ಮೈತ್ರಿಕೂಟದ ಈ ಅಭೂತಪೂರ್ವ ಗೆಲುವು ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವ ಮತ್ತು ವಿಕಸಿತ ಭಾರತ ಪರಿವರ್ತನಾ ಪ್ರೇರಿತ ಕಾರ್ಯಸೂಚಿಯಲ್ಲಿ ಜನರು ಹೊಂದಿರುವ ನಿರಂತರ ನಂಬಿಕೆಯ ದೃಢೀಕೃತ ಫಲಿತಾಂಶವಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಈ ನಿರ್ಣಾಯಕ ಜನಾದೇಶವು ಜನರ ಆಕಾಂಕ್ಷೆ ಮತ್ತು ಸಬ್ ಕಾ ಸಾಥ್‌ಅ, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್‌ನ ಮಾರ್ಗದರ್ಶಿ ತತ್ವಗಳ ನಡುವಿನ ಆಳವಾದ ಹೊಂದಾಣಿಕೆಯನ್ನು ಪ್ರತಿಬಿಂಬಿಸುತ್ತದೆ. ಇದು ಎನ್‌ಡಿಎ ಮೈತ್ರಿಕೂಟದ ವಿಶ್ವಾಸಾರ್ಹತೆ, ಕಾರ್ಯಕ್ಷಮತೆ ಮತ್ತು ಅಂತರ್ಗತ ಆಡಳಿತದ ವೇದಿಕೆಯಾಗಿ ಬಲಪಡಿಸುತ್ತದೆ ಎಂದಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕಾರ್ಯತಂತ್ರದ ನಾಯಕತ್ವ ಮತ್ತು ರಾಷ್ಟ್ರೀಯ ಏಕತೆಗೆ ಅಚಲ ಬದ್ಧತೆಯು ಈ ಫಲಿತಾಂಶವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ದೇಶಾದ್ಯಂತ ಎನ್‌ಡಿಎ ಮೈತ್ರಿಕೂಟದ ವ್ಯಾಪ್ತಿ ಮತ್ತು ಸಾಂಸ್ಥಿಕ ಆಳವನ್ನು ಮತ್ತಷ್ಟು ಬಲಪಡಿಸುತ್ತದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ಸಂಘಟನೆಯನ್ನು ಚೈತನ್ಯಗೊಳಿಸುವ ಮತ್ತು ಕಾರ್ಯಕರ್ತರೊಂದಿಗೆ ಸಂಪರ್ಕ ಸಾಧಿಸುವ ಪರಿಣಾಮಕಾರಿ ಪ್ರಯತ್ನಗಳು ಸಹ ಈ ಮಹತ್ವದ ಜನಾದೇಶಕ್ಕೆ ಕಾರಣವಾಗಿವೆ ಎಂದು ಅವರು ಸಾಮಾಜಿಕ ಜಾಲತಾಣದ ಮೂಲಕ ತಿಳಿಸಿದ್ದಾರೆ.



ಕಾಂಗ್ರೆಸ್ ಸರ್ಕಾರದ ಸಾಧನೆಗೆ ಮನ್ನಣೆ ನೀಡಿದ ಮತದಾರರ: ಶಿವಾನಂದ

ವಿಜಯಪುರ: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಭರ್ಜರಿ ವಿಜಯ ಸಾಧಿಸಿದ್ದಾರೆ. ಈ ಗೆಲುವು ರಾಜ್ಯ ಸರ್ಕಾರದ ಸಾಧನೆಗೆ ಮತದಾರರು ನೀಡಿರುವ ಮನ್ನಣೆ ಎಂದು ಸಚಿವ ಶಿವಾನಂದ ಪಾಟೀಲ ಪ್ರಟಕಣೆಯಲ್ಲಿ ತಿಳಿಸಿದ್ದಾರೆ. ಬಿಜೆಪಿ ಮುಖಂಡರು ಪ್ರಚೋದನಕಾರಿ ಭಾಷಣಗಳ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಎಷ್ಟೇ ಅಪಪ್ರಚಾರ ನಡೆಸಿದರೂ ಮತದಾರರು ಮಾತ್ರ ಅಭಿವೃದ್ಧಿ ಮತ್ತು ಸಮಾಜದಲ್ಲಿ ಶಾಂತಿ ಬಯಸಿ ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದ ಉಮೇಶ ಮೇಟಿ ಮತ್ತು ಸಮರ್ಥ ಶಾಮನೂರು ಅವರನ್ನು ಆಯ್ಕೆ ಮಾಡಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಕೈ ಬಲಪಡಿಸಿದ್ದಾರೆ ಎಂದಿದ್ದಾರೆ.

ಪಂಚರಾಜ್ಯ ಎಲೆಕ್ಷನ್‌ನಲ್ಲಿ ಕೈಗೆ ತಕ್ಕ ಉತ್ತರ: ಶೆಟ್ಟರ್

ಹುಬ್ಬಳ್ಳಿ: ಪ್ರಧಾನಿ ನರೇಂದ್ರ ಮೋದಿ ಬಗೆಗಿನ ಟೀಕೆ, ಮಹಿಳಾ ಮೀಸಲಾತಿ ವಿರೋಧಿಸಿದ್ದಕ್ಕಾಗಿ ಪಂಚರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಜನತೆ ತಕ್ಕ ಉತ್ತರ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ದೇಶದಲ್ಲಿಯೇ ಕಾಂಗ್ರೆಸ್ ಹೆಸರಿಲ್ಲದಂತೆ ಆಗಲಿದೆ ಎಂದು ಸಂಸದ ಜಗದೀಶ್ ಶೆಟ್ಟರ್ ಭವಿಷ್ಯ ನುಡಿದರು.
ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಂಚರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಅಸ್ಸಾಂ, ಪಶ್ಚಿಮ ಬಂಗಾಳ ಹಾಗೂ ಪುದುಚೇರಿಗಳಲ್ಲಿ ಬಿಜೆಪಿಗೆ ಮತದಾರರು ಭವ್ಯ ಬೆಂಬಲ ನೀಡಿದ್ದಾರೆ. ಪಕ್ಷದ ಆಡಳಿತ ಮತ್ತು ಅಭಿವೃದ್ಧಿ ಕಾರ್ಯವೈಖರಿಯನ್ನು ಮೆಚ್ಚಿ ಜನತೆ ನೀಡಿರುವ ಈ ಬೆಂಬಲ ಅತ್ಯಂತ ಸಂತಸ ತಂದಿದೆ ಎಂದರು.

ಗ್ಯಾರಂಟಿಗೆ ಅಂಕ, ಇಲ್ಲ ಆಡಳಿತ ವಿರೋಧಿ ಅಲೆ ಆತಂಕ

ಕಾಂಗ್ರೆಸ್‌ಗೆ ದಾವಣಗೆರೆ, ಬಾಗಲಕೋಟೆ ಬೈಎಲೆಕ್ಷನ್ ರಿಸಲ್ಟ್‌ನ ಸಂದೇಶವಿದು | ಚುನಾವಣೆ ಮೇಲೆ ಪರಿಣಾಮ ಬೀರದ ಕುರ್ಚಿ ಕಚ್ಚಾಟ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯ ವಿಧಾನಸಭೆ ಉಪಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ, ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿ ಆಡಳಿತಾರೂಢ ಕಾಂಗ್ರೆಸ್ ಗೆದ್ದು ಬೀಗಿದೆ. ಕಾಂಗ್ರೆಸ್ ವಿರುದ್ಧ ಸದ್ಯಕ್ಕೆ ಆಡಳಿತ ವಿರೋಧಿ ಅಲೆ ಇಲ್ಲ ಎಂಬ ಸಂದೇಶವನ್ನು ಈ ಫಲಿತಾಂಶ ರವಾನಿಸಿದ್ದು, ಬಾಗಲಕೋಟೆ ಗ್ರಾಮೀಣ ಭಾಗದಲ್ಲಿ ಹರಿದುಬಂದ ಮತ ಪ್ರಮಾಣ ನೋಡಿದರೆ ಗ್ಯಾರಂಟಿಗಳಿಗೆ ಮತದಾರರು ಪೂರ್ಣ ಅಂಕ ನೀಡಿದಂತಾಗಿದೆ.

ಮತ್ತೊಂದೆಡೆ, ದಾವಣಗೆರೆಯಲ್ಲಿ ಗೆಲುವಿನ ದಡ ದಾಟಿದ್ದರೂ ಅಂತರ ಕಡಿಮೆ, ಅಲ್ಪಸಂಖ್ಯಾತರ ಮತಗಳು ಚದುರಿರುವುದು ಕಾಂಗ್ರೆಸ್‌ಗೆ ಎಚ್ಚರಿಕೆ ಗಂಟೆಯಾಗಿದೆ. ಆದರೂ ಕೊನೇ ಕ್ಷಣದಲ್ಲಿ ಭಿನ್ನಮತಕ್ಕೆ ಮುಲಾಮು ಹಚ್ಚಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಿಧಾನಪರಿಷತ್‌ನ ಸರ್ಕಾರದ ಮುಖ್ಯಸಚೇತಕ ಸಲೀಂ ಅಹ್ಮದ್, ಶಾಸಕ ರಿಜ್ವಾನ್ ಅರ್ಷದ್ ಪ್ರಯತ್ನಕ್ಕೆ ಪ್ರಶಂಸೆ ವ್ಯಕ್ತವಾಗಿದೆ.

ಭಿನ್ನಮತಕ್ಕೆ ಕುಮ್ಮಕ್ಕು ನೀಡಿದ ಆರೋಪ ಹೊತ್ತಿರುವ ಅಲ್ಪಸಂಖ್ಯಾತ ನಾಯಕರಿಗೆ ಹಿನ್ನಡೆ ಎನ್ನಲಾಗಿದೆ. ಇನ್ನು ಎರಡೂ ಕ್ಷೇತ್ರಗಳಲ್ಲಿ ಪಕ್ಷ ಸೋತರೆ ಅಧಿಕಾರ ಹಸ್ತಾಂತರ ವಿಷಯ ಮುನ್ನೆಲೆಗೆ ಬರಲಿವೆ ಎಂಬ ವಿಶ್ಲೇಷಣೆಗಳು ತಲೆಕೆಳಗಾಗಿದೆ. ಫಲಿತಾಂಶದ ಪ್ರಭಾವ ರಾಜಕೀಯ ಬೆಳವಣಿಗೆಗಳಿಗೆ ಮುನ್ನುಡಿ ಬರೆಯುವ ವಿಚಾರದಲ್ಲಿ ನಗಣ್ಯ ಎಂದೇ ಹೇಳಲಾಗುತ್ತಿದೆ.



ದಾವಣಗೆರೆಯಲ್ಲಿ ಗೆಲುವಿನ ದಡ ಸೇರಿದ ಕೈ: ಉಪ ಚುನಾವಣೆ ವೇಳೆ ದಾವಣಗೆರೆ ದಕ್ಷಿಣದ ಕೈ ಟಿಕೆಟ್‌ಗೆ ಅಲ್ಪಸಂಖ್ಯಾತರು ಹಾಗೂ ಶಾಮನೂರು ಕುಟುಂಬ ಪಟ್ಟು ಹಿಡಿದ ಹಿನ್ನೆಲೆಯಲ್ಲಿ ತೀವ್ರ ತಿಕ್ಕಾಟ ಉಂಟಾಗಿತ್ತು. ಸಮರ್ಥ ಶಾಮನೂರಿಗೆ ಟಿಕೆಟ್ ಘೋಷಿಸಿದ್ದರೂ ಅಲ್ಪಸಂಖ್ಯಾತರು ಬಂಡಾಯದ ಬಾವುಟ ಹಾರಿಸಿದ್ದರು. ಕಾಂಗ್ರೆಸ್‌ನ ಅಲ್ಪಸಂಖ್ಯಾತ ನಾಯಕರು ಕ್ಷೇತ್ರದಿಂದ ಅಂತರ ಕಾಯ್ದುಕೊಂಡು ಪರೋಕ್ಷವಾಗಿ ಬಂಡಾಯದ ಸಂದೇಶ ನೀಡಿದ್ದರು. ಪರಿಣಾಮ 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಶಾಮನೂರು ಅವರು 27,888 ಮತಗಳ ಅಂತರದಿಂದ ಗೆದ್ದಿದ್ದರೂ, ಉಪಚುನಾವಣೆಯಲ್ಲಿ ಸಮರ್ಥ್ ಕೇವಲ 5,708 ಮತಗಳ ಕಡಿಮೆ ಅಂತರದಿಂದ ಗೆದ್ದಿದ್ದಾರೆ.

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಸಾದಿಕ್ ಪೈಲ್ವಾನ್ ನಾಮಪತ್ರ ಸಲ್ಲಿಸಿದ್ದರೂ ಸ್ಪರ್ಧಾ ಕಣದಿಂದ ಹಿಂದೆ ಸರಿದಿದ್ದರು. ಹೀಗಾಗಿ ಸಾದಿಕ್‌ಗೆ 47 ಮತ ಮಾತ್ರ ಬಂದಿದ್ದು, ಅವರು ಪೂರ್ಣ ಪ್ರಮಾಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಕೆಲಸ ಮಾಡಿದ್ದರು. ಇಲ್ಲಿ ಅಲ್ಪಸಂಖ್ಯಾತರ ಮತ ಭಾರೀ ಪ್ರಮಾಣದಲ್ಲಿ ವಿಭಜನೆ ಆಗುವುದನ್ನು ತಡೆಯಲು ಸಲೀಂ ಹಾಗೂ ರಿಜ್ವಾನ್ ಅವರ ಆಪರೇಷನ್ ಅತ್ಯಂತ ನಿರ್ಣಾಯಕ ರೀತಿಯಲ್ಲಿ ಕೆಲಸ ಮಾಡಿತು ಎಂದೇ ವಿಶ್ಲೇಷಿಸಲಾಗಿದೆ. ಜತೆಗೆ, ಸಿಎಂರ ನಿರ್ದೇಶನ ಮೇರೆಗೆ ಸಚಿವ ಜಮೀರ್‌ಅಹ್ಮದ್ ಅವರು ಒಂದು ದಿನ ಕ್ಷೇತ್ರದಲ್ಲಿ ಪ್ರಚಾರವನ್ನೂ ನಡೆಸಿದ್ದರು.

ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ 22,900 ಮತ: ಉಳಿದಂತೆ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕೆಂದು ಕಾಂಗ್ರೆಸ್ ನಾಯಕರೇ ಪಟ್ಟು ಹಿಡಿದಿದ್ದರಿಂದ ಅಲ್ಪಸಂಖ್ಯಾತರಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧದ ಅಭಿಪ್ರಾಯ ಮೂಡುವಂತಾಯಿತು. ಇದರಿಂದ ಈ ಬಾರಿ ಎಸ್‌ಡಿಪಿಐ ಅಭ್ಯರ್ಥಿ 18,975 ಮತ ಪಡೆದಿದ್ದು, 2023ರ ಚುನಾವಣೆಯಲ್ಲಿ ಎಸ್‌ಡಿಪಿಐ ಕೇವಲ 1311 (ಶೇ.0.9) ಪಡೆದಿತ್ತು. ಉಪಚುನಾವಣೆಯಲ್ಲಿ ಎಸ್‌ಡಿಪಿಐ ಸೇರಿ ಅಲ್ಪಸಂಖ್ಯಾತ ಸಮುದಾಯದಿಂದ 14 ಅಭ್ಯರ್ಥಿಗಳು ಚುನಾವಣಗೆ ಸ್ಪರ್ಧಿಸಿದ್ದರು. 22,900 ಮತಗಳು ಅವರ ಪಾಲಾಗಿವೆ.

ಬಾಗಲಕೋಟೆಯಲ್ಲಿ ಭರ್ಜರಿ ಗೆಲುವು: ಇದಕ್ಕೆ ತದ್ವಿರುದ್ಧವಾಗಿ ಬಾಗಲಕೋಟೆಯಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿದೆ. 2023ರಲ್ಲಿ ಎಚ್.ವೈ.ಮೇಟಿ ಅವರು 5,878 ಮತಗಳ ಕಡಿಮೆ ಅಂತರದಿಂದ ಮಾತ್ರ ಗೆದ್ದಿದ್ದು, ಉಪಚುನಾವಣೆಯಲ್ಲಿ ಉಮೇಶ್ ಮೇಟಿ ಅವರು 22,332ಗಳ ಅಂತರದಿಂದ ಗೆದ್ದಿದ್ದಾರೆ. ವಿಶೇಷವಾಗಿ ಗ್ರಾಮೀಣ ಭಾಗದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮುನ್ನಡೆ ಸಿಕ್ಕಿದ್ದು, ಇದರಿಂದ ಸಿದ್ದರಾಮಯ್ಯ ಅವರ ಸರ್ಕಾರದ ಗ್ಯಾರಂಟಿಗಳ ಬಗ್ಗೆ ಜನ ಉತ್ತಮ ಅಭಿಪ್ರಾಯ ಹೊಂದಿರುವುದಾಗಿ ವಿಶ್ಲೇಷಿಸಲಾಗಿದೆ. ಜತೆಗೆ ಬಾಗಲಕೋಟೆ ಗೆಲುವು ಸಿದ್ದರಾಮಯ್ಯ ತಂಡದ ಪ್ರಯತ್ನದ ಫಲ ಎಂದೂ ವ್ಯಾಖ್ಯಾನಿಸಲಾಗುತ್ತಿದೆ.

ಈ ಉಪ ಚುನಾವಣೆ ಫಲಿತಾಂಶದ ಮೇಲೆ ಪಕ್ಷದ ಆಂತರಿಕ ವಿಪ್ಲವಗಳು ಯಾವುದೇ ಪರಿಣಾಮ ಬೀರುವುದಿಲ್ಲ ಎಂದೇ ವ್ಯಾಖ್ಯಾನಿಸಲಾಗುತ್ತಿದೆ. ನಾಯಕತ್ವ ಬದಲಾವಣೆ ವಿಚಾರ ಹೈಕಮಾಂಡ್ ಮನದಾಳ ಏನಿದೆಯೋ ಎಂಬುದರ ಮೇಲೆ ಅವಲಂಬಿತವಾಗಿದೆಯೇ ಹೊರತು ಉಪ ಚುನಾವಣೆ ಫಲಿತಾಂಶಕ್ಕೂ ಈ ವಿಚಾರಕ್ಕೂ ಯಾವುದೇ ಸಂಬಂಧವಿಲ್ಲದಂತಾಗಿದೆ.


ರಾಗಾ ಮಾತು ಕೇಳದೆ ಎಡವಿದ್ರಾ ಖರ್ಗೆ, ಚಿದು?


ವಿಜಯ್ ಜೊತೆ ಹೋಗೋಣ ಎಂದಿದ್ದ ರಾಹುಲ್ | ಆದರೆ ಡಿಎಂಕೆ ಜೊತೆ ಮೈತ್ರಿಗೆ ಖರ್ಗೆ, ಚಿದು ಇಂಗಿತ
ಇದರಿಂದ ತಮಿಳುನಾಡಿನಲ್ಲಿ ಕಾಂಗ್ರೆಸ್‌ಗೆ ತಪ್ಪಿದ ಹೆಚ್ಚು ಸೀಟು ಗೆಲ್ಲುವ ಅವಕಾಶ | ಪಕ್ಷದೊಳಗೆ ಚರ್ಚೆ ಶುರು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತಮಿಳುನಾಡು ರಾಜ್ಯದಲ್ಲಿ ಕಾಂಗ್ರೆಸ್‌ನ ಮಿತ್ರಪಕ್ಷ ಹಾಗೂ ಆಡಳಿತರೂಢ ಡಿಎಂಕೆ ಪಕ್ಷಕ್ಕೆ ಹೀನಾಯ ಸೋಲುಂಟಾಗಿದೆ. ಇದು ಚುನಾವಣಾ ಪೂರ್ವ ಮೈತ್ರಿಕೂಟ ರಚನೆ ನಿರ್ಧಾರದಲ್ಲಿ ಆದ ತಪ್ಪು ಕಾರಣವೇ ಎನ್ನುವ ಚರ್ಚೆ ಪಕ್ಷದಲ್ಲಿ ಶುರುವಾಗಿದೆ.

ಪಂಚರಾಜ್ಯಗಳ ಚುನಾವಣೆ ಪೂರ್ವದಲ್ಲಿ ತಮಿಳುನಾಡಿನಲ್ಲಿ ಯಾವ ಪಕ್ಷದ ಜತೆಗೆ ಚುನಾವಣೆಗೆ ಹೋಗಬೇಕು ಎಂಬ ಬಗ್ಗೆ ಕಾಂಗ್ರೆಸ್‌ನ ಉನ್ನತ ಮಟ್ಟದ ಸಭೆ ನಡೆದಿತ್ತು. ಈ ವೇಳೆ ಕಾಂಗ್ರೆಸ್ ನಾಯಕರಾದ ರಾಹುಲ್‌ಗಾಂಧಿ ಅವರು ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷದ ಜೊತೆ ಚುನಾವಣೆಗೆ ಹೋಗೋಣ. ಆ ಪಕ್ಷದವರು ಕಾಂಗ್ರೆಸ್ ಜತೆ ಚುನಾವಣೆ ಎದುರಿಸಲು ಉತ್ಸುಕರಾಗಿದ್ದಾರೆ. ಜತೆಗೆ





60–65 ಕ್ಷೇತ್ರಗಳನ್ನು ಕಾಂಗ್ರೆಸ್ ಬಿಟ್ಟುಕೊಡಲಿದ್ದಾರೆ. ತಮಿಳುನಾಡಿನಲ್ಲಿ ಆಡಳಿತ ವಿರೋಧಿ ಅಲೆ ಇದ್ದು, ಯುವ ಮತದಾರರು ವಿಜಯ್ ಜತೆ ನಿಲ್ಲುವ ಮನಸ್ಸು ಮಾಡಿದ್ದಾರೆ. ಅಲ್ಲಿ ಬದಲಾವಣೆಯ ಸಾಧ್ಯತೆ ಕಾಣುತ್ತಿದೆ ಎಂದು ರಾಹುಲ್ ತಮ್ಮ ಅಭಿಪ್ರಾಯ ಮಂಡಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಡಿಎಂಕೆ ಕೈಬಿಡಲು ಆಕ್ಷೇಪ: ಆದರೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೇಂದ್ರದ ಮಾಜಿ ಸಚಿವ ಪಿ.ಚಿದಂಬರಂ, ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಕೆ. ಸೆಲ್ವಪೆರುತಂಗೈ ಅವರು ಡಿಎಂಕೆ ಬಿಟ್ಟು ಟಿವಿಕೆ ಜೊತೆ ಹೋಗುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಡಿಎಂಕೆ ಕಾಂಗ್ರೆಸ್ ಜತೆ ಹಲವು ವರ್ಷಗಳಿಂದ ಮೈತ್ರಿಯಲ್ಲಿದೆ. ಈ ಮೈತ್ರಿ ಮುರಿಯುವುದು ಬೇಡ. ಹೊಸ ಪಕ್ಷದ ಜತೆಗೆ ಪ್ರಯೋಗಕ್ಕೆ ಕೈ ಹಾಕಿ ವಿಫಲವಾದರೆ ಡಿಎಂಕೆ ವಿಶ್ವಾಸ ಕೈಗೊಳ್ಳಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದರು ಎನ್ನಲಾಗಿದೆ.

ಇದೀಗ ರಾಹುಲ್‌ಗಾಂಧಿ ಊಹೆ ನಿಜವಾಗಿದ್ದು, ಚುನಾವಣಾ ಪೂರ್ವ ಮೈತ್ರಿ ನಿರ್ಧಾರದಿಂದ ಪಕ್ಷಕ್ಕೆ ಹಿನ್ನಡೆಯಾಗಿದೆ. ಕಾಂಗ್ರೆಸ್ ಪಕ್ಷ ಟಿವಿಕೆ ಜತೆ ಮೈತ್ರಿ ಮಾಡಿಕೊಂಡು 60–65 ಸ್ಥಾನ ಪಡೆದಿದ್ದರೆ ಕಾಂಗ್ರೆಸ್ ಸಾಂಪ್ರದಾಯಿಕ ಮತ ಹಾಗೂ ವಿಜಯ್ ಪರ ಸೃಷ್ಟಿಯಾಗಿದ್ದ ಅಲೆಯಿಂದ ಕನಿಷ್ಠ 30–40 ಸ್ಥಾನ ಗೆದ್ದು, ಡಿಸಿಎಂ ಸ್ಥಾನದ ಜತೆಗೆ ಅಧಿಕೃತವಾಗಿ ಸರ್ಕಾರ ರಚನೆಯ ಅವಕಾಶವಿತ್ತು.


ಈಗಾಗಲೇ ಕೇರಳದಲ್ಲಿ ಭಾರಿ ಬಹುಮತದೊಂದಿಗೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೆ ಬಂದಿದೆ. ಹೀಗಾಗಿ ತಮಿಳುನಾಡು ಸೇರಿ ಕಾಂಗ್ರೆಸ್ ಮೈತ್ರಿಕೂಟವೂ ಎರಡು ರಾಜ್ಯಗಳಲ್ಲಿ ಗೆದ್ದಂತಾಗಿ ಬಿಜೆಪಿಗೆ ಬಹುತೇಕ ಸಮ ಪೈಪೋಟಿ ನೀಡಿದಂತಾಗುತ್ತಿತ್ತು. ಹೀಗಾಗಿ ಖರ್ಗೆ, ಚಿದಂಬರಂ ಮತ್ತಿತರ ನಾಯಕರು, ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷರ ನಿರ್ಧಾರದ ಬಗ್ಗೆ ಪಕ್ಷದಲ್ಲಿ ಆಂತರಿಕವಾಗಿ ಚರ್ಚೆ ಆರಂಭವಾಗಿದ್ದು, ಫಲಿತಾಂಶದ ಪರಿಣಾಮಗಳ ಬಗ್ಗೆ ಕೆಲವು ನಾಯಕರು ಲೆಕ್ಕಾಚಾರ ಹಾಕುತ್ತಿದ್ದಾರೆ.

ದಾವಣಗೆರೆ ದಕ್ಷಿಣದಲ್ಲಿ ನಾವು ಸೋತಿದ್ದಕ್ಕೆ ನೋವು: ಬಿಎಸ್‌ವೈ

ಗೆಲ್ಲುವ ವಿಶ್ವಾಸವಿತ್ತು, ಕೊನೆಯಲ್ಲಿ ವ್ಯತ್ಯಾಸವಾಗಿದೆ
ಮುಂದೆ ಕೊರತೆ ಸರಿಪಡಿಸಿಕೊಳ್ಳುತ್ತೇವೆ: ಮಾಜಿ ಸಿಎಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸೋಲಿನಿಂದ ನೋವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.



ಸೋಮವಾರ ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ದಾವಣಗೆರೆಯಲ್ಲಿ ಗೆಲ್ಲುವ ವಿಶ್ವಾಸವಿತ್ತು. ಕೊನೆಯಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ. ಈ ಸೋಲಿನಿಂದ ನೋವಾಗಿದೆ. ಮುಂದಿನ ದಿನಗಳಲ್ಲಿ ಕೊರತೆಗಳನ್ನು ಸರಿಪಡಿಸಿಕೊಂಡು ಗೆಲ್ಲಲು ಪ್ರಯತ್ನಿಸುತ್ತೇವೆ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಉಚಿತ ಘೋಷಣೆಗಳಿಂದ ಜನರನ್ನು ಹೆಚ್ಚು ದಿನ ಮರುಳು ಮಾಡಲು ಆಗಲ್ಲ ಎಂಬುದು ಈ ಪಂಚ ರಾಜ್ಯಗಳ ಫಲಿತಾಂಶ ತೋರಿಸಿದೆ. ಪಂಚ ರಾಜ್ಯಗಳ ಫಲಿತಾಂಶವು ಜನ ಪ್ರಧಾನಿ ಮೋದಿ ಅವರ ಮೇಲಿರಿಸಿರುವ ನಂಬಿಕೆಯನ್ನು ಮತ್ತಷ್ಟು ದೃಢಪಡಿಸಿದೆ. ಪಶ್ಚಿಮ ಬಂಗಾಳದ ಟಿಎಂಸಿ ಸರ್ಕಾರ ಧೂಳಿಪಟವಾಗಿದೆ. ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಅವರ ಪ್ರಭಾವದಿಂದ ಗೆದ್ದಿದ್ದೇವೆ. ಇದು ದೇಶಕ್ಕೇ ಉದಾಹರಣೆಯಾಗಿದೆ. ಒಂದು ಸೀಟು ಗೆಲ್ಲಲಾಗದ ಕಾಂಗ್ರೆಸ್‌ಗೆ ಮಾತನಾಡುವ ನೈತಿಕ ಹಕ್ಕಿಲ್ಲ. ಕವಡೆ ಕಾಸಿನ ಕಿಮ್ಮತ್ತಿಲ್ಲ ಎಂದು ಟೀಕಿಸಿದರು.

ಉಪಚುನಾವಣೆಯಲ್ಲಿ ಕೈಗೂಡದ ಬಿಜೆಪಿ ನಿರೀಕ್ಷೆ


ಸುಸೂತ್ರವಾಗಿ ಅಭ್ಯರ್ಥಿ ಆಯ್ಕೆ, ಅಬ್ಬರದ ಪ್ರಚಾರ ನಡೆಸಿದರೂ ದಾವಣಗೆರೆ, ಬಾಗಲಕೋಟೆಯಲ್ಲಿ ಸೋಲು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸ್ಥಳೀಯ ಮುಖಂಡರ ನಡುವಿನ ಬಗೆಹರಿಯಲಾಗದ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿ ಭರ್ಜರಿ ಪ್ರಚಾರ ನಡೆಸಿದರೂ ಪ್ರಮುಖ ಪ್ರತಿಪಕ್ಷ ಬಿಜೆಪಿಗೆ 2 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಗೆಲುವು ಸಾಧಿಸಲಾಗಲಿಲ್ಲ.

ಬಾಗಲಕೋಟೆ ಕ್ಷೇತ್ರದ ಬಗ್ಗೆ ಹೆಚ್ಚಿನ ನಿರೀಕ್ಷೆ ಇರದಿದ್ದರೂ ಆಡಳಿತಾರೂಢ ಕಾಂಗ್ರೆಸ್ ಪಕ್ಷದಲ್ಲಿನ ಬಿಕ್ಕಟ್ಟಿನ ಪರಿಣಾಮ ದಾವಣಗೆರೆ ದಕ್ಷಿಣ ಕ್ಷೇತ್ರದ ಬಗ್ಗೆ ರಾಜ್ಯ ಬಿಜೆಪಿ ನಾಯಕರಲ್ಲಿ ತೀವ್ರ ನಿರೀಕ್ಷೆಯಿತ್ತು. ಕಡಿಮೆ ಮತಗಳ ಅಂತರದಲ್ಲಾದರೂ ಗೆಲ್ಲುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸುತ್ತಿದ್ದರು. ಆದರೆ, ಅಂತಿಮವಾಗಿ ಆ ನಿರೀಕ್ಷೆಯೂ ಹುಸಿಯಾಗಿದೆ.

ಒಂದರಲ್ಲೂ ಗೆಲ್ಲಲಿಲ್ಲ: ಹಾಗೆ ನೋಡಿದರೆ ಕಳೆದ 3 ವರ್ಷಗಳಲ್ಲಿ 6 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ನಡೆದಿದೆ. ಸುರಪುರ, ಶಿಗ್ಗಾವಿ, ಚನ್ನಪಟ್ಟಣ, ಸಂಡೂರು, ಇದೀಗ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಪೈಕಿ ಬಿಜೆಪಿಗೆ ಒಂದರಲ್ಲೂ ಗೆಲ್ಲಲು ಸಾಧ್ಯವಾಗಿಲ್ಲ. ಈ ಪೈಕಿ ಚನ್ನಪಟ್ಟಣ ಕ್ಷೇತ್ರದಲ್ಲಿ ಬಿಜೆಪಿ ಸ್ಪರ್ಧಿಸಿರಲಿಲ್ಲ. ಮಿತ್ರ ಪಕ್ಷ ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿತ್ತು. ಇವೆಲ್ಲವೂ ಬಿ.ವೈ.ವಿಜಯೇಂದ್ರ ಅವರು ಪಕ್ಷದ ರಾಜ್ಯಾಧ್ಯಕ್ಷರಾದ ಬಳಿಕ ನಡೆದ ಉಪಚುನಾವಣೆಗಳು.



ಉಪಚುನಾವಣೆಗಳನ್ನು ಗಂಭೀರವಾಗಿ ಪರಿಗಣಿಸಿ ತೀವ್ರ ಪ್ರಚಾರ ನಡೆಸಿದರೂ ಕಾಂಗ್ರೆಸ್ ಪಕ್ಷದ ಅಲೆ ಎದುರು ಗೆಲುವು ಪ್ರಯಾಸದಾಯಕವಾಗಿಯೇ ಪರಿಣಮಿಸಿದೆ.

ಪ್ರಸಕ್ತ ಉಪಚುನಾವಣೆ ಘೋಷಣೆಯಾಗುವ ಮೊದಲು ಮತ್ತು ಘೋಷಣೆಯಾದ ಬೆನ್ನಲ್ಲೇ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣದಲ್ಲಿನ ಸ್ಥಳೀಯ ಮುಖಂಡರ ನಡುವಿನ ಭಿನ್ನಾಭಿಪ್ರಾಯ ಬಗೆಹರಿಸಲು ವಿಜಯೇಂದ್ರ ಮತ್ತಿತರ ನಾಯಕರು ಪ್ರಾಮಾಣಿಕ ಪ್ರಯತ್ನ ನಡೆಸಿ ಸಫಲರಾದರು. ಅದರ ಪರಿಣಾಮ ಅಭ್ಯರ್ಥಿ ಆಯ್ಕೆಯೂ ಗೊಂದಲಕ್ಕೀಡಾಗದೆ ಸುಸೂತ್ರವಾಗಿ ನಡೆಯಿತು.


ಒಡಕಿಲ್ಲದೆ ಶ್ರಮ: ಚುನಾವಣೆಯಲ್ಲಿ ಎಲ್ಲ ಸ್ಥಳೀಯ ಮುಖಂಡರೂ ತಮ್ಮ ಶ್ರಮ ಹಾಕಿ ಪ್ರಚಾರ ಮಾಡಿದರು. ಎಲ್ಲಿಯೂ ಒಡಕು ಹೊರಹಾಕಲಿಲ್ಲ. ರಾಜ್ಯ ನಾಯಕತ್ವವೂ 2 ಕ್ಷೇತ್ರಗಳ ಪ್ರಚಾರವನ್ನು ವ್ಯವಸ್ಥಿತವಾಗಿ ರೂಪಿಸಿತು. ತಂಡಗಳನ್ನು ಮಾಡಿ ಸತತ ಪ್ರಚಾರವನ್ನೂ ಕೈಗೊಂಡರು. ರಾಜ ಸರ್ಕಾರದ ವೈಫಲ್ಯಗಳನ್ನು ಮತದಾರರಿಗೆ ತಲುಪಿಸಲು ಪ್ರಯತ್ನಿಸಿದರು. ಇದರ ಪರಿಣಾಮವೇ ಎರಡೂ ಕಡೆ ಅಲ್ಲದಿದ್ದರೂ ದಾವಣಗೆರೆ ದಕ್ಷಿಣದಲ್ಲಾದರೂ ಗೆಲ್ಲುವ ನಿರೀಕ್ಷೆ ಇತ್ತು. ಆದರೆ ಅದು ಹುಸಿಯಾಯಿತು.

ಬಂಗಾಳದಂತೆ ರಾಜ್ಯದಲ್ಲೂ ಕಾಂಗ್ರೆಸ್ ಸೋತು ಮನೆಗೆ ಹೋಗುತ್ತೆ: ಅಶೋಕ್

ಗ್ಯಾರಂಟಿ ಹೆಸರಿನಲ್ಲಿ ಜನರಿಗೆ ತೆರಿಗೆ ಬರೆ: ವಿಪಕ್ಷ ನಾಯಕ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪಶ್ಚಿಮ ಬಂಗಾಳದಂತೆ ಕರ್ನಾಟಕದಲ್ಲೂ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಸೋತು ಮನೆಗೆ ಹೋಗಲಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿದ್ದಾರೆ.



ಚುನಾವಣಾ ಫಲಿತಾಂಶದ ಕುರಿತು ಪ್ರತಿಕ್ರಿಯಿಸಿದ ಅವರು, ಅಸ್ಸಾಂ, ಪುದುಚೇರಿ, ಪಶ್ಚಿಮ ಬಂಗಾಳ ರಾಜ್ಯಗಳ ಚುನಾವಣಾ ಫಲಿತಾಂಶದಿಂದ ಕರ್ನಾಟಕದ ಕಾಂಗ್ರೆಸ್‌ಪಾಠ ಕಲಿಯಬೇಕಿದೆ. ಗ್ಯಾರಂಟಿಗಳ ಹೆಸರಲ್ಲಿ ಜನರ ಮೇಲೆ ತೆರಿಗೆಗಳ ಹೊರೆ ಹೇರಿ, ಸಾಲದ ಸುಳಿಯಲ್ಲಿ ಸಿಲುಕಿಸಿರುವ ಕಾಂಗ್ರೆಸ್ ಮುಂದಿನ ಚುನಾವಣೆಯಲ್ಲಿ ನೆಲಕಚ್ಚಲಿದೆ ಎಂಬುದು ಸ್ಪಷ್ಟ ಎಂದರು.

ರೈತರ ಆತ್ಮಹತ್ಯೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಸಾವು, ಬೆಂಗಳೂರಿನಲ್ಲಿ ಮಳೆಯಿಂದ ಜೀವಹಾನಿ, ಸಾರಿಗೆ ಸಿಬ್ಬಂದಿಗೆ ವೇತನ ಬಾಕಿ, ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಹೀಗೆ ಅನೇಕ ತಪ್ಪುಗಳ ಮೂಲಕ ಕಾಂಗ್ರೆಸ್ ಜನರ ಕೆಂಗಣ್ಣಿಗೆ ಗುರಿಯಾಗಿದೆ. ಸಿಎಂ ಕುರ್ಚಿ ಕಚ್ಚಾಟದಲ್ಲೇ ನಿರತರಾಗಿರುವ ಕಾಂಗ್ರೆಸಗೆ ಮುಂದಿನ ಚುನಾವಣೆಯಲ್ಲಿ ಜನರು ಉತ್ತರ ನೀಡಲಿದ್ದಾರೆ ಎಂದರು.

ಖುಷಿ ಮತದಾರರಿಗೆ ಧನ್ಯವಾದ | ಮುಂದೆಯೂ ಗೆಲ್ತೀವಿ: ಸಿದ್ದು

ಉಪಚುನಾವಣೆ ಗೆಲುವು ಸರ್ಕಾರದ ಸಾಧನೆ, ಕಾರ್ಯಕರ್ತರ ಜಯ: ಸಿಎಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಾಗಲಕೋಟೆ, ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಿದ ಮತದಾರರಿಗೆ ಸಿಎಂ ಸಿದ್ದರಾಮಯ್ಯ ಧನ್ಯವಾದ ತಿಳಿಸಿದ್ದಾರೆ.



ಗೆಲುವಿನ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತದಾನ ಮಾಡಿ ಗೆಲ್ಲಿಸಿದ ಸಮಸ್ತ ಮತದಾರ ಬಂಧುಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇದು ನಮ್ಮ ಸರ್ಕಾರದ ಸಾಧನೆಗಳಿಗೆ ಮತ್ತು ಕಾಂಗ್ರೆಸ್ ಪಕ್ಷದ ಸಿದ್ಧಾಂತಕ್ಕೆ ಸಿಕ್ಕ ಜಯವಾಗಿದೆ ಎಂದು ಬಣ್ಣಿಸಿದ್ದಾರೆ.

ವಿಪಕ್ಷಗಳ ಅಪಪ್ರಚಾರ , ಹಣದ ಪ್ರಭಾವದ ಹೊರತಾಗಿಯೂ 2 ಕ್ಷೇತ್ರಗಳ ಮತದಾರರು ಕಾಂಗ್ರೆಸ್ ಪಕ್ಷ ಮತ್ತು ನಮ್ಮ ಸರ್ಕಾರದ ಮೇಲೆ ನಂಬಿಕೆ ಇಟ್ಟು ಮತಚಲಾಯಿಸಿದ್ದಾರೆ. ಇಡೀ ರಾಜ್ಯದ ಜನತೆ ನಮ್ಮ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳುತ್ತೇವೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲೂ ರಾಜ್ಯದ ಮತದಾರರು ಇದೇ ರೀತಿ ನಮ್ಮನ್ನು ಹರಸುತ್ತಾರೆ ಎಂಬ ನಂಬಿಕೆ ನಮಗೆ ಇದೆ ಎಂದು ಹೇಳಿದ್ದಾರೆ.

ಕೇರಳದಲ್ಲಿ ನಿರೀಕ್ಷಿತ, ತ.ನಾಡಿನದ್ದು ಅನಿರೀಕ್ಷಿತ ಫಲಿತಾಂಶ: ಸಿದ್ದರಾಮಯ್ಯ

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ನಿರೀಕ್ಷಿತ ಗೆಲುವು ದೊರಕಿದೆ. ಆದರೆ, ತಮಿಳುನಾಡಿನದ್ದು ಅನಿರೀಕ್ಷಿತ. ಇನ್ನು, ಬಂಗಾಳದಲ್ಲಿ ಬಿಜೆಪಿ ಗೆಲುವು ಪ್ರಜಾಪ್ರಭುತ್ವ ವ್ಯವಸ್ಥೆಯ ಸೋಲು ಎಂದು ಸಿಎಂ ಸಿದ್ದರಾಮಯ್ಯ ಪ್ರತಿಕಿಯಿಸಿದ್ದಾರೆ. ದಕ್ಷಿಣದ ರಾಜ್ಯಗಳಾದ ಕರ್ನಾಟಕ, ತೆಲಂಗಾಣ ರಾಜ್ಯಗಳಂತೆ ಕೇರಳ, ತಮಿಳುನಾಡು ರಾಜ್ಯಗಳಲ್ಲಿಯೂ ಬಿಜೆಪಿ ಕೋಮುವಾದಿ ರಾಜಕಾರಣಕ್ಕೆ ಪ್ರವೇಶವಿಲ್ಲ ಎಂಬ ಸಂದೇಶ ನೀಡಿದ ಜನರನ್ನು ಪ್ರಜಾಪ್ರಭುತ್ವವಾದಿ ಜನರ ಪರ ಅಭಿನಂದಿಸುತ್ತೇನೆ ಎಂದು ತಿಳಿಸಿದ್ದಾರೆ.

ಸಂತಸ ಪಕ್ಷದ ಕಾರ್ಯಕರ್ತರ ಪ್ರಯತ್ನದಿಂದ ಗೆಲುವು ಸಿಕ್ಕಿದೆ: ಡಿಸಿಎಂ

ಉಪಚುನಾವಣೆ ಫಲಿತಾಂಶ ಮೂಲಕ 2028ರಲ್ಲಿ ಕೈ ಗೆಲ್ಲಿಸುವ ಸಂದೇಶ: ಡಿಕೆಶಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕದ ಎರಡೂ ಕ್ಷೇತ್ರಗಳ ಉಪಚುನಾವಣೆಯಲ್ಲೂ ಜನ ನಮ್ಮ ಮೇಲೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸರ್ಕಾರದ ಗ್ಯಾರಂಟಿ ಯೋಜನೆಗಳ ಜತೆಗೆ ದಕ್ಷ ಆಡಳಿತ ನೀಡುತ್ತಿರುವುದನ್ನು ಜನ ಗಮನಿಸಿದ್ದು, 2028ರಲ್ಲಿ ಮತ್ತೆ ಅಧಿಕಾರಕ್ಕೆ ಬರಲು ಬೆಂಬಲ ನೀಡುವ ಸಂದೇಶ ನೀಡಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.



ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳ ಮತದಾರರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ದಾವಣಗೆರೆ ದಕ್ಷಿಣದಲ್ಲಿ ಹೆಚ್ಚಿನ ಅಂತರದ ಗೆಲುವಿನ ನಿರೀಕ್ಷೆಯಲ್ಲಿದ್ದೆವು. ಆದರೂ, ಗೆಲುವು ಸಾಧಿಸಿದ್ದೇವೆ. ಇನ್ನು, ಬಾಗಲಕೋಟೆಯಲ್ಲಿ ಕಳೆದ ಚುನಾವಣೆಯಲ್ಲಿ ಗೆಲುವಿನ ಅಂತರ ಕಡಿಮೆಯಿತ್ತು. ಈಗ 22,000ಕ್ಕೂ ಹೆಚ್ಚಿನ ಮತಗಳ ಅಂತರದಿಂದ ನಮ್ಮ ಅಭ್ಯರ್ಥಿ ಗೆದ್ದಿದ್ದಾರೆ. ಸಿಎಂ ಸಿದ್ದರಾಮಯ್ಯ, ಸಂಪುಟ ಸಹೋದ್ಯೋಗಿಗಳು, ಶಾಸಕರು, ಪಕ್ಷದ ಪದಾಧಿಕಾರಿಗಳು, ಜಿಲ್ಲೆ ಮತ್ತು ಬ್ಲಾಕ್ ಅಧ್ಯಕ್ಷರು ಹಗಲಿರುಳು ದುಡಿದಿದ್ದಾರೆ ಎಂದರು.

ದಾವಣಗೆರೆಯಲ್ಲಿ ಪಕ್ಷದ ಕೆಲ ನಾಯಕರು ಬೇರೆ ಅಭ್ಯರ್ಥಿಗೆ ಬೆಂಬಲ ನೀಡಿದ್ದಾರೆ ಎಂಬ ಆರೋಪದ ಕುರಿತು ಮಾತನಾಡಿದ ಶಿವಕುಮಾರ್, ಚುನಾವಣೆಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿದ್ದಾರೆ. ಈ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಗೆದ್ದಿದ್ದಾರೆ. ಅದರ ಹೊರತಾಗಿ ಬೇರೆ ವಿಚಾರಗಳನ್ನು ಚರ್ಚೆ ಮಾಡುವುದಿಲ್ಲ ಎಂದರು.

ಕೇರಳ ನಿರೀಕ್ಷೆಯಂತೆ ಗೆಲುವು: ಕೇರಳದಲ್ಲಿ ಬಹುದೊಡ್ಡ ಅಂತರದಿಂದ ಯುಡಿಎಫ್ ಗೆಲುವು ನೀಡಿದೆ. ಎಲ್‌ಡಿಎಫ್ ಹಾಗೂ ಬಿಜೆಪಿ ಒಳ ಒಪ್ಪಂದ ಮಾಡಿಕೊಂಡರೂ ಜನ ನಮಗೆ ಆಶೀರ್ವಾದ ಮಾಡಿದ್ದಾರೆ. ಕೇರಳದಲ್ಲಿ ನಿರೀಕ್ಷೆಯಂತೆ ಪಕ್ಷ ಗೆದ್ದಿದೆ. ತಮಿಳುನಾಡಿನಲ್ಲಿ ಡಿಎಂಕೆ ಸೋತಿದ್ದರೂ, ಬಿಜೆಪಿ ಅಂಗಪಕ್ಷ ಸೋಲಿಸಲಾಗಿದೆ. ಆ ಮೂಲಕ ಕೋಮುವಾದಿ ಶಕ್ತಿ ದೂರ ಇಡಲಾಗಿದೆ. ಅಲ್ಲಿನ ಮತದಾರರನ್ನು ಅಭಿನಂದಿಸುತ್ತೇನೆ ಎಂದರು.

ದಾವಣಗೆರೆ: ಸ್ಟ್ರಾಂಗ್‌ರೂಂ ಬೀಗ ಒಡೆದು ಒಳಹೋದ ಅಧಿಕಾರಿಗಳು


ಕೈ ಕೊಟ್ಟ ಕೀಗಳು | ಬಾಗಿಲ ಚಿಲಕ ಮುರಿದು ಒಳಕ್ಕೆ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ದಾವಣಗೆರೆ ದಕ್ಷಿಣ ಕ್ಷೇತ್ರದ ಮತ ಎಣಿಕೆ ಕೇಂದ್ರದ ಸ್ಟ್ರಾಂಗ್ ರೂಂನಲ್ಲಿದ್ದ ನಾಲ್ಕು ಕೊಠಡಿಗಳ ಪೈಕಿ 2 ಕೊಠಡಿಗಳ ಬೀಗವನ್ನು ತೆಗೆಯಲಾಗದೇ ಬಾಗಿಲಿಗೆ ಹಾಕಿದ್ದ ಚಿಲಕಗಳನ್ನೇ ಒಡೆದು ಹಾಕಿದ ಘಟನೆ ಸೋಮವಾರ ನಡೆಯಿತು.

ನಗರದ ಡಿಆರ್‌ಆರ್‌ಶಾಲೆಯ ಮತ ಎಣಿಕಾ ಕೇಂದ್ರದ ಸ್ಟ್ರಾಂಗ್ ರೂಂಗಳ ಬೀಗಗಳನ್ನು ತೆರೆಯಲು ಹರಸಾಹಸ ಮಾಡಿದ ಸಿಬ್ಬಂದಿ, ಕಡೆಗೆ ಬೀಗ ತೆಗೆಯುವ ಬದಲಿಗೆ ಚಿಲಕವನ್ನೇ ಸುತ್ತಿಗೆಯಿಂದ ಒಡೆದು ತೆಗೆಯಬೇಕಾದ ಪರಿಸ್ಥಿತಿ ಬಂದಿದ್ದು ಸಾಕಷ್ಟು ಪ್ರಶ್ನೆಗೆ ಆಸ್ಪದ ಮಾಡಿಕೊಟ್ಟಿದೆ.

ಅಕ್ರಮ ನಡೆದಿದೆ



ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಅಕ್ರಮ ನಡೆದಿದ್ದು, ಈ ಬಗ್ಗೆ ರಾಜ್ಯ ಮತ್ತು ಕೇಂದ್ರ ಚುನಾವಣಾ ಆಯೋಗಗಳಿಗೆ ದೂರು ನೀಡುವ ಜೊತೆಗೆ ನ್ಯಾಯಾಲಯದ ಮೊರೆ ಹೋಗುತ್ತೇನೆ.

• **ಶ್ರೀನಿವಾಸ ದಾಸಕರಿಯಪ್ಪ**
ಪರಾಜಿತ ಬಿಜೆಪಿ ಅಭ್ಯರ್ಥಿ

ಪ್ರತಿಯೊಂದು ಸ್ಟ್ರಾಂಗ್ ರೂಂಗೂ ಎರಡೆರಡು ಅತ್ಯಾಧುನಿಕ ಬೀಗಗಳನ್ನೇ ಹಾಕಲಾಗಿತ್ತು. ಡಬಲ್ ಲಾಕರ್‌ಬೀಗಗಳನ್ನು ಅಳವಡಿಸಲಾಗಿತ್ತು. ಆದರೆ, ಚುನಾವಣಾಧಿಕಾರಿ ಬಳಿ ಇದ್ದ ಕೀಗಳಿಂದ ಬೀಗಗಳನ್ನು ತೆಗೆಯಲಾಗದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ 2 ಸ್ಟ್ರಾಂಗ್ ರೂಂಗಳ ಬೀಗಗಳನ್ನು ಒಡೆದು ಹಾಕಿ, ಬಾಗಿಲುಗಳನ್ನು ತೆಗೆಯಲಾಯಿತು.



15 ವರ್ಷಗಳ ದೀದಿ ಭದ್ರಕೋಟೆ ಬಿಜೆಪಿ ದಾಳಿಗೆ ಛಿದ್ರ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಗೆ ಐತಿಹಾಸಿಕ ಜಯ | ಮೊದಲ ಸಲ ಅಧಿಕಾರ | ಆಡಳಿತ ವಿರೋಧಿ ಅಲೆಗೆ ಟಿಎಂಸಿ ಬಲಿ | ಕಾಂಗ್ರೆಸ್‌ಗೆ ಹೀನಾಯ ಸೋಲು

ಕೋಲ್ಕತಾ: 15 ವರ್ಷಗಳಿಂದ ಪಶ್ಚಿಮ ಬಂಗಾಳವನ್ನು ಅಕ್ಷರಶಃ ಆಳಿದ್ದ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅಧಿಪತ್ಯ ಕೊನೆಗೊಳಿಸುವಲ್ಲಿ ಕಡೆಗೂ ಯಶಸ್ವಿಯಾಗಿರುವ ಬಿಜೆಪಿ, ರಾಜ್ಯದಲ್ಲಿ ಮೊದಲ ಸಲ ಅಧಿಕಾರದ ಗದ್ದುಗೆ ಏರಿದೆ. ರಾಜ್ಯ ವಿಧಾನಸಭೆಯ 294 ಸ್ಥಾನಗಳ ಪೈಕಿ 293 ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ಭರ್ಜರಿ ಬಹುಮತದೊಂದಿಗೆ ಬಿಜೆಪಿ ಅಧಿಕಾರಕ್ಕೆ ಬಂದಿದೆ.

ವಿಶೇಷ ಮತಪಟ್ಟಿ ಪರಿಷ್ಕರಣೆ ವಿವಾದ, ಬಾಂಗ್ಲನ್ನರ ಅಕ್ರಮ ಒಳನುಸುಳುವಿಕೆ, ಹಿಂದೂಗಳ ಮೇಲಿನ ದೌರ್ಜನ್ಯ ತಡೆಯುವಲ್ಲಿ ಮಮತಾ ವಿಫಲ ಎಂಬ ಆರೋಪ, ಆಡಳಿತದಲ್ಲಿನ ಭ್ರಷ್ಟಾಚಾರದ ಆರೋಪ, ಅತಿಯಾದ ಓಲೈಕೆ ರಾಜಕಾರಣ, ವೈದ್ಯಕೀಯ ವಿದ್ಯಾರ್ಥಿನಿಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಟಿಎಂಸಿ ನಾಯಕರ ಕೀಳು ಹೇಳಿಕೆ, ಅಭಿವೃದ್ಧಿಯಲ್ಲಿ ಕುಂಠಿತ, ಸತತ 15 ವರ್ಷಗಳ ಆಡಳಿತ ವಿರೋಧಿ ಅಲೆಗೆ ಸಿಕ್ಕ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಧಿಕಾರ ಕಳೆದುಕೊಂಡಿದ್ದಾರೆ.

ಮತ್ತೊಂದೆಡೆ ಸತತ 2 ವರ್ಷಗಳಿಂದ, ಬಂಗಾಳವನ್ನು ಗೆಲ್ಲಲು ಬಿಜೆಪಿಯ ಚುನಾವಣಾ ರಣತಂತ್ರಗಾರ ಅಮಿತ್ ಶಾ ಹೆಣೆದ ಕಾರ್ಯತಂತ್ರ, ಬಿಜೆಪಿಯ ತಳಮಟ್ಟದ ಕಾರ್ಯಕರ್ತರು ಕಳೆದ 2 ತಿಂಗಳಲ್ಲಿ ರಾಜ್ಯವ್ಯಾಪಿ 1.65 ಲಕ್ಷಕ್ಕೂ ಹೆಚ್ಚು ಸಮುದಾಯ ಸಭೆ ನಡೆಸಿ ಮಮತಾ ಸರ್ಕಾರದ ವೈಫಲ್ಯ, ಬಾಂಗ್ಲಾದೇಶದಲ್ಲಿನ ಹಿಂದೂಗಳ ಮೇಲಿನ ದಾಳಿ ಪ್ರಸ್ತಾಪಿಸಿ, ಹಿಂದೂಗಳನ್ನು ಬಡಿದೆಬ್ಬಿಸಿದ್ದು, ಮಮತಾ ಸರ್ಕಾರದ ಓಲೈಕೆ ರಾಜಕಾರಣದ ಬಗ್ಗೆ ಗಮನ ಸೆಳೆದಿದ್ದು ಬಿಜೆಪಿ ಗೆಲುವಿಗೆ ದೊಡ್ಡ ಮಟ್ಟದಲ್ಲಿ ನೆರವು ನೀಡಿದೆ. ಜೊತೆಗೆ ಕಡೆಯ ಹಂತದಲ್ಲಿ ಪ್ರಧಾನಿ ಮೋದಿಯಾಗಿ ಬಿಜೆಪಿ ನಾಯಕರು ನಡೆಸಿದ ಸಂಘಟಿತ ಹೋರಾಟ, ಭರ್ಜರಿ ಪ್ರಚಾರ ಕೂಡಾ ಬಿಜೆಪಿಯು ವಿಧಾನಸಭೆಯಲ್ಲಿ ಸುಲಭವಾಗಿ ಮ್ಯಾಜಿಕ್ ಸಂಖ್ಯೆಯಾದ 148ರ ಗಡಿದಾಟುವುದನ್ನು ಖಚಿತಪಡಿಸಿದೆ.

ಕಳೆದ ಚುನಾವಣೆಗೆ ಹೋಲಿಸಿದರೆ ಈ ಬಾರಿ ಟಿಎಂಸಿಯ ಮತ ಪಾಲು ಶೇ.6-ಶೇ.7ರಷ್ಟು ಇಳಿದಿದ್ದರೆ, ಬಿಜೆಪಿಯ ಪಾಲು ಶೇ.6-7ರಷ್ಟು ಹೆಚ್ಚಳವಾಗಿದ್ದು ಫಲಿತಾಂಶ ತಿರುವು ಮುರುವಾಗಲು ನೆರವಾಗಿದೆ. 2021ರಲ್ಲಿ ತಾನು ಗೆದ್ದಿದ್ದ ಸ್ಥಾನಗಳ ಪೈಕಿ ಬಹುತೇಕ ಕ್ಷೇತ್ರಗಳನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ಬಿಜೆಪಿ, ಈ ಬಾರಿ ಟಿಎಂಸಿ ಪ್ರಾಬಲ್ಯದ ಹಲವು ಸ್ಥಾನಗಳನ್ನೂ ಕಸಿದುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆದ್ದಿದ್ದು ಹೇಗೆ?

- ಟಿಎಂಸಿ ವಿರುದ್ಧ ಕೇಳಿಬಂದ ಅತಿಯಾದ ಓಲೈಕೆ ರಾಜಕಾರಣದ ಆರೋಪ
- ಬಾಂಗ್ಲಾ ಅಕ್ರಮ ಒಳನುಸುಳುವಿಕೆ ಬಗ್ಗೆ ಮಮತಾ ಸರ್ಕಾರ ಜಾಣ ಮೌನ
- ಹಿಂದೂ ಮೇಲಿನ ಸತತ ದೌರ್ಜನ್ಯ ತಡೆಗೆ ಟಿಎಂಸಿ ವಿಫಲ. ಹಿಂದೂಗಳ ಆಕ್ರೋಶ
- ನೆರೆ ಬಾಂಗ್ಲಾ ಹಿಂದೂಗಳ ಮೇಲಿನ ಹಿಂಸಾಚಾರವೂ ಚುನಾವಣೆ ಮೇಲೆ ಪರಿಣಾಮ ಬೀರಿರುವ ಸಾಧ್ಯತೆ
- ಅಭಿವೃದ್ಧಿ ಕಾರ್ಯದಲ್ಲಿ ಹಿನ್ನಡೆ. ಸರ್ಕಾರ, ಸಚಿವರ ಮೇಲೆ ಭ್ರಷ್ಟಾಚಾರ ಆರೋಪ
- ಸತತ 15 ವರ್ಷಗಳ ಮಮತಾ ಸರ್ಕಾರದ ಆಡಳಿತ ವಿರೋಧಿ ಅಲೆ ಬಿಜೆಪಿಗೆ ವರ
- ಇವುಗಳನ್ನು ಜನರ ಗಮನಕ್ಕೆ ತರುವಲ್ಲಿ ಯಶಸ್ವಿಯಾದ ಬಿಜೆಪಿ ಕಾರ್ಯತಂತ್ರ
- ತನ್ನ ಪ್ರಾಬಲ್ಯದ ಹೊರತಾದ ಕ್ಷೇತ್ರಗಳಲ್ಲೂ ಸಂಘಟನೆಗೆ ಬಿಜೆಪಿ ಒತ್ತು ನೀಡಿದ್ದು
- ಎಸ್‌ಐಆರ್ ಮೂಲಕ ನಕಲಿ ಮತದಾರರ ತೆರವು ಮಾಡಿದ್ದು ಟಿಎಂಸಿಗೆ ಭಾರೀ ಶಾಪ
- 1 ವರ್ಷದಿಂದ ರಾಜ್ಯವ್ಯಾಪಿ 1.64 ಲಕ್ಷ ಸಮುದಾಯ ಸಭೆ ನಡೆಸಿದ್ದ ಬಿಜೆಪಿ
- 2 ವರ್ಷಗಳಿಂದ ಅಮಿತ್ ಶಾ ಕಾರ್ಯತಂತ್ರ, ಮೋದಿ ಭರ್ಜರಿ ಪ್ರಚಾರ ಸಭೆಗಳು
- 5 ವರ್ಷಗಳಿಂದ ಟಿಎಂಸಿಯ ಸವಾಲು ಮೆಟ್ಟಿನಿಲ್ಲುವಲ್ಲಿ ಬಿಜೆಪಿಯ ಸುವೇಂದು ಅಧಿಕಾರಿ ಯಶಸ್ವಿಯಾಗಿದ್ದು

ಪ.ಬಂಗಾಳ (ಒಟ್ಟು ಸ್ಥಾನ 294 / ಬಹುಮತಕ್ಕೆ 148)

ಪಕ್ಷ	ಸ್ಥಾನ	2021	ಲಾಭ/ನಷ್ಟ	% ಮತ
ಟಿಎಂಸಿ	81	214	-133	41
ಬಿಜೆಪಿ	206	77	+129	45
ಕಾಂಗ್ರೆಸ್	2	0	+2	3
ಎಡರಂಗ	2	1	+1	5
ಇತರರು	2	1	+1	6

ಗೆದ್ದ ಪ್ರಮುಖರು

- ಸುವೇಂದು ಅಧಿಕಾರಿ (ಬಿಜೆಪಿ)
- ಅಗ್ನಿಮಿತ್ರ ಪೌಲ್ (ಬಿಜೆಪಿ)
- ದಿಲೀಪ್ ಘೋಷ್ (ಬಿಜೆಪಿ)
- ರೂಪಾ ಗಂಗೂಲಿ (ಬಿಜೆಪಿ)
- ಸ್ವಪನ್ ದಾಸ್ ಗುಪ್ತಾ (ಬಿಜೆಪಿ)
- ಕುನಾಲ್ ಘೋಷ್ (ಟಿಎಂಸಿ)
- ಅಶೋಕ್ ದಿಂಡಾ (ಬಿಜೆಪಿ)

ಸೋತ ಪ್ರಮುಖರು

- ಅಧೀರ್ ರಂಜನ್ ಚೌಧರಿ (ಕಾಂಗ್ರೆಸ್)
- ಮಮತಾ ಬ್ಯಾನರ್ಜಿ (ಟಿಎಂಸಿ)
- ಸೋಹಂ ಚಕ್ರವರ್ತಿ (ಬಿಜೆಪಿ)
- ಸಯಾಂತಿಕಾ ಬ್ಯಾನರ್ಜಿ (ಟಿಎಂಸಿ)
- ಪ್ರಿಯಾಂಕಾ ತಿಬ್ರೇವಾಲ್ (ಬಿಜೆಪಿ)
- ಶಶಿ ಪಾಂಜಾ (ಟಿಎಂಸಿ)
- ಮೌಸಂ ನೂರ್ (ಟಿಎಂಸಿ)



ಬಂಗಾಳ
294
ಒಟ್ಟು ಸ್ಥಾನ
148
ಬಹುಮತಕ್ಕೆ



ಅಭೂತಪೂರ್ವ ಗೆಲುವಿನ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದ ಬಿಜೆಪಿ ಕಾರ್ಯಕರ್ತರಿಂದ ಬಣ್ಣ ಎರಚಿ ಸಂಭ್ರಮಾಚರಣೆ

ಭವಾನಿಪುರ ಎಣಿಕೆ ಕೇಂದ್ರದಲ್ಲಿ ದೀದಿ-ಅಧಿಕಾರಿ ಮುಖಾಮುಖಿ



ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಜಿದ್ದಾಜಿದ್ದಿಗೆ ವೇದಿಕೆಯಾಗಿರುವ ಭವಾನಿಪುರ ಕ್ಷೇತ್ರದಲ್ಲಿ ಮತ ಎಣಿಕೆ ವೇಳೆ ಅಭ್ಯರ್ಥಿಗಳಾದ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಮತ್ತು ಬಿಜೆಪಿಯ ಸುವೇಂದು ಅಧಿಕಾರಿ ಮುಖಾಮುಖಿಯಾದ ಪ್ರಸಂಗ ನಡೆಯಿತು. ಮತ ಎಣಿಕೆ ವೇಳೆ ಅಂತಿಮ ಸುತ್ತುಗಳಲ್ಲಿ ಸುವೇಂದು ಅಧಿಕಾರಿ ಮುನ್ನಡೆ ಕುಸಿಯಲಾರಂಭಿಸಿತು. ಈ ವೇಳೆ ಅಧಿಕಾರಿಗಳು ಟಿಎಂಸಿ ಏಜೆಂಟ್ ಒಬ್ಬರನ್ನು ಬಲವಂತಾಗಿ ಕೇಂದ್ರದಿಂದ ಹೊರ ಹಾಕಿದರು ಎಂದು ಪಕ್ಷದ ಕಾರ್ಯ ಕರ್ತರು ಆರೋಪಿಸಿದರು. ಇದರ ಬೆನ್ನಲ್ಲೇ ಮಮತಾ ಬ್ಯಾನರ್ಜಿ ಕೂಡ ಸ್ಥಳಕ್ಕೆ ಆಗಮಿಸಿದರು. ಆಗ ಬಿಜೆಪಿಯ ಸುವೇಂದು ಅಧಿಕಾರಿ ಕೂಡ ಕೇಂದ್ರದಲ್ಲಿದ್ದರು.

ಮಮತಾ ಘೋರ ಪರಾಭವ

ಬಿಜೆಪಿಯ ಸುವೇಂದು ಎದುರು 15,105 ಮತಗಳಿಂದ ಸೋಲು

ಹಾವು-ಏಣಿ ಆಟದಲ್ಲಿ ತವರಿನಲ್ಲೇ ದೀದಿಗೆ ಭಾರೀ ಪರಾಜಯ

ಕೋಲ್ಕತಾ: ಇಡೀ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ತೀವ್ರ ಹಣಾಹಣಿಗೆ ಸಾಕ್ಷಿಯಾಗಿದ್ದ ಭವಾನಿಪುರ ಕ್ಷೇತ್ರದಲ್ಲಿ ಬಿಜೆಪಿಯ ಸುವೇಂದು ಅಧಿಕಾರಿ ಎದುರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 15,105 ಮತಗಳಿಂದ ಪರಾಭವ ಕಂಡಿದ್ದಾರೆ. ಈ ಮೂಲಕ ಸತತ 3 ಅವಧಿಗೆ ಬಂಗಾಳದ ಗದ್ದುಗೆಯೇರಿ ಅನಭಿಷಿಕ್ತ ಸಾಮ್ರಾಜ್ಞಿಯಾಗಿ ಮೆರೆದಿದ್ದ ದೀದಿ ಯುಗ ಸದ್ಯದ ಮಟ್ಟಿಗೆ ಅಂತ್ಯವಾಗಿದೆ.

ಈ ಬಾರಿ ಮಮತಾ ಬ್ಯಾನರ್ಜಿಯವರ ತವರು ಕ್ಷೇತ್ರವಾದ ಭವಾನಿಪುರ ತೀವ್ರ ಕುತೂಹಲಕ್ಕೆ ಕಾರಣವಾಗಿತ್ತು. 2021ರ ಚುನಾವಣೆಯಲ್ಲಿ ನಂದಿಗ್ರಾಮದಲ್ಲಿ ಸುವೇಂದು ಎದುರು ಸೋತಿದ್ದ ಮಮತಾ, ಆ ಬಳಿಕ ಭವಾನಿಪುರದಿಂದ ಸ್ಪರ್ಧಿಸಿ, ಗೆಲುವು ಸಾಧಿಸಿ ಮುಖ್ಯಮಂತ್ರಿ ಕುರ್ಚಿಯನ್ನು ಉಳಿಸಿಕೊಂಡಿದ್ದರು. ಈ ಬಾರಿಯೂ ಅದೇ ಕ್ಷೇತ್ರದಿಂದ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದರು. ಆದರೆ ರಾಜ್ಯದಲ್ಲಿ ಅವರ ಇಡೀ ಪಕ್ಷ ಧೂಳಿಪಟವಾಗಿದ್ದಲ್ಲದೆ, ಕನಿಷ್ಠ ಶಾಸಕ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿಯೂ ಅವರು ವಿಫಲರಾಗಿದ್ದಾರೆ.

ಮತ ಎಣಿಕೆ ಹಾವು ಏಣಿ ಆಟದಂತಿತ್ತು. ಒಮ್ಮೆ ಸುವೇಂದು ಮುನ್ನಡೆ ಸಾಧಿಸಿದರೆ ಮತ್ತೊಮ್ಮೆ ದೀದಿ ಮುನ್ನಡೆ ಸಾಧಿಸುತ್ತಿದ್ದರು. ಕೊನೆಗೆ ದೀದಿ ಮಾಜಿ ಆಪ್ತನಾದ ಅಧಿಕಾರಿ ಕೈ ಮೇಲಾಯಿತು.



ಬಿಜೆಪಿ ಗೆಲುವಿಗೆ ಝೂಲ್ಮುರಿ ಹಂಚಿ, ತಿಂದು ಮಹಿಳಾಮಣಿಗಳ ಸಂಭ್ರಮಾಚರಣೆ


ಬಿಜೆಪಿಯಿಂದ 100 ಸ್ಥಾನಗಳ ಲೂಟಿ, ಇದು ಅಕ್ರಮ: ದೀದಿ

ಭವಾನಿಪುರ (ಬಂಗಾಳ): ಬಿಜೆಪಿಯಿಂದ ರಾಜ್ಯದಲ್ಲಿ 100 ಸ್ಥಾನ ಲೂಟಿ, ಇದು ಅಕ್ರಮ. ಇದರ ವಿರುದ್ಧ ನಾವು ಪುಟಿದೇಳುತ್ತೇವೆ ಎಂದು ಬಂಗಾಳ ಸಿಎಂ ಹಾಗೂ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಸೋಮವಾರ ರಾತ್ರಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಜೆಪಿ 100 ಕ್ಕೂ ಹೆಚ್ಚು ಸ್ಥಾನಗಳನ್ನು ಲೂಟಿ ಮಾಡಿದೆ. ಚುನಾವಣಾ ಆಯೋಗವು ಬಿಜೆಪಿಯ ಆಯೋಗ. ನಾನು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇನೆ, ಆದರೆ ಅವರು ಏನನ್ನೂ ಮಾಡುತ್ತಿಲ್ಲ. ಇದು ಗೆಲುವು ಎಂದು ನೀವು ಭಾವಿಸುತ್ತೀರಾ? ಇದು ಅನೈತಿಕ ಗೆಲುವು, ನೈತಿಕ ವಿಜಯವಲ್ಲ. ಚುನಾವಣಾ ಆಯೋಗವು ಕೇಂದ್ರ ಪಡೆಗಳು ಮತ್ತು ಪ್ರಧಾನಿ ಮತ್ತು ಗೃಹ ಸಚಿವರೊಂದಿಗೆ ಏನು ಮಾಡಿದೆಯೋ ಅದು ಸಂಪೂರ್ಣವಾಗಿ ಕಾನೂನುಬಾಹಿರ. ಇದು ಲೂಟಿ, ಲೂಟಿ, ಲೂಟಿ. ನಾವು ಮತ್ತೆ ಪುಟಿದೇಳುತ್ತೇವೆ' ಎಂದರು.

ನಾವು ಮತ್ತೆ ಪುಟಿದೇಳುತ್ತೇವೆ
ಮಮತಾ

ಸಿಹಿ ಬದಲು ಬಂಗಾಳದಲ್ಲಿ ಮೀನು, ಚುರುಮುರಿ ತಿಂದು ಬಿಜೆಪಿ ಸಂಭ್ರಮ!

ಕೋಲ್ಕತಾ: ಮೊದಲ ಬಾರಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಹಿಡಿದಿದ್ದಕ್ಕೆ ಪಕ್ಷದ ಕಾರ್ಯಕರ್ತರ ಸಂಭ್ರಮಕ್ಕೆ ಪಾರವೇ ಇಲ್ಲ. ಹಾಗಂತ ಅವರು ಸಿಹಿ ತಿಂದು ಸಂಭ್ರಮಿಸಿಲ್ಲ, ಬದಲಾಗಿ ಮೀನು ಹಂಚಿ, ಝೂಲ್ಮುರಿ (ಚುರುಮುರಿ) ತಿಂದು ವಿರೋಧಿಗಳಿಗೆ ಟಾಂಗ್ ನೀಡಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಮೀನು ಹಾಗೂ ಇತರ ಮಾಂಸಹಾರ ನಿಷೇಧಿಸುತ್ತಾರೆ ಎಂದು ಟಿಎಂಸಿ ಆರೋಪಿಸಿತ್ತು. ಹೀಗಾಗಿ ಈಗ ಬಿಜೆಪಿ ಮೀನು ಹಂಚಿ ತಿರುಗೇಟು ನೀಡಿದೆ. ಮತ್ತೊಂದೆಡೆ ಪ್ರಧಾನಿ ಮೋದಿ ತಮ್ಮ ಪ್ರಚಾರದಲ್ಲಿ ಚುರುಮುರಿ ಸೇವಿಸಿ ಮಮತಾಗೆ ಟಾಂಗ್ ನೀಡಿದ್ದರು. ಹೀಗಾಗಿ ಈಗಲೂ ಬಿಜೆಪಿ ಕಾರ್ಯಕರ್ತರು ಚುರುಮುರಿ ಹಂಚಿ ಗೆಲುವನ್ನು ಸಂಭ್ರಮಿಸಿದರು.



ಬಂಗಾಳದ ಕೆಲವೆಡೆ ಟಿಎಂಸಿ ಕಚೇರಿಗಳ ಮೇಲೆ ದಾಳಿ

ಇದಕ್ಕೂ ನಮಗೂ ಸಂಬಂಧವೇ ಇಲ್ಲ: ಬಿಜೆಪಿ

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ದಾಖಲಿಸಿದ ಬೆನ್ನಲ್ಲೇ, ರಾಜ್ಯಾದ್ಯಂತ ಟಿಎಂಸಿ ಕಚೇರಿಗಳ ಮೇಲೆ ದಾಳಿ ನಡೆಸಿ, ಫ್ಲೆಕ್ಸ್ ಬೋಡ್‌ಗಳು, ಪಕ್ಷದ ಬ್ಯಾನರ್‌ಗಳು ಮತ್ತು ಧ್ವಜಗಳನ್ನು ವಿರೂಪಗೊಳಿಸಲಾಗಿದೆ. ಆದರೆ ಇದಕ್ಕೂ ತನಗೂ ಯಾವುದೇ ಸಂಬಂಧವಿಲ್ಲ ಎಂದು ಬಿಜೆಪಿ ಸ್ಪಷ್ಟಪಡಿಸಿದೆ.



ಪೊಲೀಸರ ನಿಷ್ಕ್ರಿಯತೆಯಿಂದಾಗಿ, ಬಿಜೆಪಿಯ ಆಶ್ರಯ ಪಡೆದಿರುವ ದುಷ್ಕರ್ಮಿಗಳು ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರ ಮೇಲೆ ಸಂಘಟಿತ ದಾಳಿಗಳನ್ನು ನಡೆಸುತ್ತಿದ್ದಾರೆ ಎಂದು ಟಿಎಂಸಿ ನಾಯಕರು ಆರೋಪಿಸಿದ್ದಾರೆ. ಆದರೆ ಬಿಜೆಪಿ ನಾಯಕರು ಈ ಆರೋಪವನ್ನು ಅಲ್ಲಗಳೆದಿದ್ದು, 'ಈ ಘಟನೆಗಳು ಟಿಎಂಸಿಯೊಳಗಿನ ಆಂತರಿಕ ವಿವಾದಗಳ ಫಲ' ಎಂದಿದ್ದಾರೆ.


ಮಮತಾ ಮೇಲೆ ಎಸ್‌ಐಆರ್ ತೀವ್ರ ಪರಿಣಾಮ?

ಕೋಲ್ಕತಾ: ಮತಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ವೇಳೆ 1 ಕೋಟಿ ಮತದಾರರ ಹೆಸರನ್ನು ಚುನಾವಣಾ ಆಯೋಗ ಅಳಿಸಿ ಹಾಕಿತ್ತು. ಇವರು ಅಕ್ರಮ ಮತದಾರರು ಎಂದು ಆಯೋಗ ಕರೆದಿತ್ತು. ಆದರೆ ಇದೇ ಎಸ್‌ಐಆರ್ ಮಮತಾ ಬ್ಯಾನರ್ಜಿಗೆ ಮುಳುವಾಯಿತೆ ಎಂಬ ಪ್ರಶ್ನೆ ಎದುರಾಗಿದೆ. ಎಸ್‌ಐಆರ್ ಜಾರಿ ಮಾಡಿ ಟಿಎಂಸಿ ಪರ ಮತದಾರರ ಅಳಿಸಿಹಾಕಲಾಗಿದೆ ಎಂದು ಮಮತಾ ಆರೋಪಿಸಿದ್ದರು. ಇದರ ವಿರುದ್ಧ ಕೋರ್ಟ್ ಒಳಗೆ ಹಾಗೂ ಬಹಿರಂಗ ನಡೆಸಿದ್ದರು. 'ಆದರೆ ಇವರೆಲ್ಲ ಅಕ್ರಮ ಬಾಂಗ್ಲಾ ಮತದಾರರು. ಮಮತಾ ಅವರೇ ಇವರಿಗೆ ಮಣೆ ಹಾಕಿದ್ದರು' ಎಂದು ಬಿಜೆಪಿ ಆರೋಪಿಸಿತ್ತು.

ಆರ್‌ಜಿ ಕರ್ ರೇಪ್ ಸಂತ್ರಸ್ತೆಯ ತಾಯಿಗೆ ಬಂಗಾಳದಲ್ಲಿ ಗೆಲುವು



ಕೋಲ್ಕತಾ: 2024ರಲ್ಲಿ ಪಶ್ಚಿಮ ಬಂಗಾಳ ಆರ್ ಜಿ ಕರ್ ಮೆಡಿಕಲ್ ಕಾಲೇಜಿನಲ್ಲಿ ನಡೆದ ಅತ್ಯಾಚಾರ ಪ್ರಕರಣದ ಸಂತ್ರಸ್ತೆ ತಾಯಿ ರತ್ನಾ ದೇವನಾಥ್ ಬಂಗಾಳ ಚುನಾವಣೆಯಲ್ಲಿ ಬಿಜೆಪಿಯಿಂದ ಜಯ ಸಾಧಿಸಿದ್ದಾರೆ. ಪಾನಿಹಾಟಿಯಲ್ಲಿ ಸ್ಪರ್ಧಿಸಿದ್ದ ರತ್ನಾ ತಮ್ಮ ಪ್ರತಿ ಸ್ಪರ್ಧಿ ಟಿಎಂಸಿಯ ತೀರ್ಥಂಕರ್ ಘೋಷ್ ವಿರುದ್ಧ ಗೆಲುವಿನ ನಗೆ ಬೀರಿದ್ದಾರೆ. ಇದೇ ವೇಳೆ ಸಂದೇಶಖಾಲಿ ದೌರ್ಜನ್ಯ ಸಂತ್ರಸ್ತೆ ರೇಖಾಪಾತ್ರ ಕೂಡ ಗೆದ್ದಿದ್ದಾರೆ.



- ಅಮಿತ್ ಶಾ
ಕೇಂದ್ರ ಗೃಹ ಸಚಿವ

ಇದು ಅತಿ ಹೆಮ್ಮೆಯ ಕ್ಷಣ

ಈ ಗೆಲುವು ಟಿಎಂಸಿ ಭಯದ ಎದುರು ಮೋದಿಯವರ ಮೇಲಿನ ನಂಬಿಕೆಯ ವಿಜಯ. ನನ್ನಂತಹ ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತನಿಗೆ, ಇಂದು ಕೇಸರಿ ಧ್ವಜವು ಎಲ್ಲೆಡೆ ತಲೆಯೆತ್ತಿ ಹಾರಾಡುತ್ತಿದೆ ಎಂಬ ಹೆಮ್ಮೆಯ ಕ್ಷಣ.



- ಶಿವರಾಜ್ ಸಿಂಗ್ ಚೌಹಾಣ್ ಕೇಂದ್ರ ಸಚಿವ

ಮುಖರ್ಜಿ ಆತ್ಮ ಸಂತೃಪ್ತ

ಒಬ್ಬ ಕಾರ್ಯಕರ್ತನಾಗಿ ನನ್ನ ಹೃದಯ ಭಾವುಕವಾಗಿದೆ. ಒಂದು ಕನಸು ನನಸಾಗಿದೆ. ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಆತ್ಮ ಈಗ ಸಂತೃಪ್ತಗೊಂಡಿದೆ. ಈ ಗೆಲುವು ಮೋದಿ ಅವರ ಮೇಲಿನ ಅಪಾರ ನಂಬಿಕೆಯ ಪ್ರತಿಬಿಂಬ.



- ದೇವೇಂದ್ರ ಫಡ್ನವೀಸ್
ಮಹಾರಾಷ್ಟ್ರ ಸಿಎಂ

ಉಗ್ರರ ವಿರುದ್ಧ ರಕ್ಷಣೆ

ಬಂಗಾಳದಲ್ಲಿ ಗೆಲುವು ಸಾಧಿಸಿರುವ ಬಿಜೆಪಿಯು, ದೇಶವನ್ನು ಒಳ ನುಸುಳುವಿಕೆ, ಉಗ್ರ ಚಟುವಟಿಕೆ, ಭಯೋತ್ಪಾದನೆಯಿಂದ ರಕ್ಷಿಸುತ್ತದೆ. ಮಮತಾ ಸರ್ಕಾರ ಬಾಂಗ್ಲಾನ್ನರ ಒಳನುಸುಳುವಿಕೆಗೆ ಸಾಕ್ಷಿಯಾಗಿತ್ತು.



- ಲಿಯಾಂಡರ್ ಪೇಸ್
ಬಿಜೆಪಿ ನಾಯಕ

ಇದು ಆರಂಭ ಮಾತ್ರ

ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರ ಮಹಾನ್ ನಾಯಕತ್ವದಲ್ಲಿ, ಬಂಗಾಳ ಉದಯಿಸುತ್ತಿದೆ. ಬಲಿಷ್ಠ, ನಿರ್ಭೀತ ಬಂಗಾಳ ನಿರ್ಮಾಣ ಆಗಲಿದೆ. ಬಂಗಾಳದ ಓಟಕ್ಕೆ ಯಾರಿಗೂ ತಡೆಯೊಡ್ಡಲು ಆಗದು. ಇದು ಕೇವಲ ಆರಂಭ.

ಜನಸಂಘ ಸ್ಥಾಪಕ ಡಾ. ಮುಖರ್ಜಿ ತವರಲ್ಲಿ ಅರಳಿತು ಕಮಲ

ಫಲಿಸಿತು ಕಠಿಣ ಪರಿಶ್ರಮ, ಈಡೇರಿತು ಬಿಜೆಪಿ ಕಾರ್ಯಕರ್ತರ ದಶಕಗಳ ಮಹದಾಸೆ | ಬಂಗಾಳವನ್ನು ಬಾಚಿಕೊಂಡ ಪ್ರಧಾನಿ ಮೋದಿ- ಅಮಿತ್ ಶಾ ಜೋಡೆತ್ತುಗಳು

ಅದೊಂದು ಆಸೆ ಬಾಕಿ ಇತ್ತು. ಅದು ಕೂಡ ಈಗ ಈಡೇರಿತು!

ಬಿಜೆಪಿಯ ಪೂರ್ವಾಶ್ರಮವಾಗಿರುವ ಜನಸಂಘದ ಸಂಸ್ಥಾಪಕರು ಡಾ. ಶ್ಯಾಮಪ್ರಸಾದ ಮುಖರ್ಜಿ. ಅವರಿಂದ ಕುಡಿಯೊಡೆದ ಪಕ್ಷ ಈಗ ದೇಶಾದ್ಯಂತ ಹೆಮ್ಮರವಾಗಿ ಬೆಳೆದಿದೆ, ವಿಶ್ವದ ಅತಿದೊಡ್ಡ ಪಕ್ಷವಾಗಿದೆ. ಎಂದೂ ಗೆಲ್ಲದ ರಾಜ್ಯಗಳಲ್ಲೆಲ್ಲಾ 2014ರ ನಂತರ ಭರ್ಜರಿ ಬಹುಮತದೊಂದಿಗೆ ಅಧಿಕಾರಕ್ಕೇರಿದೆ. ಆದರೆ ಮುಖರ್ಜಿ ಅವರ ತವರು ರಾಜ್ಯವಾಗಿರುವ ಪಶ್ಚಿಮಬಂಗಾಳದಲ್ಲಿ ಏನೇ ತಿಪ್ಪರಲಾಗ ಹಾಕಿದರೂ ಗೆಲುವು ಮರೀಚಿಕೆಯಾಗಿತ್ತು. ಅದು ಕೂಡ ಈಗ ಸಾಕಾರಗೊಂಡಿದೆ. ಮುಖರ್ಜಿ ಅವರ 125ನೇ ವರ್ಷಾಚರಣೆ ಹೊತ್ತಲ್ಲೇ.

ಇದಕ್ಕೆ ಯಾರು ಕಾರಣ ಎಂದರೆ, ಬಿಜೆಪಿಯಲ್ಲಿ ಕೇಳಿಬರುವುದು ಎರಡೇ ಹೆಸರು. ಒಂದು ನರೇಂದ್ರ ಮೋದಿ, ಇನ್ನೊಂದು ಅಮಿತ್ ಶಾ!

ಬಂಗಾಳಿ ಅಸ್ಮಿತೆ, ಅಲ್ಪಸಂಖ್ಯಾತರ ಮತ, ತೋಳ್ಬಲದಿಂದಾಗಿ 15 ವರ್ಷಗಳಿಂದ ಬಂಗಾಳದಲ್ಲಿ ಗಟ್ಟಿಯಾಗಿ ನೆಲೆಯೂರಿದ್ದ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ವಿರುದ್ಧ ಆಡಳಿತ ವಿರೋಧಿ ಅಲೆ ಇತ್ತು. ಆದರೆ ಅದನ್ನು ಮತವಾಗಿ ಪರಿವರ್ತಿಸಲು ಹಲವು ಕೊರತೆಗಳು ಇದ್ದವು. ಅವನ್ನೆಲ್ಲಾ ಮೋದಿ- ಶಾ ಜೋಡಿ ನೀಗಿಸಿದ ಫಲವೇ ಈ ಫಲಿತಾಂಶ.

ಬಂಗಾಳದಲ್ಲಿ 2014ರ ನಂತರ ಬಿಜೆಪಿ ತಳಮಟ್ಟದಿಂದ ನೆಲೆ ಕಾಣಲು ಆರಂಭಿಸಿತು. 2019ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಅದು ಗೋಚರವಾಯಿತು. 2021ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಇನ್ನೇನು ಗೆದ್ದೇ ಬಿಟ್ಟಿತು ಎನ್ನುವಂತಹ ವಾತಾವರಣ ಕಂಡುಬಂತಾದರೂ ಅಲ್ಪಮತಗಳ ಅಂತರದ ಸೋಲುಗಳು ಮಮತಾ ದೀದಿಯನ್ನು ಅಧಿಕಾರಕ್ಕೇರಿಸಿದ್ದವು.

ಬೂತ್ ಮಟ್ಟದ ತಂತ್ರಗಾರಿಕೆ: ಬಂಗಾಳವನ್ನು ಗೆಲ್ಲಲು ಅಬ್ಬರದ ಪ್ರಚಾರವೊಂದೇ ಸಾಲುವುದಿಲ್ಲ ಎಂಬುದನ್ನು ಮನಗಂಡ ಮೋದಿ- ಅಮಿತ್ ಶಾ ಜೋಡಿ, ಅಲ್ಪಮತಗಳಿಂದ ಫಲಿತಾಂಶವೇ ಬದಲಾಗುತ್ತಿದ್ದ ಬೂತ್‌ಗಳತ್ತ ಗಮನಹರಿಸಿತು. ಉತ್ತರಪ್ರದೇಶ ಸೇರಿ ವಿವಿಧ ರಾಜ್ಯಗಳಲ್ಲಿ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ಬೂತ್ ಪ್ರಮುಖ ವ್ಯವಸ್ಥೆಯನ್ನು ಬಂಗಾಳದಲ್ಲೂ ಜಾರಿಗೆ ತಂದಿತು. ಬೂತ್ ಮಟ್ಟವನ್ನು ಬಲಪಡಿಸಿತು. ಟಿಎಂಸಿ ಕಾರ್ಯಕರ್ತರ ಗೂಂಡಾಗಿರಿ ಎದುರು ತಲೆ ಎತ್ತಲು ಪ್ರಯಾಸಪಡುತ್ತಿದ್ದ ಬಿಜೆಪಿ ಕಾರ್ಯಕರ್ತರಿಗೆ ಎಲ್ಲ ರೀತಿಯಲ್ಲೂ ಶಕ್ತಿ ತುಂಬಿತು.



ಕೆಲಸ ಮಾಡಿತು ಪ್ರಧಾನಿ ಮೋದಿ ಚುರುಮುರಿ!

ಕೋಲ್ಕತಾ: ಒಂದು ಕಡೆ ಬಿಜೆಪಿ ನಾಯಕರು ಪಶ್ಚಿಮ ಬಂಗಾಳದಲ್ಲಿ ಸಣ್ಣಸಣ್ಣ ಸಂಘಟನಾ ಸಭೆಗಳನ್ನು ಆಯೋಜಿಸಿ ಕಾರ್ಯಕರ್ತರು ಮತ್ತು ಜನರನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದ್ದರೆ, ಇತ್ತ ಪ್ರಧಾನಿ ನರೇಂದ್ರ ಮೋದಿ ಝಾರ್‌ಗ್ರಾಮದ ಅಂಗಡಿಯೊಂದಕ್ಕೆ ಹೋಗಿ ಚುರುಮುರಿ ತಿಂದಿದ್ದು ಪ್ರಭಾವ ಬೀರಿದೆ. ಅಲ್ಲಿ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಬಿಜೆಪಿ ಗೆದ್ದಿದೆ. ಬಂಗಾಳದಲ್ಲಿ ಮೊದಲ ಹಂತದ ಚುನಾವಣೆಗೂ ಕೆಲ ದಿನಗಳ ಮುನ್ನ, ರಸ್ತೆ ಬದಿಯ ಅಂಗಡಿಯೊಂದರಲ್ಲಿ ಮೋದಿ ಝಾಲ್ಮುರಿ (ಚುರುಮುರಿ) ಖರೀದಿಸಿ ತಿಂದರು. ತ್ರಿಪುರಾದ ಮಕ್ಕಳೊಂದಿಗೆ ಬಂಗಾಳಿಗಳ ನೆಚ್ಚಿನ ಕಾಲ್ಚೆಂಡು ಆಟ ಆಡಿ ಅಲ್ಲಿನವರಿಗೆ ಹತ್ತಿರಾವಾದರು. ಟಿಎಂಸಿಗರು ಮೋದಿ ಅವರ ಈ ತಂತ್ರಗಳನ್ನು ಪುಕ್ಕಟೆ ಪ್ರಚಾರ ಎಂದು ಟೀಕಿಸಿದರೂ, ಇಂಥ ತಂತ್ರಗಳು ಫಲ ನೀಡಿವೆ.

ಮೋದಿ ಮುಖ, ಡಬಲ್ ಎಂಜಿನ್: ಮಮತಾ ಬ್ಯಾನರ್ಜಿ ಅವರ ವರ್ಚಸ್ಸಿಗೆ ಸರಿಸಾಟಿಯಾಗಿ ನಿಲ್ಲಬಲ್ಲ ನಾಯಕ ಬಂಗಾಳ ಬಿಜೆಪಿಯಲ್ಲಿ ಇರಲಿಲ್ಲ. ಹೀಗಾಗಿ ಮೋದಿ ಮುಖವನ್ನೇ ದೊಡ್ಡದಾಗಿ ಬಿಂಬಿಸಲಾಯಿತು. ಪ್ರಚಾರಕ್ಕೆ ಅವರನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲಾಯಿತು. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ರಾಜ್ಯ ಸುತ್ತಿದ ಮೋದಿ, ಚುರುಮುರಿ ಅಂಗಡಿ ಭೇಟಿ, ಹೂಗ್ಲಿನದಿಯಲ್ಲಿ ಬೋಟ್ ಸಂಚಾರದಂತಹ ಪ್ರಚಾರದ ಮೂಲಕ ಜನರಿಗೆ ಹತ್ತಿರವಾದರು. ಅಮಿತ್ ಶಾ ಅವರು ರಾಜ್ಯದಲ್ಲೇ ಹಲವು ದಿನಗಳ ಕಾಲ ಬೀಡುಬಿಟ್ಟು ತೆರೆಯ ಹಿಂದೆ ತಂತ್ರಗಾರಿಕೆ ರೂಪಿಸಿದರು.

ಇವತ್ತಿಗೂ ಬಂಗಾಳದಲ್ಲಿ ಉದ್ಯೋಗ ಖಾತ್ರಿ, ಪಿಎಂ ಕಿಸಾನ್ ಸಮ್ಮಾನ್ ಯೋಜನೆ ಜಾರಿಯಾಗಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದರೆ ಡಬಲ್ ಎಂಜಿನ್ ಸರ್ಕಾರವಾಗುತ್ತದೆ, ಕೇಂದ್ರದ ಯೋಜನೆಗಳ ಲಾಭ ಸಿಗುತ್ತದೆ ಎಂಬುದನ್ನು ಬಿಜೆಪಿ ಮನದಟ್ಟು ಮಾಡಿಕೊಡುವಲ್ಲಿ ಸಫಲವಾಯಿತು. ಮಮತಾ ಸರ್ಕಾರದಲ್ಲಿ ಅಭಿವೃದ್ಧಿಯಲ್ಲಿ ಬಂಗಾಳ ಹಿಂದೆ ಹೋಗುತ್ತಿದೆ, ಭ್ರಷ್ಟಾಚಾರ ಮಿತಿಮೀರಿದೆ ಎಂದು ಮತದಾರರ ಮನಸ್ಸಿನಲ್ಲಿ ಬಿತ್ತುವಲ್ಲಿ ಸಫಲವಾಯಿತು.

ಹೊರಗಿನವರು ವರ್ಸಸ್ ಸ್ಥಳೀಯರು: ಬಿಜೆಪಿ ಗೆದ್ದರೆ, ಬಂಗಾಳ ಅಸ್ಮಿತೆ ಮೇಲೆ ದಾಳಿಯಾಗುತ್ತದೆ. ಉತ್ತರ ಭಾರತದಂತೆ ಮಾಂಸಾಹಾರಕ್ಕೆ ನಿಷೇಧ ಹೇರಿಬಿಡುತ್ತಾರೆ ಎಂಬ ಪ್ರಚಾರವನ್ನು ಮಮತಾ ವ್ಯವಸ್ಥಿತವಾಗಿ ಮಾಡಿದರು. ಬಂಗಾಳದ ಸಂಸ್ಕೃತಿಗೆ ಬಿಜೆಪಿ ವಿರೋಧಿ ಎಂದು ಬಿಂಬಿಸಿದರು. ಇದಕ್ಕೆ ಪ್ರತ್ಯುತ್ತರವನ್ನು ಬಿಜೆಪಿ ನೀಡಿತು. ಬಂಗಾಳಕ್ಕೆ ಭೇಟಿ ನೀಡುವ ನಾಯಕರು (ನಾನ್ ವೆಜಿಟೇರಿಯನ್) ಬಂಗಾಳದ ಮೀನು ಖಾದ್ಯವನ್ನು ಸವಿದು ನಾವು ಮಾಂಸಾಹಾರ ವಿರೋಧಿಗಳಲ್ಲ ಎಂದುಸಾರಿದರು. ಪ್ರಧಾನಿ ಮೋದಿ ಮಾಂಸಾಹಾರವನ್ನೇ ಪ್ರಸಾದವಾಗಿ ನೀಡುವ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸುವ ಮೂಲಕ ಮಮತಾ ವಾದ ಸುಳ್ಳಾಗಿಸಿದರು.

ವಲಸಿಗರ ಸಮಸ್ಯೆ: ಬಂಗಾಳಕ್ಕೆ ಬಾಂಗ್ಲಾದೇಶದಿಂದ ಅಕ್ರಮ ವಲಸಿಗರು ಭಾರಿ ಪ್ರಮಾಣದಲ್ಲಿ ಬರುತ್ತಿದ್ದಾರೆ, ಸ್ಥಳೀಯರ ಉದ್ಯೋಗ ಕಸಿಯುತ್ತಿದ್ದಾರೆ ಎಂಬ ಬಿಜೆಪಿಯ ಪ್ರಚಾರ ಭರ್ಜರಿ ಫಸಲು ತಂದಿದೆ. ವಿಶೇಷ ಮತಪಟ್ಟಿ ಪರಿಷ್ಕರಣೆ ಮೂಲಕ ಸುಮಾರು 1 ಕೋಟಿ ಮತದಾರರನ್ನು ಚುನಾವಣಾ ಆಯೋಗಕ್ಕೆ ಬಿಟ್ಟಿದ್ದರಿಂದ ಹಲವು ಕ್ಷೇತ್ರಗಳಲ್ಲಿ ಮಮತಾ ಅಭ್ಯರ್ಥಿಗಳು ಗೆಲ್ಲುವುದಕ್ಕೆ ತೊಡಕಾಗಿದೆ ಎನ್ನಲಾಗುತ್ತಿದೆ.



ಎಡರಂಗ ಮಣಿಸಿ ಕೇರಳದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ

ಸತತ 10 ವರ್ಷಗಳ ಎಲ್‌ಡಿಎಫ್ ಆಡಳಿತಕ್ಕೆ ತೆರೆ | ಕಾಂಗ್ರೆಸ್ ತೆಕ್ಕೆಗೆ ಮತ್ತೊಂದು ರಾಜ್ಯ | ದಶಕದಲ್ಲಿ ಇದೇ ಮೊದಲು ಸಲ ಎಲ್ಲೂ ಈಗ ಎಡಪಕ್ಷ ಆಡಳಿತ ಇಲ್ಲ

ತಿರುವನಂತಪುರ: ಸತತ 10 ವರ್ಷಗಳಿಂದ ಆಡಳಿತ ನಡೆಸುತ್ತಿದ್ದ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಮೈತ್ರಿಕೂಟಕ್ಕೆ ಈ ಸಲ ಕೇರಳದಲ್ಲಿ ಸೋಲಾಗಿದೆ. ರಾಜ್ಯ ವಿಧಾನಸಭೆಯ 140 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರೆಟಿಕ್ ಫ್ರಂಟ್ (ಯುಡಿಎಫ್) ಸ್ಪಷ್ಟಬಹುಮತದೊಂದಿಗೆ ಅಧಿಕಾರಕ್ಕೆ ಬರುವಲ್ಲಿ ಯಶಸ್ವಿಯಾಗಿದೆ. ಇನ್ನೊಂದೆಡೆ ಬಿಜೆಪಿ ಕೂಡಾ ತನ್ನ ಖಾತೆ ತೆರೆಯುವಲ್ಲಿ ಯಶಸ್ವಿಯಾಗಿದೆ.

ಕೇರಳದಲ್ಲೂ ಸೋಲಿನ ಪರಿಣಾಮ ಇದೀಗ ದೇಶದ ಯಾವುದೇ ರಾಜ್ಯದಲ್ಲೂ ಎಡಪಕ್ಷಗಳ ಆಡಳಿತ ಇಲ್ಲದಂತಾಗಿದೆ. ಈ ಹಿಂದೆ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾದಲ್ಲಿ ಭಾರೀ ಪ್ರಾಬಲ್ಯ ಹೊಂದಿದ್ದ ಎಡಪಕ್ಷಗಳು ಕಳೆದೊಂದು ದಶಕದಿಂದ ಕೇರಳದಲ್ಲಿ ಮಾತ್ರ ಅಸ್ತಿತ್ವ ಉಳಿಸಿಕೊಂಡಿತ್ತು. ಇದೀಗ ಅದು ಕೂಡಾ ಪಕ್ಷದ ಕೈತಪ್ಪಿದೆ.

ಆಡಳಿತ ವಿರೋಧಿ ಅಲೆ: ಸತತ 10 ವರ್ಷಗಳ ಆಡಳಿತ ವಿರೋಧಿ ಅಲೆ, ಪಕ್ಷದ ನಾಯಕರ ಧರ್ಮ ವಿರೋಧಿ ಹೇಳಿಕೆಗಳು, ಸಚಿವರ ವಿರುದ್ಧದ ಭ್ರಷ್ಟಾಚಾರದ ಆರೋಪ, ಯುವ ಸಮೂಹಕ್ಕೆ ಅಗತ್ಯ ಉದ್ಯೋಗ ಸೃಷ್ಟಿಯಲ್ಲಿ ವೈಫಲ್ಯ, ಭಾರೀ ಸಾಲದ ಹೊರೆ, ಕುಟುಂಬ ರಾಜಕಾರಣ, ಶಬರಿಮಲೆಗೆ ಮಹಿಳೆಯರ ಪ್ರವೇಶ ವಿವಾದದಲ್ಲಿ ಸರ್ಕಾರದ ಜನವಿರೋಧಿ ನಿಲುವು ಎಡಪಕ್ಷಗಳಿಗೆ ಮುಳುವಾದರೆ, ಇದರ ಲಾಭ ಪಡೆದು ಒಗ್ಗಟ್ಟಿನಿಂದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಕೂಟ ಹೋರಾಡಿದ ಕಾರಣ ಜಯ ಒಲಿದುಬಂದಿದೆ. ಜೊತೆಗೆ ಕಾಂಗ್ರೆಸ್ ಘೋಷಿಸಿದ್ದ ಕರ್ನಾಟಕದ ಮಾದರಿ ಹಲವು ಗ್ಯಾರಂಟಿ ಯೋಜನೆಗಳು ಕೂಡಾ ಪಕ್ಷಕ್ಕೆ ನೆರವಾಗಿವೆ.

ಇನ್ನು ಬಿಜೆಪಿ ಅಧ್ಯಕ್ಷ ರಾಜೀವ್ ಚಂದ್ರಶೇಖರ್ ನೇತೃತ್ವದ ಪ್ರಚಾರ ರಾಜ್ಯದೆಲ್ಲೆಡೆ ಪಕ್ಷದ ಮತಗಳಿಗೆ ಹೆಚ್ಚಿಸುವಲ್ಲಿ ಮತ್ತು ವಿಧಾನಸಭೆಯಲ್ಲಿ ಖಾತೆ ತೆರೆಸುವಲ್ಲಿ ಪಕ್ಷಕ್ಕೆ ನೆರವಾಗಿದೆ.

ಜಯಕ್ಕೆ ಕಾರಣ

- ಸತತ 10 ವರ್ಷಗಳ ಆಡಳಿತ ವಿರೋಧಿ ಅಲೆಯ ಬಿಸಿಯನ್ನು ಎಲ್‌ಡಿಎಫ್ ಎದುರಿಸಬೇಕಾಯ್ತು
- ಶಬರಿಮಲೆ ಪ್ರಕರಣವನ್ನು ಸಿಪಿಎಂ ಸರ್ಕಾರ ನಿರ್ವಹಿಸಿದ ರೀತಿ ಸರ್ಕಾರಕ್ಕೆ ಹಿನ್ನಡೆ ತಂದಿತು
- ಹೆಚ್ಚು ಶಿಕ್ಷಿತರ ನಾಡಿನಲ್ಲಿ, ಅಗತ್ಯ ಉದ್ಯೋಗ ಸೃಷ್ಟಿಯಲ್ಲಿ ವೈಫಲ್ಯ ಸರ್ಕಾರಕ್ಕೆ ಮುಳುವಾಯಿತು
- ಸಿಪಿಎಂ ತಳಮಟ್ಟದ ಕಾರ್ಯಕರ್ತರ ಪ್ರಮಾಣ ಕುಸಿತ. ಮತದಾರರ ಮತಗಟ್ಟೆಗೆ ತರುವಲ್ಲಿ ವಿಫಲ
- ಧಾರ್ಮಿಕ ನಂಬಿಕೆಗೆ ಧಕ್ಕೆ ತರುವ ಕುರಿತ ಸಿಪಿಎಂ ನಾಯಕರ ಹೇಳಿಕೆಯಿಂದ ಸರ್ಕಾರಕ್ಕೆ ಧಕ್ಕೆ
- ಎಲ್‌ಡಿಎಫ್ ವಿರುದ್ಧ ಕಾಂಗ್ರೆಸ್ ಸೇರಿದಂತೆ ಯುಡಿಎಫ್ ನಾಯಕರ ಯೋಜಿತ ಪ್ರಚಾರದಿಂದ ಫಲ
- ಎಲ್‌ಡಿಎಫ ಸರ್ಕಾರದ ವೈಫಲ್ಯ ಜನರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾದ ಯುಡಿಎಫ್ ನಾಯಕರು
- ಪ್ರಣಾಳಿಕೆಯಲ್ಲಿ ಹಲವು ಗ್ಯಾರಂಟಿ, ಕಲ್ಯಾಣ, ಅಭಿವೃದ್ಧಿ ಕೆಲಸಗಳ ಬಗ್ಗೆ ಕಾಂಗ್ರೆಸ್‌ನಿಂದ ಪ್ರಸ್ತಾಪ

ಕೇರಳ (ಒಟ್ಟು ಸ್ಥಾನ 140 / ಬಹುಮತಕ್ಕೆ 71)				
ಪಕ್ಷ	ಸ್ಥಾನ	2021	ಲಾಭ/ನಷ್ಟ	% ಮತ
ಯುಡಿಎಫ್	89	40	+49	40
ಎಲ್‌ಡಿಎಫ್	35	92	-57	29
ಬಿಜೆಪಿ	3	0	+3	12
ಇತರರು	13	8	+5	19

ಗೆದ್ದ ಪ್ರಮುಖರು

- ರಾಜೀವ್ ಚಂದ್ರಶೇಖರ್(ಬಿಜೆಪಿ)
- ವಿ.ಡಿ. ಸತೀಶನ್ (ಕಾಂಗ್ರೆಸ್)
- ರಮೇಶ್ ಚೆನ್ನಿತ್ತಲ (ಕಾಂಗ್ರೆಸ್)
- ಪಿಣರಾಯಿ ವಿಜಯನ್ (ಎಲ್‌ಡಿಎಫ್)
- ಚಾಂಡಿ ಊಮ್ಮನ್ (ಯುಡಿಎಫ್)

ಸೋತ ಪ್ರಮುಖರು

- ವೀಣಾ ಜಾರ್ಜ್ (ಎಲ್‌ಡಿಎಫ್)
- ಶಿವನ್ ಕುಟ್ಟಿ (ಎಲ್‌ಡಿಎಫ್)
- ವಿ. ಮುರಳೀಧರನ್ (ಬಿಜೆಪಿ)
- ಶೈಲಜಾ ಟೀಚರ್ (ಎಲ್‌ಡಿಎಫ್)



ಕೇರಳ
140
ಒಟ್ಟು ಸ್ಥಾನ
71
ಬಹುಮತಕ್ಕೆ

13 ಸಚಿವರು ಸೋಲು

ಒಂದು ಕಡೆ ಪಿಣರಾಯಿ ವಿಜಯನ್ ಅವರು ಸಿಎಂ ಸ್ಥಾನ ಕಳೆದುಕೊಳ್ಳುತ್ತಿದ್ದರೆ, ಅತ್ತ ಅವರ ಸರ್ಕಾರದಲ್ಲಿ ಸಚಿವರಾಗಿದ್ದ 21 ಮಂದಿಯ ಪೈಕಿ 13 ಜನ ಸೋಲನ್ನು ಕಂಡಿದ್ದಾರೆ. ಇದರೊಂದಿಗೆ ಎಡರಂಗಕ್ಕೆ ಭಾರಿ ಹಿನ್ನಡೆ ಆಗಿದೆ.



ನೇಮಂ ಕ್ಷೇತ್ರದಲ್ಲಿ ಜಯಭೇರಿ ಬಾರಿಸಿದ ಕೇರಳ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರಿಂದ ಸಂಭ್ರಮ.

ಭಾರತದ ಎಲ್ಲೂ ಇದೀಗ ಎಡರಂಗದ ಸರ್ಕಾರ ಇಲ್ಲ!

ನವದೆಹಲಿ: ಕೇರಳದಲ್ಲಿ ಎಡರಂಗದ ಸೋಲಿನೊಂದಿಗೆ ದೇಶದ ಎಲ್ಲೂ ಎಡಪಕ್ಷಗಳ ಸರ್ಕಾರ ಅಸ್ತಿತ್ವದಲ್ಲಿ ಇಲ್ಲವಾದಂತಾಗಿದೆ. ಈ ರೀತಿ ಆಗಿದ್ದು 50 ವರ್ಷದಲ್ಲಿ ಮೊದಲು. ಅಂದರೆ 1977ರಿಂದ ಆರಂಭವಾಗಿ ಈವರೆಗೂ ದೇಶದ ಎಲ್ಲಾದರೂ 1 ಕಡೆ ಎಡರಂಗ ಸರ್ಕಾರ ಇರುತ್ತಿತ್ತು. ಈಗ 50 ವರ್ಷ ಬಳಿಕ ಎಲ್ಲೂ ಇಲ್ಲವಾಗಿದೆ. ಪಶ್ಚಿಮ ಬಂಗಾಳದಲ್ಲಿ 1977ರಿಂದ 2011ರವರೆಗೆ ಸತತ 34 ವರ್ಷ ಅಧಿಕಾರ ನಡೆಸಿತ್ತು. ತ್ರಿಪುರಾದಲ್ಲಿ 1993ರಿಂದ 2018ರವರೆಗೆ ಅಧಿಕಾರ ನಡೆಸಿತ್ತು. ಕೇರಳದಲ್ಲಿ 1980, 1987, 1996, 2006, 2016, 2021ರಲ್ಲಿ ಎಡಪಕ್ಷಗಳು ಗೆದ್ದಿದ್ದವು.

ಸಿಎಂ ಗಾದಿಗೆ ಚೆನ್ನಿತ್ತಲ, ವೇಣು, ಸತೀಶ್ ಸೆಣಸು

ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತವಾಗುತ್ತಲೇ ಮುಂದಿನ ಸಿಎಂ ಯಾರೆಂಬ ಚರ್ಚೆ ಆರಂಭವಾಗಿದೆ. ಪಕ್ಷದ ಹಿರಿಯ ನಾಯಕರಾದ ರಮೇಶ್ ಚೆನ್ನಿತ್ತಲ, ಸತೀಶನ್ ಮುಖ್ಯಮಂತ್ರಿ ಹುದ್ದೆ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ. ಮತ್ತೊಂದೆಡೆ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಕೂಡಾ ಕುರ್ಚಿ ಮೇಲೆ ಟವಲ್ ಹಾಕಿದ್ದಾರೆ ಎಂಬ ವರದಿಗಳಿವೆ. ಹೀಗಾಗಿ ಮುಂದಿನ ಬೆಳವಣಿಗೆ ಸಾಕಷ್ಟು ಕುತೂಹಲ ಕೆರಳಿಸಿದೆ.

ನೆಲೆಯೇ ಇಲ್ಲದ ಕೇರಳದಲ್ಲಿ ಬಿಜೆಪಿಗೆ ನೆಲೆ

ಕೇರಳದಲ್ಲಿ ಬಿಜೆಪಿ ಚಾರಿತ್ರಿಕ ಸಾಧನೆ

ಸಂಘಟನೆಯ ಫಲ | ಇದೇ ಮೊದಲ ಬಾರಿಗೆ 3 ಕ್ಷೇತ್ರಗಳಲ್ಲಿ ಗೆದ್ದ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಸೇರಿ 3 ಬಿಜೆಪಿಗರಿಗೆ ವಿಜಯ ಸುಮಾರು ಶೇ.12ರಷ್ಟು ಮತ ಪಡೆದ ಕೇಸರಿ ಪಕ್ಷದ ನೆಲೆ ಮತ್ತಷ್ಟು ಗಟ್ಟಿ


ತಿರುವನಂತಪುರ: ಕೇರಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ, ಕೇಂದ್ರದ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಸೇರಿ ಪಕ್ಷದಿಂದ ಮೂವರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಈ ಮೂಲಕ ಇದೇ ಮೊದಲ ಬಾರಿ ಬಿಜೆಪಿ ರಾಜ್ಯದಲ್ಲಿ 3 ಸ್ಥಾನ ಗೆದ್ದಿದೆ ಹಾಗೂ ಪಕ್ಷದ ಸೂಕ್ತ ಅಸ್ತಿತ್ವವೇ ಇಲ್ಲದ ರಾಜ್ಯದಲ್ಲಿ ನೆಲೆ ಕಂಡುಕೊಂಡಿದೆ.

ನೇಮಂ, ಚಾತನ್ನೂರ್, ಕಜಕ್ ಕೊಟ್ಟಮ್‌ನಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಶೇ.11.5ರಷ್ಟು ಮತ ಪಡೆದು ನೆಲೆ ಗಟ್ಟಿ ಮಾಡಿಕೊಂಡಿದೆ, ತಿರುವನಂತಪುರ ಹೊರವಲಯ ನೇಮಂ ಕ್ಷೇತ್ರದಲ್ಲಿ ರಾಜೀವ್ ಚಂದ್ರಶೇಖರ್ ಅವರು ಪಿಣರಾಯಿ ವಿಜಯನ್ ಸರ್ಕಾರದಲ್ಲಿ ಸಚಿವರಾಗಿದ್ದ ವಿ. ಶಿವನ್ ಕುಟ್ಟಿ ಅವರ ವಿರುದ್ಧ 4,165 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಅದೇರೀತಿ ಚಾತನ್ನೂರು ಕ್ಷೇತ್ರದಿಂದ ಬಿ.ಬಿ.ಗೋಪಕುಮಾರ್ ಅವರು ಎಲ್‌ಡಿಎಫ್‌ನ ಆರ್.ರಾಜೇಂದ್ರನ್ ಅವರ ವಿರುದ್ಧ 4,402 ಮತಗಳ ಅಂತರದಿಂದ, ಕಜಕೊಟ್ಟಂ ಕ್ಷೇತ್ರದಿಂದ ಸ್ಪರ್ಧಿಸಿದ್ದ ವಿ.ಮುರಳೀಧರನ್ ಅವರು ಎಲ್‌ಡಿಎಫ್‌ನ ಹಾಲಿ ಶಾಸಕ ಕಡಕಂಪಳ್ಳಿ ಸುರೇಂದ್ರನ್ ವಿರುದ್ಧ ಕೇವಲ 300 ಮತಗಳ ಅಂತರದಿಂದ ಗೆದ್ದಿದ್ದಾರೆ.

ಪಕ್ಷ ಸಂಘಟಕ ರಾಜೀವ್: ರಾಜೀವ್ ಚಂದ್ರಶೇಖರ್ ಅವರು ಕೇರಳ ವಿಧಾನಸಭೆಗೆ ಇದೇ ಮೊದಲ ಬಾರಿಗೆ ಸ್ಪರ್ಧಿಸುತ್ತಿದ್ದು, ಮೊದಲ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ತಿರುವನಂತಪುರದಿಂದ ಸ್ಪರ್ಧಿಸಿದ್ದ ಅವರು ಕಾಂಗ್ರೆಸ್‌ನ ಶಶಿ ತರೂರ್ ವಿರುದ್ಧ ಅಲ್ಪಮತಗಳ ಅಂತರದಿಂದ ಸೋಲುಂಡಿದ್ದರು. ಆದರೆ ಕಳೆದ ವರ್ಷ ತಿರುವನಂತಪುರ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಅಭೂತಪೂರ್ವ ಜಯ ಸಾಧಿಸಿತ್ತು. ಅಂದಿನಿಂದಲೇ ರಾಜ್ಯದಲ್ಲಿ ಬಿಜೆಪಿ ಪ್ರಮುಖ ಪಕ್ಷವಾಗಿ ಹೊರಹೊಮ್ಮುವ ಸುಳಿವು ಸಿಕ್ಕಿತ್ತು.

ಇದು ಅತ್ಯಂತ ಸಂತಸದ ದಿನ



ನನಗೆ ಅತೀವ ಸಂತಸವಾಗಿದೆ. ಈ ಗೆಲುವಿಗೆ ಕಾರಣವಾದ ಬಿಜೆಪಿಯ ಎಲ್ಲ ಕಾರ್ಯಕರ್ತರ ಬಗ್ಗೆ ಹೆಮ್ಮೆ ಪಡುತ್ತೇನೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನನಗೆ ಸೇವೆ ಸಲ್ಲಿಸಲು ಅವಕಾಶ ನೀಡಿದ್ದಕ್ಕಾಗಿ ನೇಮಂ ಜನರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

- **ರಾಜೀವ್ ಚಂದ್ರಶೇಖರ್** ಕೇರಳ ಬಿಜೆಪಿ ಅಧ್ಯಕ್ಷ

ಅಸ್ಸಾಂನಲ್ಲಿ ಕಮಲದ ಹ್ಯಾಟ್ರಿಕ್ 'ಕಮಾಲ್': ಸ್ಥಾನ ಗಳಿಕೆಯಲ್ಲಿ ಭರ್ಜರಿ ಶತಕ!


100+ ಸ್ಥಾನ ಗಳಿಸಿ ಬಿಜೆಪಿ ಮೈತ್ರಿಕೂಟದಿಂದ ದಾಖಲೆ | 30ರ ಗಡಿ ದಾಟಲೂ ವಿಫಲವಾದ ಕಾಂಗ್ರೆಸ್ | ಉಳಿದ ಅನೇಕ ಪ್ರತಿಪಕ್ಷಗಳು ಧೂಳೀಪಟ

ನವದೆಹಲಿ: ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ನಿರೀಕ್ಷೆಯಂತೆ ಬಿಜೆಪಿ ಸತತ ಮೂರನೇ ಬಾರಿ ಗೆಲುವು ಸಾಧಿಸುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಿದೆ. ಈ ಮೂಲಕ ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ಇತಿಹಾಸದಲ್ಲಿ ಬಿಜೆಪಿ ಹೊಸ ಇತಿಹಾಸ ಬರೆದಿದೆ. ಈ ಬಾರಿ ಬಿಜೆಪಿಗೆ ಸೋಲುಣಿಸಿಯೇ ಸಿದ್ಧ ಎಂಬ ವಿಶ್ವಾಸದಲ್ಲಿದ್ದ ಕಾಂಗ್ರೆಸ್ ಹೀನಾಯ ಸಾಧನೆ ತೋರುವ ಮೂಲಕ ತೀವ್ರ ಮುಖಭಂಗಕ್ಕೊಳಗಾಗಿದೆ.

ಚುನಾವಣೋತ್ತರ ಸಮೀಕ್ಷೆಗಳ ಪ್ರಕಾರ ಅಸ್ಸಾಂನಲ್ಲಿ ಈ ಬಾರಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಗೆಲುವು ಪಕ್ಕಾ ಆಗಿತ್ತು. ಆ್ಯಕ್ಸಿಸ್ ಮೈ ಇಂಡಿಯಾ ಸೇರಿ ಹಲವು ಸಮೀಕ್ಷೆಗಳು ಅಸ್ಸಾಂನಲ್ಲಿ ಬಿಜೆಪಿ ಭಾರೀ ಗೆಲುವಿನ ಭವಿಷ್ಯ ನುಡಿದಿದ್ದವು. ಆ ಸಮೀಕ್ಷೆಗಳೆಲ್ಲ ಈಗ ನಿಜವಾಗಿದೆ. ಮುಖ್ಯಮಂತ್ರಿ ಹೇಮಂತ್ ಬಿಸ್ವಾ ಶರ್ಮಾ ಅವರ ವರ್ಚಸ್ಸು ಮತ್ತು ಮೋದಿ ಅಲೆ ಎದುರು ಗೌರವ್ ಗಗೋಯ್ ನೇತೃತ್ವದ ಕಾಂಗ್ರೆಸ್ ಭಾರೀ ಪ್ರಚಾರದ ಹೊರತಾಗಿಯೂ ಹೆಚ್ಚಿನ ಸ್ಥಾನಗಳಿಸುವಲ್ಲಿ ವಿಫಲವಾಯಿತು. ಸ್ವತಃ ಕಾಂಗ್ರೆಸ್ ರಾಜ್ಯಾಧ್ಯಕ್ಷರಾದ ಗೌರವ್ ಗಗೋಯ್ ಅವರೇ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಬೇಕಾಯಿತು.

ಒಟ್ಟು 126 ಸ್ಥಾನ ಬಲದ ಅಸ್ಸಾಂನಲ್ಲಿ ಕಳೆದ ಬಾರಿಯ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಒಕ್ಕೂಟ 75 ಸ್ಥಾನ ಗಳಿಸಿತ್ತು. ಆದರೆ ಈ ಬಾರಿ 90ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ಮೂಲಕ ಆಡಳಿತ ವಿರೋಧಿ ಅಲೆ ಮೆಟ್ಟಿನಿಂತು ಉತ್ತಮ ಸಾಧನೆ ತೋರಿದೆ. ಇದು ಅಸ್ಸಾಂನಲ್ಲಿ ಬಿಜೆಪಿ ಮೈತ್ರಿಕೂಟದ ಈವರೆಗಿನ ಅತ್ಯುತ್ತಮ ಪ್ರದರ್ಶನವಾಗಿದೆ.

ಮತದಾರರಿಂದ ತಕ್ಕ ಪಾಠ



ಗೌರವ್ ಗೊಗೊಯ್ ಅವರು ಪವನ್ ಖೇರಾ ಅವರೊಂದಿಗೆ ಕುಳಿತು ಪತ್ರಿಕಾಗೋಷ್ಠಿ ನಡೆಸದಿದ್ದರೆ ಅವರು ಚುನಾವಣೆಯಲ್ಲಿ ಗೆಲ್ಲುತ್ತಿದ್ದರು. ಖೇರಾ ಒಬ್ಬ ಅಸ್ಸಾಮಿ ಮಹಿಳೆಯನ್ನು ಕೆಣಕಲು ಬಯಸಿದ್ದರು. ಅದು ಜನರನ್ನು ಭಾವುಕರನ್ನಾಗಿಸಿತು. ಅದಕ್ಕಾಗಿ ಮತದಾರರು ಅವರನ್ನು ಪೇಡಾ (ಅಪ್ಪಚ್ಚಿ) ರೀತಿ ಮಾಡಿದರು.

- **ಹಿಮಂತ ಬಿಸ್ವಾ ಶರ್ಮಾ** ಅಸ್ಸಾಂ ಸಿಎಂ

2016ರ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ 86 ಸ್ಥಾನ ಗೆದ್ದಿದ್ದೇ ಈವರೆಗಿನ ಅತ್ಯುತ್ತಮ ಸಾಧನೆಯಾಗಿತ್ತು. ಕಳೆದ ಚುನಾವಣೆಯಲ್ಲಿ 50ಕ್ಕೂ ಹೆಚ್ಚು ಸ್ಥಾನ ಪಡೆದಿದ್ದ ಮೈತ್ರಿಕೂಟ ಗೆದ್ದ ಈ ಬಾರಿ 30 ಗಡಿದಾಟಲು ಪರದಾಡಿದೆ. ಕಾಂಗ್ರೆಸ್‌ನ ಗೌರವ್ ಗಗೋಯ್, ರಾಯ್‌ಜೋರ್ ದಳದ ಅಖಿಲ್ ಗಗೋಯ್ ಮತ್ತು ಎಜೆಪಿಯ ಲುರಿಂಜ್ಯೋತಿ ಗಗೋಯ್ ಅವರ 3ಜಿ ಮೈತ್ರಿಕೂಟ ಈ ಬಾರಿ ಕಮಾಲ್ ಮಾಡಲು ವಿಫಲವಾಗಿದೆ.


ಬಿಜೆಪಿ ಗೆದ್ದಿದ್ದು ಹೇಗೆ?

- ಹಿಮಂತ ಉತ್ತಮ ನಾಯಕತ್ವ, ಉತ್ತಮ ಆಡಳಿತದಿಂದ ಪಕ್ಷಕ್ಕೆ ಹೆಚ್ಚಿನ ಮತ
- ಕಳೆದ 15 ವರ್ಷಗಳಲ್ಲಿ ಕೈಗೊಂಡ ಅಭಿವೃದ್ಧಿ ಕೆಲಸ ಜನರಿಗೆ ತಲುಪಿಸುವಲ್ಲಿ ಬಿಜೆಪಿ ಸಂಪೂರ್ಣ ಯಶಸ್ವಿ
- ತನ್ನ ಮತದಾರರನ್ನು ಹೆಚ್ಚು ಸಂಖ್ಯೆಯಲ್ಲಿ ಮತಗಟ್ಟೆಗೆ ಕರೆತರುವಲ್ಲಿ ಬಿಜೆಪಿ ಕಾರ್ಯಕರ್ತರು ಯಶಸ್ವಿಯಾದರು
- ಬಾಂಗ್ಲಾದೇಶಿಗಳ ಅಕ್ರಮ ಒಳನುಸುಳುವಿಕೆ, ಲ್ಯಾಂಡ್– ಲವ್ ಜಿಹಾದ್ ತಡೆಯ ಬಿಜೆಪಿ ಭರವಸೆ ಫಲ ಕೊಟ್ಟಿದೆ
- ಗೃಹಲಕ್ಷ್ಮೀ, ಲಖಪತಿ ದೀದಿ ಸೇರಿ ಹಲವು ಮಹಿಳಾ ಕೇಂದ್ರೀಯ ಭರವಸೆಗಳಿಂದ ಲಾಭ
- ಇನ್ನೊಂದೆಡೆ ಕಾಂಗ್ರೆಸ್‌ನಲ್ಲಿನ ಒಳಜಗಳ, ನಾಯಕತ್ವದ ಕೊರತೆ ಪಕ್ಷಕ್ಕೆ ದೊಡ್ಡಮಟ್ಟದಲ್ಲಿ ಮುಳುವಾಯಿತು
- ರಾಜ್ಯದಲ್ಲಿ ಬಿಜೆಪಿ ಸರ್ಕಾರ ಟೀಕಿಸಲು ಕಾಂಗ್ರೆಸ್ ನಾಯಕರಿಗೆ ದೊಡ್ಡ ಅಸ್ತ್ರಗಳೇ ಸಿಕ್ಕಲಿಲ್ಲ, ಇದೂ ಸೋಲಿಗೆ ಕಾರಣ.

ಅಸ್ಸಾಂ (ಒಟ್ಟು ಸ್ಥಾನ 126 / ಬಹುಮತಕ್ಕೆ 64)				
ಪಕ್ಷ	ಸ್ಥಾನ	2021	ಲಾಭ/ನಷ್ಟ	% ಮತ
ಬಿಜೆಪಿ	102	73	+29	43
ಕಾಂಗ್ರೆಸ್	21	31	-10	29
ಎಐಯುಡಿಎಫ್	2	16	-14	5
ಇತರೆ	1	6	-5	23

ಗೆದ್ದ ಪ್ರಮುಖರು

- ಹಿಮಂತ ಬಿಸ್ವ ಶರ್ಮಾ (ಬಿಜೆಪಿ)
- ಗೌರವ್ ಗೊಗೊಯ್ (ಕಾಂಗ್ರೆಸ್)
- ಬದ್ರುದ್ದೀನ್ ಅಜ್ಮಲ್ (ಎಐಯುಡಿಎಫ್)
- ಪ್ರದ್ಯುತ್ ಬೋರ್ಡೋಲೋಯಿ (ಬಿಜೆಪಿ)



ಸೋತ ಪ್ರಮುಖರು

- ಭೂಪೇನ್ ಬೋರಾ (ಬಿಜೆಪಿ)
- ದೇವವ್ರತ ಸೈಕಿಯಾ (ಕಾಂಗ್ರೆಸ್)
- ಮೀರಾ ಗೋಸ್ವಾಮಿ (ಕಾಂಗ್ರೆಸ್)



ಜಯ ಗಳಿಸಿದ ಬಳಿಕ ಹಾಲಿ ಸಿಎಂ, ಬಿಜೆಪಿಯ ಹಿಮಂತ ಬಿಸ್ವ ಶರ್ಮಾ ಸಂಭ್ರಮಾಚರಣೆ.

2ನೇ ಬಾರಿ ಸಿಎಂ ಆಗಲಿರುವ ಹಿಮಂತ ಬಿಸ್ವ ಶರ್ಮಾ

ಅಸ್ಸಾಂನಲ್ಲಿ ಬಿಜೆಪಿಯ ಅಭೂತಪೂರ್ವ ಗೆಲುವಿನ ಹಿಂದೆ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ನಾಯಕತ್ವ ಪ್ರಮುಖ ಪಾತ್ರವಹಿಸಿರುವ ಹಿನ್ನೆಲೆಯಲ್ಲಿ ಅವರು ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವುದು ಪಕ್ಕಾ ಆಗಿದೆ. 2021ರಲ್ಲಿ ಹಿಮಂತ ಬಿಸ್ವ ಶರ್ಮಾ ಅವರು ಮೊದಲ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಮೂಲತಃ ಕಾಂಗ್ರೆಸ್ಸಿಗರಾದ ಬಿಸ್ವಾ ಅವರು 2015ರಲ್ಲಿ ಬಿಜೆಪಿ ಸೇರಿದ್ದು, 2016ರ ಚುನಾವಣೆಯಲ್ಲಿ ಬಿಜೆಪಿ ಗೆಲುವಿನಲ್ಲಿ ಮಹತ್ವದ ಪಾತ್ರವಹಿಸಿದ್ದರು. ಆ ಬಳಿಕ ಪಕ್ಷದ ಪ್ರಮುಖ ನಾಯಕನಾಗಿ ಬೆಳೆದ ನೇರಾನೇರ ಮಾತಿಗೆ ಹೆಸರುವಾಸಿ.

ಚುನಾವಣಾ ಚೋರಿ



ಬಿಜೆಪಿ ಚುನಾವಣೆ ಕದ್ದಿದ್ದಕ್ಕೆ ಅಸ್ಸಾಂ ಮತ್ತು ಬಂಗಾಳ ಸ್ಪಷ್ಟ ಉದಾಹರಣೆ. ಬಂಗಾಳದಲ್ಲಿ 100ಕ್ಕೂ ಹೆಚ್ಚು ಸ್ಥಾನಗಳನ್ನು ಕದಿಯಲಾಗಿದೆ ಎಂಬ ಮಮತಾ ಬ್ಯಾನರ್ಜಿ ಅವರ ಮಾತಿಗೆ ನಮ್ಮ ಸಹಮತವಿದೆ.

- **ರಾಹುಲ್ ಗಾಂಧಿ** ಲೋಕಸಭೆ ವಿಪಕ್ಷ ನಾಯಕ


ಕಾಂಗ್ರೆಸ್‌ಗೆ ಭವಿಷ್ಯವಿಲ್ಲ



ರಾಹುಲ್ ಗಾಂಧಿ ಮೈತ್ರಿಕೂಟ ಮುನ್ನಡೆಸುವಲ್ಲಿ ವಿಫಲರಾಗಿದ್ದಾರೆ. ಚುನಾವಣಾ ಫಲಿತಾಂಶ ವಿದ್ದರೂ ರಜೆ ಕಳೆಯಲು ಅವರು ವಿದೇಶಕ್ಕೆ ಹೋಗಿದ್ದಾರೆ. ಮೈತ್ರಿ ಪಾಲುದಾರರ ನಡುವೆ ಯಾವುದೇ ಸಮನ್ವಯವಿಲ್ಲ.

- **ಶೆಹಜಾದ್ ಪೂನಾವಾಲಾ** ಬಿಜೆಪಿ ರಾಷ್ಟ್ರೀಯ ವಕ್ತಾರ


ಮೋದಿಗೆ ಸಂದ ಜಯ



ಕೆಲವು ರಾಜ್ಯಗಳಲ್ಲಿ ಎನ್‌ಡಿಎಗೆ ದೊರೆತ ಗೆಲುವು, ಪ್ರಧಾನಿ ಮೋದಿಯವರ ನಾಯಕತ್ವ ಮತ್ತು ವಿಕಸಿತ ಭಾರತ ದೃಷ್ಟಿಕೋನದ ಬಗ್ಗೆ ಜನರ ನಿರಂತರ ಮತ್ತು ವೃದ್ಧಿಸುತ್ತಿರುವ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ.

- **ಚಂದ್ರಬಾಬು ನಾಯ್ಡು** ಆಂಧ್ರಪ್ರದೇಶ ಸಿಎಂ

ಅಭೂತಪೂರ್ವ ಗೆಲುವು



ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ವಿಜಯಶಾಲಿ ತಮಿಳಗ ವೆಟ್ರಿ ಕಳಗಂನ ಅಧ್ಯಕ್ಷ ತಿರು ವಿಜಯ್ ಮತ್ತು ಅವರ ಪಕ್ಷದ ಸದಸ್ಯರಿಗೆ ನನ್ನ ಅಭಿನಂದನೆಗಳು.

- **ರಜನೀಕಾಂತ್** ನಟ

ಕೇಂದ್ರಾಡಳಿತ ಪುದುಚೇರಿಯಲ್ಲಿ ಸತತ 2ನೇ ಸಲ ಎನ್‌ಡಿಎಗೆ ವಿಜಯ

ಎನ್‌ಆರ್ ಕಾಂಗ್ರೆಸ್‌ಗೆ ಸ್ಪಷ್ಟ ಜನಾದೇಶ | ಎನ್.ರಂಗಸ್ವಾಮಿ ಸಿಎಂ ಕುರ್ಚಿ ಸುಭದ್ರ | 20 ವರ್ಷದ ಬಳಿಕ ಪಕ್ಷವೊಂದು ಸತತ 2ನೇ ಬಾರಿ ಅಧಿಕಾರಕ್ಕೆ ಬಂದಿದ್ದು ಮೊದಲು

ಪುದುಚೇರಿ: 2021ರಿಂದ ಪುದುಚೇರಿಯಲ್ಲಿ ಅಧಿಕಾರದಲ್ಲಿರುವ ಆಲ್ ಇಂಡಿಯಾ ಎನ್‌ಆರ್ ಕಾಂಗ್ರೆಸ್ (ಎಐಎನ್‌ಆರ್‌ಸಿ) ನೇತೃತ್ವದ ಎನ್‌ಡಿಎ ಈ ಬಾರಿಯೂ ಸ್ಪಷ್ಟ ಜನಾದೇಶದೊಂದಿಗೆ ಗೆಲುವಿನ ನಗೆ ಬೀರಿದೆ. ಮುಖ್ಯಮಂತ್ರಿ ಎನ್. ರಂಗಸ್ವಾಮಿ ಅವರ ನಾಯಕತ್ವದಲ್ಲಿ ಎಐಎನ್‌ಆರ್‌ಸಿ–ಬಿಜೆಪಿ ಮೈತ್ರಿ 2ನೇ ಅವಧಿಗೆ ಮರಳುವ ಮೂಲಕ ಪುದುಚೇರಿ ರಾಜಕೀಯ ಇತಿಹಾಸದಲ್ಲಿ ಮಹತ್ವದ ಬದಲಾವಣೆ ಸೃಷ್ಟಿಸಿದೆ. ಇಲ್ಲಿ 2006ರ ನಂತರ ಒಂದು ಸರ್ಕಾರ ಮರು ಆಯ್ಕೆಯಾಗಿರುವುದು ಇದೇ ಮೊದಲು ಎಂಬುದು ವಿಶೇಷ.

ಈ ಚುನಾವಣೆಯಲ್ಲಿ ಎಐಎನ್‌ಆರ್‌ಸಿ, ಬಿಜೆಪಿ, ಎಐಎಡಿಎಂಕೆ ಹಾಗೂ ಎಲ್‌ಜೆಕೆ ಪಕ್ಷಗಳನ್ನು ಒಳಗೊಂಡ ಎನ್‌ಡಿಎ ಹಾಗೂ ಕಾಂಗ್ರೆಸ್, ಡಿಎಂಕೆ, ವಿಸಿಕೆಯನ್ನೊಳಗೊಂಡ ಇಂಡಿಯಾ ಕೂಟದ ನಡುವೆ ಪ್ರಧಾನ ಸ್ಪರ್ಧೆ ಇತ್ತು. ನಟ ವಿಜಯ್ ಅವರ ಟಿವಿಕೆ ಸೇರಿದಂತೆ ಸಣ್ಣ ಪಕ್ಷಗಳೂ ಕಣದಲ್ಲಿದ್ದವು. ಆದರೆ ಎನ್‌ಡಿಎ ಅಭಿವೃದ್ಧಿ ಕಾರ್ಯಗಳು, ಸ್ಥಿರ ನಾಯಕತ್ವ ಮತ್ತು ಸ್ಥಳೀಯ ಸಮಸ್ಯೆಗಳ ಸೂಕ್ಷ್ಮ ನಿರ್ವಹಣೆ ಜನರ ಹೃದಯ ಗೆದ್ದಿವೆ. ಇತ್ತ ವಿಪಕ್ಷಗಳಲ್ಲಿನ ಸೀಟು ಹಂಚಿಕೆ ಗೊಂದಲ ಹಾಗೂ ಒಮ್ಮತದ ಕೊರತೆ ಎನ್‌ಡಿಎಗೆ ಲಾಭ ತಂದುಕೊಟ್ಟಿವೆ.



ದಾಖಲೆ ಮತದಾನ: ಈ ಬಾರಿ ಪುದುಚೇರಿ ಚುನಾವಣೆಯಲ್ಲಿ ದಾಖಲೆಯ ಶೇ.91.23 ಮತದಾನವಾಗಿದೆ. 2006ರ ಚುನಾವಣೆಯಲ್ಲಿ ಶೇ.86ರಷ್ಟು ಮತದಾನವಾಗಿತ್ತು. ಆ ಬಳಿಕ ಇದೇ ಮೊದಲ ಬಾರಿ ಮತದಾರರು ಚುನಾವಣಾ ಪ್ರಕ್ರಿಯೆಯಲ್ಲಿ ಬಲವಾದ ಭಾಗವಹಿಸುವಿಕೆ ತೋರಿದ್ದಾರೆ.

ಎನ್‌ಡಿಎ ಗೆದ್ದಿದ್ದು ಹೇಗೆ?

- ಸೀಟು ಹಂಚಿಕೆ ಗೊಂದಲ ಇತ್ಯರ್ಥಪಡಿಸುವಲ್ಲಿ ಎಐಎನ್‌ಆರ್‌ಸಿ, ಬಿಜೆಪಿ, ಎಐಎಡಿಎಂಕೆ ಮೈತ್ರಿಕೂಟ ಯಶಸ್ವಿ
- ಹಾಲಿ ಮುಖ್ಯಮಂತ್ರಿ, ರಂಗಸ್ವಾಮಿ ವ್ಯಕ್ತಿತ್ವ ಕೇಂದ್ರಾಡಳಿತ ಪ್ರದೇಶದಲ್ಲಿ ಮತ್ತೆ ಎನ್‌ಡಿಎ ಕೈಹಿಡಿದಿದೆ
- ಜನಸಾಮಾನ್ಯರಿಗೆ ಕೈಗೆಟುವ ಸಿಎಂ ಎಂಬ ಹಿರಿಮೆ ಅವರಿಗೆ ಎದುರಾಳಿಗಳೇ ಇಲ್ಲದಂತೆ ಮಾಡಿದೆ
- ಬಿಜೆಪಿ ಜತೆ ಸಹಯೋಗ ಅಭಿವೃದ್ಧಿಗೆ ಪೂರಕ ಎಂಬ ಜನರ ನಿಲುವು ಕೂಟಕ್ಕೆ ಹೆಚ್ಚಿನ ಲಾಭ ತಂದಿದೆ
- ಕೇಂದ್ರ, ರಾಜ್ಯದ ಯೋಜನೆಗಳು ನೇರವಾಗಿ ತಲುಪುವಲ್ಲಿ ನೋಡಿಕೊಳ್ಳುವಲ್ಲಿ ಎನ್‌ಡಿಎ ಕೂಟ ಯಶಸ್ವಿ
- ಇನ್ನೊಂದೆಡೆ ಡಿಎಂಕೆ, ಕಾಂಗ್ರೆಸ್ ಮೈತ್ರಿ ಬಿಕ್ಕಟ್ಟು ಕೂಡಾ ಎನ್‌ಡಿಎ ಕೂಟಕ್ಕೆ ನೆರವು ತಂದಿಕೊಟ್ಟಿತು

ಪುದುಚೇರಿ (ಒಟ್ಟು ಸ್ಥಾನ 30 / ಬಹುಮತಕ್ಕೆ 16)				
ಪಕ್ಷ	ಸ್ಥಾನ	2021	ಲಾಭ/ನಷ್ಟ	% ಮತ
ಎನ್‌ಆರ್ ಕಾಂಗ್ರೆಸ್	18	16	+2	36
ಡಿಎಂಕೆ+	6	8	-2	35
ಟಿವಿಕೆ	3	--	+3	17
ಇತರರು	3	6	-3	12

ಗೆದ್ದ ಪ್ರಮುಖರು

- ರಂಗಸ್ವಾಮಿ (ಎನ್‌ಆರ್ ಕಾಂಗ್ರೆಸ್)
- ನಮಃಶಿವಾಯಂ (ಬಿಜೆಪಿ)
- ಎನ್ ಸ್ವಾಮಿ (ಎನ್‌ಆರ್ ಕಾಂಗ್ರೆಸ್)

ಸೋತ ಪ್ರಮುಖರು

- ರಾಮಲಿಂಗಂ (ಬಿಜೆಪಿ)
- ಎಂ. ವೈದ್ಯನಾಥನ್ (ಕಾಂಗ್ರೆಸ್)


ಬೈಕಲ್ಲಿ ಓಡಾಡುವ ರಂಗಸ್ವಾಮಿ ಸಿಎಂ ಕುರ್ಚಿ ಭದ್ರ: ಪಟ್ಟಾಭಿಷೇಕ ಖಚಿತ



ಬೈಕ್‌ನಲ್ಲಿ ಸಂಚರಿಸುವ ಹಾಗೂ ಬ್ಯಾಡ್ಮಿಂಟನ್ ಮೇಲೆ ಪ್ರೀತಿ ಹೊಂದಿರುವ ಪುದುಚೇರಿ ಮುಖ್ಯಮಂತ್ರಿ ಎನ್. ರಂಗಸ್ವಾಮಿ ಅವರ ಸಿಎಂ ಪಟ್ಟ ಮತ್ತೆ ಭದ್ರವಾಗಿದೆ. ಅವರು ಕಾಂಗ್ರೆಸ್‌ನ ವಿ. ವಿನಾಯಗಂ ಅವರನ್ನು 4,441 ಮತಗಳ ಅಂತರದಿಂದ ಸೋಲಿಸಿ, ತಟ್ಟಾಂಚಾವಡಿ ಕ್ಷೇತ್ರದಿಂದ ಭರ್ಜರಿ ಗೆಲುವು ಸಾಧಿಸಿದ್ದಾರೆ. ಈ ಗೆಲುವಿನೊಂದಿಗೆ ಅವರ ಸಿಎಂ ಕುರ್ಚಿ ಸಂಪೂರ್ಣ ಭದ್ರವಾಗಿದ್ದು, 5ನೇ ಬಾರಿ ಮುಖ್ಯಮಂತ್ರಿಯಾಗಿ ದಾಖಲೆ ನಿರ್ಮಿಸಲಿದ್ದಾರೆ. ಅವರ ಸರಳ ಜೀವನಶೈಲಿ, ಜನರ ಮುಖ್ಯಮಂತ್ರಿ) ಎಂಬ ಜನಪ್ರಿಯತೆ, ಅಭಿವೃದ್ಧಿ ಕಾರ್ಯಗಳು ಮತ್ತು ಸ್ಥಿರ ನಾಯಕತ್ವವು ಈ ಗೆಲುವಿಗೆ ಪ್ರಮುಖ ಕಾರಣಗಳಾಗಿವೆ.

ಸುದ್ದಿ ಸಿಂಚನ

ಸೌದಿ: ಬಾಸ್ಕೆಟ್‌ಬಾಲ್ ಪಂದ್ಯ ವೇಳೆ ಕುಸಿದು ಮೂಡುಬಿದಿರೆ ಮೂಲದ ವಿದ್ಯಾರ್ಥಿ ವಿಧಿವಶ



ಮೂಡುಬಿದಿರೆ: ಬಾಸ್ಕೆಟ್ ಬಾಲ್ ಪಂದ್ಯಾಟದ ವೇಳೆ ಕ್ರೀಡಾಪಟುವೊಬ್ಬರು ಕುಸಿದು ಬಿದ್ದು ಮೃತಪಟ್ಟ ಘಟನೆ ಸೌದಿ ಅರೇಬಿಯಾದ ದಮ್ಮಾಮ್‌ನಲ್ಲಿ ನಡೆದಿದೆ. ಮೂಡುಬಿದಿರೆ ಕೋಟೆಬಾಗಿಲು ನಿವಾಸಿ ರಿಯಾಝ್ ಪುತ್ರ ರಯ್ಯಾನ್ (16) ಮೃತರು. ರಿಯಾಝ್ ಕುಟುಂಬ ದಮ್ಮಾಮ್‌ನಲ್ಲಿ ವಾಸವಾಗಿದ್ದು, ರಯ್ಯಾನ್ ಅಲ್ಲಿಯೇ ವಿದ್ಯಾಭ್ಯಾಸ ಮಾಡುತ್ತಿದ್ದರು. ಬಾಸ್ಕೆಟ್ ಬಾಲ್ ಫೈನಲ್ ಪಂದ್ಯದ ವೇಳೆ ರಯ್ಯಾನ್ ಕುಸಿದುಬಿದ್ದು ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ದಾರಿ ದೀಪದ ಕಬ್ಬಿಣದ ಕಂಬಕ್ಕೆ ಮಿನಿ ಟೆಂಪೋ ಡಿಕ್ಕಿ: ಚಾಲಕ ಪಾರು



ಮೂಲ್ಕಿ: ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಮುಕ್ಕ ಜಂಕ್ಷನ್ ಬಳಿ ಮಿನಿ ಟೆಂಪೋ ಚಾಲಕನ ನಿಯಂತ್ರಣ ತಪ್ಪಿ ದಾರಿ ದೀಪದ ಕಬ್ಬಿಣದ ಕಂಬಕ್ಕೆ ಡಿಕ್ಕಿ ಹೊಡೆದಿದ್ದು ಚಾಲಕ ಮೈಸೂರು ಸಾತಿಗಳ್ಳಿ ನಿವಾಸಿ ವೆಂಕಟೇಶ್ ಅಲ್ಪ ಸ್ವಲ್ಪ ಗಾಯಗಳೊಂದಿಗೆ ಪವಾಡ ಸದೃಶ ಪಾರಾದ ಘಟನೆ ನಡೆದಿದೆ. ಚಾಲಕ ವೆಂಕಟೇಶ್ ಮೈಸೂರಿನಿಂದ ಉಡುಪಿ ಕಡೆಗೆ ಬಾಳೆ ಎಲೆ ಹೇರಿಕೊಂಡು ಬರುತ್ತಿದ್ದ ವೇಳೆ ಸೋಮವಾರ ಮುಂಜಾನೆ ವಾಹನ ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿ ಡಿವೈಡರ್‌ನಲ್ಲಿದ್ದ ದಾರಿದೀಪದ ಕಬ್ಬಿಣದ ಕಂಬಕ್ಕೆ ಡಿಕ್ಕಿ ಹೊಡೆದಿದೆ. ಅಪಘಾತದಿಂದ ಮಿನಿ ಟೆಂಪೋ ಎದುರು ಭಾಗ ಸಂಪೂರ್ಣ ಹಾನಿಯಾಗಿದ್ದು ಅಪಘಾತದಿಂದ ಕೆಲ ಹೊತ್ತು ಹೆದ್ದಾರಿ ಸಂಚಾರ ಅಸ್ತವ್ಯಸ್ತ ಉಂಟಾಗಿದ್ದು ಮಂಗಳೂರು ಉತ್ತರ ಸಂಚಾರಿ ಠಾಣಾ ಪೊಲೀಸರು ಅಪಘಾತಕ್ಕೀಡಾದ ವಾಹನ ತೆರವುಗೊಳಿಸಿದ್ದಾರೆ.

ಕನ್ನಡ ನಾಡು, ನುಡಿಯ ಜೀವನಾಡಿ ಕಸಾಪ

ವಿಶ್ವೇಶ್ವರಯ್ಯ ಅವರ ಒತ್ತಾಸೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಆಶ್ರಯದಿಂದ ರೂಪುಗೊಂಡ ಕನ್ನಡ ಸಾಹಿತ್ಯ ಪರಿಷತ್



• **ಡಾ| ಮುರಲೀ ಮೋಹನ್ ಚೂಂತಾರು,** ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ ಮಂಗಳೂರು. ಬಾಯಿ ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರು.

ಕನ್ನಡ ಸಾಹಿತ್ಯ ಪರಿಷತ್ 1915 ಮೇ 5ರಂದು ಶ್ರೀ ಕೃಷ್ಣ ರಾಜ ಪರಿಷನ್ಮಂದಿರದಲ್ಲಿ ಆಗಿನ ಮೈಸೂರು ಅರಸರಾಗಿದ್ದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ಸ್ಥಾಪಿಸಲ್ಪಟ್ಟಿತ್ತು. ಆರಂಭವಾಗುವಾಗ ಕರ್ನಾಟಕ ಸಾಹಿತ್ಯ ಪರಿಷತ್ ಎಂದು ನಾಮಕರಣಗೊಂಡರೂ ಮುಂದೆ 1935ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಎಂದು ಮರುನಾಮಕರಣಗೊಂಡಿತ್ತು. ಕನ್ನಡ ನಾಡಿನ ಅಸ್ಮಿತೆಯ ಪ್ರತೀಕವಾಗಿರುವ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ನಾಡು- ನುಡಿಯ ಸಂರಕ್ಷಣೆ ಮತ್ತು ಕನ್ನಡ ಭಾಷೆಗಾಗಿ ಶ್ರಮಿಸಲು ಕಟ್ಟಲಾಗಿರುವ ಸಮಸ್ತ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುತ್ತದೆ.

ಕನ್ನಡ ಭಾಷೆಯನ್ನು ಉಳಿಸಿ- ಬೆಳೆಸಿ, ಉತ್ತೇಜಿಸಲು ಕಟ್ಟಲಾಗಿರುವ ಈ ಸಂಸ್ಥೆ ಕರ್ನಾಟಕ ರಾಜ್ಯಾದ್ಯಂತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸುತ್ತದೆ. ಸಮೃದ್ಧವಾಗಿರುವ ಕನ್ನಡ ಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸಿ ನಾಡಿನ ಮೂಲೆ ಮೂಲೆಗೆ ಕನ್ನಡದ ಕಂಪನ್ನು ಪಸರಿಸುವ ಕಾರ್ಯವನ್ನು ಸದ್ದಿಲ್ಲದೆ ಮಾಡುತ್ತಿದೆ. ನಮ್ಮ ಕನ್ನಡ ನಾಡಿನ ಜನರ ಜೀವನಾಡಿಯಂತೆ ಕೆಲಸ ಮಾಡುವ ಕನ್ನಡ ಸಾಹಿತ್ಯ ಪರಿಷತ್ ಆರಂಭವಾದ ದಿನ ಮೇ 5ರಂದು ರಾಜ್ಯಾದ್ಯಂತ ಸಂತಸ ಸಡಗರ ಸಂಭ್ರಮಗಳಿಂದ ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನ ಎಂದು ಆಚರಿಸಲಾಗುತ್ತದೆ.

ಕನ್ನಡ ಕಟ್ಟಾಳುಗಳಿಗೆ ಗೌರವ: ಈ ದಿನದಂದು ಶಾಲೆ ಕಾಲೇಜುಗಳಲ್ಲಿ ಕನ್ನಡದ ಕವಿಗಳ ಪರಿಚಯ, ಕನ್ನಡದ ಕೃತಿಗಳ ಪರಿಚಯ, ಕನ್ನಡದ ಸಾಹಿತ್ಯದ ತೇರನ್ನು



ಎಳೆಯುವ ಸಾಧಕರನ್ನು ಗುರುತಿಸಿ ಗೌರವಿಸುವ ಕಾರ್ಯವನ್ನು ಮಾಡಲಾಗುತ್ತಿದೆ. ಯುವಜನರಲ್ಲಿ ಕನ್ನಡ ಸಾಹಿತ್ಯದ ಬಗ್ಗೆ ಒಲವು ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. ಮುಚ್ಚಿ ಹೋಗುತ್ತಿರುವ ಕನ್ನಡ ಶಾಲೆಗಳ ಪುನಶ್ಚೇತನಗೊಳಿಸುವ ಬಗ್ಗೆಯೂ ತೀವ್ರವಾದ ಚಿಂತನೆ ನಡೆಸಿ ತಾಯಿ ಭುವನೇಶ್ವರಿಯ ಸೇವೆಯನ್ನು ಎಲ್ಲರೂ ಮತ್ತಷ್ಟು ಮುತುವರ್ಜಿಯಿಂದ ನಡೆಸುವಂತೆ ಜನರನ್ನು ಹುರಿದುಂಬಿಸಲಾಗುತ್ತದೆ. ಒಟ್ಟಿನಲ್ಲಿ ಸಂಸ್ಥಾಪನ ದಿನ ಎಲ್ಲ ಕನ್ನಡಿಗರಿಗೆ ಬಹಳ ಸಂಭ್ರಮದ ಹಾಗೂ ಜವಾಬ್ದಾರಿಯನ್ನು ಮಗದೊಮ್ಮೆ ಎಚ್ಚರಿಸುವ ದಿನ ಎಂದರೂ ತಪ್ಪಾಗಲಾರದು.

ನಾಡಿನ ಏಕೀಕರಣದ ಹೋರಾಟಗಾರರು, ನಾಡಿನ ಖ್ಯಾತ ಸಾಹಿತಿಗಳು, ವಿದ್ವಾಂಸರು, ಮೈಸೂರಿನ ಆಡಳಿತಗಾರರು, ಅಧ್ಯಾಪಕರು ಮತ್ತು ಸಾರ್ವಜನಿಕ ಗಣ್ಯರು ಹೀಗೆ ಹತ್ತು ಹಲವು ಜನರ ಹೋರಾಟ ಮತ್ತು ಪಾಲ್ಗೊಳ್ಳುವಿಕೆಯ ಕಾರಣದಿಂದ ಹಾಗೂ ಸಾವಿರಾರು ಕನ್ನಡದ ಕಟ್ಟಾಳುಗಳ ಸಂಯುಕ್ತ ಶ್ರಮ ಮತ್ತು ತ್ಯಾಗಗಳ ಫಲವಾಗಿ ಕನ್ನಡ ಸಾಹಿತ್ಯ ಪರಿಷತ್ ಉದಯವಾಯಿತು.

ಅಹರ್ನಿಶಿ ಹೋರಾಟಗಾರರು: ಸರ್. ಎಂ. ವಿಶ್ವೇಶ್ವರಯ್ಯ, ಎಚ್.ವಿ.ನಂಜುಡಯ್ಯ, ಆಲೂರು ವೆಂಕಟರಾಯರು, ಅಚ್ಯುತರಾವ್, ಬಹದ್ದೂರ್‌ಶ್ಯಾಮರಾವ್ ಹೀಗೆ ಹತ್ತು ಹಲವು ಗಣ್ಯರು ಸೇರಿ ಅಹರ್ನಿಶಿ ನಡೆಸಿದ ಹೋರಾಟ, ಚಿಂತನೆ ಮತ್ತು ಪರಿಶ್ರಮಗಳ ಪರಿಣಾಮವಾಗಿ ಕನ್ನಡ ಸಾಹಿತ್ಯ ಪರಿಷತ್ ರೂಪಗೊಂಡಿತು. ನಾಲ್ವಡಿ ಕೃಷ್ಣರಾಜ ಅರಸರು ಎಂ. ವಿಶ್ವೇಶ್ವರಯ್ಯ ಅವರ ಅಭಿಲಾಷೆಯಂತೆ ಮೈಸೂರು ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಮೂರು ಉಪಸಮಿತಿ ನಿರ್ಮಿಸಿದರು. ಅದರಲ್ಲಿ ವಿದ್ಯಾ ಸಮಿತಿಗೆ ಅಧ್ಯಕ್ಷರಾಗಿ ಎಚ್.ವಿ.ನಂಜುಂಡಯ್ಯ ಮತ್ತು ವಿ. ಸುಬ್ರಹ್ಮಣ್ಯ ಅಯ್ಯರ್‌ಅವರು ಕಾರ್ಯದರ್ಶಿಗಳಾಗಿ ನೇಮಕಗೊಂಡರು. ಈ ಸಮಿತಿ ಎರಡು ಜಾಗತಿಕ ನಿರ್ಣಯ ತೆಗೆದುಕೊಂಡು ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆ ಮತ್ತು ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಗೆ ಚಾಲನೆ ನೀಡಿದರು. ಈ ವಿಚಾರವಾಗಿ ಬಿ.ಎಂ. ಶ್ರೀಕಂಠಯ್ಯನವರು ಐತಿಹಾಸಿಕ ಉಪನ್ಯಾಸ ನೀಡಿ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಹೆಚ್ಚು ಶಕ್ತಿ ತುಂಬಿದರು. ಇದರ ಫಲಶ್ರುತಿಯಾಗಿ ಮೊದಲನೇ ಕನ್ನಡ ಸಾಹಿತ್ಯ ಸಮ್ಮೇಳನ 1915 ಮೇ 3ರಿಂದ ಮೇ 5ರ ವರೆಗೆ ಜರುಗಿ, ಅಧಿಕೃತವಾಗಿ ಮೇ 5, 1915ರಂದು ಕನ್ನಡ ಸಾಹಿತ್ಯ ಪರಿಷತ್ ಜನ್ಮ ತಾಳಿತು. ಈ ಶುಭ ದಿನದಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸುತ್ತಾ, ವಿಶ್ವದಾದ್ಯಂತ ಕನ್ನಡದ ಕಂಪನ್ನು ಪಸರಿಸುತ್ತಿರುವ ಎಲ್ಲಾ ಕನ್ನಡದ ಕಟ್ಟಾಳುಗಳಿಗೆ ನಮಿಸುತ್ತಾ, ಕರುನಾಡಿನ ಸಮಸ್ತ ಕನ್ನಡ ಬಂಧುಗಳಿಗೆ, ಮನಸುಗಳಿಗೆ ಶಿರ ಬಾಗಿ ವಂದಿಸೋಣ... ಜೈ ಭುವನೇಶ್ವರಿ, ಜೈ ಕರ್ನಾಟಕ, ಜೈ ಹಿಂದ್.

ಇಂದು ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪನಾ ದಿನ

ಪಾದಚಾರಿಗೆ ಬೈಕ್ ಡಿಕ್ಕಿ: ಗಂಭೀರ ಗಾಯ

ಮೂಲ್ಕಿ: ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಸುರತ್ಕಲ್ ಹರ್ಷ ಶೋರೂಂ ಎದುರು ಭಾನುವಾರ ಸಂಜೆ ಪಾದಚಾರಿಗೆ ಬೈಕ್ ಡಿಕ್ಕಿ ಹೊಡೆದಿದ್ದು ಗಂಭೀರ ಸ್ವರೂಪದ ಗಾಯಗಳಾಗಿವೆ. ಪಾದಚಾರಿ ರೋಹಿತಾಕ್ಷ ಶೆಟ್ಟಿಗಾರ್ ಉಡುಪಿ- ಮಂಗಳೂರು ಹೆದ್ದಾರಿ ರಸ್ತೆಯನ್ನು ದಾಟಿ , ಮಂಗಳೂರು-ಉಡುಪಿ ರಸ್ತೆಯನ್ನು ದಾಟುತ್ತಿದ್ದಾಗ ಬೈಕ್ ಡಿಕ್ಕಿಯಾಗಿದೆ. ಅಪಘಾತದಿಂದ ಪಾದಚಾರಿ ರಸ್ತೆಗೆ ಬಿದ್ದು ತಲೆಗೆ , ಎದೆ, ಹೊಟ್ಟೆಗೆ ಗುದ್ದಿದ ಗಂಭೀರ ಸ್ವರೂಪದ ಗಾಯವಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಮತ್ತು ಹಾಗೂ ಸವಾರನಿಗೆ ಕೈ ಮತ್ತು ಕಾಲಿಗೆ ಗಾಯವಾಗಿದ್ದು ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಂಗಳೂರು ಉತ್ತರ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟರ್‌ನಿಂದ ಬಿದ್ದು ಗಾಯ

ಮಂಗಳೂರು: ನಗರದ ಪಡೀಲ್ ಜಿಲ್ಲಾಧಿಕಾರಿ ಕಚೇರಿ ಬಳಿ ಹಂಪ್‌ನಲ್ಲಿ ಸ್ಕೂಟರ್ ನಿಯಂತ್ರಣ ತಪ್ಪಿ ಬಿದ್ದು ಸವಾರ ಗಾಯಗೊಂಡ ಘಟನೆ ಸಂಭವಿಸಿದೆ. ಬಂಟ್ವಾಳ ಪಾಣೆಮಂಗಳೂರು ನಿವಾಸಿ ದೇವದಾಸ (29) ಗಾಯಗೊಂಡವರು. ಅವರು ಮೇ 3ರಂದು ಪಡೀಲ್ ಜಂಕ್ಷನ್ ಕಡೆಯಿಂದ ಮಂಗಳೂರು ಕಡೆಗೆ ಸವಾರಿ ಮಾಡಿಕೊಂಡು ಬರುತ್ತಿದ್ದಾಗ ಜಿಲ್ಲಾಧಿಕಾರಿ ಕಚೇರಿ ಬಳಿಯ ಹಂಪ್ ನಲ್ಲಿ ನಿಯಂತ್ರಣ ಕಳೆದುಕೊಂಡು ಸ್ಕೂಟರ್‌ಸಹಿತ ರಸ್ತೆಗೆ ಬಿದ್ದಿದ್ದಾರೆ. ಪರಿಣಾಮ ತಲೆಗೆ ಗಂಭೀರ ಗಾಯವಾಗಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಯುವಕ ನಾಪತ್ತೆ : ದೂರು ದಾಖಲು

ಉಳ್ಳಾಲ: ನರಿಂಗಾನ ಗ್ರಾಮದ ತೌಡುಗೋಳಿ, ನಿಡ್ಮಾಡ್ ನಿವಾಸಿ ರಾಭಿಯತುಲ್ ಅಧಭಿಯ (19) ನಾಪತ್ತೆಯಾಗಿದ್ದು, ಕೊಣಾಜೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಿಡ್ಮಾಡ್ ಅಲಿ ಅವರ ಮನೆಯಲ್ಲಿ ವಾಸವಾಗಿದ್ದ ಇಬ್ರಾಹಿಂ ಅವರ ಪುತ್ರಿ ರಾಭಿಯತುಲ್ ಅಧಭಿಯ ರಾತ್ರಿ ಊಟ ಮಾಡಿ ಮಲಗಿದ್ದು, ಮೇ 3ರಂದು ಬೆಳಗ್ಗೆ ಧಕ್ಕೆಗೆ ತೆರಳಲು ಹೊರಟಾಗ ಮಗಳು ಮಲಗಿದ್ದ ಕೋಣೆಯಲ್ಲಿ ಇರಲಿಲ್ಲ. ಮನೆಯ ಅಡುಗೆ ಕೋಣೆ ತೆರೆದಿದ್ದು, ಮನೆಯವರಿಗೆ ತಿಳಿಸಿ ಹುಡುಕಾಡಿದ್ದು, ಸಂಬಂಧಿಕರ ಮನೆಯಲ್ಲೂ ವಿಚಾರಿಸಿದಾಗ ಅಲ್ಲಿಯೂ ತೆರಳಿಲ್ಲ. ಕೊಣಾಜೆ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಿಸಿದ್ದಾರೆ.

ಪಾರ್ಕ್ ಮಾಡಿದ್ದ ಬೈಕ್ ಕಳವು

ಮಂಗಳೂರು: ಪಾರ್ಕ್ ಮಾಡಿದ್ದ ಬೈಕ್ ಕಳ್ಳತನ ಮಾಡಿರುವ ಘಟನೆ ಮಂಗಳೂರಿನಲ್ಲಿ ನಡೆದಿದೆ. ಶ್ರವಣ್ ಎಂಬವರ ರಾಯಲ್ ಎನ್ ಫೀಲ್ಡ್ ಕಂಪನಿ ದ್ವಿಚಕ್ರ ವಾಹನವನ್ನು ಅವರ ಬಾವ ಮೇ 1ರಂದು ರಾತ್ರಿ ಪಿಂಟೋ ಲೇನ್ ಮಾರಿಗುಡಿ ಬೋಳಾರದಲ್ಲಿ ನಿಲ್ಲಿಸಿ ವಾಪಾಸು ಅದೇ ದಿನ ರಾತ್ರಿ ಕೆಲ ಸಮಯದ ಬಳಿಕ ಬೈಕನ್ನು ಪಾರ್ಕ್ ಮಾಡಿದ್ದ ಸ್ಥಳಕ್ಕೆ ಬಂದು ನೋಡಿದಾಗ, ಬೈಕ್ ಪಾರ್ಕ್ ಮಾಡಿದ ಸ್ಥಳದಿಂದ ನಾಪತ್ತೆಯಾಗಿತ್ತು. ಮಂಗಳೂರು ದಕ್ಷಿಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಬಂಟ್ವಾಳ ತಾಲೂಕು ನೆಟ್ಲ ಮುಡ್ನೂರು ಗ್ರಾಮದ ಕುಕ್ಕರಬೆಟ್ಟು ಎಂಬಲ್ಲಿ ಗುಡ್ಡ ಪ್ರದೇಶಕ್ಕೆ ಬೆಂಕಿ ತಗುಲಿದ್ದು, ಅಗ್ನಿಶಾಮಕ ದಳ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಯಿತು. ಬಂಟ್ವಾಳ ಕಂದಾಯ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಶಾರ್ಜಾದಲ್ಲಿ ಕಾರು ಅಪಘಾತ: ಶಿರ್ತಾಡಿ ಮೂಲದ ಬಾಲಕಿ ಮೃತ್ಯು

• **ಕನ್ನಡಪ್ರಭ ವಾರ್ತೆ** ಮೂಡುಬಿದಿರೆ



ಶಾರ್ಜಾ- ದುಬೈ ಬಾರ್ಡರ್‌ನ ಅನ್ಸಾರ್‌ಮಾಲ್ ಬಳಿ ಭಾನುವಾರ ರಾತ್ರಿ ನಡೆದ ಕಾರು ಅಪಘಾತದಲ್ಲಿ ಮೂಡುಬಿದಿರೆ ಸಮೀಪದ ಶಿರ್ತಾಡಿ ಮೂಲದ ಬಾಲಕಿ ಮೃತಪಟ್ಟಿದ್ದಾಳೆ. ಶಿರ್ತಾಡಿಯ ದಿ.ಟಿ. ಆಲಿಯಬ್ಬ ಅವರ ಪುತ್ರ ಹಕೀಮ್ ಎಂಬವರ ಪುತ್ರಿ ಫಾತಿಮಾ ಅನಿಹಾ (5) ಮೃತಪಟ್ಟ ಬಾಲಕಿ. ಹಕೀಮ್ ಅವರು ಶಾರ್ಜಾದಲ್ಲಿ ಉದ್ಯೋಗದಲ್ಲಿದ್ದು, ಅವರ ಕುಟುಂಬ ಕೂಡ ಅಲ್ಲೇ ವಾಸವಾಗಿದೆ. ಭಾನುವಾರ ಶಾಪಿಂಗ್ ಮುಗಿಸಿ ಬಂದು ತಮ್ಮ ಕಾರಿನಲ್ಲಿ ಕುಳಿತುಕೊಳ್ಳಲು ಸಿದ್ಧರಾಗುತ್ತಿದ್ದಂತೆ ಹಿಂದಿನಿಂದ ಬಂದ ಮತ್ತೊಂದು ಕಾರು ಡಿಕ್ಕಿ ಹೊಡೆದಿದೆ. ಬಾಲಕಿ ಸ್ಥಳದಲ್ಲೇ ಮೃತಪಟ್ಟಿದ್ದಾಳೆ ಎನ್ನಲಾಗಿದೆ. ಫಾತಿಮಾ ಅನಿಹಾಳಿಗೆ ಜೂ. 2ಕ್ಕೆ 5 ವರ್ಷ ಪೂರ್ಣವಾಗಲಿದ್ದು, ಆಕೆಯ ವೀಸಾ ಅವಧಿ ಕೂಡ ಈ ದಿನಕ್ಕೆ ಮುಕ್ತಾಯಗೊಳ್ಳಲಿತ್ತು ಎಂದು ತಿಳಿದುಬಂದಿದೆ. ಹಕೀಮ್ ಅವರಿಗೆ ಮೂವರು ಗಂಡು ಮಕ್ಕಳು ಹಾಗೂ ಈಕೆ ಕೊನೆಯ ಪುತ್ರಿಯಾಗಿದ್ದಳು. ಅನಿಹಾಳ ಅಂತ್ಯಕ್ರಿಯೆ ಅಲ್ಲೇ ನಡೆಯಲಿದೆ ಎಂದು ತಿಳಿದುಬಂದಿದೆ.



ಯಕ್ಷಗಾನ ಕಲಾವಿದರಲ್ಲಿ ಅನುಭವ ಕೊರತೆ: ಆಸ್ರಣ್ಣ

ಅಂಬಲಪಾಡಿ: ಕರ್ನಾಟಕ ಯಕ್ಷಗಾನ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರದಾನ

• **ಕನ್ನಡಪ್ರಭ ವಾರ್ತೆ** ಉಡುಪಿ

ಇತ್ತೀಚಿನ ದಿನಗಳಲ್ಲಿ ಯಕ್ಷಗಾನದಲ್ಲಿ ಏನು ಮಾಡಬೇಕು, ಏನು ಮಾಡಬಾರದು ಎನ್ನುವ ಜಿಜ್ಞಾಸೆಯಲ್ಲಿ ಇಂದು ನಾವಿದ್ದೇವೆ. ಈಗಿನ ವ್ಯವಸ್ಥೆಯಲ್ಲಿ ಒಬ್ಬ ಕಲಾವಿದ ತನ್ನ ಪಾತ್ರ ಮುಗಿಸಿದ ಬಳಿಕ ಇತರರ ಪಾತ್ರವನ್ನು ನೋಡುವುದಿಲ್ಲ. ಆದರಿಂದ ಯಕ್ಷಗಾನ ಕಲಾವಿದರಲ್ಲಿ ಅನುಭವದ ಕೊರತೆ ಎದ್ದು ಕಾಣುತ್ತಿದೆ ಎಂದು ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಆನುವಂಶಿಕ ಅರ್ಚಕ ಹರಿನಾರಾಯಣದಾಸ ಆಸ್ರಣ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ಕರ್ನಾಟಕ ಯಕ್ಷಗಾನ ಅಕಾಡೆಮಿ ವತಿಯಿಂದ ಅಂಬಲಪಾಡಿ ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನದ ಸಭಾಂಗಣದಲ್ಲಿ ನಡೆದ 2025ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಯಕ್ಷಗಾನ ಕುರಿತು ಯಕ್ಷಗಾನ ಅಕಾಡೆಮಿ ಮಾಡಿರುವ ವೀಡಿಯೊ ದಾಖಲಾತಿಗಳನ್ನು ಜನಮಾನಸಕ್ಕೆ ಮುಟ್ಟುವ ಹಾಗೆ ಮಾಡಬೇಕು ಮತ್ತು



ಕರ್ನಾಟಕ ಯಕ್ಷಗಾನ ಅಕಾಡೆಮಿಯಿಂದ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು

ಇನ್ನಷ್ಟು ದಾಖಲಾತಿ ಮಾಡಬೇಕು ಎಂದು ಅವರು ಸಲಹೆ ನೀಡಿದರು.

ಮುಖ್ಯ ಅತಿಥಿ, ಮಣಿಪಾಲ ಮಾಹೆ ಸಹಕುಲಾಧಿಪತಿ ಡಾ.ಎಚ್.ಎಸ್. ಬಲ್ಲಾಳ್ ಮಾತನಾಡಿ, ಮಾಹೆಯ ಅಧೀನದಲ್ಲಿರುವ ಆರ್ ಆರ್‌ಸಿಯಲ್ಲಿರುವ ಯಕ್ಷಗಾನಕ್ಕೆ ಸಂಬಂಧಿಸಿದ ಎಲ್ಲ ವೀಡಿಯೊ ದಾಖಲಾತಿಗಳನ್ನು ಯೂಟ್ಯೂಬ್ ಮೂಲಕ ಜನರಿಗೆ ತಲುಪುವ ಹಾಗೆ ಮಾಡಲಾಗುತ್ತಿದೆ ಎಂದರು.

ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥಸ್ವಾಮಿ, ಉದ್ಯಮಿ ಪ್ರಸಾದ್ ರಾಜ್ ಕಾಂಚನ್ ಮಾತನಾಡಿದರು.

ಅಂಬಲಪಾಡಿ ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನದ ಕ್ಷೇತ್ರಾಧಿಕಾರಿ ಡಾ. ನಿ.ಬೀ. ವಿಜಯ ಬಲ್ಲಾಳ್ ಸಾಕ್ಷ್ಯಚಿತ್ರ ಬಿಡುಗಡೆಗೊಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಪೂರ್ಣಿಮಾ ಉಪಸ್ಥಿತರಿದ್ದರು. ಕರ್ನಾಟಕ ಯಕ್ಷಗಾನ ಅಕಾಡೆಮಿ ರಿಜಿಸ್ಟ್ರಾರ್ ನಮ್ರತಾ ಎನ್. ಸ್ವಾಗತಿಸಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಅಂಬಲಪಾಡಿ ಶ್ರೀ ಲಕ್ಷ್ಮೀಜನಾರ್ದನ ಯಕ್ಷಗಾನ ಕಲಾ ಮಂಡಳಿ ಕಲಾವಿದರಿಂದ 'ಬಬ್ರುವಾಹನ ಕಾಳಗ' ಬಡಗುತಿಟ್ಟಿನ ಯಕ್ಷಗಾನ ಪ್ರದರ್ಶನ ನಡೆಯಿತು.

ಪ್ರಶಸ್ತಿ ಪುರಸ್ಕೃತರು...

ಪಾರ್ತಿಸುಬ್ಬ ಪ್ರಶಸ್ತಿಯನ್ನು ಯಕ್ಷಗಾನ ಸಂಶೋಧಕ ಡಾ. ಕೆ.ಎಂ. ರಾಘವ ನಂಬಿಯಾರ್‌ಅವರಿಗೆ, ಗೌರವ ಪ್ರಶಸ್ತಿಗಳನ್ನು ರೆಂಜಾಳ ರಾಮಕೃಷ್ಣ ರಾವ್, ವಿಷ್ಣು ಮಂಜಪ್ಪ ಆಚಾರಿ ಬಳ್ಕೂರು, ಡಿ. ಮನೋಹರ್‌ಕುಮಾರ್, ಮುರಲಿ ಕಡೆಕಾರ್‌ಮತ್ತು ರಮೇಶ್ ಅವರಿಗೆ ಹಾಗೂ ಯಕ್ಷಸಿರಿ ಪ್ರಶಸ್ತಿಯನ್ನು ಲಕ್ಷ್ಮಣ ಗೌಡ ಬೆಳಾಲ್, ದಾಸಪ್ಪ ಗೌಡ ಗೇರುಕಟ್ಟೆ, ಎ.ಜಿ. ನಾಗರಾಜು, ದಾಸನಡ್ಕ ರಾಮ ಕುಲಾಲ್, ರಾಜೀವ್ ಶೆಟ್ಟಿ ಹೊಸಂಗಡಿ, ಕೇಶವ ಶಕ್ತಿನಗರ, ಸದಾಶಿವ ಕುಲಾಲ್, ಬೆಳ್ಳಾರೆ ಮಂಜುನಾಥ ಭಟ್, ಜಿ.ಕೆ. ಶ್ರೀನಿವಾಸ ಸಾಲಿಯಾನ್ ಅವರಿಗೆ ಪ್ರದಾನ ಮಾಡಲಾಯಿತು.

ದಿ. ಕರ್ಕಿ ಹಿರಿಯ ಪರಮಯ್ಯ ಹಾಸ್ಯಗಾರ ಹೆಸರಿನಲ್ಲಿ ನೀಡುವ ದತ್ತಿನಿಧಿ ಪ್ರಶಸ್ತಿಯನ್ನು ದೇವದಾಸ ರಾವ್ ಕೂಡ್ಲಿ ಅವರಿಗೆ ಹಾಗೂ 2024ನೇ ಸಾಲಿನ ಪುಸ್ತಕ ಬಹುಮಾನವನ್ನು ಅಶೋಕ ಹಾಸ್ಯಗಾರ, ಕೆರೆಮನೆ ಶಿವಾನಂದ ಹೆಗಡೆ, ಮಣಿಪಾಲ್ ಯುನಿವರ್ಸಲ್ ಪ್ರೆಸ್ ಗೆ ಪ್ರದಾನ ಮಾಡಲಾಯಿತು.

ಸುದ್ದಿ ಸಿಂಚನ

ಬಂಟಕಲ್ಲು ಎಸ್‌ಎಂವಿಐಟಿಎಂ: 13ರಂದು ಕಾರ್ಯಾಗಾರ

ಕಾಪು: ಇಲ್ಲಿನ ಬಂಟಕಲ್ಲುನ ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯುನ್ಮಾನ ಮತ್ತು ಸಂವಹನ ವಿಭಾಗವು ಮೇ 13ರಂದು ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ಎಲೆಕ್ಟ್ರಾನಿಕ್ಸ್ ಮತ್ತು ವೃತ್ತಿ ಅವಕಾಶಗಳ ಕುರಿತು ಪ್ರಾಯೋಗಿಕ ಕಾರ್ಯಾಗಾರವನ್ನು ಆಯೋಜಿಸಿದೆ.

ಈ ಕಾರ್ಯಾಗಾರ ಮುಖ್ಯ ಉದ್ದೇಶ ಪಪೂ ವಿದ್ಯಾರ್ಥಿಗಳಿಗೆ ಸಂವಾದಾತ್ಮಕ ಕಲಿಕೆ ಮತ್ತು ಪ್ರಾಯೋಗಿಕ ಮಾನ್ಯತೆಯ ಮೂಲಕ ವಿದ್ಯುನ್ಮಾನ ಮತ್ತು ಸಂವಹನ ಇಂಜಿನಿಯರಿಂಗ್‌ನ ಮೂಲಭೂತ ಅಂಶಗಳ ಬಗ್ಗೆ ಮಾಹಿತಿಯನ್ನು ನೀಡುವುದಾಗಿದೆ.

ಈ ಕಾರ್ಯಾಗಾರದಲ್ಲಿ ಸರಳ ಸರ್ಕ್ಯೂಟ್ ನಿರ್ಮಾಣ, ಪ್ರಾಯೋಗಿಕ ಪ್ರಯೋಗಗಳು ಮತ್ತು ಪ್ರದರ್ಶನಗಳಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುತ್ತದೆ ಮತ್ತು ವಿದ್ಯುನ್ಮಾನ ಮತ್ತು ಸಂವಹನ ವಿಭಾಗವನ್ನು ಏಕೆ ಆಯ್ಕೆ ಮಾಡಬೇಕು, ಐಒಟಿ, ಕೃತಕ ಬುದ್ಧಿಮತ್ತೆ, ರೋಬೋಟಿಕ್ಸ್ ಮತ್ತು ವಿಎಲ್‌ಎಸ್‌ಐ ನಂತಹ ಉದಯೋನ್ಮುಖ ಕ್ಷೇತ್ರಗಳ ಜೊತೆಗೆ ಕೋರ್‌ಇಂಜಿನಿಯರಿಂಗ್ ಮತ್ತು ಐಟಿ ವಲಯಗಳಲ್ಲಿನ ವೃತ್ತಿ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಲಿದ್ದಾರೆ. ಇದು ವಿದ್ಯಾರ್ಥಿಗಳಿಗೆ ಭವಿಷ್ಯದ ಶೈಕ್ಷಣಿಕ ಮಾರ್ಗಗಳ ಬಗ್ಗೆ ಉತ್ತಮ ನಿರ್ಧಾರವನ್ನು ತೆಗೆದು ಕೊಳ್ಳಲು ಸಹಾಯಕವಾಗಲಿದೆ. ಈ ಕಾರ್ಯಾಗಾರವು ಉಚಿತವಾಗಿದ್ದು ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ, ಬಸ್ ಸೌಲಭ್ಯ ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಆಸಕ್ತ ವಿದ್ಯಾರ್ಥಿಗಳು 9686323734 ನ್ನು ಸಂಪರ್ಕಿಸಬೇಕು ಎಂದು ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮ್ಯೂಸಿಕ ಸುಪ್ರಿಯಗೆ ಡಾಕ್ಟರೇಟ್ ಪದವಿ

ಉಡುಪಿ: ಮಾಹೆ ವಿಶ್ವವಿದ್ಯಾಲಯದ ಎಂ. ಐ. ಟಿ.ಯ ಸ್ಕೂಲ್ ಆಫ್ ಕಂಪ್ಯೂಟರ್ ಇಂಜಿನಿಯರಿಂಗ್‌ನ ಸಹಾಯಕ ಪ್ರಾಧ್ಯಾಪಕಿ



ಮ್ಯೂಸಿಕ ಸುಪ್ರಿಯ ಅವರಿಗೆ ಮಾಹೆ ಡಾಕ್ಟರೇಟ್ ಪದವಿ ನೀಡಿದೆ. ಅವರು ಎ ಮಷೀನ್ ಟ್ರಾನ್ಸ್‌ಲೇಷನ್ ಸಿಸ್ಟಮ್ ಫಾರ್ ಕನ್ನಡ ಟು ಇಂಗ್ಲಿಷ್ ಅಂಡ್ ಇಂಗ್ಲಿಷ್ ಟು ಕನ್ನಡ ಎಂಬ ಸಂಶೋಧನಾ ಪ್ರಬಂಧವನ್ನು ಸ್ಕೂಲ್ ಆಫ್ ಕಂಪ್ಯೂಟರ್‌ಇಂಜಿನಿಯರಿಂಗ್‌ನ ಡಾ. ದಿನೇಶ್ ಆಚಾರ್ಯ ಯು. ಹಾಗೂ ಡಾ. ಆಶಾಲತಾ ನಾಯಕ್ ಮಾರ್ಗದರ್ಶನದಲ್ಲಿ ಮಂಡಿಸಿದ್ದರು.

ದ್ವಿತೀಯ ಪಿಯು2 ಪರೀಕ್ಷೆ: 301 ಗೈರು

ಮಂಗಳೂರು: ದ.ಕ. ಜಿಲ್ಲೆಯಲ್ಲಿ ಸೋಮವಾರ ನಡೆದ ದ್ವಿತೀಯ ಪಿ.ಯು.ಸಿ-2 ರ ಇಂಗ್ಲೀಷ್ ಪರೀಕ್ಷೆಗೆ 1257 ವಿದ್ಯಾರ್ಥಿಗಳು ಹಾಜರಾಗಿದ್ದು, 301 ಮಂದಿ ಗೈರು ಹಾಜರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಕಟಣೆ ತಿಳಿಸಿದೆ.

10ರಂದು ಮೊಗೇರ ಸಂಘದ 'ಮೊಗೇರ ಸೌಧ' ಉದ್ಘಾಟನೆ

ಸ್ವ ಉದ್ಯೋಗ ತರಬೇತಿ ಕೇಂದ್ರಕ್ಕೆ ಚಾಲನೆ



ಮೊಗೇರ ಸಂಘದ ಅಧ್ಯಕ್ಷ ಸೀತಾರಾಮ ಕೊಂಚಾಡಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮೊಗೇರ ಸಂಘ ಮಂಗಳೂರು ತಾಲೂಕು ನೇತೃತ್ವದಲ್ಲಿ ಮಂಗಳೂರು ನಗರದ ಕೂಳೂರು ಪಂಜಿಮೊಗರುವಿನ ಮುಖ್ಯ ರಸ್ತೆಯ ಪಕ್ಕದಲ್ಲಿ ನಿರ್ಮಾಣಗೊಂಡಿರುವ ಸಮುದಾಯ ಭವನ, ಉದ್ದೇಶಿತ ಸ್ವಉದ್ಯೋಗ ತರಬೇತಿ ಕೇಂದ್ರ ಮತ್ತು ವಿದ್ಯಾರ್ಥಿ ನಿಲಯದ ಬಹುಮಹಡಿ ಕಟ್ಟಡ 'ಮೊಗೇರ ಸೌಧ'ದ ಉದ್ಘಾಟನಾ ಸಮಾರಂಭ ಮೇ 10ರಂದು ನಡೆಯಲಿದೆ ಎಂದು ಮೊಗೇರ ಸಂಘದ ಅಧ್ಯಕ್ಷ ಸೀತಾರಾಮ ಕೊಂಚಾಡಿ ತಿಳಿಸಿದರು.

ಅವರು ಸೋಮವಾರ ಮಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಯಲ್ಲಿ ಮಾತನಾಡಿದರು. ಮೊಗೇರ ಸಂಘ ಖಾಸಗಿಯವರಿಂದ ಕ್ರಯಕ್ಕೆ ಜಾಗವನ್ನು ಪಡೆದು ಸರ್ಕಾರದ ಜನಪ್ರತಿನಿಧಿಗಳ ವಿಶೇಷ ಅನುದಾನವನ್ನು ಪಡೆದುಕೊಂಡು ಸುಮಾರು 20 ಸಾವಿರ ಚ.ಅಡಿ ವಿಸ್ತೀರ್ಣದ 4 ಅಂತಸ್ತಿನ ವಿಶಾಲವಾದ ಬಹುಮಹಡಿ ಕಟ್ಟಡ ನಿರ್ಮಾಣಗೊಳಿಸಲಾಗಿದೆ. ಕಟ್ಟಡದಲ್ಲಿ ಸಭಾಂಗಣ ಸೇರಿದಂತೆ ದೂರದ ಜಿಲ್ಲೆಗಳಿಂದ ವಿದ್ಯಾಭ್ಯಾಸ ಪಡೆಯಲು ಬರುವ ಬಡ ವರ್ಗದ ಪ.ಜಾತಿ/ಪ.ಪಂಗಡದಮಕ್ಕಳಿಗೆಉಳಿದುಕೊಳ್ಳಲು ಹಾಸ್ಟೆಲ್ ವ್ಯವಸ್ಥೆಯನ್ನು ಹೊಂದಲಾಗಿದೆ. ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಸ್ವ ಉದ್ಯೋಗ ತರಬೇತಿ ಕೇಂದ್ರವು ಒಳಗೊಂಡಿದ್ದು ಜಿಲ್ಲೆಯ ದಲಿತ ಸಮಾಜದ ಇತಿಹಾಸದಲ್ಲಿ ತಮ್ಮ ಸ್ವಂತ ಪ್ರಯತ್ನದ ಮೂಲಕ ನೂತನ ಬಹುಮಹಡಿ ಕಟ್ಟಡವನ್ನು ಹೊಂದಿರುವುದು ಇದೇ ಮೊದಲು ಆಗಿರುತ್ತದೆ ಎಂದರು.

ಅಂದು ಬೆಳಗ್ಗೆ 9.30ಕ್ಕೆ ಕೂಳೂರು ವೃತ್ತದಲ್ಲಿ ಆಕರ್ಷಕ ಶೋಭಾಯಾತ್ರೆಗೆ ಚಾಲನೆ, 10.30ಕ್ಕೆ ಮೊಗೇರಸೌಧಸಂಕೀರ್ಣದಲ್ಲಿವಿವಿಧವಿಭಾಗಗಳ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ವಿಧಾನ ಸಭೆ ಸ್ಪೀಕರ್‌ಯು.ಟಿ.ಖಾದರ್‌ಸಮುದಾನ ಭವನ ಉದ್ಘಾಟಿಸುವರು. ಸಮಾಜ ಕಲ್ಯಾಣ ಇಲಾಖೆ ಸಚಿವ ಹೆಚ್.ಸಿ.ಮಹದೇವಪ್ಪ ಮೊಗೇರ ಸೌಧ ಬಹುಮಹಡಿ ಸಂಕೀರ್ಣ ಉದ್ಘಾಟಿಸುವರು. ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸಭಾ ಕಾರ್ಯಕ್ರಮ ಉದ್ಘಾಟಿಸುವರು. ಸಂಸದ ಕ್ಯಾ.ಬ್ರಿಜೇಶ್ ಚೌಟ ವಿದ್ಯಾರ್ಥಿ ನಿಲಯ ಉದ್ಘಾಟಿಸುವರು. ಮಾಜಿ ಸಚಿವ ನಾರಾಯಣ ಸ್ವಾಮಿ ಸ್ವಉದ್ಯೋಗ ಕೇಂದ್ರ ಉದ್ಘಾಟಿಸುವರು. ಶಾಸಕ ಡಾ.ಭರತ್ ಶೆಟ್ಟಿ ವೈ ಸಂಘದ ನೂತನ ಕಚೇರಿ ಉದ್ಘಾಟಿಸುವರು. ಮಾಜಿ ಸಚಿವ ಎಸ್. ಅಂಗಾರ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ ಮೊಗೇರ ಜಾತಿ ಸಮೀಕ್ಷೆ ಆ್ಯಪ್‌ಗೆ ಚಾಲನೆ ನೀಡಿವರು. ಸಂಘದ ಅಧ್ಯಕ್ಷ ಸೀತಾರಾಮ ಕೊಂಚಾಡಿ ಅಧ್ಯಕ್ಷತೆ ವಹಿಸುವರು. ಜೊತೆಗೆ ಹಲವು ಗಣ್ಯರು ಅತಿಥಿಗಳಾಗಿ ಭಾಗವಹಿಸುವರು ಎಂದರು.

ಕರ್ನಾಟಕ ರಾಜ್ಯ ಮೊಗೇರ ಸಂಘದ ನಿಕಟಪೂರ್ವ ಅಧ್ಯಕ್ಷ ಸುಂದರ ಮೇರ, ಸಂಘದ ಪ್ರಧಾನ ಕಾರ್ಯದರ್ಶಿ ಗಿರಿಯಪ್ಪ ಎಸ್., ಕೋಶಾಧಿಕಾರಿ ನಾರಾಯಣ ಉಳ್ಳಾಲ್, ಉಪಾಧ್ಯಕ್ಷ ರಾಮ ಕೊಳಂಬೆ, ಮುಖಂಡರಾದ ಅಶೋಕ್ ಕೊಂಚಾಡಿ, ನಾಗೇಶ್ ಇದ್ದರು.

ಕೆಎಂಸಿ ಆಸ್ಪತ್ರೆ: ವಿಶೇಷ ಮ್ಯಾಮೋಗ್ರಾಮ್ ಪ್ಯಾಕೇಜ್ ಲಭ್ಯ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಸ್ತನ ಕ್ಯಾನ್ಸರ್ ಕಾಯಿಲೆಯ ಲಕ್ಷಣಗಳನ್ನು ಆರಂಭದಲ್ಲೇ ಗುರುತಿಸುವ ಮತ್ತು ಈ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ವಿಶೇಷ ಸ್ತನ ಆರೋಗ್ಯ ತಪಾಸಣೆ ಉಪಕ್ರಮವನ್ನು ಮಂಗಳೂರಿನ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿಯ ಕೆಎಂಸಿ ಆಸ್ಪತ್ರೆ ಘೋಷಿಸಿದೆ.

ಮೇ 5 ರಿಂದ 16 ರವರೆಗಿನ ಅವಧಿಯ ಅಭಿಯಾನದ ಭಾಗವಾಗಿ, 1200 ರು. ವಿಶೇಷ ಬೆಲೆಯಲ್ಲಿ ಬೈಲ್ಯಾಟರಲ್ ಮ್ಯಾಮೊಗ್ರಾಮ್ ಸ್ಕ್ರೀನಿಂಗ್ ಸೌಲಭ್ಯ ನೀಡಲಾಗುತ್ತದೆ. ಈ ಮೂಲಕ ಅತ್ಯಗತ್ಯ ತಪಾಸಣಾ ಸೇವೆಯನ್ನು ಮಂಗಳೂರಿನಾದ್ಯಂತ ಮಹಿಳೆಯರಿಗೆ ಲಭ್ಯವಾಗುವಂತೆ ಮಾಡುವ ಉದ್ದೇಶವನ್ನು ಹೊಂದಿದೆ.

ವಿಶೇಷವಾಗಿ 40 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು ಮತ್ತು ಸ್ತನ ಕ್ಯಾನ್ಸರ್‌ನ ಕೌಟುಂಬಿಕ ಇತಿಹಾಸ ಹೊಂದಿರುವ ಮಹಿಳೆಯರಲ್ಲಿ ಕಾಯಿಲೆ ಲಕ್ಷಣಗಳನ್ನು ಅರಿಯಲು ಈ ವಾರ್ಷಿಕ ತಪಾಸಣೆಯನ್ನು ಉತ್ತೇಜಿಸಲು ಈ ಉಪಕ್ರಮವನ್ನು ಪರಿಚಯಿಸಲಾಗಿದೆ. ವಿಶೇಷ ಸ್ತನದ ಎಕ್ಸ್-ರೇ ಮೂಲಕ ಆರಂಭಿಕ ಕಾಯಿಲೆ ಪತ್ತೆ ಹಚ್ಚುವಿಕೆಯು, ಚಿಕಿತ್ಸೆಯ ಫಲಿತಾಂಶ ಮತ್ತು ಬದುಕುಳಿಯುವಿಕೆಯ ಪ್ರಮಾಣವನ್ನು ಸುಧಾರಿಸುತ್ತದೆ.

ಆದರೆ ಅನೇಕ ಮಹಿಳೆಯರು ವೆಚ್ಚದ ಆತಂಕ ಅಥವಾ ಅರಿವಿನ ಕೊರತೆಯಿಂದಾಗಿ ಸ್ಕ್ರೀನಿಂಗ್ ವಿಚಾರದಲ್ಲಿ ವಿಳಂಬ ಮಾಡುತ್ತಾರೆ. ಆದರೆ, ಕಡಿಮೆ ಬೆಲೆಯಲ್ಲಿ ಮ್ಯಾಮೋಗ್ರಾಮ್ ಸೌಲಭ್ಯ ನೀಡುವ ಮೂಲಕ, ಆಸ್ಪತ್ರೆಯು ಪೂರ್ವಭಾವಿ ಆರೋಗ್ಯ-ಅಪೇಕ್ಷಿತ ನಡವಳಿಕೆ ಹೆಚ್ಚಿಸಲು ಪ್ರಯತ್ನಿಸುತ್ತದೆ.

ಆಸ್ಪತ್ರೆಯ ಅತ್ಯಾಧುನಿಕ ರೇಡಿಯಾಲಜಿ ಮೂಲಸೌಕರ್ಯ ಮತ್ತು ಅನುಭವಿ ಮಹಿಳಾ ರೇಡಿಯಾಲಜಿಸ್ಟ್‌ಗಳು ಮತ್ತು ತಂತ್ರಜ್ಞರು ಈ ಸ್ಕ್ರೀನಿಂಗ್ ಸೇವೆಯನ್ನು ಒದಗಿಸುತ್ತಾರೆ. ಸ್ಕ್ರೀನಿಂಗ್ ಆಯ್ಕೆ ಮಾಡಿಕೊಳ್ಳುವ ಮಹಿಳೆಯರು ಅಗತ್ಯವಿದ್ದರೆ ಹೆಚ್ಚಿನಮೌಲ್ಯಮಾಪನಮತ್ತುಮಾರ್ಗದರ್ಶನಕ್ಕಾಗಿ ತಜ್ಞರ ಸಮಾಲೋಚನೆಗೆ ಪ್ರವೇಶವನ್ನು ಹೊಂದಿರುತ್ತಾರೆ.

ಇದು ನಿಖರ ಮತ್ತು ವಿಶ್ವಾಸಾರ್ಹ ಫಲಿತಾಂಶಗಳನ್ನು ಖಚಿತಪಡಿಸುತ್ತದೆ. ಭಾನುವಾರ ಹೊರತುಪಡಿಸಿ ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ಸಮಯವಿದ್ದು, ಮುಂಚಿತವಾಗಿ ನೋಂದಾಯಿಸಿಕೊಳ್ಳಲು ಸೂಚಿಸಲಾಗಿದೆ.

ಕೆಎಂಸಿ ಆಸ್ಪತ್ರೆಯ ಕನ್ಸಲ್ಟೆಂಟ್ ಬ್ರೆಸ್ಟ್ ಸರ್ಜರಿ ಡಾ.ಬಾಸಿಲಾ ಅಲಿ ಈ ಬಗ್ಗೆ ಮಾತನಾಡಿ, ಆರಂಭಿಕ ಹಂತದಲ್ಲಿ ಸ್ತನ ಕ್ಯಾನ್ಸರ್‌ನ ಲಕ್ಷಣಗಳನ್ನು ಪತ್ತೆ ಮಾಡಿದರೆ, ಅದನ್ನು ಗುಣಪಡಿಸಬಹುದು. ದುರದೃಷ್ಟವಶಾತ್, ತಪಾಸಣೆಯಲ್ಲಿ ವಿಳಂಬ ಮಾಡುವುದರಿಂದ ಅನೇಕ ಮಹಿಳೆಯರು ಮುಂದುವರಿದ ಹಂತಗಳಲ್ಲಿಯೂ ನಮ್ಮಲ್ಲಿಗೆ ಬರುತ್ತಾರೆ. ಕಾಯಿಲೆ ಲಕ್ಷಣಗಳು ಕಾಣಿಸಿಕೊಳ್ಳುವ ಮೊದಲೇ ಅಸಹಜತೆಗಳನ್ನು ಗುರುತಿಸಲು ನಿಯಮಿತ ಮ್ಯಾಮೊಗ್ರಾಮ್ಸ್ ಸಹಾಯ ಮಾಡುತ್ತದೆ. ಈ ಅಭಿಯಾನದ ಮೂಲಕ, ಹೆಚ್ಚಿನ ಮಹಿಳೆಯರು ತಮ್ಮ ಸ್ತನ ಆರೋಗ್ಯಕ್ಕೆ ಆದ್ಯತೆ ನೀಡಲು ಮತ್ತು ಆರ್ಥಿಕ ಹಿಂಜರಿಕೆಯಿಲ್ಲದೆ ಸಕಾಲಿಕ ತಪಾಸಣೆಗೆ ಒಳಗಾಗಲು ಪ್ರೋತ್ಸಾಹಿಸುತ್ತೇವೆ ಎಂದು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ +91 95359 00019

ರೋಸಾರಿಯೋ ಚರ್ಚ್‌ನಿಂದ ಸೇಂಟ್ ಆನ್ಸ್ ಕಾಲೇಜು ರಸ್ತೆ ಇಕ್ಕೆಲ ಸ್ವಚ್ಛತೆ!

ರಾಮಕೃಷ್ಣ ಮಿಷನ್ ಸ್ವಚ್ಛ ಮಂಗಳೂರು ಅಭಿಯಾನದ ಸ್ವಚ್ಛತಾ ಶ್ರಮದಾನ

• **ಕನ್ನಡಪ್ರಭ ವಾರ್ತೆ** ಮಂಗಳೂರು

ರಾಮಕೃಷ್ಣ ಮಿಷನ್ ಸ್ವಚ್ಛ ಮಂಗಳೂರು ಅಭಿಯಾನದ ಮೇ ತಿಂಗಳ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮವನ್ನು ರೋಸಾರಿಯೋ ಚರ್ಚ್ ಮುಖ್ಯಸ್ಥ ಫಾ. ವಲೇರಿಯನ್ ಡಿ'ಸೋಜಾ ಹಾಗೂ ಎಂ.ಆರ್.ಪಿ.ಎಲ್ ಸಂಸ್ಥೆಯ ನಿರ್ದೇಶಕ ಬಿ.ಎಚ್.ವಿ. ಪ್ರಸಾದ್ ಹಸಿರು ನಿಶಾನೆಯ ಮೂಲಕ ಭಾನುವಾರ ಚಾಲನೆ ನೀಡಿದರು. ಈ ಸಂದರ್ಭ ಎಂ.ಆರ್.ಪಿ.ಎಲ್ ಸಂಸ್ಥೆಯ ಕೇಶವ ಪಟ್ಟಾಳಿ, ನಿವೃತ್ತ ಸೇನಾನಿ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಡಾ. ಧನೇಶ್ ಕುಮಾರ್, ಪ್ರಮುಖರಾದ ಕಮಲಾಕ್ಷ ಪೈ, ದಿಲ್‌ರಾಜ್ ಆಳ್ವ ಹಾಗೂ ರಂಜನ್ ಬೆಳ್ಳರ್ಪಾಡಿ ಇದ್ದರು. ಫಾ. ವಲೇರಿಯನ್ ಡಿ'ಸೋಜಾ ಮಾತನಾಡಿ, ಯುವಕರು ಸ್ವಚ್ಛ ಮಂಗಳೂರು ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸಿ ನಗರವನ್ನು ಸ್ವಚ್ಛವಾಗಿಡಲು ತಮ್ಮ ಸಮಯವನ್ನು ಕೊಡುಗೆ ನೀಡುತ್ತಿರುವುದು ಸಂತೋಷಕರವಾಗಿದೆ. ಇಂತಹ ಕಾರ್ಯಕ್ರಮಗಳ ಮೂಲಕ ನಾಗರಿಕರಲ್ಲಿ ಜಾಗೃತಿ ಮೂಡಿಸುತ್ತಿರುವ ಮಿಷನ್‌ಗೆ ನನ್ನ ಅಭಿನಂದನೆಗಳು ಎಂದರು.

ಶ್ರಮದಾನದ ಭಾಗವಾಗಿ ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೋಥೆರಪಿಯ ಅಧ್ಯಾಪಕರಾದ ಡಾ.ಪುರುಷೋತ್ತಮನ್ ಚಿಪ್ಪಳ, ಡಾ.ಜಯೇಶ್ ಚಂದ್ರನ್, ಡಾ.ರುಚಿಥಾ ನರಸಿಯಾ ಮತ್ತು ಸೋಕ್ರೇಟ್ಸ್ ಅವರ ನೇತೃತ್ವದಲ್ಲಿ ವಿದ್ಯಾರ್ಥಿ ಸ್ವಯಂಸೇವಕರು ರೋಸಾರಿಯೋ ಚರ್ಚ್‌ನಿಂದ ಸೇಂಟ್ ಆನ್ಸ್ ಕಾಲೇಜುವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡರು. ಕಸ ಸಂಗ್ರಹ, ಮರುಬಳಕೆ ಆಗದ ಪ್ಲಾಸ್ಟಿಕ್ ವಸ್ತುಗಳ ಸಂಗ್ರಹ, ಅನಧಿಕೃತ ಬ್ಯಾನರ್‌ಗಳ ತೆರವು, ಅಂಗಡಿ ಮಾಲೀಕರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಅನಗತ್ಯ ಗಿಡಗಂಟುಗಳನ್ನು ತೆರವುಗೊಳಿಸುವ ಕಾರ್ಯವನ್ನು ನಡೆಸಿದರು.

5 ಬ್ಲ್ಯಾಕ್ ಸ್ಪಾಟ್‌ಗಳ ತೆರವು: ರೋಸಾರಿಯೋ ಚರ್ಚ್‌ನಿಂದ ಪೋಸ್ಟ್ ಆಫೀಸ್ ವರೆಗೆ ಇರುವ ರಸ್ತೆಯಲ್ಲಿದ್ದ 5 ಪ್ರಮುಖ ಬ್ಲ್ಯಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲಾಯಿತು. ಮಳೆಗಾಲ ಮುನ್ನ ನೀರಿನ ಹರಿವು ತಡೆಗಟ್ಟುತ್ತಿದ್ದ ಕಾಲುವೆಗಳನ್ನು ಶುದ್ಧಗೊಳಿಸಿ, ನೀರಿನ ಸರಾಗ ಹರಿವಿಗೆ ಅವಕಾಶ ಮಾಡಿಕೊಟ್ಟರು. ಎರಡೂ ತಂಡಗಳ ಒಟ್ಟಾರೆ ಶ್ರಮದಿಂದ ಸುಮಾರು 3,000 ಕಿಲೋ ತ್ಯಾಜ್ಯವನ್ನು ಸಂಗ್ರಹಿಸಿ ವಿಲೇವಾರಿ ಮಾಡಲಾಯಿತು.



ಸೇಂಟ್ ಆನ್ಸ್ ಕಾಲೇಜು ರಸ್ತೆಯ ಇಕ್ಕೆಲ ಸ್ವಚ್ಛತಾ ಶ್ರಮದಾನ.

ಅನಧಿಕೃತ ನಿಲುಗಡೆಗೆ ತಡೆಗೆ ಮನವಿ

ಈ ಶ್ರಮದಾನದ ವೇಳೆ ರೋಸಾರಿಯೋ ಹಾಲ್‌ನಿಂದ ಸ್ಟೇಟ್ ಬ್ಯಾಂಕ್ ಸಂಪರ್ಕ ರಸ್ತೆಯವರೆಗೆ ಅನೇಕ ಲಾರಿಗಳು, ಕಾರುಗಳು ಮತ್ತು ಹಳೆಯ ವಾಹನಗಳನ್ನು ದೀರ್ಘಕಾಲ ರಸ್ತೆ ಬದಿಯಲ್ಲಿ ನಿಲ್ಲಿಸಲಾಗಿದ್ದು, ಸಾರ್ವಜನಿಕ ರಸ್ತೆಯನ್ನು ಖಾಸಗಿ ಪಾರ್ಕಿಂಗ್ ಸ್ಥಳವಾಗಿ ಬಳಸಲಾಗುತ್ತಿದೆ. ಈ ರೀತಿಯ ಅನಧಿಕೃತ ಪಾರ್ಕಿಂಗ್‌ನಿಂದ ಕತ್ತಲು ಪ್ರದೇಶಗಳು ಉಂಟಾಗಿ, ಬ್ಲ್ಯಾಕ್ ಸ್ಪಾಟ್‌ಗಳು ರೂಪುಗೊಳ್ಳುತ್ತಿವೆ ಹಾಗೂ ಅಕ್ರಮ ಚಟುವಟಿಕೆಗಳಿಗೆ ಅವಕಾಶವಾಗಬಹುದು. ಇದರಿಂದಪ್ರತಿದಿನಸಂಚರಿಸುವವಿದ್ಯಾರ್ಥಿಗಳು ಮತ್ತು ಮಕ್ಕಳ ಆರೋಗ್ಯ ಹಾಗೂ ಭದ್ರತೆಗೆ ಅಪಾಯ ಉಂಟಾಗಬಹುದು. ಇಂತಹ ಪಾರ್ಕಿಂಗ್‌ಗೆ ತಡೆ ನೀಡಿ ಅಥವಾ ಪೇ ಪಾರ್ಕಿಂಗ್ ವ್ಯವಸ್ಥೆ ಜಾರಿಗೊಳಿಸಿ, ಸಾರ್ವಜನಿಕಶಿಸ್ತಿನೊಂದಿಗೆಆದಾಯವೂಸೃಷ್ಟಿಯಾಗುವಂತೆ ಕ್ರಮ ಕೈಗೊಳ್ಳಬಹುದು ಎಂದು ಅಭಿಯಾನದ ಸ್ವಯಂಸೇವಕರು ನಗರ ಪಾಲಿಕೆಗೆ ಮನವಿ ಸಲ್ಲಿಸಲಿದ್ದಾರೆ.

ನಾಳೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ

ಮಂಗಳೂರು: ಮುತ್ತೂಟ್ ಫಿನಾನ್ಸ್, ಬ್ಲಿಂಕಿಟ್ ಹಾಗೂ ರಿಲಯನ್ಸ್ ಸ್ಮಾರ್ಟ್ ಬಜಾರ್‌ಕಂಪೆನಿಯ ವತಿಯಿಂದ ಮಂಗಳೂರಿನಲ್ಲಿ ಖಾಲಿಯಿರುವ ಇಂಟರ್ನ್, ಕಸ್ಟಮರ್ ಕೇರ್ ಎಕ್ಸಿಕ್ಯೂಟಿವ್, ಸೇಲ್ಸ್ ಎಕ್ಸಿಕ್ಯೂಟಿವ್, ಕ್ಯಾಪ್ಟನ್(ಪಿಕ್ಕರ್ಸ್) ಹುದ್ದೆಗಳಿಗೆ ಮೇ 6 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1.30ರ ವರೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ಆಯೋಜಿಸಲಾಗಿದೆ. ನೇರ ಸಂದರ್ಶನದಲ್ಲಿ ಪಿ.ಯು.ಸಿ. ಅಥವಾ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಸ್ವ-ವಿವರವುಳ್ಳ ಬಯೋಡೇಟಾದೊಂದಿಗೆ ಭಾಗವಹಿಸಬಹುದು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಮಂಗಳೂರು ಇಲ್ಲಿ ಸಂಪರ್ಕಿಸಬಹುದು ಜಿಲ್ಲಾ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಚಾರ ದಟ್ಟಣೆ | ಬೆಳ್ತಂಗಡಿ ಸಂತೆಗೆ ಹಲವು ದಶಕಗಳ ಇತಿಹಾಸ | ಸಂತೆ ಜನತೆಗೆ ಖುಷಿ ಕೊಡುವ ಬದಲಾಗಿ ಸಂಕಷ್ಟಕ್ಕೆ ಎಡೆ

ಬೆಳ್ತಂಗಡಿ: ಸಂತೆ ದಿನ ರಾ. ಹೆದ್ದಾರಿ ಟ್ರಾಫಿಕ್ ಜಾಮ್!

• **ಕನ್ನಡಪ್ರಭ ವಾರ್ತೆ** ಬೆಳ್ತಂಗಡಿ

ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ಟ್ರಾಫಿಕ್ ಜಾಮ್ ಗೆ ಕುಖ್ಯಾತಿಯಾಗುತ್ತಿದೆ ಬೆಳ್ತಂಗಡಿ ಪೇಟೆ. ಇಲ್ಲಿ ಸೋಮವಾರ ಸಂತೆಯ ದಿನ. ಸಂತೆ ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ನಡೆಯುವ ಕಾರಣ ಸೋಮವಾರ ಇನ್ನೂ ಹೆಚ್ಚಿನ ಟ್ರಾಫಿಕ್ ಜಾಮ್ ಆಗುತ್ತಿದೆ. ಆದರೂ ಸಂತೆಯನ್ನು ಬೇರೆಡೆಗೆ ಸ್ಥಳಾಂತರಿಸುವ ಯಾವುದೇ ಕಾರ್ಯ ನಡೆಯುತ್ತಿಲ್ಲ ಎಂಬುದು ಆಶ್ಚರ್ಯಕರವಾಗಿದೆ.

ಬೆಳ್ತಂಗಡಿ ಸಂತೆಗೆ ಹಲವು ದಶಕಗಳ ಇತಿಹಾಸವಿದೆ. ಈ ಹಿಂದೆ ವಾಹನಗಳ ಸಂಖ್ಯೆ ಕಡಿಮೆಯಾಗಿದ್ದ ಸಂದರ್ಭದಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ. ಈಗ ವಾಹನಗಳ ಸಂಖ್ಯೆ ಹೆಚ್ಚಿರುವ ಕಾರಣ ವಾರದ ಸಂತೆ ಜನತೆಗೆ ಖುಷಿ ಕೊಡುವ ಬದಲಾಗಿ ಸಂಕಷ್ಟಕ್ಕೆ ಎಡೆಮಾಡಿಕೊಟ್ಟಿದೆ.

ರಾಷ್ಟ್ರೀಯ ಹೆದ್ದಾರಿಯಲ್ಲೆ ಸಂತೆ: ಬಿ.ಸಿ ರೋಡ್- ಕಡೂರು ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ಬೆಳ್ತಂಗಡಿಯ ವಾರದ ಸಂತೆ ಸಂತೆಕಟ್ಟೆ ಪ್ರದೇಶದಲ್ಲಿ ನಡೆಯುತ್ತದೆ. ಸೋಮವಾರ ಒಂದು ದಿನಕ್ಕೆ ಸೀಮಿತವಾಗಿರುವ ಈ ಸಂತೆಯಲ್ಲಿ ತಾಲೂಕಿನ ಗ್ರಾಮೀಣ ಪ್ರದೇಶದ ರೈತರು ಸೇರಿದಂತೆ ವಿವಿಧ ಜಿಲ್ಲೆಯ ರೈತರು ತರಕಾರಿ ಸೇರಿದಂತೆ ನಿತ್ಯೋಪಯೋಗಿ ವಸ್ತುಗಳು, ಹಣ್ಣುಹಂಪಲುಗಳನ್ನು ರಸ್ತೆ ಬದಿಯಲ್ಲೇ ಮಾರಾಟ ಮಾಡುತ್ತಾರೆ. ಸಂತೆ ಏಲಂ ಪಡೆದುಕೊಂಡವರು ಪರ್ಯಾಯ ವ್ಯವಸ್ಥೆ ಮಾಡದೇ ಪ್ರತಿ ವಾರ ರೈತರಿಂದ ವಸೂಲಿಗೆ ಮಾತ್ರ ಬರುತ್ತಾರೆ ಎಂಬ ಆರೋಪವಿದೆ.

ಸಂತೆ ಪ್ರಾಂಗಣದಲ್ಲಿ ಸ್ಥಳವಿಲ್ಲ: ಬೆಳ್ತಂಗಡಿ ಸಂತೆಕಟ್ಟೆಯಲ್ಲಿ ಸಂತೆ ಪ್ರಾಂಗಣವಿದೆ. ಇದು ನಿತ್ಯ ಅಂಗಡಿ ನಡೆಸುವವರು ಏಲಂ ಮೂಲಕ ಪಡೆದುಕೊಂಡು ಅಂಗಡಿ ನಡೆಸುತ್ತಿದ್ದಾರೆ. ಅದು ಬಿಟ್ಟರೆ ವಾರದ ಸಂತೆಯ ದಿನ ನಾಲ್ಕೈದು ಅಂಗಡಿಗಳಿಗೆ ಮಾತ್ರ ಸ್ಥಳಾವಕಾಶ ಇದೆ. ಇದರಿಂದಾಗಿ ಅನಿವಾರ್ಯವಾಗಿ ವಾರದ ಸಂತೆ ರಾಷ್ಟ್ರೀಯ ಹೆದ್ದಾರಿಯಲ್ಲೇ ನಡೆಯುವಂತಾಗಿದೆ.



ಸಂತೆ ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ನಡೆಯುವ ಕಾರಣ ಟ್ರಾಫಿಕ್ ಜಾಮ್ ಆಗಿರುವುದು.

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿ: ಪುಂಜಾಲಕಟ್ಟೆಯಿಂದ ಚಾರ್ಮಾಡಿ ತನಕದ ರಾಷ್ಟ್ರೀಯ ಹೆದ್ದಾರಿಯ ಅಭಿವೃದ್ಧಿ ಕಾಮಗಾರಿಯು ಭರದಿಂದ ನಡೆಯುತ್ತಿದ್ದು , ಪ್ರಸ್ತುತ ಬೆಳ್ತಂಗಡಿ ಸಂತೆಕಟ್ಟೆ ಪ್ರದೇಶದಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದು , ಇದೇ ಸಮಯದಲ್ಲಿ ವಾರದ ಸಂತೆಯೂ ರಾಷ್ಟ್ರೀಯ ಹೆದ್ದಾರಿಯಲ್ಲೇ ನಡೆಯುತ್ತಿರುವುದು ಇತ್ತ ಟ್ರಾಫಿಕ್ ಜಾಮ್ ಜೊತೆಗೆ ರಸ್ತೆ ಕಾಮಗಾರಿಗೆ ಅಡ್ಡಿಯಾಗಿದೆ.

ವಾರದ ಸಂತೆಗೆ ಪರ್ಯಾಯ ವ್ಯವಸ್ಥೆ ಬೇಕಾಗಿದೆ : ಈ ಹಿಂದೆ 2018 ರಲ್ಲಿ ಅಂದಿನ ತಹಸೀಲ್ದಾರ್‌ಆಗಿದ್ದ ಗಣಪತಿ ಶಾಸ್ತ್ರಿ ಹಾಗೂ ಶಾಸಕ ಹರೀಶ್ ಪೂಂಜ ಅವರು ಟ್ರಾಫಿಕ್ ಜಾಮ್ ಆಗುತ್ತಿರುವುದನ್ನು ಮನಗಂಡು ವಾರದ ಸಂತೆಯನ್ನು ವಾಣಿ ಕಾಲೇಜ್ ಸಮೀಪದ ಎಪಿಎಂಸಿ ಪ್ರಾಂಗಣಕ್ಕೆ ಸ್ಥಳಾಂತರಗೊಳಿಸಿದರು. ಅಲ್ಲಿ ವ್ಯಾಪಾರ ವ್ಯವಹಾರ ಅಷ್ಟಕಷ್ಟೇ ಇತ್ತು. ಹೀಗಾಗಿ ಗಣಪತಿ ಶಾಸ್ತ್ರೀ ಅವರು ವರ್ಗಾವಣೆ ಯಾದ ಬಳಿಕ ಏಕಾಏಕಿ ವಾರದ ಸಂತೆ ಮತ್ತೆ ಸಂತೆಕಟ್ಟೆಯ ರಾಷ್ಟ್ರೀಯ ಹೆದ್ದಾರಿ ಬದಿಗಳಲ್ಲಿ ಪ್ರಾರಂಭವಾಯಿತು. ಸಂತೆಕಟ್ಟೆಯ ಸಮೀಪವೇ ಮಾರಿಗುಡಿ ಮೈದಾನವಿದ್ದು ಇಲ್ಲಿಗೆ ವಾರದ ಸಂತೆಯನ್ನು ಸ್ಥಳಾಂತರಗೊಳಿಸಲು ಕ್ರಮ ಕೈಗೊಂಡರೆ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಸಾಧ್ಯವಿದೆಯಾದರೂ ಸ್ಥಳಾಂತರಿಸುವವರು ಯಾರು ಎಂಬ ಪ್ರಶ್ನೆಗೆ ಉತ್ತರ ಇಲ್ಲದಂತಾಗಿದೆ.

ಕುಂದಾಪುರ: ಎಂಐಟಿಯಲ್ಲಿ ವಿಶ್ವ ಭೂ ಸಪ್ತಾಹ ಆಚರಣೆ



ಮೂಡ್ಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ವಿಶ್ವ ಭೂ ಸಪ್ತಾಹವನ್ನು ಆಚರಿಸಲಾಯಿತು

• **ಕನ್ನಡಪ್ರಭ ವಾರ್ತೆ** ಕುಂದಾಪುರ

ಇಲ್ಲಿನ ಮೂಡ್ಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ)ಯಲ್ಲಿ ವಿಶ್ವ ಭೂ ಸಪ್ತಾಹದ ಅಂಗವಾಗಿ ರಿಸರ್ಚ್ ಹೈಟ್ಸ್ ಫೌಂಡೇಶನ್ ಆಶ್ರಯದಲ್ಲಿ ಹಾಗೂ ಎನ್ವಿರಾನ್ಮೆಂಟ್ ಪ್ರೊಟೆಕ್ಷನ್ ಟ್ರೈನಿಂಗ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸಹಯೋಗದಲ್ಲಿ 'ಇಂಡಿಯಾ ಎನ್ವಿರಾನ್‌ಮೆಂಟ್ ಪ್ರೋಗ್ರಾಂ-ಇಂಡಿಯಾ ಸಸ್ಟೇನಬಲ್ ಕ್ಯಾಂಪಸ್ ಮಿಷನ್ 2026' ಎಂಬ ಒಂದು ವಾರ ಕಾಲ ಅಭಿಯಾನವನ್ನು ಆಯೋಜಿಸಲಾಗಿತ್ತು.

ಈ 'ಅರ್ಥ್ ವೀಕ್' ಸಂಭ್ರಮಾಚರಣೆಯ ಭಾಗವಾಗಿ, ಕ್ಯಾಂಪಸ್‌ನಲ್ಲಿ ಸುಸ್ಥಿರ ಜೀವನಶೈಲಿ ಮತ್ತು ಪರಿಸರ ಜಾಗೃತಿಯನ್ನು ಉತ್ತೇಜಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿತ್ತು.

■ ತ್ಯಾಜ್ಯ ನಿರ್ವಹಣೆ, ಹಸಿರು ಅಭ್ಯಾಸಗಳ ಅಳವಡಿಕೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು.

ತ್ಯಾಜ್ಯ ನಿರ್ವಹಣೆ, ಹಸಿರು ಅಭ್ಯಾಸಗಳ ಅಳವಡಿಕೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸಲು ಮತ್ತು ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳು ಉತ್ಸಾಹದಿಂದ ಪ್ರತಿಜ್ಞೆ ಮಾಡಿದರು. ಕಾಲೇಜಿನ ಪ್ರಾಂಶುಪಾಲರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಮುಖ್ಯಸ್ಥರು, ಉಪನ್ಯಾಸಕರು ಹಾಗೂ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ತಮಿಳುನಾಡಿಗೆ ವಿಜಯ್ ಹೊಸ 'ಜನ'ನಾಯಕ

60 ವರ್ಷದ ದ್ರಾವಿಡ ಪಕ್ಷಗಳ ಆಧಿಪತ್ಯಕ್ಕೆ ಬ್ರೇಕ್ | ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಟಿವಿಕೆ | ಡಿಎಂಕೆಗೆ ಆಘಾತ ನೀಡಿದ ಚಿತ್ರ ನಟ | ಎಐಎಡಿಎಂಕೆ ನಂ.3

ಚೆನ್ನೈ: ಸತತ 60 ವರ್ಷಗಳಿಂದ ದ್ರಾವಿಡ ಪಕ್ಷಗಳಾದ ಡಿಎಂಕೆ, ಅಣ್ಣಾಡಿಎಂಕೆ ಪಕ್ಷಗಳ ರಾಜಕೀಯದ ಅಂಗಳವಾಗಿದ್ದ ತಮಿಳುನಾಡಿನಲ್ಲಿ ಹೊಸ ನಾಯಕನ ಉದಯವಾಗಿದೆ. ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆ ಸರ್ಕಾರದ ಅಬ್ಬರ, ವಿಪಕ್ಷ ಅಣ್ಣಾಡಿಎಂಕೆ ಭಾರೀ ಪ್ರತಿಸ್ಪರ್ಧೆಯನ್ನು ಮೆಟ್ಟಿನಿಲ್ಲುವಲ್ಲಿ ಯಶಸ್ವಿಯಾಗಿರುವ ನಟ, ಟಿವಿಕೆ ಪಕ್ಷದ ಮುಖ್ಯಸ್ಥ ವಿಜಯ್, ತಮ್ಮ ಚೊಚ್ಚಲ ಚುನಾವಣೆಯಲ್ಲೇ ಭರ್ಜರಿ ಗೆಲುವು ಸಾಧಿಸುವ ಮೂಲಕ ಅಧಿಕಾರ ಹಿಡಿಯುವತ್ತ ಹೆಜ್ಜೆ ಹಾಕಿದ್ದಾರೆ.

ಆದರೆ 234 ಸ್ಥಾನಬಲದ ವಿಧಾನಸಭೆಯಲ್ಲಿ ಬಹುಮತಕ್ಕೆ ಅಗತ್ಯವಾದ 118 ಸ್ಥಾನಗಳು ಯಾವುದೇ ಪಕ್ಷಕ್ಕೂ ಸಿಗದೇ ಇರುವ ಕಾರಣ ಅತಂತ್ರ ವಿಧಾನಸಭೆ ರಚನೆಯಾಗಿದೆ. ಆದಾಗ್ಯೂ ಕಾಂಗ್ರೆಸ್ ಹಾಗೂ ಸಣ್ಣಪುಟ್ಟ ಪಕ್ಷಗಳ ಜತೆ ಅವರು ಸಂಪರ್ಕದಲ್ಲಿದ್ದು, ಮೈತ್ರಿ ಮಾಡಿಕೊಳ್ಳುವ ಮೂಲಕ ಬಹುಮತಕ್ಕೆ ಯತ್ನ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಹಾಲಿ ಅಧಿಕಾರದಲ್ಲಿದ್ದ ಡಿಎಂಕೆಯಲ್ಲಿ ಮುಖ್ಯಮಂತ್ರಿ ಎಂ. ಕೆ. ಸ್ಟಾಲಿನ್ ಆದಿಯಾಗಿ ಹಲವು ಸಚಿವರು ಆಘಾತಕಾರಿ ಸೋಲು ಕಂಡಿದ್ದಾರೆ. ಪಕ್ಷ 2ನೇ ಸ್ಥಾನಕ್ಕೆ ಕುಸಿದಿದೆ. ಮತ್ತೊಂದೆಡೆ ಅಧಿಕಾರಕ್ಕೆ ಮರಳುವ ಆಶಯದಲ್ಲಿದ್ದ ಎಡಪ್ಪಾಡಿ ಪಳನಿಸ್ವಾಮಿ ನೇತೃತ್ವದ ಅಣ್ಣಾಡಿಎಂಕೆ 3ನೇ ಸ್ಥಾನ ತಲುಪಿದೆ. ಸರ್ಕಾರ ರಚನೆಗಾಗಿ ವಿಜಯ್, ಚುನಾವಣೆ ವೇಳೆ ತಾವು ಬಹುವಾಗಿ ಟೀಕಿಸಿದ್ದ ಡಿಎಂಕೆ ಬೆಂಬಲ ಪಡೆಯುತ್ತಾರೋ ಅಥವಾ ಸೈದ್ಧಾಂತಿಕವಾಗಿ ಸಾಕಷ್ಟು ಭಿನ್ನಾಭಿಪ್ರಾಯ ಹೊಂದಿರುವ ಬಿಜೆಪಿ ಜೊತೆ ನಂಟು ಹೊಂದಿರುವ ಅಣ್ಣಾಡಿಎಂಕೆ ಜತೆಗೆ ಮೈತ್ರಿ ಮಾಡಿಕೊಳ್ಳುತ್ತಾರೋ ಎಂಬ ಕುತೂಹಲ ಇದೆ.

ಆಧಿಪತ್ಯ ಅಂತ್ಯ: ಕಾಂಗ್ರೆಸ್ ಸರ್ಕಾರ ಪತನಗೊಳಿಸಿ 1967ರಲ್ಲಿ ಸಿ.ಎನ್.ಅಣ್ಣಾದೊರೈ ನಾಯಕತ್ವದ ಡಿಎಂಕೆ ಅಧಿಕಾರಕ್ಕೆ ಬರುವುದರೊಂದಿಗೆ ತಮಿಳ್ನಾಡಲ್ಲಿ ಕೇವಲ ಡಿಎಂಕೆ ಮತ್ತು ಅಣ್ಣಾಡಿಎಂಕೆ ಪಕ್ಷಗಳದ್ದೇ ಆಧಿಪತ್ಯವಾಗಿತ್ತು. ಉಳಿದ ಪಕ್ಷಗಳಿಗೇನಿದ್ದರೂ ಮೈತ್ರಿಪಕ್ಷದ ಭಾಗ್ಯವಾಗಿತ್ತು. ಆದರೆ ತಮ್ಮನ್ನು ತಾವು ಮಾಡ್ರನ್ ದ್ರಾವಿಡ ನಾಯಕ ಎಂದು ಬಿಂಬಿಸಿಕೊಂಡು 2 ವರ್ಷಗಳ ಹಿಂದಷ್ಟೇ ರಾಜಕೀಯ ಪಕ್ಷ ಕಟ್ಟಿದ್ದ ವಿಜಯ್, ಯಾರೂ ಊಹಿಸದ ಸಾಧನೆ ಮಾಡಿ ಎಲ್ಲರನ್ನೂ ಅಚ್ಚರಿಗೆ ಗುರಿ ಮಾಡಿದ್ದಾರೆ.

ಇತರೆ ಪಕ್ಷಗಳಂತೆ ಹಲವು ಗ್ಯಾರಂಟಿಗಳು, ಮಹಿಳೆಯರು, ಯುವಸಮುದಾಯ ಗುರಿಯಾಗಿಸಿಕೊಂಡು ಘೋಷಿಸಿದ ಹಲವು ಚುನಾವಣಾ ಪ್ರಣಾಳಿಕೆಗಳ ಜೊತೆಗೆ, ಕ್ರೈಸ್ತ, ಅಲ್ಪಸಂಖ್ಯಾತ, ಹಿಂದುಳಿದ ಸಮುದಾಯ, ಮಹಿಳೆಯರು, ಯುವಸಮೂಹದ ಮತಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದು ವಿಜಯ್‌ಗೆ ಅಧಿಕಾರ ತಂದುಕೊಟ್ಟಿದೆ. ಇದರ ಜೊತೆಗೆ ಡಿಎಂಕೆ ಮತ್ತು ಅಣ್ಣಾಡಿಎಂಕೆ ಹೊರತಾದ, ಆದರೆ ಸ್ಥಳಿಯವಾದುದೇ ಆದಂತ ಪರ್ಯಾಯ ನಾಯಕತ್ವಕ್ಕೆ ಹುಡುಕಾಡುತ್ತಿದ್ದ ಜನರಿಗೆ ವಿಜಯ್ ಸೂಕ್ತವಾಗಿ ಕಂಡಿದ್ದು ಟಿವಿಕೆಗೆ ಗೆಲುವು ತಂದುಕೊಟ್ಟಿದೆ ಎಂದು ವಿಶ್ಲೇಷಿಸಲಾಗಿದೆ.

ಇನ್ನೊಂದೆಡೆ ಕುಟುಂಬ ರಾಜಕಾರಣ, ಭ್ರಷ್ಟಾಚಾರ, ಹೊಸತನವಿಲ್ಲದ ಆಡಳಿತ, ಆಡಳಿತವಿರೋಧಿ ಅಲೆಗೆ ಸಿಕ್ಕ ಡಿಎಂಕೆ ಆಘಾತಕಾರಿ ಸೋಲುಕಂಡಿದೆ. ಬಹುತೇಕ ಸಮೀಕ್ಷೆಗಳು ಮರಳಿ ಡಿಎಂಕೆ ಗೆಲುವಿನ ಸುಳಿವು ನೀಡಿದ್ದ ಕಾರಣ, ಪಕ್ಷ ಸಂಭ್ರಮಾಚರಣೆಗೂ ಸಿದ್ಧತೆ ಮಾಡಿಕೊಂಡಿತ್ತು. ಆದರೆ ಸೋಮವಾರ ಬೆಳಗ್ಗೆ ಕೆಲ ಹೊತ್ತು ಮತ ಎಣಿಕೆ ವೇಳೆ ಮುನ್ನಡೆ ಸಾಧಿಸಿದ್ದು ಬಿಟ್ಟರೆ ಮತ್ತೆ ಕಂಡುಬಂದಿದ್ದು ವಿಜಯ್ ನಾಗಾಲೋಟ. ಅದನ್ನು ಕಟ್ಟಿಹಾಕಲು ಆಡಳಿತಾರೂಢ ಡಿಎಂಕೆ ಸಂಪೂರ್ಣ ವಿಫಲವಾಯ್ತು.

ಇನ್ನೊಂದೆಡೆ ಡಿಎಂಕೆಗೆ ಪರ್ಯಾಯವೆಂದೇ ಬಿಂಬಿತವಾಗಿದ್ದ ಅಣ್ಣಾಡಿಎಂಕೆ ತನ್ನ ಆಂತರಿಕ ಬಿಕ್ಕಟ್ಟು, ಪ್ರಭಾವಿ ನಾಯಕತ್ವದ ಕೊರತೆ ಮತ್ತು ವಿಜಯ್‌ರ ಅಲೆಯ ಅಬ್ಬರಕ್ಕೆ ಸಿಲುಕಿ ಮೂರನೇ ಸ್ಥಾನಕ್ಕೆ ತೃಪ್ತಿಪಡಬೇಕಾಗಿ ಬಂತು.

ಮೂರೂ ಪಕ್ಷಗಳು ಭರ್ಜರಿ ಗ್ಯಾರಂಟಿ ಘೋಷಣೆ ಮಾಡುವ ಮೂಲಕ ಜನರ ಗಮನ ಸೆಳೆಯುವ ಯತ್ನ ಮಾಡಿದ್ದವಾದರೂ, ಪರ್ಯಾಯ, ಹೊಸತನ ಮತ್ತು 'ಜನ' ನಾಯಕತ್ವದ ಹುಡುಕಾಟ ವಿಜಯ್ ಅವರಿಗೆ ಜಯದ ಮಾಲೆ ಹಾಕಿದೆ.

ಟಿವಿಕೆ ಗೆದ್ದಿದ್ದು ಹೇಗೆ

- ಡಿಎಂಕೆ,ಎಐಎಡಿಎಂಕೆಗೆ ಪರ್ಯಾಯ ನಾಯಕನಾಗಿ ಗುರುತಿಸಿಕೊಳ್ಳುವಲ್ಲಿ ಟಿವಿಕೆ ಮುಖ್ಯಸ್ಥ ವಿಜಯ್ ಯಶಸ್ವಿ
- ದಲಿತ, ಕ್ರೈಸ್ತ, ಮಹಿಳೆಯರು ಹಾಗು ಯುವಸಮೂಹವನ್ನು ಸೆಳೆಯುವಲ್ಲಿ ಯಶಸ್ವಿಯಾದ ಟಿವಿಕೆ ಪಕ್ಷ
- ಡಿಎಂಕೆಯ ಕುಟುಂಬ ರಾಜಕಾರಣ ಹಾಗೂ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಜನರ ಗಮನ ಸೆಳೆದ ವಿಜಯ್
- ನಗರ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಭಾಗದ ಜನರ ಮತ ಸೆಳೆಯುವಲ್ಲಿ ಟಿವಿಕೆ ಹೆಚ್ಚಿನ ಯಶಸ್ಸು
- ಮೈತ್ರಿ ಆಫರ್ ಹೊರತಾಗಿಯೂ ಟಿವಿಕೆ ಏಕಾಂಗಿಯಾಗಿ ಸ್ಪರ್ಧಿಸಿ ಭಿನ್ನವಾಗಿ ಗುರುತಿಸಿಕೊಂಡಿದ್ದು
- ಚಿತ್ರರಂಗದಲ್ಲಿ ತನಗಿದ್ದ ಬೆಂಬಲವನ್ನು ಮತವಾಗಿ ಪರಿವರ್ತಿಸುವಲ್ಲಿ ವಿಜಯ್ ಯಶಸ್ವಿಯಾಗಿದ್ದು
- ಸಾಂಪ್ರದಾಯಿಕ ದ್ರಾವಿಡ ಪರಿಕಲ್ಪನೆ ಬಿಟ್ಟು, ಆಧುನಿಕ ದ್ರಾವಿಡ ಪರಿಕಲ್ಪನೆ ಬಗ್ಗೆ ವಿಜಯ್ ಮಾತು
- ಡಿಎಂಕೆ, ಬಿಜೆಪಿಯನ್ನು ದೂಷಿಸಿತೇ ಹೊರತು ವಿಜಯ್ ಅವರ ಪಕ್ಷವನ್ನು ಟೀಕಿಸಲು ಅಸ್ತ್ರಗಳೇ ಇರಲಿಲ್ಲ
- ಆಡಳಿತ ವಿರೋಧಿ ಅಲೆ ಮೆಟ್ಟಿನಿಲ್ಲುವಲ್ಲಿ ಡಿಎಂಕೆ ವಿಫಲ. ಅತಿ ಆತ್ಮವಿಶ್ವಾಸ ಸೋಲಿಗೆ ಕಾರಣ
- ಪನ್ನೀರಸೆಲ್ವಂ ಬಿಜೆಪಿ ಸೇರ್ಪಡೆ. ಪಕ್ಷ ವಿಭಜನೆಯಿಂದಾಗಿ ಎಐಎಡಿಎಂಕೆಗೆ ಹೊಡೆತ. ಹೀಗಾಗಿ ರಾಜ್ಯದಲ್ಲಿ ಡಿಎಂಕೆಗೆ ಪರ್ಯಾಯ ಪಕ್ಷವಾಗಿ ಹೊರಹೊಮ್ಮುವಲ್ಲಿ ವಿಫಲ

ತಮಿಳುನಾಡು (ಒಟ್ಟು ಸ್ಥಾನ: 234 / ಬಹುಮತಕ್ಕೆ: 118)				
ಪಕ್ಷ	ಸ್ಥಾನ	2021	ಲಾಭ/ನಷ್ಟ	% ಮತ
ಟಿವಿಕೆ	107	--	+107	35
ಡಿಎಂಕೆ+	74	159	-85	28
ಎಡಿಎಂಕೆ+	55	75	-23	27
ಇತರರು	1	0	+1	10

234 ಒಟ್ಟು ಸ್ಥಾನ

118 ಬಹುಮತಕ್ಕೆ



ಗೆದ್ದ ಪ್ರಮುಖರು

- ವಿಜಯ್ (2 ಕ್ಷೇತ್ರ–ಟಿವಿಕೆ)
- ಎಡಪ್ಪಾಡಿ ಪಳನಿಸ್ವಾಮಿ (ಅಣ್ಣಾಡಿಎಂಕೆ)
- ಉದಯನಿಧಿ ಸ್ಟಾಲಿನ್ (ಡಿಎಂಕೆ)
- ಒ. ಪನ್ನೀರ ಸೆಲ್ವಂ (ಡಿಎಂಕೆ)

ಸೋತ ಪ್ರಮುಖರು

- ತಮಿಳಿಸಾಯಿ ಸೌಂದರರಾಜನ್ (ಬಿಜೆಪಿ)
- ಎಂ.ಕೆ. ಸ್ಟಾಲಿನ್ (ಡಿಎಂಕೆ)
- ನಯನಾರ್ ನಾಗೇಂದ್ರನ್ (ಬಿಜೆಪಿ)





ದಳಪತಿ ಸಿಎಂ ಆಗೋದು ಫಿಕ್ಸ್?

ಸ್ಥಾಪನೆಯಾದ ಎರಡೇ ವರ್ಷಗಳಲ್ಲಿ ನಟ ವಿಜಯ್ ಅವರ ಟಿವಿಕೆ ಆಡಳಿತಾರೂಢ ಡಿಎಂಕೆಯನ್ನು ಧೂಳಿಪಟ ಮಾಡಿದೆ. ಈ ಮೂಲಕ ಚುನಾವಣೆಗೆ ಸ್ಪರ್ಧಿಸಿದ ಮೊದಲ ಬಾರಿಗೇ ವಿಜಯ್ ತಮಿಳುನಾಡಿದ ಮುಖ್ಯಮಂತ್ರಿಯಾಗುವತ್ತ ದಾಪುಗಾಲು ಇಟ್ಟಿದ್ದಾರೆ. ರಾಜ್ಯದಲ್ಲಿ ಸ್ಪಷ್ಟ ಬಹುಮತಕ್ಕೆ 118 ಸ್ಥಾನಗಳು ಬೇಕು. ಟಿವಿಕೆ ಇದಕ್ಕೆ ಹತ್ತಿರದಲ್ಲಿದೆ. ಕಾಂಗ್ರೆಸ್ ಪಕ್ಷ ಹಾಗೂ ಇತರ ಸಣ್ಣಪುಟ್ಟ ಪಕ್ಷಗಳ ಜತೆ ಅವರು ಸಂಪರ್ಕ ದಲ್ಲಿದ್ದಾರೆ ಎನ್ನಲಾಗಿದೆ. ಹೀಗಾಗಿ ಸೂಕ್ತ ಮೈತ್ರಿಯೊಂದಿಗೆ ಸರ್ಕಾರ ರಚಿಸಿ, ವಿಜಯ್ ಸಿಎಂ ಕುರ್ಚಿಯನ್ನು ಅಲಂಕರಿಸುವುದು ಬಹುತೇಕ ಖಚಿತವಾಗಿದೆ.

ಎರಡೂ ಕ್ಷೇತ್ರಗಳಲ್ಲಿ ವಿಜಯ್ ಗೆಲುವು

ಚೆನ್ನೈ: ತಮಿಳುನಾಡಿನಲ್ಲಿ ಸ್ಪರ್ಧಿಸಿದ್ದ ಚೊಚ್ಚಲ ಚುನಾವಣೆಯಲ್ಲಿ ಟಿವಿಕೆ ಪಕ್ಷ ಕಮಾಲ್ ಮಾಡಿರುವ ನಡುವೆ ಪಕ್ಷದ ಮುಖ್ಯಸ್ಥ ನಟ ವಿಜಯ್ ತಾವು ಸ್ಪರ್ಧಿಸಿದ್ದ ಎರಡೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದಾರೆ. ತಿರುಚಿರಾಪಳ್ಳಿ (ಪೂರ್ವ) ಮತ್ತು ಪೆರಂಬೂರಿನಲ್ಲಿ ಅವರು ವಿಜಯ ಸಾಧಿಸಿದ್ದಾರೆ. ಈ ಪೈಕಿ ಪೆರಂಬೂರಿನಲ್ಲಿ ಭರ್ಜರಿ 49,000 ಮತಗಳಿಂದ ಜಯ ಸಾಧಿಸಿದ್ದಾರೆ.

ಪಳನಿ ದಾಖಲೆ ಜಯ: ಎಡಪ್ಪಾಡಿ ವಿಧಾನಸಭಾ ಕ್ಷೇತ್ರದಿಂದ ಎಐಎಡಿಎಂಕೆ ಮುಖ್ಯಸ್ಥ ಪಳನಿಸ್ವಾಮಿ ದಾಖಲೆಯ ಅಂತರದಲ್ಲಿ ಗೆದ್ದಿದ್ದಾರೆ. ಸ್ವತಂತ್ರ ಅಭ್ಯರ್ಥಿ ಪ್ರೇಮ್‌ಕುಮಾರ್ ಅವರ ವಿರುದ್ಧ 98,110 ಮತಗಳಲ್ಲಿ ಅಂತರದಲ್ಲಿ ಗೆಲುವು ಪಡೆದಿದ್ದಾರೆ. ಇಲ್ಲಿ ಡಿಎಂಕೆ ಮೂರನೆಯ ಸ್ಥಾನಕ್ಕೆ ತಳ್ಳಲ್ಪಟ್ಟಿದೆ.

ತ್ರಿಶಾ ಹುಟ್ಟುಹಬ್ಬದ ದಿನವೇ ವಿಜಯ್‌ಗೆ ಗೆಲುವು!



ಚೆನ್ನೈ: ಸೋಮವಾರ ನಟಿ ತ್ರಿಶಾ ಕೃಷ್ಣನ್ ಜನ್ಮದಿನ ಇತ್ತು. ಆ ದಿನವೇ ವಿಜಯ್ ಅವರಟಿವಿಕೆ ತಮಿಳುನಾಡಲ್ಲಿ ಜಯಭೇರಿ ಬಾರಿಸಿದ್ದು ವಿಶೇಷ. ತ್ರಿಶಾ ಹಾಗೂ ವಿಜಯ್ ನಡುವೆ ಸಂಬಂಧ ಇದೆ ಎಂದು ಬಿಜೆಪಿ ನಾಯಕರೊಬ್ಬರು ಆರೋಪಿಸಿದಾಗ ಭಾರಿ ಸುದ್ದಿ ಆಗಿತ್ತು. ಬಳಿಕ ಇಬ್ಬರೂ ಒಟ್ಟಿಗೇ ಸಮಾರಂಭವೊಂದರಲ್ಲಿ ಕಾಣಿಸಿಕೊಂಡಿದ್ದರು. ಈ ನಡುವೆ, ತ್ರಿಶಾ ಜನ್ಮದಿನದ ನಿಮಿತ್ತ ತಿರುಪತಿ ವೆಂಕಟೇಶ್ವರನ ದರ್ಶನ ಪಡೆದರು. ಬಳಿಕ ವಿಜಯ್ ಮನೆಗೆ ಭೇಟಿ ನೀಡಿ ಸಂಭ್ರಮದಲ್ಲಿ ಪಾಲ್ಗೊಂಡರು.

ಸೀಟಿ ಊದಿ ವಿಜಯ್ ಕುಟುಂಬ, ಅಭಿಮಾನಿಗಳ ಸಂಭ್ರಮ




ತ.ನಾಡು ಚುನಾವಣೆಯಲ್ಲಿ ಸಿಎಂ ಸ್ಟಾಲಿನ್ ಸೇರಿ 15 ಸಚಿವರಿಗೆ ಪರಾಭವದ ಆಘಾತ!



ಚೆನ್ನೈ: ವಿಜಯ್ ಅವರ ಟಿವಿಕೆ ಪಕ್ಷದ ಶಿಳ್ಳೆ ಸದ್ದಿನ ಅಬ್ಬರದ ಪರಿಣಾಮವಾಗಿ ತಮಿಳುನಾಡು ಚುನಾವಣೆಯಲ್ಲಿ ಮುಖ್ಯಮಂತ್ರಿ ಎಂ. ಕೆ. ಸ್ಟಾಲಿನ್ ಸೇರಿದಂತೆ 15 ಸಚಿವರು ಸೋಲು ಅನುಭವಿಸಿದ್ದಾರೆ. ಕೊಳತ್ತೂರಿನಿಂದ ಸಿಎಂ ಸ್ಟಾಲಿನ್, ಉಳಿದಂತೆ ಅವರ ಸಂಪುಟದಲ್ಲಿ ಸಚಿವರಾಗಿದ್ದ ದುರೈಮುರುಗನ್, ಪಿ. ಗೀತಾ ಜೀವನ್, ಎಂ. ಸುಬ್ರಮಣಿಯನ್, ಇ.ವಿ.ವೇಲು, ಶೇಖರಬಾಬು, ಟಿ.ಎಂ. ಅನ್ಬರಸನ್, ಕೆ.ಎನ್. ನೆಹರು, ಗೋವಿ ಚೆಜಿಯಾನ್, ನಜರ್, ಮತಿವೇಂಥನ್, ಟಿಆರ್‌ಬಿ ರಾಜಾ, ಕೆಕೆಎಸ್‌ಎಸ್‌ಆರ್ ರಾಮಚಂದ್ರನ್, ತಂಗಂ ತೇನರಸು ಸೋತಿದ್ದಾರೆ. ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಸೆಲ್ವ ಗಣಪತಿ ಕೂಡ ಪರಾಭವ ಕಂಡಿದ್ದಾರೆ. ಇದು ಡಿಎಂಕೆ ಮುಖಭಂಗ ಉಂಡುಮಾಡಿದೆ.

ವಿಜಯ್‌ಗೆ ರಾಗಾ ಮೆಚ್ಚುಗೆ ಮಾತು

ಚೆನ್ನೈ: ತಮಿಳುನಾಡಿನಲ್ಲಿ ಟಿವಿಕೆ ಏಕೈಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಬೆನ್ನಲ್ಲೇ ಪಕ್ಷದ ಅಧ್ಯಕ್ಷ ವಿಜಯ್ ಜತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಫೋನ್‌ನಲ್ಲಿ ಮಾತನಾಡಿ ಅಭಿನಂದಿಸಿದ್ದಾರೆ. ಟಿವಿಕೆಗೆ ಬಹುಮತ ಬಾರದ ಕಾರಣ ಕಾಂಗ್ರೆಸ್ ಜತೆ ಮೈತ್ರಿ ಚರ್ಚೆ ನಡೆದಿದೆ ಎಂಬ ಗುಸುಗುಸು ಬೆನ್ನಲ್ಲೇ ನಡೆದಿರುವ ಈ ಮಾತುಕತೆ ತೀವ್ರ ರಾಜಕೀಯ ಕುತೂಹಲ ಕೆರಳಿಸಿದೆ.



ಮಾತುಕತೆ ಬಳಿಕ ಹೇಳಿಕೆ ನೀಡಿರುವ ರಾಹುಲ್ 'ಈ ಜನಾದೇಶವು ಯುವಕರ ಬೆಳೆಯುತ್ತಿರುವ ಧ್ವನಿಯನ್ನು ಪ್ರತಿಬಿಂಬಿಸುತ್ತದೆ. ಅದನ್ನು ನಿರ್ಲಕ್ಷಿಸಲಾಗುವುದಿಲ್ಲ ಟಿವಿಕೆಯ ಅದ್ಭುತ ಫಲಿತಾಂಶಕ್ಕಾಗಿ ವಿಜಯ್‌ರನ್ನು ಅಭಿನಂದಿಸಿದ್ದೇನೆ' ಎಂದರು.

ಇದೇ ವೇಳೆ, ತಮಿಳುನಾಡು ಮತ್ತು ಪುದುಚೇರಿಯ ಕಾಂಗ್ರೆಸ್ ಕಾರ್ಯಕರ್ತರ ಕಠಿಣ ಪರಿಶ್ರಮ ಮತ್ತು ಬೆಂಬಲಕ್ಕಾಗಿ ಅವರು ಧನ್ಯವಾದಗಳನ್ನು ಅರ್ಪಿಸಿದರು ಹಾಗೂ ಕಾಂಗ್ರೆಸ್ ಪಕ್ಷವು ತಮಿಳುನಾಡು ಮತ್ತು ಪುದುಚೇರಿಯ ಜನರನ್ನು ರಕ್ಷಿಸುವುದನ್ನು ಮತ್ತು ಸೇವೆ ಮಾಡುವುದನ್ನು ಮುಂದುವರಿಸುತ್ತದೆ' ಎಂದು ಸ್ಪಷ್ಟಪಡಿಸಿದರು.

ಅತ್ತ ಸೋತ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ, ತಮಿಳುನಾಡಿನ ಎಂ.ಕೆ. ಸ್ಟಾಲಿನ್ ಜತೆಗೂ ರಾಹುಲ್ ಮಾತನಾಡಿ, ಸೋಲಿನ ಪರಾಮರ್ಶೆ ನಡೆಸಿದರು.



ವಂಶಪಾರಂಪರ್ಯಕ್ಕೆ ಬ್ರೇಕ್

ತಮಿಳುನಾಡು ಜನರ ತೀರ್ಪಿಗೆ ತಲೆ ಬಾಗುತ್ತೇನೆ. ಮತ ಖರೀದಿಸುವಂತಿಲ್ಲ. ವಂಶಪಾರಂಪರ್ಯ ರಾಜಕಾರಣ ಬೇಡ ಎಂದು ರಾಜ್ಯದ ಜನತೆ ಒಂದೇ ಧ್ವನಿಯಲ್ಲಿ ಮಾತನಾಡಿರುವುದು ನೋಡಿ ಸಂತಸವಾಗಿದೆ. ಟಿವಿಕೆಗೆ ಅಭಿನಂದನೆಗಳು.


- **ಅಣ್ಣಾಮಲೈ**, ಬಿಜೆಪಿ ನಾಯಕ



ಜನರ ಕನಸು ಈಡೇರಿಕೆ

ತಮಿಳುನಾಡು ಜನರು ನನ್ನ ಮಗನಿಂದ ದೊಡ್ಡದನ್ನು ನಿರೀಕ್ಷಿಸುತ್ತಿದ್ದಾರೆ. ಅವನು ಖಂಡಿತವಾಗಿಯೂ ಅದನ್ನು ಈಡೇರಿಸುತ್ತಾನೆ. ರಾಜ್ಯದ ವಿಚಾರದಲ್ಲಿ ಅವನಿಗೆ ದೊಡ್ಡ ಕನಸುಗಳಿವೆ. ಅವನು ಅದನ್ನು ಮಾಡಲಿ.

- **ಚಂದ್ರಶೇಖರ್**, ವಿಜಯ್ ತಂದೆ



ಜನರ ತೀರ್ಪಿಗೆ ಒಪ್ಪಿಗೆ

ಜನರೇ ನ್ಯಾಯಾಧೀಶರು. ಅವರು ನೀಡಿದ ತೀರ್ಪನ್ನು ನಾನು ಸಂಪೂರ್ಣವಾಗಿ ಸ್ವೀಕರಿಸುತ್ತೇನೆ. ಈ ಸೋಲಿನಿಂದ ಶೀಘ್ರದಲ್ಲಿಯೇ ಚೇತರಿಸಿಕೊಳ್ಳುತ್ತೇವೆ. ಶ್ರಮಿಸಿದ ಕಾರ್ಯಕರ್ತರಿಗೆ ಧನ್ಯವಾದಗಳು.

- **ಎ.ಪಳನಿಸ್ವಾಮಿ**, ಎಐಎಡಿಎಂಕೆ ಅಧ್ಯಕ್ಷ



ಜನಾದೇಶ ಸ್ವೀಕಾರ

ನನ್ನ ಆತ್ಮಸಾಕ್ಷಿಗೆ ಅನುಗುಣವಾಗಿ, ಸಾಮರ್ಥ್ಯಕ್ಕೂ ಮೀರಿ ಕೆಲಸ ಮಾಡಿದ್ದೇನೆ. ಡಿಎಂಕೆ ಆಡಳಿತ ಪಕ್ಷವಾಗಿ ಉತ್ತಮ ಕೆಲಸ ಮಾಡಿದೆ. ಆದರೆ ಜನರ ಆದೇಶಕ್ಕೆ ತಲೆ ಬಾಗುತ್ತೇನೆ. ಇಂದಿನಿಂದ ಡಿಎಂಕೆ ಉತ್ತಮ ವಿಪಕ್ಷವಾಗಿ ಕೆಲಸ ಮಾಡುತ್ತದೆ.

- **ಎಂ.ಕೆ. ಸ್ಟಾಲಿನ್**, ತ.ನಾಡು ಸಿಎಂ

ವಿಜಯದ ಹಿಂದಿದೆ 17 ವರ್ಷದ ರಹಸ್ಯ!

ಎಂಜಿಆರ್ ನಂತರ ಪಕ್ಷ ಕಟ್ಟಿ ಅಧಿಕಾರಕ್ಕೇರಿದ ಮೊದಲ ನಟ | 60 ವರ್ಷದ ಬಳಿಕ ತ.ನಾಡಲ್ಲಿ ದ್ರಾವಿಡ ಪಕ್ಷಗಳ ಆಟಕ್ಕೆ ಬ್ರೇಕ್

ನಟ ವಿಜಯ್ ಗೆದ್ದಿದ್ದು ಹೇಗೆ?

ಡಿಎಂಕೆಯಿಂದ ಅಮಾನತುಗೊಂಡ ನಂತರ ಎಂ.ಜಿ.ರಾಮಚಂದ್ರನ್ ಅಣ್ಣಾಡಿಎಂಕೆ ಎಂಬ ಹೊಸ ಪಕ್ಷವನ್ನು ಕಟ್ಟಿ ತಮಿಳುನಾಡನ್ನು ಆಳಿದ್ದು ಇತಿಹಾಸ. ಅದಾದ ಬಳಿಕ ವಿಜಯಕಾಂತ್, ಕಮಲಹಾಸನ್‌ರಂತಹ ಪ್ರಸಿದ್ಧ ನಟರು ಪಕ್ಷ ಕಟ್ಟಿದರೂ ಅಧಿಕಾರ ಗಗನಕುಸುಮ ಆಯಿತು. ಆದರೆ 50 ವರ್ಷಗಳ ಬಳಿಕ ವಿಜಯ್ ತಮಿಳುನಾಡಿನಲ್ಲಿ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಎಂಜಿಆರ್ ಬಳಿಕ, ಪಕ್ಷ ಕಟ್ಟಿ ಮೊದಲ ಹಂತದಲ್ಲೇ ಅಧಿಕಾರಕ್ಕೆ ತಂದ ಮೊದಲ ಸಿನಿಮಾ ನಟ ಎಂಬ ಚರಿತ್ರೆ ನಿರ್ಮಿಸಿದ್ದಾರೆ. ಜಯಲಲಿತಾ ಅವರೂ ಸಿನಿಮಾ ನಟಿ. ಅವರು ಚುನಾವಣೆ ಎದುರಿಸಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದರಾದರೂ, ಅಣ್ಣಾಡಿಎಂಕೆ ಎಂಬುದು ಅವರು ಕಟ್ಟಿದ ಪಕ್ಷವಲ್ಲ. ಎಂಜಿಆರ್‌ರಿಂದಾಗಿ ಅದಾಗಲೇ ದೈತ್ಯವಾಗಿ ಬೆಳೆದಿದ್ದ ಪಕ್ಷವನ್ನು ಅವರು ಮುಂದುವರಿಸಿಕೊಂಡು ಹೋದವರು.

ಕಳೆದ 60 ವರ್ಷದಿಂದ ರಾಜ್ಯದಲ್ಲಿ ಡಿಎಂಕೆ ಹಾಗೂ ಅಣ್ಣಾಡಿಎಂಕೆಯದ್ದೇ ಪಾರುಪತ್ಯ. ಇದೇ ಮೊದಲ ಸಲ ಎರಡೂ ಪಕ್ಷಗಳಿಗೆ ಸೇರಿಲ್ಲದ ವ್ಯಕ್ತಿ ಸಿಎಂ ಆಗುತ್ತಿದ್ದಾರೆ.

2009ರಲ್ಲೇ ರಾಜಕೀಯ ಬುನಾದಿ!

ಎರಡು ವರ್ಷದ ಹಿಂದೆ ವಿಜಯ್ ಪಕ್ಷ ಕಟ್ಟಿ, ಇದೆಲ್ಲವನ್ನೂ ಸಾಕಾರಗೊಳಿಸಿಕೊಂಡರು ಎಂದು ಹಲವು ವಿಶ್ಲೇಷಕರು ಹೇಳುತ್ತಿದ್ದಾರೆ. ಆದರೆ, ವಿಜಯ್ ಅವರ ರಾಜಕೀಯ ಪ್ರಯತ್ನಕ್ಕೆ ಮೊದಲ ಬುನಾದಿ ಬಿದ್ದಿದ್ದು 2 ವರ್ಷಗಳ ಹಿಂದೆ ಅಲ್ಲ. 2009ರಲ್ಲೇ!

ಭವಿಷ್ಯದಲ್ಲಿ ರಾಜಕೀಯ ಪ್ರವೇಶಿಸಬೇಕೆಂಬ ದೂರದೃಷ್ಟಿಯಿಂದಲೇ 2009ರಲ್ಲಿ ವಿಜಯ್ ಅವರು ತಮ್ಮ ಅಭಿಮಾನಿ ಸಂಘಗಳನ್ನು ವಿಜಯ್ ಮಕ್ಕಳ ಇಯಕ್ಕಂ (ಜನರ ಆಂದೋಲನ) ಎಂದು ಬದಲಿಸಿದರು. ಅವರ ಉದ್ದೇಶ ಜನಸೇವೆಯಾಗಿತ್ತು. ಶೈಕ್ಷಣಿಕ ನೆರವು, ಪರಿಹಾರ ಕಾರ್ಯಗಳನ್ನು ಆ ಆಂದೋಲನದ ಮೂಲಕ ಮಾಡಲಾಯಿತಾದರೂ, ಅದೆಲ್ಲವೂ ನಡೆದಿತ್ತು ಚುನಾವಣೆ ನಡೆಯುವ ಬೂತ್‌ಗಳನ್ನು ಗಮನದಲ್ಲಿರಿಸಿಕೊಂಡೇ.

2011ರಲ್ಲಿ ಬಹಿರಂಗವಾಗಿ ವಿಜಯ್ ಅಣ್ಣಾಡಿಎಂಕೆಗೆ ಬೆಂಬಲ ಘೋಷಿಸಿದರು. ಅದಾದ ಬಳಿಕ ಅವರು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ರಾಜಕೀಯ ವ್ಯವಸ್ಥೆಗೆ ಟಾಂಗ್ ಇರುತ್ತಿತ್ತು. 2019ರಲ್ಲಿ ಸಿಎಎ ವಿರೋಧಿಸಿ ಹೇಳಿಕೆ ನೀಡಿದ್ದರು. ನಿರುದ್ಯೋಗ, ಭ್ರಷ್ಟಾಚಾರ, ಆಡಳಿತದಂತಹ ವಿಷಯಗಳ ಬಗ್ಗೆ ಮಾತಾಡುತ್ತಿದ್ದಾಗಲೇ ಅವರು ರಾಜಕೀಯ ಪ್ರವೇಶಿಸುವ ಸುಳಿವು ಲಭಿಸಿತ್ತು.

ಡಿಎಂಕೆ, ಅಣ್ಣಾಡಿಎಂಕೆ ಪಕ್ಷಗಳಿಗೆ ಪರ್ಯಾಯವಾದ ಟಿವಿಕೆ

2021ರಲ್ಲಿ ವಿಜಯ್ ಮಕ್ಕಳ್ ಇಯಕ್ಕಂ ನೇರವಾಗಿ ಸ್ಥಳೀಯ ಸಂಸ್ಥೆ ಚುನಾವಣೆ ಕಣಕ್ಕೆ ಇಳಿದು, ಅದೃಷ್ಟ ಪರೀಕ್ಷೆಗೆ ಇಳಿಯಿತು. ಸಾಕಷ್ಟು ಮಂದಿ ಗೆದ್ದರು. ಆಗ ವಿಜಯ್‌ಗೆ ಖಾತ್ರಿಯಾಯಿತು. ತಮ್ಮ ಅಭಿಮಾನಿಗಳು ನೋಡಲಷ್ಟೇ ಬರುತ್ತಿಲ್ಲ, ತಾವು ರಾಜಕೀಯ ಪ್ರವೇಶಿಸಿದರೆ ಬೆಂಬಲಿಸಲು ಸಿದ್ಧರಿದ್ದಾರೆ ಎಂಬ ವಿಷಯ.

2024ರಲ್ಲಿ ತಮಿಳಿಗ ವೆಟ್ರಿ ಕಳಗಂ ಎಂಬ ಪಕ್ಷವನ್ನು ಸ್ಥಾಪಿಸಿದರು. ಅಷ್ಟರಲ್ಲಿ ಅವರಲ್ಲಿ ರಾಜಕೀಯ ಪ್ರವೇಶ ಬಗ್ಗೆ ಸ್ಪಷ್ಟತೆ ಇತ್ತು. 2026ರ ಚುನಾವಣೆಯೇ ಗುರಿಯಾಗಿತ್ತು. ಡಿಎಂಕೆ– ಅಣ್ಣಾಡಿಎಂಕೆಗೆ ತಮ್ಮ ಪಕ್ಷ ಪರ್ಯಾಯ ಪಕ್ಷವಾಗಿರಬೇಕು ಎಂಬ ನಿಲುವಿತ್ತು.


ವಿಜಯ್ ರಾಜಕೀಯ ಪ್ರವೇಶಿಸಿದರೂ ಅನನುಭವಿ, ಸಿನಿಮಾ ನಟ, ಎಷ್ಟು ದಿನ ಇರುತ್ತಾರೋ ಎಂಬ ಸಂದೇಹ ಇತ್ತು. ಅದನ್ನು ಹೋಗಲಾಡಿಸಲು ಅವರು ಇನ್ನು ಸಿನಿಮಾ ಮಾಡುವುದಿಲ್ಲ ಎಂದು ಘೋಷಿಸಿದರು. ಅಷ್ಟರಲ್ಲಿ ಕರೂರಿನಲ್ಲಿ 40 ಮಂದಿಯ ಬಲಿ ಪಡೆದ ಕಾಲ್ತುಳಿತ ವಿಜಯ್‌ಗೆ ದೊಡ್ಡ ಹಿನ್ನಡೆ ಎಂದೇ ಭಾವಿಸಲಾಯಿತು. ಹಿನ್ನಡೆ ಎಂದು ಅದನ್ನು ನಂಬಿದವರಿಗೆ, ಆ ಘಟನೆಯಿಂದ ಹೋದ ಸಂದೇಶ ಗೊತ್ತಾಗಲಿಲ್ಲ! ಕಾಲ್ತುಳಿತ ಘಟನೆಯನ್ನು ವಿಜಯ್ ನಿರ್ವಹಿಸಿದ ರೀತಿ, ಅವರೊಬ್ಬ ಉತ್ತಮ ಆಡಳಿತಗಾರರಾಗಬಹುದು ಎಂಬ ನಂಬಿಕೆಯನ್ನು ಜನರಲ್ಲಿ ಬಿತ್ತಿತು.

ಕಳೆದ 2 ವರ್ಷಗಳಲ್ಲಿ ವಿಜಯ್ ಪ್ರಚಾರವನ್ನಷ್ಟೇ ಮಾಡಲಿಲ್ಲ. ತಮ್ಮ ಅಭಿಮಾನಿ ಸಂಘಗಳನ್ನು ಸಕ್ರಿಯ ರಾಜಕೀಯಕ್ಕೆ ದೂಡಿದರು. ಬೂತ್, ಜಿಲ್ಲೆ, ವಿಧಾನಸಭಾ ಕ್ಷೇತ್ರವಾರು ಮಟ್ಟದ ಹೊಣೆಗಾರಿಕೆ ನೀಡಿದರು. ಶಿಕ್ಷಣ, ನಿರುದ್ಯೋಗ, ಭ್ರಷ್ಟಾಚಾರ ಹಾಗೂ ಸಾಂಸ್ಥಿಕ ಹೊಣೆಗಾರಿಕೆಯ ಕುರಿತು ಭರವಸೆ ನೀಡಿದರು. ಹೊಸ ಹೊಸ ಪ್ರಚಾರ ವಿಧಾನಗಳನ್ನು ಬಳಸಿಕೊಂಡರು. ಅದೆಲ್ಲವೂ ಈಗ ಫಲ ನೀಡಿದೆ. ತಮಿಳುನಾಡು ರಾಜಕೀಯದಲ್ಲಿ ಹೊಸ ಸ್ಟಾರ್ ಉದಯಕ್ಕೆ ಕಾರಣವಾಗಿದೆ.

ಶುರುವಲ್ಲೇ ಸಕಸ್ ಕಂಡ 'ಸ್ಟಾರ್ಟ್‌ಅಪ್' ಟಿವಿಕೆ!

ಟಿಡಿಪಿ, ಆಪ್, ಎಜಿಪಿ ಹಾದಿಯಲ್ಲಿ ಪಕ್ಷ

ನವದೆಹಲಿ: ಸ್ಥಾಪನೆಯಾದ 2 ವರ್ಷದಲ್ಲಿ ಸಿಎಂ ಕುರ್ಚಿವರೆಗೆ ತಲುಪುವ ಮೂಲಕ ಟಿವಿಕೆ ಬಹುದೊಡ್ಡ ಸಾಧನೆ ಮಾಡಿದೆ. ಈ ಮೂಲಕ, ಹುಟ್ಟಿದ ಕೆಲಕಾಲದಲ್ಲೇ ಹೆಮ್ಮರವಾಗಿ ಬೆಳೆದ ಕೆಲವೇ ಕೆಲ ಪಕ್ಷಗಳ ಸಾಲಿಗೆ ಸೇರಿದೆ. 'ತಕ್ಷಣ ಯೂನಿಕಾರ್ನ್ ಆಗಿಬಿಟ್ಟ ಸ್ಟಾರ್ಟ್‌ಅಪ್' ಎಂಬ ಮೆಚ್ಚುಗೆ ಗಳಿಸುತ್ತಿದೆ.



2012ರ ಅ.2ರಂದು ಸ್ಥಾಪನೆಯಾದ ಆಮ್ ಆದ್ಮಿ ಪಕ್ಷ (ಆಪ್), 2013ರಲ್ಲಿ ಕಾಂಗ್ರೆಸ್ ಬೆಂಬಲದೊಂದಿಗೆ ದೆಹಲಿಯಲ್ಲಿ ಸರ್ಕಾರ ರಚಿಸಿತು. ಅಸ್ಸಾಂನಲ್ಲಿ 1985ರಲ್ಲಿ ಸ್ಥಾಪನೆಯಾದ ಅಸೋಮ್ ಗಣ ಪರಿಷತ್ (ಎಜಿಪಿ), ಅದೇ ವರ್ಷ ಅಧಿಕಾರಕ್ಕೇರಿತು. 1982ರಲ್ಲಿ ಅಸ್ತಿತ್ವಕ್ಕೆ ಬಂದ ತೆಲುಗು ದೇಸಂ ಪಕ್ಷ (ಟಿಡಿಪಿ) 1983ರಲ್ಲಿ ಭರ್ಜರಿ ಬಹುಮತ ಪಡೆದಿತ್ತು. 2024ರ ಫೆ.2ರಂದು ಸ್ಥಾಪನೆ ಆದ ಟಿವಿಕೆ, 2026ರಲ್ಲಿ ಇದೇ ಸಾಧನೆ ಮಾಡಿದ್ದು, ಅದಾಗಲೇ ಅಧಿಕಾರದ ರುಚಿ ಕಂಡಿರುವ ಡಿಎಂಕೆ, ಅಣ್ಣಾಡಿಎಂಕೆಯಂತಹ ಪಕ್ಷಗಳಿಗೆ ಆಘಾತವನ್ನುಂಟುಮಾಡಿದೆ.



ಸುದ್ದಿ ಸಿಂಚನ

ದಿಲ್ಲಿಯ ರೇಖಾ ಈಗ ಏಕೈಕ ಮಹಿಳಾ ಸಿಎಂ!

ನವದೆಹಲಿ: ಪಶ್ಚಿಮ ಬಂಗಾಳದಲ್ಲಿ 15 ವರ್ಷಗಳಿಂದ ಅಧಿಕಾರದ ಗದ್ದುಗೆ ಏರಿದ್ದ ಮಮತಾ



ಬ್ಯಾನರ್ಜಿಯವರಿಗೆ ಈ ಬಾರಿ ಮುಖ್ಯಮಂತ್ರಿ ಸ್ಥಾನ ಕೈತಪ್ಪಿದೆ. ಹೀಗಾಗಿ ದೇಶದಲ್ಲಿ ಒಬ್ಬ ಮಹಿಳಾ ಮುಖ್ಯಮಂತ್ರಿ ಸ್ಥಾನ ಕಡಿಮೆಯಾಗಿದ್ದು, ದೆಹಲಿಯ ರೇಖಾ ಗುಪ್ತಾ ಮಾತ್ರ ದೇಶದ ಏಕೈಕ ಮಹಿಳಾ ಮುಖ್ಯಮಂತ್ರಿಯಾಗಿ ಉಳಿದುಕೊಂಡಿದ್ದಾರೆ. ದೇಶದ ಉಳಿದ ರಾಜ್ಯಗಳಲ್ಲಿ ಪುರುಷ ಮುಖ್ಯಮಂತ್ರಿಗಳಿದ್ದಾರೆ.

ಅಜಿತ್ ಪವಾರ್ ಪತ್ನಿ ಸುನೇತ್ರಾಗೆ ಭರ್ಜರಿ ಜಯ

ಮುಂಬೈ: ಮಹಾರಾಷ್ಟ್ರದ ಬಾರಾಮತಿ ವಿಧಾನಸಭಾ ಉಪಚುನಾವಣೆಯ ಮಹಾರಾಷ್ಟ್ರ ಉಪಮುಖ್ಯಮಂತ್ರಿ



ಮತ್ತು ಎನ್‌ಸಿಪಿ ಮುಖ್ಯಸ್ಥೆ ಸುನೇತ್ರಾ ಪವಾರ್‌ಭರ್ಜರಿ ಗೆಲುವು ಸಾಧಿಸಿದ್ದಾರೆ.ಇದೇ ವೇಳೆ, ರಾಹುರಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿಯ ಅಕ್ಷಯ್ ಕಾರ್ಡಿಲೆ ಕೂಡ ಗೆದ್ದಿದ್ದಾರೆ. ಇದರೊಂದಿಗೆ ರಾಜ್ಯದ ಎರಡೂ ಕ್ಷೇತ್ರಗಳು ಆಡಳಿತಾರೂಢ ಕೂಟದ ಪಾಲದಾದಂತಾಗಿದೆ. ಹಿಂದಿನ ಡಿಸಿಎಂ ಅಜಿತ್ ಪವಾರ್ ನಿಧನದ ಕಾರಣ ಬಾರಾಮತಿ ಕ್ಷೇತ್ರ ತೆರವಾಗಿತ್ತು. ಎರಡೂ ಸ್ಥಾನಗಳಿಗೆ ಏಪ್ರಿಲ್ 23 ರಂದು ಮತದಾನ ನಡೆದಿತ್ತು.

ರಾಹುಲ್ ನಾಯಕತ್ವದಲ್ಲಿ 99 ಸೋಲು: ಬಿಜೆಪಿ ವ್ಯಂಗ್ಯ

ನವದೆಹಲಿ: ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ 99 ಸೋಲು ಅನುಭವಿಸಿದೆ. ಶತಕಕ್ಕೆ 1 ಮಾತ್ರ ಬಾಕಿ ಇದೆ. ಚುನಾವಣೆ ಕ್ರೀಡೆ ಆಗಿದ್ದರೆ, ಅವರು ಶತಕ ಬಾರಿಸಿದ ಸಾಧನೆ ಮಾಡುವುದು ದೂರವಿಲ್ಲ ಎಂದು ಬಿಜೆಪಿ ವ್ಯಂಗ್ಯವಾಡಿದೆ. ರಾಹುಲ್ ಅಡಿ ಸೋತ 99 ಚುನಾವಣೆ ಇವು ಎಂದು ನಕ್ಷೆ ಟ್ವೀಟ್ ಮಾಡಿರುವ ಬಿಜೆಪಿ, '99 ಸೋಲು ಅಂಕಿ ಅಂಶವಲ್ಲ. ಅದು ಪ್ರಾಯೋಗಿಕ ಸರಣಿ. ಏನೇ ಪ್ರಚಾರ ಮಾಡಿದರೂ ಬ್ರಾಂಡಿಂಗ್ ಮಾಡಿದರೂ ಫಲಿತಾಂಶ ಬದಲಾಗಲ್ಲ. ಫಲಿತಾಂಶ? ಯಾವಾಗಲೂ ಒಂದೇ ಆಗಿರುತ್ತದೆ. ಶತಕದ ಸಮೀಪ ಬರುತ್ತಿದ್ದೀರಿ. ವೆಲ್ ಡನ್ ರಾಗಾ' ಎಂದು ಕುಟುಕಿದೆ.

ಅಸ್ಸಾಂ ಕೈ ಸಿಎಂ ಅಭ್ಯರ್ಥಿ ಗೌರವ್‌ಗೆ ಸೋಲು!

ಗುವಾಹಟಿ: ಅಸ್ಸಾಂನ ಕಾಂಗ್ರೆಸ್ ಸಿಎಂ ಅಭ್ಯರ್ಥಿ ಗೌರವ್ ಗೊಗೋಯ್ ಅಬ್ಬರದಿಂದ ಕಣಕ್ಕಿಳಿದಿದ್ದರಾದರೂ, ಖುದ್ದು 23,182 ಮತಗಳಿಂದ ಘೋರ ಪರಾಭವ ಅನುಭವಿಸಿದ್ದಾರೆ. ಜೋರ್ಹತ್‌ನ ಸಂಸದರಾಗಿರುವ ಗೌರವ್ ಇದೇ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿದು 46,257 ಮತಗಳನ್ನು ಪಡೆದರೆ, ಬಿಜೆಪಿ ಅಭ್ಯರ್ಥಿ ಹಿತೇಂದ್ರನಾಥ್ ಗೋಸ್ವಾಮಿ 69,439 ಮತ ಪಡೆಯುವ ಮೂಲಕ ಸತತ 3ನೇ ಬಾರಿಗೆ ಕ್ಷೇತ್ರ ಉಳಿಸಿಕೊಂಡಿದ್ದಾರೆ. ಗೊಗೋಯ್ ಮಾತ್ರವಲ್ಲ ಕಾಂಗ್ರೆಸ್ ಪಕ್ಷ ಇಡೀ ರಾಜ್ಯದಲ್ಲಿ ಹೀನಾಯ ಸೋಲು ಅನುಭವಿಸಿದೆ. ಗೌರವ್ ವಿಧಾನಸಭಾ ಕ್ಷೇತ್ರಕ್ಕೆ ಮೊದಲ ಬಾರಿ ಕಣಕ್ಕಿಳಿದಿದ್ದರು. ಇತ್ತ ಗೋಸ್ವಾಮಿ ಒಂದು ಬಾರಿ ಎಜಿಪಿ, ಎರಡು ಬಾರಿ ಬಿಜೆಪಿಯಿಂದ ಸರ್ಧಿಸಿದ್ದರು.

ಯುಎಇಗೆ ಇರಾನ್ ಕ್ಷಿಪಣಿ: 3 ಭಾರತೀಯರಿಗೆ ಗಾಯ

ದುಬೈ: ಇರಾನ್ ಮೂಲದ ಡ್ರೋನ್ ದಾಳಿಯ ನಂತರ ಯುಎಇಯ ಫುಜೈರಾ ಪೆಟ್ರೋಲಿಯಂ ಇಂಡಸ್ಟ್ರೀಸ್ ವಲಯ (ಎಫ್‌ಒಐಝ್)ದಲ್ಲಿ ಸೋಮವಾರ ಬೆಂಕಿ ಕಾಣಿಸಿಕೊಂಡಿದೆ. ಆಗ ಮೂವರು ಭಾರತೀಯರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಮಾಧ್ಯಮ ವರದಿಗಳು ತಿಳಿಸಿವೆ. ಇರಾನ್‌ನಿಂದ ಬಂದ ಡ್ರೋನ್ ದಾಳಿಯ ಪರಿಣಾಮವಾಗಿ ಬೆಂಕಿ ಕಾಣಿಸಿಕೊಂಡಿದೆ. ಆದರೆ ಬೆಂಕಿ ನಿಯಂತ್ರಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಇದರ ಬೆನ್ನಲ್ಲೇ ಇರಾನ್ ಮತ್ತೆ ದಾಳಿ ಆರಂಭಿಸಿದೆ ಎಂದು ಯುಎಇ ಆರೋಪಿಸಿದೆ.

ಹೋರ್ಮುಜ್‌ನಲ್ಲಿ ಟ್ಯಾಂಕರ್ ಮೇಲೆ ದಾಳಿ

ದುಬೈ: ಹೋರ್ಮುಜ್ ಜಲಸಂಧಿಯಲ್ಲಿ ತಮ್ಮ ಹಡಗೊಂದರ ಮೇಲೆ ದಾಳಿಯಾಗಿದೆ ಎಂದು ಬ್ರಿಟಿಷ್ ಸೇನೆ ಸೋಮವಾರ ತಿಳಿಸಿದೆ. ಅಮೆರಿಕ-ಇರಾನ್ ನಡುವೆ ಉದ್ವಿಗ್ನತೆ ಹೆಚ್ಚಿದ ಬಳಿಕ ಇದು ಬ್ರಿಟಿಷ್ ಹಡಗುಗಳನ್ನು ಗುರಿಯಾಗಿಸಿ ನಡೆದ 2ನೇ ದಾಳಿಯಾಗಿದೆ. ಇದೇ ವೇಳೆ ಯುಎಇ ಕೂಡ ಇರಾನ್ ತನ್ನ ಮೇಲೆ ಕ್ಷಿಪಣಿ ದಾಳಿ ನಡೆಸಿದೆ ಎಂದಿದೆ. 'ಭಾನುವಾರ ರಾತ್ರಿ 11:40ಕ್ಕೆ ಯುಎಇಯ ಫುಜೈರಾ ಬಳಿ ಜಲಸಂಧಿಯಲ್ಲಿ ನಮ್ಮ ಟ್ಯಾಂಕರ್‌ಗುರಿಯಾಗಿರಿಸಿ ದಾಳಿ ನಡೆಸಲಾಗಿದೆ. ಅಪರಿಚಿತ ಸ್ಫೋಟಕಗಳನ್ನು ಬಳಸಿ ಕೃತ್ಯ ಎಸಗಲಾಗಿದೆ. ಎಲ್ಲಾ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ' ಎಂದು ಬ್ರಿಟನ್‌ನ ಕಡಲ ವ್ಯಾಪಾರ ಕಾರ್ಯಾಚರಣೆ ಕೇಂದ್ರ ವಿವರಿಸಿದೆ. ಭಾನುವಾರವೂ ಇಲ್ಲಿ ಮತ್ತೊಂದು ಹಡಗು ದಾಳಿಗೆ ಒಳಗಾಗಿತ್ತು.

ಹೋರ್ಮುಜ್ ದಾಟುವ ಹಡಗಿಗೆ ಇನ್ನು ಅಮೆರಿಕ ರಕ್ಷಣೆ: ಟ್ರಂಪ್ ಘೋಷಣೆ

ವಾಷಿಂಗ್ಟನ್: ಹೋರ್ಮುಜ್ ಜಲಸಂಧಿ ಮೇಲಿನ ನಿಯಂತ್ರಣಕ್ಕಾಗಿ ಅಮೆರಿಕ ಮತ್ತು ಇರಾನ್ ನಡುವೆ ಜಟಾಪಟಿ ಮುಂದುವರಿದಿರುವ ನಡುವೆಯೇ, ಜಲಸಂಧಿ ಮೂಲಕ ಹಾದುಹೋಗುವ ಎಲ್ಲಾ ಹಡಗಿಗೆ ತಾವು ರಕ್ಷಣೆ ನೀಡುತ್ತೇವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಭರವಸೆ ನೀಡಿದ್ದಾರೆ. ಇದರ ಬೆನ್ನಲ್ಲೇ ಸೋಮವಾರದಿಂದ ಕಾವಲು ಆರಂಭವಾಗಿದೆ.

ಗಂಗೋತ್ರಿಯಿಂದ ಗಂಗಾಸಾಗರದವರೆಗೆ ಕಮಲ

ಗೆಲುವಿನ ಬಳಿಕ ಬಂಗಾಳಿ ಧೋತಿಯಲ್ಲಿ ಮಿಂಚಿದ ಪ್ರಧಾನಿ ಮೋದಿ ಹರ್ಷ | ಪಕ್ಷದ ಪ್ರಧಾನ ಕಚೇರೀಲಿ ಪ್ರಧಾನಮಂತ್ರಿ ವಿಜಯೋತ್ಸವ ಭಾಷಣ

ವರ್ಷಗಳ ನಮ್ಮ ತಪಸ್ಸು ಸಾಧನೆಯಾಗಿ ರೂಪುಗೊಂಡಿದೆ | ಆಯೋಗ ಪ್ರಜಾಪ್ರಭುತ್ವದ ಘನತೆ ಕಾಪಾಡಿದೆ | ಬಂಗಾಳದಲ್ಲಿ ಇನ್ನು ಭಯ ಮಾಯ


ನವದೆಹಲಿ: 'ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ಐತಿಹಾಸಿಕ ಗೆಲುವಿನೊಂದಿಗೆ ಗಂಗೋತ್ರಿಯಿಂದ ಗಂಗಾಸಾಗರದವರೆಗೆ ಕಮಲ ಅರಳುತ್ತಿದೆ. ಉತ್ತರಾಖಂಡ, ಉತ್ತರ ಪ್ರದೇಶ, ಬಿಹಾರ ಮತ್ತು ಇದೀಗ ಪಶ್ಚಿಮ ಬಂಗಾಳ, ಗಂಗಾ ಮಾತೆಯ ಸುತ್ತಮುತ್ತಲಿನ ಈ ಎಲ್ಲ ರಾಜ್ಯಗಳಲ್ಲೂ ಬಿಜೆಪಿ-ಎನ್‌ಡಿಎ ಸರ್ಕಾರಗಳಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಸಂತಸ ವ್ಯಕ್ತಪಡಿಸಿದ್ದಾರೆ.

ಪ. ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಪಕ್ಷ ಐತಿಹಾಸಿಕ ಗೆಲುವು ಸಾಧಿಸಿದ ಬಳಿಕ ಸಂಜೆ ಬಂಗಾಳಿ ಧೋತಿ ಧರಿಸಿ ಅವರು ಪಕ್ಷದ ಮುಖ್ಯ ಕಚೇರಿಗೆ ಆಗಮಿಸಿದರು. ಆ ಬಳಿಕ ಕಾರ್ಯಕರ್ತರನ್ನುದ್ದೇಶಿಸಿ ವಿಜಯೋತ್ಸವ ಭಾಷಣ ಮಾಡಿದ ಮೋದಿ, 'ಇದು ದೇಶಕ್ಕೆ ಉಜ್ವಲ ಭವಿಷ್ಯವನ್ನು ಸೂಚಿಸುವುದರಿಂದ ಹಲವು ವಿಧಗಳಲ್ಲಿ ವಿಶೇಷ ದಿನವಾಗಿದೆ. ಇದು ಭಾರತದ ಮಹಾನ್ ಪ್ರಜಾಪ್ರಭುತ್ವದಲ್ಲಿ ನಂಬಿಕೆ, ಕಾರ್ಯಕ್ಷಮತೆಯ ರಾಜಕೀಯದಲ್ಲಿ ನಂಬಿಕೆ, ಸ್ಥಿರತೆಯ ಸಂಕಲ್ಪದಲ್ಲಿ ನಂಬಿಕೆ ಮತ್ತು ಏಕ ಭಾರತ-ಶ್ರೇಷ್ಠ ಭಾರತ ಎಂಬ ಚೈತನ್ಯದಲ್ಲಿ ನಂಬಿಕೆಯ ದಿನವಾಗಿದೆ. ನಾನು ಪ. ಬಂಗಾಳ, ಅಸ್ಸಾಂ, ಪುದುಚೇರಿ, ತಮಿಳುನಾಡು ಹಾಗೂ ಕೇರಳ ಜನತೆಗೆ ತಲೆ ಬಾಗುತ್ತೇನೆ' ಎಂದರು.

ಗಂಗೋತ್ರಿಯಿಂದ ಗಂಗಾಸಾಗರದವರೆಗೆ ಕಮಲ: 'ಇಂದು ಬಂಗಾಳದ ವಿಜಯದೊಂದಿಗೆ, ಗಂಗೋತ್ರಿಯಿಂದ ಗಂಗಾ ಸಾಗರದವರೆಗೆ ಕಮಲ ಅರಳುತ್ತಿದೆ. ಗಂಗಾಮಾತೆಯ ಸುತ್ತಮುತ್ತಲಿನ ಉತ್ತರಾಖಂಡ, ಉತ್ತರ ಪ್ರದೇಶ, ಬಿಹಾರ ಮತ್ತು ಇದೀಗ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ-ಎನ್‌ಡಿಎ ಸರ್ಕಾರಗಳಿವೆ' ಎಂದು ಸಂತಸ ವ್ಯಕ್ತಪಡಿಸಿದರು.

ಭಯದ ಬದಲು ಪ್ರಜಾಪ್ರಭುತ್ವಕ್ಕೆ ಜಯ: 'ಪಶ್ಚಿಮ ಬಂಗಾಳದ ಪ್ರಜಾಪ್ರಭುತ್ವದ ಹಬ್ಬದಲ್ಲಿ ಭಯದ ಬದಲು ಪ್ರಜಾಪ್ರಭುತ್ವ ಗೆದ್ದಿದೆ. ಬಂಗಾಳದಲ್ಲಿ ಬಿಜೆಪಿ ಗೆದ್ದಿತೆಂದರೆ, ಅಲ್ಲಿ ಪ್ರತೀಕಾರದ ಬದಲು ಬದಲಾವಣೆ ಮತ್ತು ಭಯದ ಬದಲು ಭವಿಷ್ಯದ ಮಾತಿರಬೇಕು. ಪ್ರಜಾಪ್ರಭುತ್ವ ಮತ್ತು ರಾಜಕೀಯದಲ್ಲಿ ಗೆಲುವು ಮತ್ತು ಸೋಲು ಸಹಜ. ಆದರೆ 5 ರಾಜ್ಯಗಳ ಜನರು ಭಾರತವು ಏಕೆ ಪ್ರಜಾಪ್ರಭುತ್ವದ ತಾಯಿ ಎಂಬುದನ್ನು ಜಗತ್ತಿಗೆ ತೋರಿಸಿದ್ದಾರೆ' ಎಂದು ಹರ್ಷ ವ್ಯಕ್ತಪಡಿಸಿದರು.

ವರ್ಷಗಳ ತಪಸ್ಸು ಸಾರ್ಥಕ: 'ನಮಗೆ ಪ್ರಜಾಪ್ರಭುತ್ವ ಕೇವಲ ಒಂದು ವ್ಯವಸ್ಥೆಯಲ್ಲ, ಅದು ನಮ್ಮ ರಕ್ತನಾಳಗಳಲ್ಲಿನ ನದಿ' ಎಂದರು.



22 ರಾಜ್ಯಗಳಲ್ಲೀಗ ಬಿಜೆಪಿ ಅಧಿಪತಿ!

19 ರಾಜ್ಯಗಳಲ್ಲಿ ಏಕಾಂಗಿ, 3 ರಾಜ್ಯಗಳಲ್ಲಿ ಮೈತ್ರಿಕೂಟ


ನವದೆಹಲಿ: ಸೋಮವಾರ ಪ್ರಕಟವಾದ ಪಂಚರಾಜ್ಯಗಳ ಚುನಾವಣೆಯ ಫಲಿತಾಂಶದೊಂದಿಗೆ ದೇಶದಲ್ಲಿ ಬಿಜೆಪಿ ಆಡಳಿತದ ರಾಜ್ಯಗಳ ಸಂಖ್ಯೆ 22ಕ್ಕೆ ಏರಿದೆ. ಈ ಪೈಕಿ 19 ರಾಜ್ಯಗಳಲ್ಲಿ ಬಿಜೆಪಿ ಏಕಾಂಗಿಯಾಗಿ ಅಧಿಕಾರದಲ್ಲಿದ್ದರೆ, 3 ರಾಜ್ಯಗಳಲ್ಲಿ ಮಿತ್ರಪಕ್ಷಗಳ ಜೊತೆಗೂಡಿ ಅಧಿಕಾರ ರಚಿಸಿದೆ.

ಸೋಮವಾರ ಫಲಿತಾಂಶ ಪ್ರಕಟವಾದ ರಾಜ್ಯಗಳ ಪೈಕಿ ಅಸ್ಸಾಂನಲ್ಲಿ ಈ ಮೊದಲೂ ಬಿಜೆಪಿ ಅಧಿಕಾರದಲ್ಲಿತ್ತು. ಪುದುಚೇರಿಯಲ್ಲೂ ಎಐಎನ್‌ಆರ್‌ಸಿ- ಬಿಜೆಪಿ ಕೂಟ ಅಧಿಕಾರದಲ್ಲಿತ್ತು. ಪಶ್ಚಿಮ ಬಂಗಾಳ ಬಿಜೆಪಿಗೆ ಹೆಚ್ಚುವರಿಯಾಗಿ ಸಿಕ್ಕಿದೆ. ಇನ್ನು ಇದುವರೆಗೂ ದೇಶದ 3 ರಾಜ್ಯಗಳಲ್ಲಿ ಏಕಾಂಗಿಯಾಗಿ ಮತ್ತು ಜಾರ್ಖಂಡ್‌ನಲ್ಲಿ ಏಕಾಂಗಿಯಾಗಿ ಅಧಿಕಾದಲ್ಲಿದ್ದ ಕಾಂಗ್ರೆಸ್‌ಗೆ ಕೇರಳವೂ ದಕ್ಕಿದೆ



ಸಿದ್ದುಗೆ ಸಲಹೆ ನೀಡಿದ್ದ ಜಾನ್ ವಿಜಯ್‌ಗೂ ಸಲಹೆಗಾರ

ಚೆನ್ನೈ: ಕರ್ನಾಟಕದಲ್ಲಿ ಸತತ 2 ಬಾರಿ ಸಿಎಂ ಆಗಿರುವ ಸಿದ್ದರಾಮಯ್ಯನವರಿಗೆ ಬಾದಾಮಿ ಮತ್ತು ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸುವಂತೆ ಸಲಹೆ ನೀಡಿದ್ದ ಜಾನ್ ಆರೋಕ್ಯಸಾಮಿ ಎಂಬುವವರೇ ವಿಜಯ್‌ರ ಟಿವಿಕೆಯನ್ನು ಗೆಲುವಿನತ್ತ



ಕೊಂಡೊಯ್ದಿರುವುದು. ಈ ಮೂಲಕ, ಚುನಾವಣಾ ತಂತ್ರಗಾರ ಪ್ರಶಾಂತ್ ಕಿಶೋರ್‌ಗೆ ಪರ್ಯಾಯವಾಗಿ ದಕ್ಷಿಣದಲ್ಲಿ ಇವರು ಹೆಸರು ಕೇಳಿಬರುತ್ತಿದೆ.

ನಟನಾಗಿದ್ದ ವಿಜಯ್ ಇದ್ದ ಅಭಿಮಾನಿಗಳ ಬಳಗವನ್ನೇ ಅವರ ರಾಜಕೀಯ ಶಕ್ತಿಯಾಗಿ ರೂಪಿಸುವಲ್ಲಿ ಆರೋಕ್ಯ ಸಾಮಿ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ತಂತ್ರದಿಂದಲೇ ಅಲ್ಪ ಸಮಯದಲ್ಲಿ ರಾಜಕೀಯವಾಗಿಯೂ ವಿಜಯ್‌ರ ಜನಪ್ರಿಯತೆ ಉತ್ತುಂಗಕ್ಕೇರಲು ಸಾಧ್ಯವಾಗಿದೆ. ವಿಜಯ್‌ರ ಭಾಷಣಗಳಿಂದ ಹಿಡಿದು, ಪ್ರಚಾರ, ಸಾಮಾಜಿಕ ಮಾಧ್ಯಮ ಬಳಕೆಯ ವಿಧಾನವನ್ನು ನಿರ್ಧರಿಸಿದವರೂ ಇವರೇ. ಜಾನ್‌ರ ಶ್ರಮದಿಂದಲೇ ಪೆರಂಬೂರು ಮತ್ತು ತಿರುಚಿರಾಪಳ್ಳಿಯಿಂದ(ಪೂರ್ವ) ಸ್ಪರ್ಧಿಸಿದ್ದ ವಿಜಯ್ ಗೆಲುವಿಗೆ ಮಾತ್ರವಲ್ಲ, ಸಿಎಂ ಕುರ್ಚಿಗೂ ಸಮೀಪ ಹೋಗಲು ಸಾಧ್ಯವಾಯಿತು ಎಂದು ಮಾಧ್ಯಮಗಳು ವರದಿ ಮಾಡಿವೆ.

ಮೂಲತಃ ಆಂಧ್ರಪ್ರದೇಶದವರಾದ ಜಾನ್, ತಮಿಳುನಾಡಿನಲ್ಲಿ ವ್ಯಾಸಂಗ ಮಾಡಿದ್ದಾರೆ. ಶಿವಸೇನೆ (ಯುಬಿಟಿ) ಸಲಹೆಗಾರರಾಗಿಯೂ ಇವರು ಕೆಲಸ ಮಾಡಿದ್ದಾರೆ.

ವಿಜಯ್ ಗೆಲುವಿನ ಬಗ್ಗೆ ಭವಿಷ್ಯ ನುಡಿದಿದ್ದ ಪ್ರಶಾಂತ್ ಕಿಶೋರ್!

ನವದೆಹಲಿ: 'ವಿಜಯ್ ಒಬ್ಬರೇ ನಿಂತು ಹೋರಾಡಿದರೆ ಅವರು ತಮಿಳುನಾಡನ್ನು ಗೆಲ್ಲುತ್ತಾರೆ' ಎಂದು ಕಳೆದ ಮಾರ್ಚ್‌ನಲ್ಲೇ ರಾಜಕೀಯ ತಂತ್ರಜ್ಞ ಪ್ರಶಾಂತ್



ಕಿಶೋರ್ ಭವಿಷ್ಯ ನುಡಿದಿದ್ದರು. ಅಲ್ಲದೆ, 'ಫಲಿತಾಂಶ ಬಂದಾಗ ನನ್ನ ಈ ವಿಡಿಯೋ ಪ್ಲೇ ಮಾಡಿ' ಎಂದೂ ಅವರು ಹೇಳಿದ್ದರು. ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ವಿಜಯ್ ಅವರ ಟಿವಿಕೆ ಗೆಲುವಿನತ್ತ ಸಾಗುತ್ತಿರುವ ಈ ಹೊತ್ತಿನಲ್ಲಿ ಪಿಕೆ ಹೇಳಿಕೆಯ ತುಣುಕು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗುತ್ತಿದೆ. ಸಂದರ್ಶನವೊಂದರಲ್ಲಿ ಮಾತನಾಡಿದ್ದ ಪ್ರಶಾಂತ್, 'ನನಗೆ ತಿಳಿದಂತೆ ವಿಜಯ್ ಒಬ್ಬರೇ (ಸ್ವತಂತ್ರವಾಗಿ) ಸ್ಪರ್ಧಿಸಿ, ಶ್ರಮ ಹಾಗೂ ಸಮಯವನ್ನು ಮೀಸಲಿಟ್ಟರೆ ಅವರಿಗೆ ಸುವರ್ಣಾವಕಾಶ ಒದಗಿದಂತೆ. ನಿಮಗೆ ಆಶ್ಚರ್ಯವಾಗಬಹುದು. ಸೀಟುಗಳನ್ನು ಗೆಲ್ಲುತ್ತಾರೆಂದು ನಾನು ಹೇಳುತ್ತಿಲ್ಲ, ಆದರೆ ಅವರು ತಮಿಳುನಾಡನ್ನು ಖಂಡಿತ ಗೆಲ್ಲುತ್ತಾರೆ. ಬೇಕಿದ್ದರೆ ಬರೆದಿಟ್ಟುಕೊಳ್ಳಿ' ಎಂದಿದ್ದರು.

ಎಂಜಿಆರ್, ಜಯಾ ಹಾದಿಯಲ್ಲಿ ವಿಜಯ್!

ಚಿತ್ರನಟರನ್ನು ಆರಾಧಿಸುವ ತಮಿಳ್ನಾಡಲ್ಲಿ ಆ ಪರಂಪರೆ ಮುಂದುವರೆದಿದೆ. ಚೊಚ್ಚಲ ಯತ್ನದಲ್ಲಿ ಭರ್ಜರಿ ಪ್ರದರ್ಶನದ ಮೂಲಕ ವಿಜಯ್ ಕೂಡಾ ಎಂಜಿಆರ್, ಜಯಾ ಅವರ ಹಾದಿಯಲ್ಲಿ ದಾಪುಗಾಲಿಕ್ಕಿದ್ದಾರೆ.

ಎಂಜಿಆರ್: ಡಿಎಂಕೆಯಿಂದ ಹೊರ ಬಂದು 1972ರಲ್ಲಿ ಎಐಎಡಿಎಂಕೆ ಸ್ಥಾಪನೆ. 1977-1980, 190-1985, 1985- 87ರಲ್ಲಿ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಸೇವೆ.
ಜಯಲಲಿತಾ: ಎಂಜಿಆರ್ ನಿಧನದ ಬಳಿಕ ಎಐಎಡಿಎಂಕೆ ನೊಗ ಹೊತ್ತ ಜಯಾ. 1991ರಿಂದ 2016 ಅವಧಿಯಲ್ಲಿ ಒಟ್ಟು 5 ಬಾರಿ ಮುಖ್ಯಮಂತ್ರಿಯಾಗಿ ಸಾಧನೆ.
ವಿಜಯಕಾಂತ್: 2005ರಲ್ಲಿ ಡಿಎಂಡಿಕೆ ಪಕ್ಷ ಸ್ಥಾಪಿಸಿದರು. ಶಾಸಕರಾಗಿ ಆಯ್ಕೆಯಾದರು.
ಶಿವಾಜಿ ಗಣೇಶನ್: ಡಿಎಂಕೆ ಮೂಲಕ ರಾಜಕೀಯ ಶುರು. ಕಾಂಗ್ರೆಸ್ ಸೇರಿ ಸಂಸದ. 1988ರಲ್ಲಿ ಕಾಂಗ್ರೆಸ್ ತೊರೆದು ಟಿಎಂಎಂ ಸ್ಥಾಪನೆ. ಜನತಾದಳದೊಂದಿಗೆ ವಿಲೀನ.
ಶರತ್: ಡಿಎಂಕೆಯಿಂದ ರಾಜಕೀಯ ಪ್ರವೇಶ. 2001- 2006 ರವರೆಗೆ ಸಂಸದ. 2007ರಲ್ಲಿ ಎಐಎಸ್‌ಎಂಕೆ ಪಕ್ಷ ಸ್ಥಾಪನೆ.
ನೆಪೋಲಿಯನ್: 2001ರಲ್ಲಿ ಗೆದ್ದು ಮೊದಲ ಬಾರಿ ಶಾಸಕ. 2009ರಲ್ಲಿ ಸಚಿವ. 2014ರಲ್ಲಿ ಡಿಎಂಕೆ ತೊರೆದು ಬಿಜೆಪಿ ಸೇರ್ಪಡೆ.
ಕಮಲ್ ಹಾಸನ್: 2018ರಲ್ಲಿ ಮಕ್ಕಳ್ ನೀಧಿ ಮಯ್ಯಮ್ ಪಕ್ಷ ಸ್ಥಾಪನೆ. 2024ರಲ್ಲಿ ಡಿಎಂಕೆ ಬೆಂಬಲದೊಂದಿಗೆ ರಾಜ್ಯಸಭೆಗೆ.
ಖುಷ್ಬು : ಡಿಎಂಕೆ, ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದ ಖುಷ್ಬು 2020ರಲ್ಲಿ ಬಿಜೆಪಿಗೆ. 2021ರ ಚುನಾವಣೆಯಲ್ಲಿ ಸೋಲು. ಪ್ರಸ್ತುತ ತಮಿಳುನಾಡು ಬಿಜೆಪಿ ಉಪಾಧ್ಯಕ್ಷೆ.
ರಜನೀಕಾಂತ್: 2020ರಲ್ಲಿ ರಜನೀಕಾಂತ್‌ರಿಂದ ಮಕ್ಕಳ ಮಂಡ್ರಮ್ ಪಕ್ಷ ಸ್ಥಾಪನೆ. ಬಳಿಕ ಅನಾರೋಗ್ಯದ ಕಾರಣ ನೀಡಿ ಪಕ್ಷ ವಿಸರ್ಜನೆ.
ಉದಯನಿಧಿ ಸ್ಟಾಲಿನ್: ಸಿಎಂ ಸ್ಟಾಲಿನ್ ಪುತ್ರ ಉದಯನಿಧಿ ಸಿನಿಮಾದಲ್ಲೂ ಮಿಂಚು. ಆದರೆ ಅಭಿನಯದಿಂದ ರಾಜಕಾರಣಕ್ಕೆ ಬಂದಿರಲಿಲ್ಲ. ರಾಜಕೀಯದಲ್ಲಿದ್ದಾಗಲೇ ನಟನೆಯತ್ತ ಒಲವು.

ವಿಜಯ್ ಅವರ ಕಾರು ಚಾಲಕನ ಮಗ ಶಬರಿಗೆ ವಿಜಯಮಾಲೆ

ಚೆನ್ನೈ: ವಿಜಯ್ ಅವರ ದೀರ್ಘಕಾಲದ ಚಾಲಕ ಮತ್ತು ಆಪ್ತ ಸಹಾಯಕ ರಾಜೇಂದ್ರನ್ ಅವರ ಪುತ್ರ ಆರ್. ಶಬರಿನಾಥನ್ (30) ಚೆನ್ನೈನ ವಿರುಗಂಪಕ್ಕಂ ಕ್ಷೇತ್ರದಲ್ಲಿ ಡಿಎಂಕೆಯ ಪ್ರಭಾಕರ ರಾಜಾ ಅವರನ್ನು ಸೋಲಿಸಿ ಗೆಲುವು ಸಾಧಿಸಿದ್ದಾರೆ. ರಾಜೇಂದ್ರನ್ 1992ರಲ್ಲಿ ತೆರೆಕಂಡ ವಿಜಯ್‌ರ ಚೊಚ್ಚಲ ಚಿತ್ರ 'ನಾಳೈಯ ತೀರ್ಪು' ಕಾಲದಿಂದಲೂ ವಿಜಯ್ ಅವರ ಚಾಲಕ ಮತ್ತು ವೈಯಕ್ತಿಕ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಚಾಲಕನ ಮಗನಿಗೆ ಟಿಕೆಟ್ ನೀಡಿದ ವಿಜಯ್ ಕುರಿತು ಭಾರೀ ಪ್ರಶಂಸೆ ವ್ಯಕ್ತವಾಗಿತ್ತು.

ದಿಗ್ಗಜರಿಗೆ ಸೋಲುಣಿಸಿ ಗೆದ್ದ ಟಿವಿಕೆ ಪಕ್ಷದ ಬಡ ಆಟೋ ಚಾಲಕ!

ಚೆನ್ನೈ: ತಮಿಳುನಾಡಿನ ರೋಯಾಪುರಂ ಕ್ಷೇತ್ರದಿಂದ ಡಿಎಂಕೆ, ಎಐಎಡಿಎಂಕೆಯ ಘಟಾನುಘಟಿ ನಾಯಕರ ಮುಂದೆ ಚೆನ್ನೈನ ಮಾಮೂಲಿ ಆಟೋ ಚಾಲಕನೊಬ್ಬ ಗೆದ್ದು ಬೀಗಿದ್ದಾರೆ! ಟಿವಿಕೆ ಪಕ್ಷದ ವಿಜಯ್ ಧಾಮು ವೃತ್ತಿಯಲ್ಲಿ ಆಟೋ ಚಾಲಕರಾಗಿದ್ದು, ಸಮೀಪದ ಪ್ರತಿಸ್ಪರ್ಧಿ ವಿರುದ್ಧ 14 ಸಾವಿರ ಮತದಿಂದ ಗೆದ್ದಿದ್ದಾರೆ. ಐದು ಬಾರಿಯ ಶಾಸಕ, ಎಐಎಡಿಎಂಕೆಯ ಡಿ.ಜಯಕುಮಾರ್ ಮತ್ತು ಡಿಎಂಕೆಯ ಮಾಜಿ ಸಚಿವ ರೆಹಮಾನ್ ಖಾನ್ ಅವರ ಪುತ್ರ ಸುಭೀರ್ ಖಾನ್ ವಿರುದ್ಧ ಗೆಲ್ಲುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಧಾಮು ಅವರು ನಟ ವಿಜಯ್ ವರ್ಚಸ್ಸಿನಿಂದಲೇ ಗೆಲುವಿನ ನಗೆ ನಕ್ಕಿದ್ದಾರೆ.

ಬಹುತೇಕ ರಾಜ್ಯಗಳಲ್ಲಿ ಗ್ಯಾರಂಟಿಗಳಿಗೆ ಮತದಾರರ ಮಣೆ!

ನವದೆಹಲಿ: ಪಂಚರಾಜ್ಯ ಚುನಾವಣೆಯಲ್ಲಿ ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳು ಮತದಾರರ ಮನ ಗೆಲ್ಲಲು ಭರಪೂರ ಗ್ಯಾರಂಟಿಗಳನ್ನು ಘೋಷಿಸಿದ್ದವು. ಆದರೆ ಈ ಬಾರಿ ಮತದಾರರು ಗ್ಯಾರಂಟಿ ಭರವಸೆ ಕೊಟ್ಟ ಪಕ್ಷಗಳಿಗೆ ಮಣೆ ಹಾಕಿದ್ದಾನೆ. ಕೇರಳದಲ್ಲಿ ಕಾಂಗ್ರೆಸ್ ಪಕ್ಷ ಕರ್ನಾಟಕ ಮಾದರಿಯ ಗ್ಯಾರಂಟಿ ಘೋಷಿಸಿತ್ತು. ತಮಿಳುನಾಡಿನಲ್ಲಿ ಟಿವಿಕೆ, ವಧುವಿಗೆ 8 ಗ್ರಾಂ ಬಂಗಾರ, ಮಾಸಿಕ 2500 ರು. ಘೋಷಿಸಿತ್ತು. ಅದೇ ರೀತಿ ಬಂಗಾಳದಲ್ಲಿ ಬಿಜೆಪಿ ಕೂಡ ಹಲವು ಗ್ಯಾರಂಟಿಗಳನ್ನು ಪ್ರಕಟಿಸಿತ್ತು. ಅಸ್ಸಾಂನಲ್ಲಿ ಬಿಜೆಪಿ, ಈಗಾಗಲೇ ಜಾರಿಯಲ್ಲಿರುವ ಗ್ಯಾರಂಟಿಗಳನ್ನು ಮುಂದುವರಿಸುವ ಘೋಷಣೆ ಮಾಡಿತ್ತು. ಇವುಗಳಿಗೆ ಮತದಾರರ ಮನ್ನಣೆ ಲಭಿಸಿದೆ.

ವಿಜಯ್ ಭರವಸೆಗಳು

- ಪ್ರತಿ ಕುಟುಂಬಕ್ಕೆ 25 ಲಕ್ಷ ರು.ನ ಆರೋಗ್ಯ ವಿಮಾ ಯೋಜನೆ ಜಾರಿ ಭರವಸೆ
- ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿತ ನಿರುದ್ಯೋಗಿ ಪದವೀಧರರಿಗೆ ಮಾಸಿಕ 4,000 ರು. ಶಿಷ್ಯವೇತನ
- ಡಿಪ್ಲೋಮಾ ಪದವೀಧರರಿಗೆ 2000 ರು. ಆರ್ಥಿಕ ನೆರವು ಜಾರಿಯ ಭರವಸೆ
- ಯುವ ಉದ್ಯಮಿಗಳಿಗೆ 25 ಲಕ್ಷ ರು. ತನಕ ಉಚಿತ ಸಾಲ ನೀಡುವ ಆಶ್ವಾಸನೆ
- 2036ರ ವೇಳೆಗೆ ತಮಿಳುನಾಡು ಆರ್ಥಿಕತೆ ₹1.5 ಟ್ರಿಲಿಯನ್‌ಗೆ ಅಭಿವೃದ್ಧಿ
- 5 ಲಕ್ಷ ಸೋಲಾರ್ ಪಂಪ್‌ಸೆಟ್ ಮತ್ತು ಶೇ.100ರಷ್ಟು ಬೆಳೆ ವಿಮೆ ಜಾರಿ
- ಎಐಗೆ ವಿಶೇಷ ಸಚಿವಾಲಯ ಸ್ಥಾಪನೆ
- ಎಐ ವಿಶ್ವವಿದ್ಯಾನಿಲಯ, ಎಐ ನಗರ ನಿರ್ಮಾಣ

ವಿಜಯ್ ಕೊಡ್ತಾರಾ 8 ಗ್ರಾಂ ಚಿನ್ನ?

ವಧುವಿಗೆ 1.12 ಲಕ್ಷ ಮೌಲ್ಯದ ಚಿನ್ನದ ಭರವಸೆ ಚುನಾವಣಾ ಪ್ರಣಾಳಿಕೆಯಲ್ಲಿ ಮಾಡಿದ್ದ ಘೋಷಣೆ

ಚೆನ್ನೈ: ಟಿವಿಕೆ ಪಕ್ಷವೇನಾದರೂ ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದರೆ ವ'ಂದ'ಂವ'ಯಾಗ'ಂವ' ಹೆಣ್ಣುಮಕ್ಕಳಿಗೆ 8 ಗ್ರಾಂ ಚಿನ್ನ ಹಾಗೂ (ಮೌಲ್ಯ ಅಂದಾಜು 1.12 ಲಕ್ಷ) ಗುಣಮಟ್ಟದ ಸಿಲ್ಕ್ ಸೀರೆ ನೀಡುವುದಾಗಿ ಪಕ್ಷದ ನಾಯಕ, ನಟ ವಿಜಯನ್ ಅವರು ಭರವಸೆ ನೀಡಿದ್ದರು.



ಪ್ರಣಾಳಿಕೆಯಲ್ಲಿ ನೀಡಿದ ಈ ಭರವಸೆ ವಿಜಯನ್ ಈಡೇರಿಸಲಿದ್ದಾರೆಯೇ ಎಂಬ ಕುರಿತು ಇದೀಗ ಚರ್ಚೆ ಆರಂಭವಾಗಿದೆ.


ಸದ್ಯ ಒಂದು ಗ್ರಾಂ ಚಿನ್ನ (22 ಕ್ಯಾರೆಟ್)ದ ಬೆಲೆ 14 ಸಾವಿರ ರು. ಇದೆ. ಒಂದು ವೇಳೆ ಈ ಭರವಸೆ ಈಡೇರಿಸಲು ಮುಂದಾದರೆ ಪ್ರತಿ ಮದುಮಗಳಿಗೆ 1.12 ಲಕ್ಷ ರು. ಅನ್ನು ಚಿನ್ನಕ್ಕೆಂದೇ ವೆಚ್ಚ ಮಾಡಬೇಕಾಗುತ್ತದೆ. ಇದರ ಜತೆಗೆ ಗುಣಮಟ್ಟದ ರೇಷ್ಮೆ ಸೀರೆಗೆ ಹೆಚ್ಚುವರಿ ವೆಚ್ಚ ಮಾಡಬೇಕಿದೆ.

ಇದಲ್ಲದೆ ಪಕ್ಷದ ಪ್ರಣಾಳಿಕೆಯಲ್ಲಿ 60 ವರ್ಷಕ್ಕಿಂತ ಕೆಳಗಿನ ಮಹಿಳೆಯರಿಗೆ ಮಾಸಿಕ 2,500 ರು, ಪ್ರತಿ ಕುಟುಂಬಕ್ಕೆ ವರ್ಷಕ್ಕೆ ಆರು ಗ್ಯಾಸ್ ಸಿಲಿಂಡರ್ ವಿತರಣೆ, ಮಹಿಳಾ ಸ್ವಸಹಾಯ ಗುಂಪುಗಳಿಗೆ 5 ಲಕ್ಷ ರು. ಬಡ್ಡಿರಹಿತ ಸಾಲ, 5 ಎಕ್ರೆಗಿಂತ ಕಡಿಮೆ ಭೂಮಿ ಹೊಂದಿರುವ ರೈತರ ಸಹಕಾರಿ ಬ್ಯಾಂಕ್‌ಗಳಲ್ಲಿ ಮಾಡಿರುವ ಕೃಷಿ ಸಾಲ ಮನ್ನಾ ಸೇರಿದಂತೆ ಹಲವು ಭರವಸೆ ನೀಡಿದ್ದರು. ಇವು ಜಾರಿ ಆಗುತ್ತವೆಯೇ ಎಂಬುದು ಈಗ ಪ್ರಶ್ನೆ.

5ರ ಪೈಕಿ 4ರಲ್ಲಿ ನಿಜವಾಯ್ತು ಸಮೀಕ್ಷೆ ಭವಿಷ್ಯ

ಬಂಗಾಳ, ಕೇರಳ, ಅಸ್ಸಾಂ, ಪುದುಚೇರಿಯಲ್ಲಿ ನಿಜ | ತಮಿಳ್ನಾಡಲ್ಲಿ ಪೂರ್ಣ ಉಲ್ಟಾ

ನವದೆಹಲಿ: ಪಂಚರಾಜ್ಯಗಳಲ್ಲಿ ತಮಿಳುನಾಡು ಹೊರತುಪಡಿಸಿ ಉಳಿದ 4 ರಾಜ್ಯಗಳ ಚುನಾವಣೋತ್ತರ ಸಮೀಕ್ಷೆಗಳು ನಿಜವಾಗಿವೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಮೈತ್ರಿಕೂಟ ಹಾಗೂ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಗೆಲುವು ಸಾಧಿಸಲಿದೆ ಎಂದು ಬಹುತೇಕ ಸಮೀಕ್ಷೆಗಳು ಭವಿಷ್ಯ ನುಡಿದಿದ್ದವು. 4 ರಾಜ್ಯಗಳಲ್ಲಿ ಸಮೀಕ್ಷೆಯಂತೆಯೇ ಫಲಿತಾಂಶ ಹೊರಬಿದ್ದಿದ್ದು, ತಮಿಳುನಾಡಿನಲ್ಲಿ ಮಾತ್ರ ಬಹುತೇಕ ಸಮೀಕ್ಷೆಗಳ ಲೆಕ್ಕಾಚಾರ ತಲೆಕೆಳಗಾಗಿದೆ.



ತಮಿಳುನಾಡಿನ 9 ಸಮೀಕ್ಷೆಗಳಲ್ಲಿ ಬಹುತೇಕ ಸಮೀಕ್ಷೆಗಳು ಸ್ಟಾಲಿನ್ ನೇತೃತ್ವದ ಡಿಎಂಕೆ ಪುನಃ ಅಧಿಕಾರಕ್ಕೆ ಬರುವುದಾಗಿ ಹೇಳಿದ್ದವು. ಟಿವಿಕೆ ಗೆಲ್ಲಲಿದೆ ಎಂದು ಆ್ಯಕ್ಸಿಸ್-ಮೈ ಇಂಡಿಯಾ 98-100 ಸ್ಥಾನದ ಭವಿಷ್ಯ ನುಡಿದಿತ್ತು. ಆದರೆ, ಎಲ್ಲರ ಲೆಕ್ಕಾಚಾರ ತಲೆ ಕೆಳಗೆ ಮಾಡಿ ನಟ ವಿಜಯ್ ನೇತೃತ್ವದ ಟಿವಿಕೆ ಅಧಿಕಾರ ಹಿಡಿಯುವುದು ಪಕ್ಕಾ ಆಗಿದೆ. ಎಐಎಡಿಎಂಕೆ-ಬಿಜೆಪಿ ಮೈತ್ರಿ ಕೂಟ 3ನೇ ಸ್ಥಾನಕ್ಕೆ ಬಂದಿದ್ದು, ಡಿಎಂಕೆ ಮಾತ್ರ 2ನೇ ಸ್ಥಾನ ಗಳಿಸಿದೆ. ಪ. ಬಂಗಾಳದಲ್ಲಿ 9ರಲ್ಲಿ 6 ಸಮೀಕ್ಷೆಗಳು ಬಿಜೆಪಿ ಗೆಲ್ಲಲಿದೆ ಎಂದು ಹೇಳಿದ್ದವು. ಟುಡೇಸ್ ಚಾಣಾಕ್ಯ ಸಮೀಕ್ಷೆಯಲ್ಲಿ ಬಿಜೆಪಿ 181-203 ಸ್ಥಾನಗಳಿಸಬಹುದು ಎಂದು ಹೇಳಲಾಗಿತ್ತು.

ಇನ್ನು ಅಸ್ಸಾಂನಲ್ಲಿ 8ಕ್ಕೂ ಎಂಟೂ ಸಮೀಕ್ಷೆಗಳು ಎನ್‌ಡಿಎ ಮೈತ್ರಿಕೂಟ ಭರ್ಜರಿ ಗೆಲುವು ಸಾಧಿಸಲಿದೆ. 85ಕ್ಕಿಂತಲೂ ಹೆಚ್ಚಿನ ಸ್ಥಾನ ಗಳಿಸಲಿದೆ ಎಂದಿದ್ದವು. ಅದು ನಿಜವಾಗಿದೆ. ಕೇರಳದಲ್ಲಿ ಹತ್ತೂ ಸಮೀಕ್ಷೆಗಳು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಗೆಲುವು ಖಚಿತ ಎಂದಿದ್ದವು. ಪುದುಚೇರಿಯಲ್ಲಿ ಎಲ್ಲಾ ಸಮೀಕ್ಷೆ ಎನ್‌ಡಿಎ ಗೆಲ್ಲಲಿದೆ ಎಂದಿದ್ದವು.

ತಮಿಳುನಾಡು ವಿಧಾನಸಭಾ ಕ್ಷೇತ್ರ: 234 ಬಹುಮತಕ್ಕೆ: 118

ಪಕ್ಷ	ಆ್ಯಕ್ಸಿಸ್ ಮೈ ಇಂಡಿಯಾ	ಪಿ ಮಾರ್ಕ್	ಪೀಪಲ್ಸ್ ಪಲ್ಸ್	ಮ್ಯಾಟ್ರಿಜ್	ಪ್ರಜಾ ಪೋಲ್	ವೋಟ್ ವೈಬ್
ಡಿಎಂಕೆ+	92-110	125-145	125-145	122-132	148-168	103-113
ಅಣ್ಣಾಡಿಎಂಕೆ+	22-23	65-85	65-80	87-100	61-81	114-124
ಟಿವಿಕೆ	98-120	16-26	18-24	10-12	1-9	4-10
	0	0-6	2-6	0-6	–	–

ಆ್ಯಕ್ಸಿಸ್ ಮೈ ಇಂಡಿಯಾ ಸಮೀಕ್ಷೆ ನಿಖರ

ತಮಿಳುನಾಡಿನಲ್ಲಿ ನಟ ವಿಜಯ್ ನೇತೃತ್ವದ ಟಿವಿಕೆ 100 ಸ್ಥಾನಗಳಿಸಲಿದೆ ಎಂದು ಆ್ಯಕ್ಸಿಸ್ ಮೈ ಇಂಡಿಯಾ ಸಮೀಕ್ಷೆ ಭವಿಷ್ಯ ನುಡಿದಿತ್ತು. ಅದೀಗ ನಿಜವಾಗಿದೆ. ಆದರೆ ಕಾಮಾಕ್ಯ ಸಮೀಕ್ಷೆಯಲ್ಲಿ ಟಿವಿಕೆ 67-81 ಮತ್ತು ಟುಡೇಸ್ ಚಾಣಾಕ್ಯದಲ್ಲಿ ಟಿವಿಕೆ 52-74 ಸ್ಥಾನ ಗೆಲ್ಲಲಿದೆ ಎನ್ನಲಾಗಿತ್ತು. ಉಳಿದಂತೆ ಬಹುತೇಕ ಸಮೀಕ್ಷೆಗಳು ಟಿವಿಕೆಗೆ 20-30 ಸ್ಥಾನ ಗೆಲ್ಲಲಿದೆ ಎಂದಿದ್ದವು.

ಒಟ್ಟಿಗೆ ಕುರ್ಚಿಯಿಂದ ಕೆಳಗೆ ಇಳಿದ 3 ದಿಗ್ಗಜ ಸಿಎಂಗಳು

ದೀದಿ, ಸ್ಟಾಲಿನ್, ಪಿಣರಾಯಿ ನಿರ್ಗಮನ

ನವದೆಹಲಿ: 2026ರ ಪಂಚರಾಜ್ಯ ಚುನಾವಣೆಯು, ಮತ್ತೊಂದು ಅವಧಿ ಅಧಿಕಾರದಲ್ಲಿ ಮುಂದುವರಿಯುವ ಗುಂಗಲ್ಲಿದ್ದ 3 ರಾಜ್ಯಗಳ ದಿಗ್ಗಜ ಸಿಎಂಗಳಿಂದ ಅನಿರೀಕ್ಷಿತವಾಗಿ ಕುರ್ಚಿಯನ್ನು ಕಸಿದಿದೆ.

2011ರಲ್ಲಿ ಮೊದಲ ಬಾರಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಕುರ್ಚಿಗೇರಿದ ಮಮತಾ ಬ್ಯಾನರ್ಜಿ, ಮುಂದಿನ 2 ಅವಧಿಗಳಲ್ಲೂ(ಒಟ್ಟು 3 ಬಾರಿ) ಅದನ್ನು ಅನ್ಯ ಪಕ್ಷಗಳಿಗೆ ಬಿಟ್ಟುಕೊಟ್ಟಿರಲಿಲ್ಲ. ಆದರೆ ಕಳೆದೊಂದು ದಶಕದಿಂದ ರಾಜ್ಯದಲ್ಲಿ ಬಿಜೆಪಿ ಛಲಬಿಡದೆ ಮಾಡಿದ ಸಂಘಟನಾ ಕಾರ್ಯವು ಈ ಬಾರಿ ಮಮತಾ ಪಕ್ಷದ ಅಸ್ತಿತ್ವಕ್ಕೇ ಸವಾಲೆಸೆದಿದ್ದು, ಅವರು ಸಿಎಂ ಆಗುವ ಕನಸು ಕೈಬಿಡುವಂತೆ ಮಾಡಿದೆ.

ಅತ್ತ 2 ಬಾರಿ ಕೇರಳದ ಸಿಎಂ ಆಗಿದ್ದ ಪಿಣರಾಯಿ ವಿಜಯನ್ ಅವರ ಎಲ್‌ಡಿಎಫ್ ಕೂಟವನ್ನು10 ವರ್ಷಗಳ ಬಳಿಕ ಕಾಂಗ್ರೆಸ್ ಧೂಳೀಪಟ ಮಾಡಿದ್ದು, ಅನಿವಾರ್ಯವಾಗಿ ಅವರೂ ಕುರ್ಚಿ ತ್ಯಾಗಕ್ಕೆ ಸಜ್ಜಾಗಿದ್ದಾರೆ.

ಅತ್ತ ತಮಿಳುನಾಡಿನಲ್ಲಿ 5 ವರ್ಷ ಆಡಳಿತ ನಡೆಸಿದ ಸಿಎಂ ಎಂ.ಕೆ. ಸ್ಟಾಲಿನ್, ಅಣ್ಣಾಡಿಎಂಕೆಯನ್ನು ತಮ್ಮ ಪ್ರಬಲ ಎದುರಾಳಿ ಎಂದುಕೊಂಡಿದ್ದರು. ಆದರೆ ಚುನಾವಣಾ ಫಲಿತಾಂಶವು ಅವರ ಲೆಕ್ಕಾಚಾರವನ್ನು ತಲೆಕೆಳಗೆ ಮಾಡಿದೆ. 2 ವರ್ಷಗಳ ಹಿಂದಷ್ಟೇ ರಾಜಕೀಯಕ್ಕೆ ಪ್ರವೇಶಿಸಿದ ಟಿವಿಕೆಯ ವಿಜಯ್‌ಗೆ ಅವರು ತನ್ನ ಕುರ್ಚಿ ಬಿಟ್ಟುಕೊಡಬೇಕಾಗಿ ಬಂದಿದೆ.

ಒಟ್ಟಿನಲ್ಲಿ, ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಆಡಳಿತ ವಿರೋಧಿ ಅಲೆಯಲ್ಲಿ ಸರ್ಕಾರ ಕೊಚ್ಚಿ ಹೋದರೆ, ತಮಿಳುನಾಡಿನಲ್ಲಿ ವಿಜಯ್‌ರ ಟಿವಿಕೆಯ ಎಂಟ್ರಿ ಎಬ್ಬಿಸಿದ ಹವಾಗೆ ಸ್ಟಾಲಿನ್ ಸರ್ಕಾರ ಹಾರಿಹೋಗಿದೆ.

IN THE SUPREME COURT OF INDIA EXTRA-ORDINARY APPELLATE JURISDICTION
Petition for Special Leave to Appeal (Civil) No(s) 28248-28258 OF 2024
WITH PRAYER FOR INTERIM RELIEF

THE PRINCIPAL SECRETARY TO GOVERNMENT AND OTHERS .....Petitioner(s)
VERSUS
KS SURENDRA BABU AND OTHERS ... Respondent(s)

To.

1. KS SURENDRA BABU S/O LATE K N SRINIVASA GUPTA, R/AT NO.9, 100 FEET ROAD, BANASHANKARI, 2ND STAGE, 4TH BLOCK, BENGALURU 560085, KARNATAKA.	**PID: 98486/2026 FOR R[1] IN IN SLP(C) NO. 28248/2024, SLP(C) NO. 28250/2024, SLP(C) NO. 28253/2024, SLP(C) NO.28254/2024SLP(C) NO.28248-28258/2024 (SEC IV-A)**
2. RV BHASKAR S/O LATE RAJA VENKATARAMANA SHETTY, RESIDING AT NO.228, MUDDINAPALYA MAIN ROAD, OPP.GOVT SCHOOL, BENGALURU-560091. KARNATAKA.	**PID: 98487/2026 FOR R[4] IN IN SLP(C) NO. 28248/2024, SLP(C) NO. 28250/2024, SLP(C) NO. 28254/2024SLP(C) NO.28248-28258/2024 (SEC IV-A)**
3. RV SUDHIR S/O LATE RAJA VENKATARAMANA SHETTY, RESIDING AT NO.228, MUDDINAPALYA MAIN ROAD, OPP.GOVT SCHOOL, BENGALURU-560091. KARNATAKA.	**PID: 98488/2026 FOR R[5] IN IN SLP(C) NO. 28248/2024, SLP(C) NO. 28250/2024, SLP(C) NO. 28254/2024SLP(C) NO.28248-28258/2024 (SEC IV-A)**
4. RV GIRIDHAR S/O LATE RAJA VENKATARAMANA SHETTY,, RESIDING AT NO.228, MUDDINAPALYA MAIN ROAD, OPP.GOVT SCHOOL, BENGALURU-560091. KARNATAKA.	**PID: 98489/2026 FOR R[6] IN IN SLP(C) NO. 28248/2024, SLP(C) NO. 28250/2024, SLP(C) NO. 28254/2024SLP(C) NO.28248-28258/2024 (SEC IV-A)**
5. RV SHANKAR S/O LATE RAJA VENKATARAMANA SHETTY,, RESIDING AT NO.228, MUDDINAPALYA MAIN ROAD, OPP.GOVT SCHOOL, BENGALURU-560091. KARNATAKA.	**PID: 98490/2026 FOR R[7] IN IN SLP(C) NO. 28248/2024, SLP(C) NO. 28250/2024, SLP(C) NO. 28254/2024SLP(C) NO.28248-28258/2024 (SEC IV-A)**
6. A. MUDALAPPA S/O LATE RAJA VENKATARAMANAPPA,, RESIDING AT NO.228, MUDDINAPALYA MAIN ROAD, OPP.GOVT SCHOOL, BENGALURU-560091., KARNATAKA	**PID: 98491/2026 FOR R[8] IN IN SLP(C) NO. 28248/2024, SLP(C) NO. 28250/2024, SLP(C) NO. 28254/2024SLP(C) NO.28248-28258/2024 (SEC IV-A)**
7. RUDRA MURTHY S/O H S SADASHIVAIAH, R/O ULLALU UPA NAGARA, ULLALU, YESHWANTHPUR HOBLI, BENGALURU NORTH TALUK-560091. KARNATAKA.	**PID: 98492/2026 FOR R[21] IN IN SLP(C) NO. 28248/2024, SLP(C) NO. 28250/2024, SLP(C) NO. 28254/2024, SLP(C) NO. 28256/2024SLP(C) NO.28248-28258/2024 (SEC IV-A)**
8. CHANDRAN S/O LATE NANJUNDAPPA, R/O ULLALU UPA NAGARA, ULLALU, YESHWANTHPUR HOBLI, BENGALURU NORTH TALUK KARNATAKA -560091.	**PID: 98493/2026 FOR R[22] IN IN SLP(C) NO. 28248/2024, SLP(C) NO. 28250/2024, SLP(C) NO. 28254/2024, SLP(C) NO. 28256/2024SLP(C) NO.28248-28258/2024 (SEC IV-A)**
9. NARASAPPA S/O BASAPPA, R/O ULLALU UPA NAGARA, ULLALU, YESHWANTHPUR HOBLI, BENGALURU NORTH TALUK KARNATAKA -560091.	**PID: 98494/2026 FOR R[23] IN IN SLP(C) NO.28248/2024, SLP(C) NO.28250/2024, SLP(C) NO. 28254/2024, SLP(C) NO.28256/2024SLP(C) NO.28248-28258/2024 (SEC IV-A)**
10. GANGARAJU S/O NAGARAJU,, R/O ULLALU UPA NAGARA, ULLALU, YESHWANTHPUR HOBLI, BENGALURU NORTH TALUK KARNATAKA-560091.	**PID: 98495/2026 FOR R[24] IN IN SLP(C) NO. 28248/2024, SLP(C) NO.28250/2024, SLP(C) NO. 28254/2024, SLP(C) NO. 28256/2024SLP(C) NO.28248-28258/2024 (SEC IV-A)**
11. MUDDUHANONNAIAH S/O JAYANNA, R/O ULLALU UPA NAGARA, ULLALU, YESHWANTHPUR HOBLI, BENGALURU NORTH TALUK KARNATAKA – 560091.	**PID: 98496/2026 FOR R[25] IN IN SLP(C) NO. 28248/2024, SLP(C) NO. 28250/2024, SLP(C) NO. 28254/2024, SLP(C) NO. 28256/2024SLP(C) NO.28248-28258/2024 (SEC IV-A)**
12. CHANDRAPPA S/O LATE RAJAPPA, R/O ULLALU UPA NAGARA, ULLALU, YESHWANTHPUR HOBLI, BENGALURU NORTH TALUK DISTRICT- BANGALORE, KARNATAKA-560091.	**PID: 98497/2026 FOR R[26] IN IN SLP(C) NO. 28248/2024, SLP(C) NO. 28250/2024, SLP(C) NO. 28254/2024, SLP(C) NO. 28256/2024SLP(C) NO.28248-28258/2024 (SEC IV-A)**
13. K S VISHWAKIRAN, S/O LATE K N SRINIVASA GUPTA, R/AT NO.9, 100 FEET ROAD, BANASHANKRI 2ND STAGE, 4 TH BLOCK, BENGALURU-560085. KARNATAKA	**PID: 98498/2026 FOR R[27] IN IN SLP(C) NO.28248/2024, SLP(C) NO. 28250/2024, SLP(C) NO. 28253/2024, SLP(C) NO. 28254/2024SLP(C) NO.28248-28258/2024 (SEC IV-A)**
14. R SHOBHA, D/O Y. RAMAKRISHNA, W/O M.C. KESHAVAMURTHY, R/A NO.11/1, 1ST MAIN, 1ST CROSS, VALMIKINAGAR, MYSORE ROAD, BANGALORE-560 026. KARNATAKA.	**PID: 98499/2026 FOR R[34] IN IN SLP(C) NO.28249/2024, SLP(C) NO.28255/ 2024SLP(C) NO.28248- 28258/2024 (SEC IV-A)**
15. H.DAYAKAR S/O LATE HANUMAIAH, R/T ULLALU VILLAGE YESWANTHAPURA HOBLI, BENGALURU NORTH TALUK KARNATAKA -560 056.	**PID: 98500/2026 FOR R[45] IN IN SLP(C) NO.28249/2024, SLP(C) NO.28250/2024, SLP(C) NO. 28251/2024, SLP(C) NO.28252/2024, SLP(C) NO.28257/ 2024SLP(C) NO.28248-28258/2024 (SEC IV-A)**
16. H JANARDHAN S/O LATE HANUMAIAH, R/T ULLALU VILLAGE YESWANTHAPURA HOBLI, BENGALURU NORTH TALUK, DISTRICT- BANGALORE, KARNATAKA-560 056.	**PID: 98501/2026 FOR R[46] IN IN SLP(C) NO.28249/2024, SLP(C) NO.28250/2024, SLP(C) NO.28251/2024, SLP(C) NO.28252/2024, SLP(C) NO.28257/2024SLP(C) NO.28248-28258/2024 (SEC IV-A)**
17. H. RAMCHANDRA S/O LATE HANUMAIAH, R/T ULLALU VILLAGE YESWANTHAPURA HOBLI, BENGALURU NORTH TALUK DISTRICT-BANGALORE, KARNATAKA-560 056.	**PID: 98502/2026 FOR R[47] IN IN SLP(C) NO.28249/2024, SLP(C) NO.28250/2024, SLP(C) NO. 28251/2024, SLP(C) NO.28252/2024, SLP(C) NO.28257/2024SLP(C) NO.28248-28258/2024 (SEC IV-A)**
18. H CHANDRASHEKAR S/O LATE HANUMAIAH, R/T ULLALU VILLAGE YESWANTHAPURA HOBLI, BENGALURU NORTH TALUK DISTRICT-BANGALORE, KARNATAKA -560056.	**PID: 98503/2026 FOR R[48] IN IN SLP(C) NO.28249/2024, SLP(C) NO.28250/2024, SLP(C) NO.28251/2024, SLP(C) NO.28252/2024, SLP(C) NO.28257/2024SLP(C) NO.28248-28258/2024 (SEC IV-A)**
19. SAROJAMMA W/O LATE KN SRINIVASA GUPTA, R/AT NO.9, 100 FEET ROAD, BANASHANKARI 2 ND STAGE, 4TH BLOCK BANGALORE KARNATAKA -560083	**PID: 98504/2026 FOR R[67] IN IN SLP(C) NO. 28250/2024, SLP(C) NO.28254/2024SLP(C) NO.28248-28258/2024 (SEC IV-A)**
20. MS MOHAN KUMAR S/O LATE K.N. SRINIVASA GUPTA,, R/AT NO.9, 100 FEET ROAD, BANASHANKARI 2ND STAGE, 4TH BLOCK, BENGALURU KARNATAKA -560085.	**PID: 98505/2026 FOR R[68] IN IN SLP(C) NO.28250/2024, SLP(C) NO.28254/2024SLP(C) NO.28248-28258/2024 (SEC IV-A)**
21. BHASKAR R V S/O LATE VENKATA CHALAPATHI,, RESIDING AT NO.MUDDENAPALYA VILLAGE VISHWANTANEEDAM POST, YESHWANTHPURA HOBLI, BENGALURU NORTH TALUK DISTRICT-BANGALORE, KARNATAKA 560091.	**PID: 98506/2026 FOR R[69] IN IN SLP(C) NO. 28251/2024, SLP(C) NO. 28252/2024, SLP(C) NO.28257/2024SLP(C) NO.28248-28258/2024 (SEC IV-A)**
22. SHRIDHAR R.V. S/O LATE VENKATA CHALAPATHI, RESIDING AT NO.MUDDENAPALYA VILLAGE VISHWANTANEEDAM POST YESHWANTHPURA HOBLI BENGALURU NORTH TALUK DISTRICT- BANGALORE, KARNATAKA-560091.	**PID: 98507/2026 FOR R[70] IN IN SLP(C) NO. 28251/2024, SLP(C) NO. 28252/2024, SLP(C) NO. 28257/2024SLP(C) NO.28248-28258/2024 (SEC IV-A)**
23. LAKSHMINARASAMMA, W/O SHIVANNA R/AT NO. 24, 2ND CROSS, 2ND MAIN, VIJAYANAGAR, BENGALURU-560 040., DISTRICT- BANGALORE, KARNATAKA	**PID: 98508/2026 FOR R[75] IN IN SLP(C) NO.28251/2024, SLP(C) NO.28252/2024, SLP(C) NO.28257/2024SLP(C) NO.28248-28258/2024 (SEC IV-A)**
24. B V RATHNAMMA D/O LATE VENKATARAMAIAH,R/AT NO 33, 12TH E CROSS, MAGADI ROAD, DISTRICT-BANGALORE, KARNATAKA – 560023	**PID: 98509/2026 FOR R[76] IN IN SLP(C) NO. 28251/2024, SLP(C) NO. 28252/2024, SLP(C) NO.28257/2024SLP(C) NO.28248-28258/2024 (SEC IV-A)**
25. H CHANDRAKEERTHI, S/O LATE HANUMAIAH R/A ULLAL VILLAGE YESHWANTHPURA HOBLI BENGALURU NORTH TALUK BENGALURU - 560 110., DISTRICT- BANGALORE, KARNATAKA	**PID: 98510/2026 FOR R[79] IN IN SLP(C) NO. 28251/2024, SLP(C) NO. 28252/2024, SLP(C) NO. 28257/2024SLP(C) NO.28248-28258/2024 (SEC IV-A)**
26. SOWMYA D/O LATE MAHADEVAMMA,, R/A ULLAL VILLAGE, YESHWANTHAPURA HOBLI, BENGALURU NORTH TALUK, BENGALURU-560 110., DISTRICT-BANGALORE, KARNATAKA	**PID: 98511/2026 FOR R[93] IN IN SLP(C) NO. 28252/2024SLP(C) NO.28248-28258/2024 (SEC IV-A)**
27. NARAYANASWAMY S/O LATE MAHADEVAMMA,, R/A ULLAL VILLAGE, YESHWANTHAPURA HOBLI, BENGALURU NORTH TALUK, BENGALURU-560 110., DISTRICT-BANGALORE, KARNATAKA	**PID: 98512/2026 FOR R[94] IN IN SLP(C) NO.28252/2024SLP(C) NO.28248-28258/2024 (SEC IV-A)**
28. MANJUNATH S/O LATE VENKATAMMA,, R/A ULLAL VILLAGE, YESHWANTHAPURA HOBLI, BENGALURU NORTH TALUK, BENGALURU DISTRICT- BANGALORE, KARNATAKA -560 110	**PID: 98513/2026 FOR R[95] IN IN SLP(C) NO. 28252/2024SLP(C) NO.28248-28258/2024 (SEC IV-A)**
29. SHASHIKALA D/O LATE NAGARAJ,, NO.24 2ND CROSS, 2ND MAIN HOSAHALLI COLONY, NEAR PLAGUE MARAMMA TEMPLE, VIJAYANAGAR, BENGALURU KARNATAKA -560 040.	**PID: 98514/2026 FOR R[96] IN IN SLP(C) NO. 28252/2024SLP(C) NO.28248-28258/2024 (SEC IV-A)**
30. VEDHA D/O LATE NAGARAJ,, NO.24 2ND CROSS, 2ND MAIN HOSAHALLI COLONY, NEAR PLAGUE MARAMMA TEMPLE, VIJAYANAGAR, BENGALURU DISTRICT- BANGALORE, KARNATAKA - 560 040.	**PID: 98515/2026 FOR R[97] IN IN SLP(C) NO. 28252/2024SLP(C) NO.28248-28258/2024 (SEC IV-A)**
31. CHAMPA D/O LATE NAGARAJ, NO.24 2ND CROSS, 2ND MAIN HOSAHALLI COLONY, NEAR PLAGUE MARAMMA TEMPLE, VIJAYANAGAR, BENGALURU DISTRICT-BANGALORE, KARNATAKA -560 040.	**PID: 98516/2026 FOR R[98] IN IN SLP(C) NO.28252/2024SLP(C) NO.28248-28258/2024 (SEC IV-A)**
32. KARNATAKA INSTITUTE OF LEATHER TECHNOLOGY, BY ITS DEVELOPMENT OFFICER, KADUGONDANAHALLI, ARABIC COLLEGE POST, BANGALORE KARNATAKA – 560045	**PID: 98517/2026 FOR R[108] IN IN SLP(C) NO. 28255/2024SLP(C) NO.28248-28258/2024 (SEC IV-A)**
33. MANGALAGOWRI W/O LATE MUNNINARASAIAH,, R/AT G2, FLAT NO. 62/19, 2 ND MAIN ROAD, PRASHANTHNAGAR, BENGALURU DISTRICT- BANGALORE, KARNATAKA – 560079.	**PID: 98518/2026 FOR R[111] IN IN SLP(C) NO. 28257/2024SLP(C) NO.28248-28258/2024 (SEC IV-A)**

WHEREAS the Petition for SPECIAL LEAVE PETITION (CIVIL) to Appeal with application for CONDONATION OF DELAY IN FILING, CONDONATION OF DELAY IN FILING THE SPARE COPIES, PERMISSION TO FILE ADDITIONAL DOCUMENTS/ FACTS/ANNEXURES, EXEMPTION FROM FILING O.T. above mentioned (copy enclosed) filed in the Registry by Ms. PATIL REKHA CHANDRA GOUDA, Advocate on behalf of the Petitioner above named was listed for hearing before this Court on 09th December, 2024 along with the connected matters, when the Court was pleased to pass the following order:-
SPECIAL LEAVE PETITION (CIVIL) NOS. 28248
28258/2024
1. Delay in filing spare copies is condoned
2. Interim order, passed earlier, shall continue till the next date of hearing."
WHEREAS, the matter was listed for hearing before this Court on 09th April, 2026 along with the connected matters, when the Court was pleased to pass the following order:-
1. Mr. Kapil Sibal, learned senior counsel appearing for the State of Karnataka in SLP(C) No. 28248-28258/2024, submits that documents dating back to 1890 have since been traced which would prove the character of the lands in dispute as 'gomal'. According to him, these documents need to be placed on record since they have a material bearing on the special leave petitions under consideration.
2. Let such additional documents be placed on record by filing an appropriate application within three weeks.
3. Exception to such application may be taken by the petitioners within a week thereafter.
4. We have heard Mr. Debal Banerji, learned senior counsel appearing for K.S. Subbaraju - respondent No.7 in SLP (C) No. 30028/2024 in support of the prayer that the said petition should be dismissed.
5. Considering the submissions made by Mr. Sibal recorded above that the Government has since traced old records to the effect that disputed lands are 'gomal', we are of the considered opinion that the application seeking dismissal of SLP (C) No. 30028/2024 ought to be heard along with the special leave petitions.
6. Re-list the special leave petitions and all connected applications on 21st May, 2026 at 12:00 noon.
7. Interim order, passed earlier, shall continue till the next date of hearing.
8. The latest office report has been read. Some of the respondents are yet to be served.
9. Fresh steps be taken by the State of Karnataka to effect service through paper publication, within two weeks from date. Notice may be published in one English daily newspaper, viz. Deccan Herald and one Kannada newspaper, viz. Kannada Prabha.
10. Once the paper publications are made, the related documents be filed before the Registry a week prior to the returnable date. Put up an appropriate office report."
NOW, THEREFORE, TAKE NOTICE that the above petition along with main matter ie., SLP (C) no. 300025-30028/2024 will be posted for hearing before this Court on 21st May, 2026 at 10.30 O' Clock in the forenoon or so soon thereafter as may be convenient to the Court when you may appear before the court either in person or through Counsel and show cause to the Court as to why Special Leave and interim relief as prayed for be not granted and the resultant appeal be not allowed.
You may file your affidavit in opposition to the petition as provided under Rule 14(1) of Order XXI, S.C.R.2013 immediately from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPs and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted.
TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.
Dated: 13th April, 2026
Copy to :-
1 Ms. Patil Rekha Chandra Gouda (adv.), **2** Mr. Lzafeer Ahmad B. F. (adv.), **3** Mr. Deepak Prakash (adv.), **4** Mr. Vishnu Sharma A.s. (adv.), **5** Ms. Aruna Gupta (adv.), **6** Mr. Javedur Rahman (adv.) **7** Mr. Anirudh Sanganeria (adv.), **8** M/s. Nuli & Nuli (adv.), **9** Ms. Jayasree Narasimhan (adv.)

Sd/-
ASSISTANT REGISTRAR

DIPR/CP/497/Zen/2026-27

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ-571313.

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್
ಪ್ರಕಟಣೆ ಸಂಖ್ಯೆ–01/2026–27, ದಿನಾಂಕ:–30–04–2026 (ದ್ವಿಲಕೋಟೆ ಪದ್ಧತಿ)

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ **2026–27ನೇ ಸಾಲಿನಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅನುದಾನ ಯೋಜನೆಯ** ಲೆಕ್ಕಶೀರ್ಷಿಕೆಯಡಿ ಅನುಮೋದನೆಯಾದ ಕಾಮಗಾರಿಗಳಿಗೆ KW-4 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್ ಲೈನ್‌ನಲ್ಲಿ ಸಲ್ಲಿಸಲು ದಿನಾಂಕ: 04–05–2026 ರಿಂದ ದಿನಾಂಕ:– 22–05–2026 ರವರೆಗೆ ಸಂಜೆ 16.00 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟಿಕರಣ/ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿನಾಂಕ: 13–05–2026 ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:–25–05–2026ರ ಸಂಜೆ 17.00 ಘಂಟೆಯ ನಂತರ ಹಾಗೂ ತಾಂತ್ರಿಕ ಬಿಡ್ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು. ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಕಾಮಗಾರಿ ಹೆಸರು/ ಪ್ಯಾಕೇಜ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಗುತ್ತಿಗೆದಾರರ ಅರ್ಹತೆ
01.	Improments to the Road of Rechamballi village to Nanjarajapura in Chamarajanagara taluk 0.00 To 1.50 KM	150.00	--	2,00,000.00	2ನೇ ದರ್ಜೆ ಮತ್ತು ಮೇಲ್ಪಟ್ಟು

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ (ಫೋನ್ ನಂ.08226–223019) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಮೊಬೈಲ್ ಸಂಖ್ಯೆ:–ಸ.ಇಂ. 8073339806

ಸಹಿ/– ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:86:2026–27

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಸಾಮಾಜಿಕ ಅರಣ್ಯ (ಸಂಶೋಧನೆ), ಬೆಂಗಳೂರು
1ನೇ ಮುಖ್ಯ ರಸ್ತೆ ಅರಕೆರೆ ಮೈಕೊ ಬಡಾವಣೆ, ದೊರೆಸಾನಿಪಾಳ್ಯ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 076 ಇ–ಮೇಲ್: dcfsfresearch@gmail.com

ಸಂ: ಉಅಸಂ/ಸಾಅ(ಸಂ)ಸಿಆರ್/12/2025–26 ದಿನಾಂಕ: 02.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

2026–27 ನೇ ಸಾಲಿನ ಹೊರಗುತ್ತಿಗೆ ಆಧಾರದ ಮೇರೆಗೆ ಈ ವಿಭಾಗದ ವಲಯಗಳಾದ ಬೀಜ ಘಟಕ ಬೆಂಗಳೂರು, **ಮೈಸೂರು ವಲಯಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ಸಂಶೋಧನಾ ಸಹಾಯಕರು, ಗಣಕಯಂತ್ರ ಸಹಾಯಕರು, ವಾಹನ ಚಾಲಕರು, ಕ್ಷೇತ್ರ ಸಹಾಯಕರು ಮತ್ತು ಸ್ವಚ್ಛತಾಗಾರರ, ಹಾಗೂ ಹೊರಗುತ್ತಿಗೆ ಆಧಾರದ ಮೇರೆಗೆ ಸಿಬ್ಬಂಧಿಗಳನ್ನು ಒದಗಿಸಲು ಗುತ್ತಿಗೆದಾರರಿಂದ** 'e-procurement' ಜಾಲತಾಣದ ಮುಖಾಂತರ **ದಿನಾಂಕ: 28.04.2026 ರಿಂದ ದಿನಾಂಕ: 13.05.2026 ಸಂಜೆ 04.00 ಗಂಟೆಯವರೆಗೆ** ಇ–ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಲಾಗಿರುತ್ತದೆ. ಮೊದಲನೇ ಟೆಂಡರ್‌ನಲ್ಲಿ ಯಾರು ಭಾಗವಹಿಸದೆ ಇದ್ದಲ್ಲಿ ಯಥಾ ನಿಬಂಧನೆ ಹಾಗೂ ನಿಯಮಾನುಸಾರ ಎರಡನೇ ಬಾರಿ ಟೆಂಡರ್ ಅನ್ನು 15 ದಿನಗಳವರೆಗೆ ಅಂದರೆ, **ದಿನಾಂಕ: 16.05.2026 ರಿಂದ 30.05.2026 ರವರೆಗೆ** ಕರೆಯಲಾಗುವುದನ್ನು ಮರು ಇ–ಟೆಂಡರ್ ಎಂದು ಪರಿಗಣಿಸಲಾಗುವುದು ತಾಂತ್ರಿಕ ಬಿಡ್‌ನಲ್ಲಿ ಪುರಸ್ಕೃತರಾದ ಟೆಂಡರ್‌ದಾರರು ಆರ್ಥಿಕ ಬಿಡ್ಡನ್ನು ಮಾತ್ರ ತೆರೆಯಲಾಗುವುದು. ಹಾಗೂ ಸದರಿ ಮರು ಇ–ಟೆಂಡರ್‌ಗೆ ಯಾವುದೇ ಪ್ರತ್ಯೇಕ ಪ್ರಚಾರವಾಗಲೀ/ಪ್ರಕಟಣೆಯಾಗಲೀ ಮಾಡುವುದಿಲ್ಲ ಇ–ಟೆಂಡರ್ ಮೂಲ ಷರತ್ತುಗಳಲ್ಲಿ ಯಾವ ಬದಲಾವಣೆಗಳು ಇರುವುದಿಲ್ಲ. **ಟೆಂಡರ್ ಪ್ರಕಟಣೆಗೊಂಡಿರುವ ಇ–ಟೆಂಡರ್ ನೋಟಿಫಿಕೇಷನ್ ಸಂಖ್ಯೆ : KFD/2026-27/SE1904.**

ಸಹಿ/– **ಉಪ ಅರಣ್ಯ ಸಂರಕ್ಷಣಾಧಿಕಾರಿ**
ಸಾಮಾಜಿಕ ಅರಣ್ಯ (ಸಂಶೋಧನೆ), ಬೆಂಗಳೂರು.

DIPR/CP/492/SA/2026-27

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ
Kfdcl
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ) CIN: U02001KA1971SGC001999
ವಿಭಾಗೀಯ ವ್ಯವಸ್ಥಾಪಕರ ಕಚೇರಿ, ಬೆಂಗಳೂರು ವಿಭಾಗ, 'ವನವಿಕಾಸ' 5ನೇ ಮಹಡಿ,
ಕೊಠಡಿ ಸಂಖ್ಯೆ. 515, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003
ಫೋನ್: 080–23345199 ಇ-ಮೇಲ್ : dmkfdclbd@gmail.com ವೆಬ್‌ಸೈಟ್: www.kfdcl.karnataka.gov.in

ಸಂ: ಕಅಅನಿನಿ/ವಿವ್ಯ/ಬೆಂ/ಮೆ.ಕ&ಸಾ/2026–27/65 ದಿನಾಂಕ: 04.05.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ನೋಂದಾಯಿತ ಅರಣ್ಯ ಗುತ್ತಿಗೆದಾರರಿಗೆ ತಿಳಿಸುವುದೇನೆಂದರೆ, 2026–27ನೇ ಸಾಲಿನಲ್ಲಿ ಬೆಂಗಳೂರು ವಿಭಾಗ ವಿವಿಧ ನೆಡುತೋಪುಗಳಲ್ಲಿ ಲಭ್ಯವಿರುವ ಅಂದಾಜು ಸಿಪ್ಪೆ ಸಹಿತ 2,635 ಎಂ.ಟಿ. ಹಾಗೂ ಸಿಪ್ಪೆ ರಹಿತ 30,340 ಎಂ.ಟಿ. ಮೆದು ಮರಗಳನ್ನು ಕಡಿತಲೆ ಮಾಡಿ, ಸ್ಟಾಕಿಂಗ್ ಮಾಡಿ, ಲಾರಿ ಮಾರ್ಗಕ್ಕೆ ಸಾಗಿಸಿ, ಲಾರಿಗೆ ಲೋಡ್ ಮಾಡುವುದು ಅಥವಾ ಮೆದುಮರಗಳನ್ನು ಕತ್ರಾವಣೆ ಮಾಡಿ **ಮೆ॥ ಎಚ್.ಪಿ.ಎಫ್. ಕುಮಾರಪಟ್ಟಣಂ** ರವರ ಕಾರ್ಖಾನೆಗೆ ಸಾಗಾಣಿಕೆ ಮಾಡಲು ದ್ವಿ–ಲಕೋಟೆಯಲ್ಲಿ ಟೆಂಡರ್ ಅನ್ನು **https://kppp.karnataka. gov.in** ಮುಖಾಂತರ ಆಹ್ವಾನಿಸಲಾಗಿದೆ. ಅಲ್ಪಾವಧಿ ಇ–ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 16.05.2026** ರ **17.30 ಗಂಟೆ ಒಳಗಾಗಿ** ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ವಿಳಾಸಕ್ಕೆ ಅಥವಾ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ವಿಭಾಗೀಯ ವ್ಯವಸ್ಥಾಪಕರು, ಕಅಅನಿನಿ, ಬೆಂಗಳೂರು ವಿಭಾಗ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ/ಪ್ರ(ಕಾ)ವ/ಅಇಂವಿ(ಕ)/ಸಇಂ–2/2026–27/1055–57 ದಿನಾಂಕ: 02.05.2026

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕ.ವಿ.ಪ್ರ.ನಿ.ನಿ. ಯು ಬಿಡ್ ವಿಚಾರಣೆ ಸಂಖ್ಯೆ: **KPTCL/CEE/Tr(o)Z/SEE(O)/ AE-2/2025-26/Unskilled Man Power Service-03 dt: 30.04.2026**ರ ಅನ್ವಯ ತುಮಕೂರು, ಪ್ರಸರಣ (ಕಾರ್ಯಾಚರಣೆ) ವಲಯದ ವ್ಯಾಪ್ತಿಗೆ ಬರುವ ವಿವಿಧ ಟಿ.ಎಲ್.ಎಮ್ ಉಪ–ವಿಭಾಗಗಳಿಗೆ ಸೇರಿದ ಪ್ರಸರಣ ಮಾರ್ಗಗಳ ನಿರ್ವಹಣೆಗಾಗಿ ಗುತ್ತಿಗೆ ಆಧಾರದ ಮೇಲೆ 30 ಸಂಖ್ಯೆಗಳ ಮಾನವ ಶಕ್ತಿ (ಕೌಶಲ್ಯ ರಹಿತ ಕಾರ್ಮಿಕರು) ಸೇವೆಯನ್ನು ಒದಗಿಸಲು ಬಿಡ್ ಆಹ್ವಾನಿಸಿದೆ.
ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ ಹೈಪರ್‌ಲಿಂಕ್ 'E Procurement KPTCL' ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 11.05.2026 ರಂದು ಅಥವಾ ತದ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಇಂಜಿನಿಯರ್ (ವಿ),
ಪ್ರಸರಣ (ಕಾರ್ಯಾಚರಣೆ) ವಲಯ, ಕ.ವಿ.ಪ್ರ.ನಿ.ನಿ., ಪ್ರಸರಣ ಭವನ, 1ನೇ ಮಹಡಿ,
66/11 ಕೆವಿ ತುಮಕೂರು ಉಪ ಕೇಂದ್ರದ ಆವರಣ, ತುಮಕೂರು–03

ಪುರಸಭಾ ಕಾರ್ಯಾಲಯ
OFFICE OF THE TOWN MUNICIPAL COUNCIL
ಹೂವಿನಹಡಗಲಿ, ವಿಜಯನಗರಜಿಲ್ಲೆ.
ದೂರವಾಣಿ ಸಂ: 08399–240237
ಇ–ಮೇಲ್: ka.hoovinahadagalli.tmc@gmail.com
ವೆಬ್ ಸೈಟ್: hoovinahadagalitown.mrc.gov.in

ಕ್ರಸಂ/ಪುಸಹೂ/ಆಶಾ/ಇಸಿ/ದರವಾರು/2026–27 ದಿನಾಂಕ: 02/04/2026

ದರವಾರು ಪ್ರಕಟಣೆ

ಹೂವಿನಹಡಗಲಿ ಪುರಸಭೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ವಿಲೇವಾರಿ ಮಾಡಲು ಹೂವಿನಹಡಗಲಿ ಪುರಸಭೆ ವ್ಯಾಪ್ತಿಯಲ್ಲಿ ಸುಮಾರು 04 ಕಿ.ಮೀ ಅಂತರದಲ್ಲಿರುವ ಮುದೇನೂರು ಗ್ರಾಮದ ಸರ್ವೇ ನಂ: 184/ಸಿ ಮುದೇನೂರು ಗ್ರಾಮದ ಇರುವ 9.84 ಎಕರೆ ಜಾಗದಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕದ ಜಾಗಕ್ಕೆ Hiring of consultancy serices for preparation of Environmental impact assessment report from the services authority for solid waste management facility ಗಾಗಿ ಅರ್ಹ NABET accreditation ಕನ್ಸಲ್ಟೆನ್ಸಿಗಳಿಂದ ದರಪಟ್ಟಿ (ಕೊಟೇಷನ್‌ಗಳನ್ನು) ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಕನ್ಸಲ್ಟೆನ್ಸಿಗಳು ದರವಾರು ಪ್ರಕಟಿಸಿದ 15 ದಿನಗಳ ಒಳಗಾಗಿ ಅಂದರೇ ದಿನಾಂಕ: 18.05.2026ರ ಒಳಗಾಗಿ ದರಗಳನ್ನು ಸಲ್ಲಿಸಲು ಕೋರಲಾಗಿದೆ. ದರಗಳನ್ನು ಪುರಸ್ಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿದ ಸಕ್ಷಮ ಪ್ರಾಧಿಕಾರ ಕಾಯ್ದಿರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಾಗೂ ಷರತುಗಳಿಗಾಗಿ ಕಛೇರಿ ವೇಳೆಯಲ್ಲಿ ಪಡೆಯಹುದಾಗಿರುತ್ತದೆ.

ಸಹಿ/– ಮುಖ್ಯಾಧಿಕಾರಿಗಳು	**ಸಹಿ/–ಆಡಳಿತಾಧಿಕಾರಿಗಳು**
ಪುರಸಭೆ, ಹೂವಿನಹಡಗಲಿ	**ಪುರಸಭೆ ಹೂವಿನಹಡಗಲಿ**

ಬೆಂಗಳೂರು ದಕ್ಷಿಣ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ (ಹವಾಮಾನ ನಿರ್ವಹಣಾ ಸೆಲ್ ಮತ್ತು ಕೆರೆಗಳು), ವಲಯ–1, 9ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು –560011

ನಂ.: ಕಾಪಾಅ/ಸಿಎಂಸಿ&ಕೆರೆಗಳು, ವಲಯ–1/ಟೆಂಡ್–01/2026–27 ದಿನಾಂಕ: 04.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಬಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಳ ಸಹಿದಾರರು ಈ ಕೆಳಗಿನ ಕಾಮಗಾರಿಗಳಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಅಥವಾ ತತ್ಸಮಾನ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಗಟ್ಟಿಗೆರೆ (ಸೋಂಪುರ) ಮತ್ತು ತಲಘಟ್ಟಪುರ ಕೆರೆಯ ವಾರ್ಷಿಕ ನಿರ್ವಹಣೆ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 25.00, ಇಎಂಡಿ (ರೂ.ಗಳಲ್ಲಿ): 50,000/–**
2	ಜೋಗಿ ಕೆರೆ, ಲಿಂಗಧೀರನಹಳ್ಳಿ–13 ಮತ್ತು ಬಯ್ಯಪ್ಪನಪಾಳ್ಯ ಕುಂಟೆ ಕೆರೆಯ ವಾರ್ಷಿಕ ನಿರ್ವಹಣೆ. **ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 30.00, ಇಎಂಡಿ (ರೂ.ಗಳಲ್ಲಿ): 60,000/–**

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಜಿಬಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **06.05.2026ರ ಸಂಜೆ 4:00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. **(2)** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **19.05.2026ರ ಸಂಜೆ 4:00 ಗಂಟೆವರೆಗೆ. (3)** ಬಿಡ್ ತೆರೆಯುವ ದಿನಾಂಕ: **21.05.2026ರ ಸಂಜೆ 4:30 ಗಂಟೆಗೆ.** ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ **https://kppp. karnataka.gov.in** ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಹವಾಮಾನ ನಿರ್ವಹಣೆ ಸೆಲ್ ಮತ್ತು ಕೆರೆಗಳು, ವಲಯ–1, ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕನ್ನಡಪ್ರಭ ಸಂಪಾದಕೀಯ

ಬದಲಾವಣೆ, ಅಭಿವೃದ್ಧಿ ಪರ ಬೀಸಿದ ಫಲಿತಾಂಶದ ಗಾಳಿ

ಸೋಮವಾರ ಪ್ರಕಟವಾದ 5 ರಾಜ್ಯಗಳ ವಿಧಾನಸಭಾ ಚುನಾವಣೆಯ ಫಲಿತಾಂಶ ಹಲವು ವಿಷಯದಲ್ಲಿ, ಹಲವು ಕಾರಣಕ್ಕೆ ಅತ್ಯಂತ ಮಹತ್ವದ್ದು. ಚುನಾವಣೆ ನಡೆದ 5 ರಾಜ್ಯಗಳ ಪೈಕಿ ಅಸ್ಸಾಂ ಮತ್ತು ಪುದುಚೇರಿಯಲ್ಲಿ ಹಾಲಿ ಆಡಳಿತಾರೂಢ ಪಕ್ಷಗಳು ಗೆಲುವು ಸಾಧಿಸಿದ್ದರೆ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಕೇರಳದಲ್ಲಿ ಹೊಸ ಪಕ್ಷಗಳಿಗೆ ಅಧಿಕಾರದ ಚುಕ್ಕಾಣಿ ಸಿಕ್ಕಿದೆ. ಇದು ಕೆಲ ರಾಜ್ಯಗಳಲ್ಲಿ ಆಡಳಿತ ಬದಲಾವಣೆಗೆ ಜನರ ಮನಸ್ಸು ಮತ್ತು ಇನ್ನು ಕೆಲ ರಾಜ್ಯಗಳಲ್ಲಿ ಅಭಿವೃದ್ಧಿ ಪರ ಜನರ ಜೈಕಾರ ಎಂಬುದನ್ನು ತೋರಿಸುತ್ತದೆ.

ಸತತ ಅಧಿಕಾರ ಸಿಕ್ಕಿದ್ದರಿಂದ ಜನಪಯೋಗಿ ಕೆಲಸಗಳಿಂದ ವಿಮುಖರಾಗಿ, ಕುಟುಂಬ ರಾಜಕಾರಣ, ಓಲೈಕೆ ರಾಜಕಾರಣದಿಂದ, ಕಚ್ಚಾಟ ನಡೆಸಿದ ರಾಜಕಾರಣಿಗಳಿಗೆ ಈ ಪಂಚ ರಾಜ್ಯ ಚುನಾವಣೆಯು ತಕ್ಕ ಪಾಠ ಕಲಿಸಿದೆ. ಇದಕ್ಕೆಉದಾಹರಣೆ ಪಶ್ಚಿಮ ಬಂಗಾಳ. ಸತತ 15 ವರ್ಷಗಳಿಂದ ಅಧಿಕಾರದಲ್ಲಿದ್ದ ಮಮತಾ, ಅಷ್ಟೂ ವರ್ಷ ಕೇಂದ್ರದ ಜೊತೆ ಸಂಘರ್ಷ ನಡೆಸುತ್ತಲೇ ರಾಜ್ಯದಲ್ಲಿ ಜಾರಿಗೊಳಿಸಬಹುದಾಗಿದ್ದ ಅಭಿವೃದ್ಧಿ ಯೋಜನೆಗಳಿಗೆ ಸ್ವತಃ ತಾವೇ ಅಡ್ಡಿ ಮಾಡಿಕೊಂಡರು. ವಿಪಕ್ಷಗಳ ಆಡಳಿತದ ಹೊರತಾಗಿಯೂ ಕೇಂದ್ರದೊಂದಿಗೆ ಉತ್ತಮ ಸಂಬಂಧ ಕಾಪಾಡಿಕೊಂಡು ಅನುದಾನ ತರುವ ಅವಕಾಶ ಬಳಸಿಕೊಂಡ ಹಲವು ರಾಜ್ಯಗಳ ತಾಜಾ ಉದಾಹರಣೆ ಇರುವಾಗಲೇ ಅದನ್ನು ಮಮತಾ ದೂರ ತಳ್ಳಿದ್ದು ವಿಪರ್ಯಾಸ. ಜೊತೆಗೆ ಅತಿಯಾದ ಓಲೈಕೆ ರಾಜಕಾರಣ, ಅಕ್ರಮ ಒಳನುಸುಳುವಿಕೆ ಕುರಿತ ಅವರ ಉದಾಸೀನತೆ, ಬಹುಸಂಖ್ಯಾತರ ಕುರಿತ ತಾತ್ಸಾರ ಮನೋಭಾವನೆಗಳೂ ಅವರ ಪತನಕ್ಕೆ ಮುನ್ನುಡಿ ಬರೆಯಿತು. ಇನ್ನು ತಮಿಳುನಾಡಿನಲ್ಲಿ ಆಡಳಿತರೂಢ ಡಿಎಂಕೆ, ಪ್ರಮುಖ ಪ್ರತಿಪಕ್ಷ ಅಣ್ಣಾಡಿಎಂಕೆ ತೀವ್ರ ಪ್ರತಿಸ್ಪರ್ಧೆಯನ್ನೂ ಮೆಟ್ಟಿನಿಂತು ವಿಜಯ್ ಅಭೂತಪೂರ್ವ ಗೆಲುವು ಸಾಧಿಸಿದ್ದು, ಜನ ಹೊಸತನ, ಬದಲಾವಣೆ ಬಯಸಿದ್ದರು ಎಂಬುದರ ಧ್ಯೋತಕ. ಕೇರಳದಲ್ಲೂ ಅದೇ ಕಥೆ. ಸತತ 10 ವರ್ಷಗಳ ಎಲ್‌ಡಿಎಫ್‌ನ ಆಡಳಿತದ ಉತ್ತಮ ಅಂಶಗಳನ್ನು ಕೆಲ ವಿವಾದ, ಭ್ರಷ್ಟಾಚಾರ ನುಂಗಿಹಾಕಿದವು. ಇನ್ನು ಅಸ್ಸಾಂ ಮತ್ತು ಪುದುಚೇರಿ ಎರಡೂ ಕಡೆ ಆಡಲಿತಾರೂಢ ಪಕ್ಷಗಳೇ ಅಧಿಕಾರಕ್ಕೆ ಮರಳಿವೆ. ಅಸ್ಸಾಂನಲ್ಲಿ ಬಿಜೆಪಿ ಸತತ 3 ಮತ್ತು ಪುದುಚೇರಿಯಲ್ಲಿ ಎಐಎನ್‌ಆರ್‌ಸಿ ಕಾಂಗ್ರೆಸ್ ಕೂಡಾ ಸತತ 2ನೇ ಬಾರಿ ಅಧಿಕಾರಕ್ಕೆ ಬಂದಿದೆ. ಅಸ್ಸಾಂ ಸತತ 15 ವರ್ಷಗಳಿಂದ ಅಭಿವೃದ್ಧಿಯ ಪಥದಲ್ಲಿ ಸಾಗಿದೆ. ಪುದುಚೇರಿಯಲ್ಲಿ ಜನಸಾಮಾನ್ಯರ ಸಿಎಂ ಎನ್ನಿಸಿಕೊಂಡ ರಂಗಸಾಮಿ ಅವರ ಜನಪತ ಆಡಳಿತ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರಿಸಿದೆ. ಇದು ಜನಪರ ಆಡಳಿತದಲ್ಲಿ ಜನತೆ ವಿಶ್ವಾಸ ಹೊಂದಿದ್ದಾರೆ ಎಂಬುದರ ಧ್ಯೋತಕ.

> ಜನಪಯೋಗಿ ಆಡಳಿತವನ್ನು ಜನತೆ ಮರೆಯಲ್ಲ, ಜನಪಯೋಗಿ ಕೆಲಸ ಮರೆತವರನ್ನು ಜನರೂ ಮರೆಯುವುದಿಲ್ಲ. ಅವರಿಗೆ ತಕ್ಕ ಪಾಠ ಕಲಿಸುತ್ತಾರೆ ಎಂಬುದಕ್ಕೆ ಚುನಾವಣೆಯೇ ಸಾಕ್ಷಿ.

ಗೂಫ ವಿಜಯೋತ್ಸಾಹಸ



ನಿತ್ಯಫಲ

ಮೇಷ ದೃಢಹೆಜ್ಜೆ ಇಟ್ಟು ಸಾಗುತ್ತಿರುವ ನಿಮಗೆ ಹಲವು ಅಡೆತಡೆ ಬರಬಹುದು ಎದುರಿಸಿ.

ವೃಷಭ ನಿಮ್ಮದಲ್ಲದ ತಪ್ಪಿಗೆ ಸಣ್ಣ ಶಿಕ್ಷೆ ಅನುಭವಿಸಬೇಕಾದೀತು. ಅನವಶ್ಯಕ ಗೊಂದಲ ಬೇಡ.

ಮಿಥುನ ಸಮಾನ ಮನಸ್ಕರ ಭೇಟಿಯಿಂದಾಗಿ ಹೊಸ ಉದ್ಯಮ ಸ್ಥಾಪನೆಗೆ ಗಮನ ಕೊಡುವಿರಿ.

ಕಟಕ ಜಲಕಂಟಕ ಹೆಚ್ಚಾಗಿರುವುದರಿಂದ ಕೆರೆ, ಬಾವಿ, ನದಿ ಸಮುದ್ರಗಳಿಂದ ದೂರವಿರಿ.

ಸಿಂಹ ಕೊಟ್ಟ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದ ಹಿನ್ನೆಲೆ ಉದ್ಯೋಗದಲ್ಲಿ ಬಡ್ತಿ ಸಿಗಲಿದೆ.

ಕನ್ಯಾ ಅನವಶ್ಯಕ ಚಿಂತೆಯಿಂದ ಮಾನಸಿಕ ಕಿರಿಕಿರಿ ಅನುಭವಿಸುವಿರಿ. ಎಚ್ಚರಿಕೆ.

ತುಲಾ ಶ್ರದ್ಧೆಯಿಂದ ಮಾಡಿದ ಅಧ್ಯಯನಕ್ಕೆ ಸೂಕ್ತ ಫಲ ದೊರಕುವುದರಿಂದ ಸಂತೃಪ್ತಿ.

ವೃಶ್ಚಿಕ ಒತ್ತಡದ ಸನ್ನಿವೇಷ ಎದುರಾದರೂ ಸಮಾಧಾನ ವಿರಲಿ. ಆರೋಗ್ಯ ಮುಖ್ಯ.

ಧನುಸ್ಸು ಕೆಟ್ಟ ಮುನ್ಸೂಚನೆಯೊಂದು ಕಂಡುಬರಲಿದ್ದು, ದಿನಾಂತ್ಯ ಉತ್ತಮ ವಾತಾವರಣ.

ಮಕರ ಎಲ್ಲರೂ ನಿಮ್ಮ ಮಾತನ್ನು ಕೇಳಬೇಕು ಎಂಬ ಹಠವನ್ನು ಬಿಟ್ಟು ವಿಶಾಲವಾಗಿ ಚಿಂತಿಸಿ.

ಕುಂಭ ಖಾಸಗಿ ಉದ್ಯೋಗಿಗಳಿಗೆ ಶುಭ ಸುದ್ದಿ ಸಿಗಲಿದ್ದು, ನಿಮ್ಮ ಆಕಾಂಕ್ಷೆ ಈಡೇರುವ ಲಕ್ಷಣಗಳಿವೆ.

ಮೀನ ಷೇರು ವ್ಯವಹಾರದಲ್ಲಿ ತೊಡಗಿಸಿಕೊಂಡವರಿಗೆ ಅಲ್ಪ ಪ್ರಮಾಣದ ಲಾಭವಾಗಲಿದೆ.

ಪಂಚಾಂಗ

ಸಂವತ್ಸರ: ಪರಾಭವ, ದಕ್ಷಿಣಾಯನ, ಋತು: ವಸಂತ, ಮಾಸ: ವೈಶಾಖ
ಪಕ್ಷ: ಕೃಷ್ಣ, ತಿಥಿ: ಚತುರ್ಥಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ 03:00-04:30
ಯಮಗಂಡಕಾಲ 09:00-10:30 **ಗುಳಿಕಕಾಲ** 12:00-01:30

ಪದಯಾತ್ರೆ 2549 • ಜಯಕೃಷ್ಣ

1			2	■	3			4
	■	■		■		■	■	
	■	■	5			■	■	
	■	6		■	7	8	■	
■	■		■	■	■		■	■
9	■	10	11	■	12		■	13
	■	■	14			■	■	
	■	■		■		■	■	
15				■	16			

2548 ರ ಉತ್ತರ
ಎಡದಿಂದ ಬಲಕ್ಕೆ
1.ಲಗಾಮು, 3. ವಣಿಜ , 5. ಖರೀದಿಗಾರ, 6. ಕಾಮಾಲೆ , 7. ನಡುಕ, 9. ಜಿಗಿತ, 11. ಉದ್ಧರಿ, 13. ಪಾಳೆಯಗಾರ, 15. ವಿಜಯ, 16. ತೆರವು.
ಮೇಲಿನಿಂದ ಕೆಳಕ್ಕೆ
1.ಲತೆ, 2. ಮುಖಬೆಲೆ, 3. ವರಮಾನ, 4. ಜನ್ಮ, 6. ಕಾರಂಜಿ, 8. ಕತ್ತರಿ, 10. ತಳಪಾಯ, 11.ಉದಾರತೆ , 12.ಬಾವಿ, 14. ನೋವು.


ಎಡದಿಂದ ಬಲಕ್ಕೆ
1. ಶಿಥಿಲವಾದುದರ ನವೀಕರಣ (4)
3. ಅದೃಷ್ಟ, ವಿಧಿಯೂ ಹೌದು (4)
5. ಸಮರ್ಥ ಈ ದಕ್ಷ (3)
6. ಬಹು ಸಣ್ಣ ಚೂರು (2)
7. ಎಳ್ಳನ್ನು ಹೀಗೂ ಹೇಳುವರು (2)
10. ನೂರು– ಸಂಸ್ಕೃತ ಪದ (2)
12. ಹಿಂದಿನ ಕಾಲದ ಅಳತೆಯ ಸಾಧನ (2)
14. ಬೇಡಿಕೆ ಸಲ್ಲಿಸುವುದು (3)
15. ದೂರದಲ್ಲಿ ಕಾಣಿಸಿದ ಬಿಸಿಲ್ಗುದುರೆ (4)
16. ಹಿಂಸೆಯಾಗುವಂತೆ ತಗಾದೆ ಮಾಡುವವನು (4)

ಮೇಲಿನಿಂದ ಕೆಳಕ್ಕೆ
1. ದೇಹಕ್ಕೆ ಅಗತ್ಯವಾದ ಜೀವಪೋಷಕ (4)
2. ಇದು ರಣಭೂಮಿ (4)
3. ಗ್ರಹಗಳ ಚಲನೆ (4)
4. ನೆತ್ತರು ಸೋರುವುದು (4)
6. ಪೂಜೆಯ ವೇಳೆ ಬಳಸುವ ಕುಂಭ (3)
8. ಕ್ಷಾರವನ್ನು ಹೀಗೆನ್ನುವರು (3)
9. ಶೂರ ತೋರಿದ ಕಲಿತನ (4)
11. ಹೊಸ ವಸ್ತುವನ್ನು ಸಿದ್ಧಪಡಿಸುವಿಕೆ (4)
12. ವಂಶವೂ ಹೌದು ಕುಟುಂಬವೂ ಹೌದು (4)
13. ನಗರದಲ್ಲಿ ವಾಸಿಸುವವನು (4)

ಕನ್ನಡಪ್ರಭ KANNADAPRABHA
ಪ್ರಧಾನ ಸಂಪಾದಕ: **ರವಿ ಹೆಗಡೆ** EDITOR IN CHIEF: **RAVI HEGDE**
ನಮ್ಮ ವಿಳಾಸ: ಸಂಪಾದಕರು, ಕನ್ನಡಪ್ರಭ, ನಂ.36, ಕ್ರೆಸೆಂಟ್ ರಸ್ತೆ, ಮಲ್ಲಿಗೆ ಆಸ್ಪತ್ರೆ ಎದುರು, ಶಿವಾನಂದ ವೃತ್ತ, ಬೆಂಗಳೂರು–560 001
PHONE: 080-68416300 FAX:080-68416354
email: editor@kannadaprabha.in epaper.kannadaprabha.in
facebook: SuvarnaNews twitter: @suvarnanewstv

ಕರ್ನಾಟಕದಲ್ಲಿ ಅತೀ ಹೆಚ್ಚು ಹೋರಾಟ ಸಂಘಟಿಸಿದ ಅಪರೂಪದ ಏಕಮಾತ್ರ ನಾಯಕ ನಮ್ಮ ಬಿಎಸ್‌ವೈ

ಹೋರಾಟಕ್ಕೆ ಮತ್ತೊಂದು ಹೆಸರೇ ಯಡಿಯೂರಪ್ಪ



ಎಂ.ಡಿ. ಲಕ್ಷ್ಮೀನಾರಾಯಣ್
ಮಾಜಿ ಶಾಸಕರು
ಬಿಜೆಪಿ ಮುಖಂಡರು

> ಟೀ ಕುಡಿಯಲು ಹೋಟೆಲಿಗೆ ಹೋದಾಗ ಬಾಗಿಲ ಬಳಿ ನಿಂತ ರಾಮಚಂದ್ರಗೌಡ ಅವರು ಯಡಿಯೂರಪ್ಪರನ್ನು ತೋರಿಸಿ ಇವರು ಯಾರು ಗೊತ್ತಾ ಎಂದಾಗ, ಹೊಟೇಲ್‌ನಲ್ಲಿದ್ದ ಇಬ್ಬರು ಕೈ ಮುಗಿದು ಯಾಕೆ ಸ್ವಾಮಿ ಹಾಗೆ ಕೇಳುತ್ತೀರಿ, ಇವರು ನಮ್ಮ ಜಮೀನು ಉಳಿಸಿಕೊಟ್ಟ ದೇವರೆಂದು ಎರಡು ಕೈ ಎತ್ತಿ ನಮಸ್ಕರಿಸುತ್ತಾರೆ. ಇದು ಹೋರಾಟಗಾರನೊಬ್ಬ ಜನಮಾನಸದಲ್ಲಿ ಅಚ್ಚಳಿಯದೆ ಉಳಿದ ಕಥೆ.

ಯಡಿಯೂರಪ್ಪ ಅವರಂತಹ ವಿಭಿನ್ನ ವ್ಯಕ್ತಿತ್ವ, ದೂರಾಲೋಚನೆ, ಬದ್ಧತೆ, ಸ್ಪಷ್ಟ ರಾಜಕೀಯ ನಿಲುವು, ಅಭಿವೃದ್ಧಿ ವಿಚಾರಗಳು ಉಳ್ಳ ಮತ್ತೊಬ್ಬ ರಾಜಕಾರಣಿ ನಮಗೆ ಹುಡುಕಿದರೂ ಸಿಗಲಾರರು. ಯಡಿಯೂರಪ್ಪನವರು ಕರ್ನಾಟಕದ ಯಶಸ್ವಿ ಮುಖ್ಯಮಂತ್ರಿ ಎನಿಸಿಕೊಂಡಿದ್ದರೂ, ಅವರಲ್ಲೊಬ್ಬ ಕಾರ್ಯಕರ್ತನಿದ್ದ. ಸಮಾಜದಲ್ಲಿನ ವಾಸ್ತವಿಕತೆಯನ್ನು ಸಂಪೂರ್ಣವಾಗಿ ಅರಿತ ಜವಾಬ್ದಾರಿಯುತ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ಕಾರ್ಯಕರ್ತರೊಂದಿಗೆ ಯಡಿಯೂರಪ್ಪ ಅವರ ಸಂಬಂಧ ಹೃದಯಸ್ಪರ್ಶಿಯಾಗಿದೆ.

ಯಡಿಯೂರಪ್ಪ ಅವರ ಪ್ರತಿಯೊಂದು ಹೆಜ್ಜೆಯಲ್ಲೂ ನಮಗೆ ಪರಿಶ್ರಮದ ಸುಗಂಧ ಅನುಭವಿಸಲು ಸಾಧ್ಯ. ಏಕೆಂದರೆ ಅವರು ತಳಮಟ್ಟದಿಂದ ಬೆಳೆದು ಬಂದವರು. ಶಿಕಾರಿಪುರ ಪುರಸಭೆಯ ಸದಸ್ಯನಿಂದ ಆರಂಭಿಸಿ, ಜನಪ್ರತಿನಿಧಿ ಎಂಬ ಸಾರ್ವಜನಿಕ ಜೀವನ ಅವರನ್ನು ರಾಜ್ಯದ ಮುಖ್ಯಮಂತ್ರಿ ಗಾದಿಯವರೆಗೆ ಕರೆದುಕೊಂಡು ಬಂದಿದೆ. ಕಾರ್ಯಕರ್ತನಿಂದ ಪ್ರಾರಂಭವಾದ ಅವರ ರಾಜಕೀಯ ಯಾತ್ರೆ ಪ್ರತಿಯೊಬ್ಬರಿಗೂ ಪ್ರೇರಣೆಯಾಗಿದೆ. ಸಾಮಾಜಿಕ ಬದುಕಿನ ಪರಿಶ್ರಮ, ಸಮರ್ಪಣೆ, ಎಲ್ಲರೊಂದಿಗೆ ಬೆರೆಯುವ ರೀತಿ, ಪಕ್ಷದ ಬಗೆಗಿನ ಕಾಳಜಿ, ದೇಶಭಕ್ತಿ ಇವು ಇಂದಿನ ಕಾರ್ಯಕರ್ಯ ಪೀಳಿಗೆಗೆ ಅನುಕರಣೀಯ.


ರೈತ ಪರ ಹೋರಾಟಗಾರ

ರಾಜಕೀಯ ಜೀವನದಲ್ಲಿ ಅಧಿಕಾರದಲ್ಲಿದ್ದಾಗಲೂ, ಅಧಿಕಾರ ಇಲ್ಲದಿದ್ದಾಗಲೂ ಯಡಿಯೂರಪ್ಪ ಅವರು ಅತೀ ಹೆಚ್ಚು ಚಿಂತೆ ಮತ್ತು ಚಿಂತನೆ ಮಾಡುತ್ತಿದ್ದದ್ದು ರೈತರ ಕುರಿತಾಗಿ. ರೈತರ ಬಗ್ಗೆ ವಿಶೇಷ ಒಲವು ಹೊಂದಿ ದ್ದರು. ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ರೈತ ಬಜೆಟ್ ಮಂಡಿಸಿದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ.



ಒಂದೊಮ್ಮೆ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿ ಆಗಿದ್ದಾಗ ಕಂದಾಯ ಸಚಿವರಾದ ರಾಚಯ್ಯನವರು ಮಸೂದೆಯೊಂದನ್ನು ಮಂಡಿಸುತ್ತಾರೆ. ಈ ಮಸೂದೆ ರೈತರಿಗೆ ಮಾರಕವಾಗಲಿದೆ ಎಂದು ಅರಿತುಕೊಂಡ ಬಿಜೆಪಿ ಶಾಸಕ ಯಡಿಯೂರಪ್ಪನವರು ಸದನದಲ್ಲಿ ರೈತರ ಪರವಾಗಿ ಹೋರಾಟ ಮಾಡಿ ಬಿಲ್ ಹಿಂಪಡೆಯುವಂತೆ ಆಗ್ರಹಿಸುತ್ತಾರೆ. ಸರಕಾರ ಯಡಿಯೂರಪ್ಪ ಅವರ ಮನವಿಗೆ ಒಪ್ಪದಿದ್ದಾಗ, ಯಡಿಯೂರಪ್ಪ ಅವರು ಕಣ್ಣೀರು ಹಾಕಿ ಅವರ ಆಸನದ ಕೆಳಗಡೆ ಕೂರುತ್ತಾರೆ. ಮೌನ ಪ್ರತಿಭಟನೆ ಮಾಡುತ್ತಾರೆ. ಕೊನೆಗೂ ಯಡಿಯೂರಪ್ಪ ಅವರ ಹೋರಾಟಕ್ಕೆ ಮಣಿದ ಕಂದಾಯ ಸಚಿವ ರಾಚಯ್ಯ ಅವರು ತಮ್ಮ ಮಸೂದೆಯನ್ನು ಹಿಂಪಡೆಯುತ್ತಾರೆ. ಮರುದಿನ ಪತ್ರಿಕೆಗಳ ಮುಖ ಪುಟದಲ್ಲಿ 'ಯಡಿಯೂರಪ್ಪನವರ ಏಕಾಂಗಿ ಹೋರಾಟಕ್ಕೆ ಸಿಕ್ಕ ಜಯ' ಎಂದು ಸುದ್ದಿಯಾ ಗಿತ್ತು. ಜನ ಪ್ರತಿನಿಧಿಗಳು ಹೇಗೆ, ಯಾವ ರೀತಿ ಹೋರಾಟ ಮಾಡಬಹುದು ಎನ್ನುವು ದಕ್ಕೆ ಇದೊಂದು ನಿದರ್ಶನವಷ್ಟೇ, ಇಂತಹ ನೂರಾರು ನಿದರ್ಶನಗಳು ನನ್ನ ಸ್ಮೃತಿಪಟಲದಲ್ಲಿದೆ.

ಈ ಘಟನೆ ನಡೆದು ನಾಲ್ಕು ಐದು ವರ್ಷಗಳ ನಂತರ ರಾಮಚಂದ್ರಗೌಡ ಮತ್ತು ಯಡಿಯೂರಪ್ಪನವರು ಕಾರಲ್ಲಿ ಹೋಗುತ್ತಿರುವಾಗ ರಸ್ತೆ ಬದಿಯ ಒಂದು ಹೋಟೆಲ್ ಬಳಿ ನಿಲ್ಲಿಸಿ, ಚಹಾ ಕುಡಿಯುತ್ತಿರುತ್ತಾರೆ. ಆ ಹೋಟೆಲ್ ಬಾಗಿಲ ಬಳಿ ನಿಂತ ರಾಮಚಂದ್ರಗೌಡ ಅವರು ಯಡಿಯೂರಪ್ಪನವರನ್ನು ತೋರಿಸಿ ಇವರು ಯಾರು ಗೊತ್ತಾ ಎಂದಾಗ, ಹೊಟೇಲ್‌ನಲ್ಲಿದ್ದ ಇಬ್ಬರು ಕೈ ಮುಗಿದು ಯಾಕೆ ಸ್ವಾಮಿ ಹಾಗೆ ಕೇಳುತ್ತೀರಿ, ಇವರು ನಮ್ಮ ಜಮೀನು ಉಳಿಸಿಕೊಟ್ಟ ದೇವರೆಂದು ಎರಡು ಕೈ ಎತ್ತಿ ನಮಸ್ಕರಿಸುತ್ತಾರೆ. ಇದು ಹೋರಾಟಗಾರನೊಬ್ಬ ಜನಮಾನಸದಲ್ಲಿ ಅಚ್ಚಳಿಯದೆ ಉಳಿದ ಕಥೆ.



ಬಜೆಟ್ 'ಹೊರೆ' ತಪ್ಪಿಸಿದ ನಾಯಕ

ಬಜೆಟ್ ಎಂದಕೂಡಲೇ ಮರುದಿನದ ಪತ್ರಿಕೆಗಳಲ್ಲಿ ಹಾಲಿನ ಬೆಲೆ ಏರಿಕೆ, ಕಾರು, ಚಿನ್ನದ ಬೆಲೆ ಏರಿಕೆ, ಸಿಮೆಂಟ್ ತುಟ್ಟಿ, ಕೈಗೆಟುಕದ ಟಿವಿ ಎಂದು ಸುದ್ದಿಯಾಗುತ್ತಿದ್ದವು. ಅಂದರೆ ಬಜೆಟ್ ಜನರಿಗೆ ಹೊರೆ ಎಂಬ ರೀತಿಯ ವಾತಾವರಣವಿತ್ತು. ಅದನ್ನು ಸಂಪೂರ್ಣವಾಗಿ ಬದಲಾಯಿಸಿದ್ದೇ ಬಿಎಸ್‌ವೈ. ಅರ್ಥ ಸಚಿವರಾಗಿದ್ದಾಗ ಯಡಿಯೂರಪ್ಪ ಅವರು ನೀಡಿದ ಬಜೆಟ್ ಜನಸಮಾನ್ಯರಲ್ಲಿ ಭರವಸೆ ಹೆಚ್ಚಿಸಿತು.

ಬಿ.ಎಸ್.ಯಡಿಯೂರಪ್ಪ ಅವರು ಮಹಿಳಾ ಸಮುದಾಯಕ್ಕೆ ವಿಶೇಷ ಒತ್ತು ನೀಡುತ್ತಿದ್ದರು. ರಾಮಕೃಷ್ಣ ಹೆಗಡೆಯವರು ಮೊದಲ ಬಾರಿಗೆ ಕರ್ನಾಟಕದ ಮುಖ್ಯಮಂತ್ರಿ ಆಗಿದ್ದಾಗ ಅವರಿಗೆ ಬಿಜೆಪಿ ಬಾಹ್ಯ ಬೆಂಬಲ ನೀಡಿತ್ತು. ಆ ಸಂದರ್ಭದಲ್ಲಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಬಿಜೆಪಿ ಕಡೆಯಿಂದ ಸಲಹೆ ಸೂಚನೆಗಳನ್ನು ಕೇಳಿದಾಗ, ಯಡಿಯೂರಪ್ಪ ಅವರು ಬಡ ಹೆಣ್ಣು ಮಕ್ಕಳ ಕೊರಳಿನಲ್ಲೂ ಬಂಗಾರ ಇರಬೇಕು, ಅದಕ್ಕಾಗಿ ಬಡಹೆಣ್ಣು ಮಕ್ಕಳಿಗೆ ತಾಳಿಭಾಗ್ಯ ಯೋಜನೆ ಜಾರಿಗೊಳಿಸಿ ಎಂದು, ಕೋರಿಕೊಂಡಿದ್ದರು. ಅದರಂತೆ ಯೋಜನೆ ಜಾರಿಯಾಯಿತು, ತಾಳಿ ಭಾಗ್ಯ ಯೋಜನೆಯು ಯಡಿಯೂರಪ್ಪ ಅವರು ಹೆಣ್ಣು ಮಕ್ಕಳಿಗೆ ನೀಡಿದ ಮೊದಲ ಯೋಜನೆಯಾಗಿದೆ ಎನ್ನುವುದನ್ನು ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ನಾರಿಯರ ಸಬಲೀಕರಣಕ್ಕಾಗಿ ಹಲವಾರು ಉಪಕ್ರಮ, ಯೋಜನೆ ಜಾರಿಗೊಳಿಸಿದ್ದಾರೆ. ಗರ್ಭಿಣಿ ಹೆಣ್ಣು ಮಗಳಿಗೆ ತವರಿನ ಆತಿಥ್ಯವನ್ನು ನೆನಪು ಮಾಡಿಸುವಂತಹ ಮಡಿಲು ಯೋಜನೆ ಜಾರಿಗೊಳಿಸಿದರು. ಮಡಿಲು ಯೋಜನೆ ಮೂಲಕ ತವರು ಮನೆಯಲ್ಲಿ ನೀಡುವ ವಸ್ತುಗಳನ್ನು ಸರ್ಕಾರವೇ ಮಡಿಲು ಕಿಟ್ ಮಾದರಿ ನೀಡಲಾಗುತ್ತಿತ್ತು. ಗರ್ಭಿಣಿಯ ಹೊಟ್ಟೆಯಿಂದ ಮಗು ಹೆಣ್ಣಾಗಿ ಹೊರಬಂದರೆ ಆ ಮಗುವನ್ನು ಭಾಗ್ಯಲಕ್ಷ್ಮಿ ಮೂಲಕ ಸ್ವಾಗತಿಸಲು ಭಾಗ್ಯಲಕ್ಷ್ಮಿ ಯೋಜನೆ ಜಾರಿಗೊಳಿಸಿದರು. ಆ ಯೋಜನೆ ಇಂದು ಲಕ್ಷಾಂತರ ಹೆಣ್ಣು ಮಕ್ಕಳ ಶಿಕ್ಷಣ, ವೈವಾಹಿಕ ಜೀವನಕ್ಕೆ ನೆರವಾಗಿದೆ. ಅಲ್ಲದೆ ಭಾಗ್ಯಲಕ್ಷ್ಮಿ ಫಲಾನುಭವಿಗೆ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮ ರೂಪಿಸಿದ್ದರು. ಹೆಣ್ಣು ಮಕ್ಕಳು ಸುಶಿಕ್ಷತರಾಗಬೇಕು, ಶಾಲೆಯಿಂದ ದೂರ ಇರಬಾರದು, ಹೈಸ್ಕೂಲ್ ಹಂತವನ್ನು ದಾಟಬೇಕು ಎಂದು ಹೆಣ್ಣುಮಕ್ಕಳಿಗೆ ಸೈಕಲ್ ವಿತರಿಸಿದರು, ಅದನ್ನು ಗಂಡು ಮಕ್ಕಳಿಗೂ ವಿಸ್ತರಿಸಿದರು. ಕಾರ್ಯಕ್ರಮ ಒಂದರಲ್ಲಿ ವಿಧವೆಯೊಬ್ಬರು ಯಡಿಯೂರಪ್ಪರ ಮುಂದೆ ಜೀವನದ ಸಂಕಷ್ಟ ಹೇಳಿಕೊಂಡು ಕಣ್ಣೀರು ಸುರಿಸಿದಾಗ ಅವಳಿಗೆ ಒಂದು ಆಕಳು ತೆಗೆದುಕೊಟ್ಟು ಜೀವನ ನಿರ್ವಹಣೆಯ ಹಾದಿ ಕಲ್ಪಿಸಿದರು. ಸ್ತ್ರೀ ಶಕ್ತಿ ಗುಂಪುಗಳಿಗೆ ಬಡ್ಡಿ ರಹಿತ ಸಾಲ, ದೇವದಾಸಿಯರಿಗೆ ಮಾಸಾಶನ ನೀಡುವ ಮೂಲಕ ಅವರ ಬದುಕನ್ನು ಭದ್ರಗೊಳಿಸಿದರು.

ಹೆಣ್ಣು ಮಕ್ಕಳ ರಕ್ಷಕ

ರೈತರ ಸಾಲ ಮನ್ನಾ ಮಾಡುವ ಮೂಲಕ ರೈತರಿಗೆ ನೆರವಾಗಿದ್ದಾರೆ. ಜನಮನದಲ್ಲಿ ಒಂದು ಮಾತಿದೆ, 'ಯಡಿಯೂರಪ್ಪನವರ ಬಜೆಟ್ ಜೋಳಿಗೆ, ಯೋಜನೆಗಳ ಹೋಳಿಗೆ'. ಇದರ ಹಿಂದೆ ಎಲ್ಲರಿಗೂ ಸಮಾಧಾನ ಪಡಿಸುವಂತಹ ಬಜೆಟ್ ನೀಡುತ್ತಿದ್ದ ಕಾರಣವಿದೆ. ಯಡಿಯೂರಪ್ಪ ಅವರು ಯಾರಿಗೂ ನಿರಾಸೆ ಮಾಡುತ್ತಿರಲಿಲ್ಲ.

ಬಡವರಿಗೆ ಮನೆ ನಿರ್ಮಿಸಿ, ಅದನ್ನು ಮನೆಯೊಡತಿಯ ಹೆಸರಿನಲ್ಲಿ ನೋಂದಾಯಿಸುವ ಕಾನೂನು ಜಾರಿಗೊಳಿಸಿದ್ದರು. ವಿಧವಾ ವೇತನ ಹೆಚ್ಚಳ, ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ಗಂಡಹೆಂಡತಿರಿಬ್ಬರಿಗೂ ಅವಕಾಶ, ಒಂದು ಮನೆಗೆ ಒಂದೇ ಯೋಜನೆ ಎಂಬ ಸರ್ಕಾರಿ ನಿಯಮ ಬದಲಾಯಿಸಿ ಅನೇಕ ಯೋಜನೆಗಳನ್ನು ಒಂದೇ ಮನೆಗೆ ಸಿಗುಂತೆ ಮಾಡಿದ್ದು, ಮದುವೆಯಾಗದೆ ಉಳಿದು 50 ವರ್ಷ ಮೇಲ್ಪಟ್ಟ ಹೆಣ್ಣು ಮಕ್ಕಳಿಗೂ ಮಾಸಾಶನ ವ್ಯವಸ್ಥೆ ಮಾಡಿದ್ದರು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಹಾಯವಾಗಲೆಂದು ವಿದ್ಯಾ ಸಿರಿ ಯೋಜನೆ ಜಾರಿಗೊಳಿಸಿ, ಯೋಜನೆ ಮೂಲಕ ಹಾಸ್ಟೆಲ್ ಸೌಲಭ್ಯ ಇಲ್ಲದ ವಿದ್ಯಾರ್ಥಿನಿಯರಿಗೆ ಆಹಾರ/ಸ್ಟೈಪೆಂಡ್ ನೀಡುವ ಉಪಕ್ರಮ ಜಾರಿಗೊಳಿಸಿದ್ದರು ಮತ್ತು ವಿದ್ಯಾರ್ಥಿನಿಯರ ಉನ್ನತ ಶಿಕ್ಷಣದ ಕನಸಿಗೆ ಪೂರಕವಾಗಿ ಕರ್ನಾಟಕ ಉಚಿತ ಲ್ಯಾಪ್‌ಟಾಪ್ ವಿತರಣೆ ಯೋಜನೆ ಜಾರಿಗೊಳಿಸಿದ್ದರು. ಮಹಿಳೆಯರಿಗೆ ಆರ್ಥಿಕ ಸಹಾಯ ಮತ್ತು ಸ್ವಾವಲಂಬಿ ಜೀವನ ನಡೆಸಲು ಸ್ತ್ರೀ ಶಕ್ತಿ ಸ್ವ–ಸಹಾಯ ಗುಂಪುಗಳಿಗೆ ಸಾಲ, ಸಬ್ಸಿಡಿ ನೀಡಿ ತರಬೇತಿ ಒದಗಿಸುವ ಕಾರ್ಯಕ್ರಮ ರೂಪಿಸಿದ್ದರು. ಸ್ವ–ಸಹಾಯ ಸಂಘಗಳಿಗೆ ಬ್ಯಾಂಕ್ ಲಿಂಕೇಜ್ ಮತ್ತು ಮಾರ್ಕೆಟಿಂಗ್ ಸಪೋರ್ಟ್ ಹೆಚ್ಚಿಸಿದರು. ಬಡ ಮಹಿಳೆಯರಿಗೆ ಮನೆ ನಿರ್ಮಾಣಕ್ಕಾಗಿ ಬಸವ ವಸತಿ ಯೋಜನೆ ಜಾರಿಗೊಳಿಸಿದ್ದರು. ನಗರ ಪ್ರದೇಶಗಳಲ್ಲಿ ಮಹಿಳಾ ಸುರಕ್ಷತೆಗೆ ಹೆಚ್ಚುವರಿ ಕ್ರಮ ಅನುಸರಿಸಲು ಕಟ್ಟುನಿಟ್ಟಿನ ಕ್ರಮ ಜಾರಿಗೊಳಿಸಿದ್ದರು. ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿ ಯೋಜನೆ ಮತ್ತು ಸಣ್ಣ ಉದ್ಯಮ ಕೈಗೊಳ್ಳಲು ಆರ್ಥಿಕ ಸಹಾಯ ನೀಡಲು ಯೋಜನೆ ರೂಪಿಸಿದ್ದರು. ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕ ಆಹಾರ ಒದಗಿಸಲು ಮಾತೃ ಪೂರ್ಣ ಯೋಜನೆ ಜಾರಿಗೊಳಿಸಿದ್ದರು.


ರಾಜಕೀಯದಲ್ಲಿ ಮಹಿಳೆಯರಿಗೆ ಆದ್ಯತೆ

ಇವೆಲ್ಲಾ ಯಡಿಯೂರಪ್ಪ ಅವರ ಸಾಧನೆಯಾಗಿದೆ. ಆಡಳಿತಾತ್ಮಕವಾಗಿ ಮಹಿಳೆಯರು ಬಲಾಢ್ಯರಾಗಬೇಕೆಂದು ಕೇಂದ್ರ ಸರ್ಕಾರ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 33 ಮೀಸಲಾತಿ ಒದಗಿಸಿದ್ದರೆ, ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದಲ್ಲಿ ಅದನ್ನು ಶೇ.50ಕ್ಕೆ ಏರಿಸಿ ಮಹಿಳೆಯರನ್ನು ಗ್ರಾಮ, ತಾಲೂಕು, ಜಿಲ್ಲಾ ಪಂಚಾಯತ್, ಪಟ್ಟಣ ಪಂಚಾಯತ್, ನಗರ ಸಭೆ, ಪರಸಭೆಗಳ ನೀತಿ ನಿರೂಪಣೆಯಲ್ಲಿ ಮಹಿಳೆಯರ ಪಾಲನ್ನು ಹೆಚ್ಚಿಸಿದ್ದು ನಮ್ಮ ಬಿಎಸ್‌ವೈ, ಇದಕ್ಕೆ ಮಹಿಳಾ ಸಮುದಾಯ ಯಡಿಯೂರಪ್ಪ ಅವರನ್ನು ಮೆಚ್ಚಲೇಬೇಕು.

ಬದುಕಿನ ಹೆಚ್ಚಿನ ಸಮಯವನ್ನು ಸಮಾಜಕ್ಕೆ ಮೀಸಲಿರಿಸಿದ ಪರಿಣಾಮ ಕುಟುಂಬಕ್ಕೆ ಹೆಚ್ಚಿನ ಸಮಯ ನೀಡಲು ಸಾಧ್ಯವಾಗಿಲ್ಲ. ಆದರೂ ಧರ್ಮಪತ್ನಿ ಮೈತ್ರಾದೇವಿ ಅವರು ಯಡಿಯೂರಪ್ಪ ಅವರಿಗೆ ಬೆಂಗಾವಲಾಗಿ ನಿಂತಿದ್ದರು. ಇದರಿಂದ ಯಡಿಯೂರಪ್ಪ ಅವರಿಗೆ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಯಿತು. ಈ ಕ್ಷಣದಲ್ಲಿ ಮೈತ್ರಾದೇವಿ ಅವರನ್ನೂ ಕೂಡಾ ನೆನಪಿಸಿಕೊಳ್ಳುವುದು ನಮ್ಮ ಧರ್ಮ.

ದೀದಿ ರಾಜ್ಯದಲ್ಲಿ ಭಯ ಈಗ ಮಾಯ | ಆತಂಕದಿಂದ ಮತದಾರ ಈಗ ಸಂಪೂರ್ಣ ಮುಕ್ತ

ಬಂಗಾಳದಲ್ಲಿ ಬದಲಾದದ್ದು ಸರ್ಕಾರವಷ್ಟೇ ಅಲ್ಲ



ರಾಜೇಶ್ ಕಾಲ್ರಾ
ಹಿರಿಯ ಪತ್ರಕರ್ತರು

> ವರ್ಷಗಳಿಂದ ಬಂಗಾಳದಲ್ಲೊಂದು ಕ್ರೂರ ನಿಯಮವಿತ್ತು. ಅದು 'ಮತ ಚಲಾಯಿಸಿ, ಆದರೆ ಅವು ನಮಗಷ್ಟೇ ಬೀಳಬೇಕು. ಒಂದು ವೇಳೆ ಬೇರೆಯವರಿಗೆ ವೋಟ್ ಹಾಕಿದರೆ, ನೀವು ಯಾರಿಗೆ ಹಾಕಿದಿರಿ ಎಂಬುದು ನಮಗೆ ತಿಳಿಯುತ್ತದೆ, ಹುಡುಕಿ ತೆಗೆಯುತ್ತೇವೆ' ಎಂಬುದಾಗಿತ್ತು.

5 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದಲ್ಲಿ ಚುನಾವಣೆ ನಡೆಯಿತಾದರೂ ದೇಶ ಮಾತ್ರವಲ್ಲ, ಇಡೀ ವಿಶ್ವದ ಕಣ್ಣು ನೆಟ್ಟಿದ್ದುದು ಪಶ್ಚಿಮ ಬಂಗಾಳದ ಮೇಲೆ. ಕೆಲವರು ವಿಶ್ವಾಸದಿಂದಿದ್ದರೆ, ಇನ್ನೂ ಕೆಲವರು ಚಿಂತಿತರಾಗಿದ್ದರು. ಆದರೆ ಎಲ್ಲರೂ ನೋಡುತ್ತಿದ್ದುದಂತೂ ಹೌದು. ಬಿಜೆಪಿ ಗೆಲ್ಲುತ್ತದೆ ಎಂಬ ಅಂದಾಜಿತ್ತಾದರೂ ಈ ಮಟ್ಟದಲ್ಲಿ ಗೆಲುವು ದಕ್ಕುತ್ತದೆ ಎಂಬ ಊಹೆ ಇರಲಿಲ್ಲ. ಇದೇ ಈಗ ಎಲ್ಲರ ಗಮನವನ್ನು ಸೆಳೆಯುತ್ತಿರುವುದು. ಹಾಗಾದರೆ ರಾಜ್ಯದಲ್ಲಾದ ಬದಲಾವಣೆಯೇನು?

ಬಂಗಾಳದಲ್ಲಿ ಆಗಿದ್ದೇನು?

ಇದನ್ನು ಅರ್ಥ ಮಾಡಿಕೊಳ್ಳಲು 2021ಕ್ಕೆ ಹೋಗಬೇಕು. ಆ ವರ್ಷ ಪಶ್ಚಿಮ ಬಂಗಾಳದಲ್ಲಿ ನಡೆದ ವಿಧಾನಸಭೆ ಚುನಾವಣೆ ಪ್ರಕ್ಷುಬ್ಧ ಅಷ್ಟೇ ಅಲ್ಲ, ರಕ್ತಸಿಕ್ತವಾಗಿತ್ತು. ಚುನಾವಣೆಯ ಸಮಯದಲ್ಲಿ ಸುಮಾರು 300 ಹಿಂಸಾಚಾರ, 58 ಸಾವುಗಳು ವರದಿಯಾದವು. ಆ ಅವಧಿಯಲ್ಲಿ ದೇಶದಲ್ಲಿ ಸಂಭವಿಸಿದ ಚುನಾವಣಾ ಹಿಂಸಾಚಾರದ ಸಾವುಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಬಂಗಾಳದಲ್ಲೇ ಆಗಿದ್ದವು.

ಅದಾದ ಬಳಿಕ ಶುರುವಾದದ್ದೇ ಚುನಾವಣೋತ್ತರ ಹಿಂದೆ. ಮನೆಗಳ ಮೇಲೆ ದಾಳಿಗಳಾಗಿ, ಜನ ದಿಕ್ಕಾಪಾಲಾಗಿ ಓಡಬೇಕಾಯಿತು. ಆ ನೆನಪು ಎಂದಿಗೂ ಮಾಸುವುದಿಲ್ಲ. ಜತೆಗೆ ಮತದಾರರ ನಡವಳಿಕೆಯಲ್ಲೂ ಅದು ಪ್ರತಿಫಲಿಸದೇ ಇರುವುದಿಲ್ಲ. ಏಕೆಂದರೆ, ವರ್ಷಗಳಿಂದ ಬಂಗಾಳದಲ್ಲೊಂದು ಕ್ರೂರ ನಿಯಮವಿತ್ತು. ಅದು, 'ಮತ ಚಲಾಯಿಸಿ, ಆದರೆ ಅವು ನಮಗಷ್ಟೇ ಬೀಳಬೇಕು. ಒಂದು ವೇಳೆ ಬೇರೆಯವರಿಗೆ ವೋಟ್ ಹಾಕಿದರೆ, ನೀವು ಯಾರಿಗೆ ಹಾಕಿದಿರಿ ಎಂಬುದು ನಮಗೆ ತಿಳಿಯುತ್ತದೆ. ನಮಗೆ ಮತ ಬೀಳದಿದ್ದರೆ ನಿಮ್ಮನ್ನು ಹುಡುಕಿ ತೆಗೆಯುತ್ತೇವೆ' ಎಂಬುದಾಗಿತ್ತು. ಇಂತಹ ಸ್ಥಿತಿಯಲ್ಲಿ ನಿಮ್ಮನ್ನು ನೀವೊಮ್ಮೆ ಮತದಾರರ ಜಾಗದಲ್ಲಿ ಊಹಿಸಿಕೊಳ್ಳಿ. ಆಡಳಿತ ಪಕ್ಷ ನಿಮಗಿಷ್ಟವಿಲ್ಲದಿದ್ದರೂ ಅಪಾಯವನ್ನು ಮೈಮೇಲೆ ಎಳೆದುಕೊಳ್ಳಲು ನೀವು ಮುಂದಾಗುತ್ತೀರಾ? ಅಥವಾ ಸುರಕ್ಷಿತ ಆಯ್ಕೆಯನ್ನು ಆಯ್ದುಕೊಳ್ಳುತ್ತೀರಾ? ಪ್ರಜಾಪ್ರಭುತ್ವ ನಾಶವಾಗುವುದು ಕಾನೂನು ಬದಲಾವಣೆಯಿಂದ ಅಲ್ಲ. ಬದಲಿಗೆ ಹೀಗೆ ಜನರ ವರ್ತನೆಯಲ್ಲಿ ಬದಲಾವಣೆ ತರುವ ಮೂಲಕ.

ಇಷ್ಟೇ ಅಲ್ಲ, ಸ್ಥಳೀಯ ಮಟ್ಟದಲ್ಲೂ ಬೆದರಿಸುವಿಕೆ ಮುಂದುವರೆದಿತ್ತು. ಚುನಾವಣಾ ಅಧಿಕಾರಿಗಳ ಮೇಲೆ ಒತ್ತಡ ಹೇರಲಾಗುತ್ತಿತ್ತು. ಸಾಲದ್ದಕ್ಕೆ ಮತಗಟ್ಟೆಗಳೊಳಗೂ ನುಗ್ಗಿ, ಎದುರಾಳಿಗಳ ಚಿಹ್ನೆಯೇ ಸ್ಪಷ್ಟವಾಗಿ ಕಾಣದಂತೆ ಮಾಡಲಾಗುತ್ತಿತ್ತು. ಗುರುತೇ ಕಾಣದಿದ್ದರೆ ಮತ ಚಲಾಯಿಸುವುದಾದರೂ ಹೇಗೆ?!

ವ್ಯವಸ್ಥೆಯಲ್ಲೂ ಲೋಪ

ಇದರ ಜತೆಗೆ ವ್ಯವಸ್ಥೆಯಲ್ಲೇ ಅತ್ಯಂತ ಆಳವಾದ ಸಮಸ್ಯೆ ಇದೆ. ಅದೇನೆಂದರೆ, 'ರಾಜ್ಯದಲ್ಲಿ ಶೇ.70ರಷ್ಟು ದೂರುಗಳು ದಾಖಲಾಗುವುದೇ ಇಲ್ಲ. ಒಂದು ಠಾಣೆಯಲ್ಲಿ ಹೆಚ್ಚೆಂದರೆ 15 ಕಾನ್ಸ್‌ಟೇಬಲ್‌ಗಳು ಇರುತ್ತಾರೆ. ಇಷ್ಟು ಮಂದಿ ಒಬ್ಬ ಐಪಿಎಸ್ ಅಧಿಕಾರಿಯ ಮನೆಯಲ್ಲಿರುವ ಪೇದೆಗಳ ಸಂಖ್ಯೆಗೆ ಸಮ. ಇವರ ಜತೆ ರಾಜಕೀಯ ನಂಟಿನ, ಸರ್ಕಾರದಿಂದ ಸಂಬಳ ಪಡೆವ 300–400 ಜನ ನಾಗರಿಕ ಸ್ವಯಂಸೇವಕರು ಇರುತ್ತಾರೆ' ಎಂದು ಒಬ್ಬ ಹಿರಿಯ ಐಪಿಎಸ್ ಅಧಿಕಾರಿ ನನಗೆ ಹೇಳಿದ್ದರು.



ಒಮ್ಮೆ ಲೆಕ್ಕ ಹಾಕಿ ನೋಡಿ. ಒಂದು ಕಡೆ 15 ಕಾನ್ಸ್‌ಟೇಬಲ್‌ಗಳ ಜತೆ ಒಬ್ಬ ಎಸ್‌ಎಚ್‌ಒ ಇದ್ದರೆ, ಇನ್ನೊಂದು ಕಡೆ ಒಂದು ರಾಜಕೀಯ ಪಕ್ಷದ ಕಡೆ ಒಲವು ಹೊಂದಿರುವ ನೂರಾರು ಜನರು ಠಾಣೆಯ ಉಸ್ತುವಾರಿಗೆ ನೆರವಾಗುತ್ತಿರುತ್ತಾರೆ. ಇಲ್ಲಿ ನಿಜವಾಗಿಯೂ ವ್ಯವಸ್ಥೆಯನ್ನು ನಡೆಸುತ್ತಿರುವವರು ಯಾರು? ಇಂತಹ ಸ್ಥಿತಿಯಲ್ಲಿ, ತಟಸ್ಥತೆ ಎಂಬುದು ಕಷ್ಟವಷ್ಟೇ ಅಲ್ಲ, ನಿಷ್ಪರಿಣಾಮಕಾರಿಯೂ ಆಗಿರುತ್ತದೆ.

ಎಸ್‌ಐಆರ್ ಆದ ಮೇಲೇನಾಯ್ತು?

ಇತ್ತೀಚೆಗೆ ವಿಶೇಷ ಮತಪಟ್ಟಿ ಪರಿಷ್ಕರಣೆಯು(ಎಸ್‌ಐಆರ್) ಪ್ರಮುಖ ವಿಷಯವಾಯಿತು. ಅದು ನಕಲಿ ಮತದಾರರನ್ನು ತೆಗೆದುಹಾಕುವ ಸ್ವಚ್ಛತಾ ಅಭಿಯಾನ ಅಥವಾ ತಾಂತ್ರಿಕ ಪ್ರಕ್ರಿಯೆಯಾಗಿತ್ತು. ಆದರೆ ಅತ್ತ ವಿಪಕ್ಷದ ಹತಾಶೆಗೆ ಇದು ಕಾರಣವಾಯಿತು. ಕೃತಕವಾಗಿ ಹೆಚ್ಚಿಸಲಾದ ಅಥವಾ ತಿರುಚಲಾದ ಮತದಾರರ ಪಟ್ಟಿಯೇ ನಿಮ್ಮ ರಾಜಕೀಯ ಬಲವಾಗಿರುವಾಗ, ಇಂತಹ ಪ್ರಕ್ರಿಯೆಗಳು ಅಸ್ತಿತ್ವಕ್ಕೇ ನೇರ ಸವಾಲಾಗಿ ಪರಿಣಮಿಸುತ್ತವೆ. ಎಸ್‌ಐಆರ್‌ನಿಂದ 2 ಕೆಲಸಗಳಾದವು. ಒಂದು, ಉದ್ದೇಶದಂತೆ ವ್ಯವಸ್ಥೆಯನ್ನು ಬಿಗಿಗೊಳಿಸಲಾಯಿತು. ಎರಡು, ಇನ್ನುಮುಂದೆ ತನ್ನ ಹಳೆಯ ತಂತ್ರಗಳು ನಡೆಯುವುದಿಲ್ಲ ಎಂಬ ಭಯವನ್ನು ಹುಟ್ಟುಹಾಕಿತು. ನಕಲಿಮತದಾರರನ್ನು ಹುಡುಕಿತೆಗೆದುಹಾಕಬಹುದು ಎಂಬ ಭರವಸೆಯು ಮತದಾರರ ವರ್ತನೆಯಲ್ಲೂ ಬದಲಾವಣೆಯನ್ನು ತಂದಿತು.

ಚುನಾವಣೆ ನಿರ್ವಹಣೆ ಬಿಗಿ

ಚುನಾವಣಾ ಆಯೋಗ, ಪ್ರಮುಖವಾಗಿ ಮುಖ್ಯ ಆಯುಕ್ತರ ನೇತೃತ್ವದಡಿ ರಾಜ್ಯದ ಸೂಕ್ಷ್ಮ ಪ್ರದೇಶಗಳಲ್ಲಿ ಕೇಂದ್ರೀಯ ಪಡೆಗಳನ್ನು ನಿಯೋಜಿಸಿ ಭದ್ರತೆಯನ್ನು ಬಿಗಿಗೊಳಿಸಲಾಯಿತು. ಇದು ಹೊಸದೇನಲ್ಲ. ಟಿ.ಎನ್. ಶೇಷನ್ ಸಿಇಸಿ ಆಗಿದ್ದಾಗ ರಾಜಕೀಯ ಒತ್ತಡಗಳಿಗೆ ಮಣಿಯದೆ, ಮತದಾರರ ಹಿತವನ್ನು ಆದ್ಯತೆಯಾಗಿಟ್ಟುಕೊಂಡಿದ್ದರು. ಅವರು ಅಪಾರ ಪ್ರಮಾಣದ ಭದ್ರತಾ ಸಿಬ್ಬಂದಿ ನಿಯೋಜನೆಯ ಪರವಾಗಿದ್ದರು. ಇದೇ ಈಗ ಮತ್ತೊಮ್ಮೆ ಪುನರಾವರ್ತನೆಯಾಗಿದೆ.

ಚುನಾವಣೆಯ ಬಳಿಕವೂ ಕೇಂದ್ರೀಯ ಪಡೆಗಳನ್ನು ಉಳಿಸಿಕೊಳ್ಳಲಾಯಿತು. ಚುನಾವಣೋತ್ತರ ಹಿಂಸಾಚಾರದ ಇತಿಹಾಸವಿರುವ ರಾಜ್ಯದಲ್ಲಿ ಇದು ಕಾರ್ಯವಿಧಾನವಲ್ಲ, ಭದ್ರತೆಗೆ ಕೈಗೊಂಡ ಕ್ರಮವಾಗಿತ್ತು.

ಪರಿಣಾಮ ಏನಾಯ್ತು?

ಈ ಬಾರಿ ಮತದಾನದ ವೇಳೆ ಬೆದರಿಸುವಿಕೆ ಪ್ರಕರಣಗಳಲ್ಲಿ ಭಾರೀ ಇಳಿಕೆಯಾಗಿತ್ತು. ಮತದಾನವು ಗೌಪ್ಯ ಹಾಗೂ ಸುರಕ್ಷಿತವಾಗಿ ನಡೆಯಿತು. ಸ್ವಲ್ಪ ಮಟ್ಟಿಗೇ ಆದರೂ ಭಯ ತಗ್ಗಿದಾಗ ಮತದಾನದ ರೀತಿಯಲ್ಲಿ ಭಾರೀ ಬದಲಾವಣೆಯಾಯಿತು. 2021ರಲ್ಲಿ 58 ಇದ್ದ ಸಾವುಗಳ ಸಂಖ್ಯೆಯೀಗ ಶೂನ್ಯಕ್ಕಿಳಿದಿದೆ. ಬಂಗಾಳದಲ್ಲಿದ್ದು ಹಂತ ಹಂತವಾಗಿ ಆದ ಬದಲಾವಣೆಯಲ್ಲ. ಬದಲಿಗೆ, ಒಮ್ಮೆಲೆ ಆದ ಬೃಹತ್ ಬದಲಾವಣೆ.

ಮತದಾನದ ವೇಳೆ ಹಾಗೂ ಅದರ ಬಳಿಕ 2 ಲಕ್ಷಕ್ಕೂ ಹೆಚ್ಚು ಕೇಂದ್ರೀಯ ಪಡೆ ಸಿಬ್ಬಂದಿ ನಿಯೋಜನೆಯಾಗಿತ್ತು. ಕಾರಣ, ಬಂಗಾಳದಲ್ಲಿ ಭಯವು ಮತದಾನದ ದಿನವಷ್ಟೇ ಅಲ್ಲ, ಅದರ ಬಳಿಕ ಆರಂಭವಾಗುವುದು.

ಮಮತಾ ಅಂದಾಜಿಸಿದ್ದರು

ರಾಜ್ಯದಲ್ಲಾಗಿರುವ ಬದಲಾವಣೆಯನ್ನು ಮಮತಾ ಬ್ಯಾನರ್ಜಿ ಅಂದಾಜಿಸಿದಂತಿತ್ತು. 'ಟಿಎಂಸಿ ಗೆದ್ದರೆ ಮತ್ತೆ ಸಿಗೋಣ' ಎಂದವರು ಹೇಳಿದ್ದು, ಭರವಸೆಗಿಂತ ಹೆಚ್ಚಾಗಿ ಫಲಿತಾಂಶವು ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ ಎಂದು ಒಪ್ಪಿಕೊಳ್ಳುವಂತಿತ್ತು. ನಿಜವಾಗಿಯೂ ಬದಲಾವಣೆ ಆಗಿದೆ ಎಂಬುದು ಇದರಿಂದಲೇ ತಿಳಿಯುತ್ತದೆ.

ತಳಮಟ್ಟದ ಶ್ರಮ

ಇದೆಲ್ಲಾ ಒಂದು ಕಡೆಯಾದರೆ, ಬಿಜೆಪಿಯ ತಳಮಟ್ಟದ ಕೆಲಸ ಫಲ ಕೊಟ್ಟಿದೆ. ಅವರು ಬರೀ ಪ್ರಚಾರ ಮಾಡದೆ, ಬೂತ್ ಮಟ್ಟದಲ್ಲಿ ಯೋಜನೆ ರೂಪಿಸಿದರು. ನಾಯಕರು ತಿಂಗಳುಗಳ ಕಾಲ ರಾಜ್ಯದಲ್ಲಿ ಸುತ್ತಾಡಿ 'ನೀವು ಯಾರಿಗೆ ಮತ ಹಾಕುತ್ತೀರಾ ಎಂಬುದನ್ನು ಯಾರೂ ತಿಳಿಯಲಾಗದು' ಎಂಬ ಸಂದೇಶವನ್ನು ಮತ್ತೆ ಮತ್ತೆ ಸಾರಿದರು. ಭಯವೇ ತುಂಬಿದ್ದ ವಾತಾವರಣದಲ್ಲಿ, ಮತ್ತೆ ಭರವಸೆಯನ್ನು ಮೂಡಿಸುವುದು ಅರ್ಧ ಜಯ. 2021ರ ಭಯ ಪೂರ್ಣವಾಗಿ ಮಾಸದ ಕಾರಣ, ಆಡಳಿತ ಪಕ್ಷದ ವಿರುದ್ಧ ಮತ ಚಲಾಯಿಸಲು ಮುಂದಾದವರ ಸಂಖ್ಯೆ ಅತಿ ವಿರಳವಾಗಿತ್ತು. ಆ ಮನಃಸ್ಥಿತಿಯನ್ನೀಗ ಮುರಿಯಲಾಗಿದೆ.

ಮತಗಟ್ಟೆಯಲ್ಲಿ ಬಟನ್ ಒತ್ತಿದ ಕೂಡಲೇ ಪ್ರಜಾಪ್ರಭುತ್ವ ಮುಗಿದುಹೋಗುವುದಿಲ್ಲ. ಆ ಪ್ರಕ್ರಿಯೆಯಾದ ಬಳಿಕವೂ ಪ್ರಜಾಪ್ರಭುತ್ವ ನಮ್ಮನ್ನು ರಕ್ಷಿಸಬೇಕು.

ಬಿಜೆಪಿ ಮುಂದಿರುವ ಸವಾಲು

ರಾಜ್ಯದಲ್ಲಿನ ಗೆಲುವಿಂದ ಬಿಜೆಪಿ ಉತ್ಸಾಹದಲ್ಲಿರಬಹುದು. ಆದರೆ ಬಹುದೊಡ್ಡ ಸವಾಲು ಕಾಯುತ್ತಿದೆ. ಒಂದೊಮ್ಮೆ ಬಂಗಾಳವು ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಬೌದ್ಧಿಕವಾಗಿ ಅತ್ಯುತ್ತಮವಾಗಿತ್ತು. ಇಂತಹ ಬಂಗಾಳವನ್ನು ಮತ್ತೊಮ್ಮೆ ಸ್ಥಾಪಿಸುವ ಜವಾಬ್ದಾರಿ ಬಿಜೆಪಿಯ ಹೆಗಲ ಮೇಲಿದೆ.

ಅಗತ್ಯವಿರುವುದು ಬಂಗಾಳದ ವಶವಲ್ಲ, ಅದರ ಮರುನಿರ್ಮಾಣ. ಇದಕ್ಕೆ ಸದ್ಯದ ಬದಲಾವಣೆಯ ಅಲೆಯೊಂದೇ ಸಾಲದು. ಇನ್ನಷ್ಟು ವರ್ಷಗಳ ಶ್ರಮದ ಅವಶ್ಯಕತೆಯಿದೆ.

Editor: RAVI HEGDE, Printed and Published by **B.V. MALLIKARJUNAIAH** on behalf of Kannada Prabha Publications Ltd., No. 4-6-548/3, Pramod Towers, 1st floor, Karangalapady, Mangalore-575 003,
Printed at Manipal Media Network Ltd., Udayavani Building, Press Corner, Manipal-576 104. **Registered No. KA/BGGPO/2559/10-12**

Mangalore
Vol.26, No. 124
RNI Reg.No.KARKAN/2001/4073

ಹಿರೇಬೆಣಕಲ್ ಶಿಲಾ ಸಮಾಧಿ ರೀತಿ ಆಗೋಲಿ ಬಳಿ ನಿಲುಸುಗಲ್ಲು ಪತ್ತೆ

2500 ವರ್ಷ ಹಿಂದಿನ ಶವಗುಣಿ ಮೇಲೆ ನಿಲುಸುಗಲ್ಲು

• **ಕನ್ನಡಪ್ರಭ ವಾರ್ತೆ** ಗಂಗಾವತಿ

ಹಿರೇಬೆಣಕಲ್ ಮೋರೇರ್‌ಬೆಟ್ಟದಲ್ಲಿರುವ ಶಿಲಾ ಸಮಾಧಿಯಂತೆ ತಾಲೂಕಿನ ಆಗೋಲಿ ಸನಿಹದ ಬೆಟ್ಟದಲ್ಲಿ 2500 ವರ್ಷ ಹಿಂದಿನ ಶವಗುಣಿಯ ಮೇಲೆ ನೆಟ್ಟ ನಿಲುಸುಗಲ್ಲು (ಮೆನ್ಹಿರ್) ಪತ್ತೆಯಾಗಿದೆ ಎಂದು ಸಂಶೋಧಕ ಡಾ। ಶರಣಬಸಪ್ಪ ಕೋಲ್ಕಾರ ತಿಳಿಸಿದ್ದಾರೆ.

ಗಡ್ಡಿ–ಆಗೋಲಿ ರಸ್ತೆಯ ಬಲಬದಿಗೆ ಬೂದಿಗುಡ್ಡದ ಬುಡದಲ್ಲಿ ಈ ನಿಲುಸುಗಲ್ಲು ಇದೆ. 4 ಅಡಿ ಎತ್ತರ 1 ಅಡಿ ಅಗಲವಾಗಿದೆ. ನೈಸರ್ಗಿಕ ಶಿಲೆ ಆಗಿರುವುದರಿಂದ ಸಮ ಪ್ರಮಾಣದಲ್ಲಿ ಇಲ್ಲ. ಮೂಲದಲ್ಲಿ ನಿಲುಸುಗಲ್ಲಿನ ಸುತ್ತಲೂ ಶಿಲಾವೃತ್ತವಿದ್ದಿತು, ಆದರೆ ಈಗ ಹಾಳಾಗಿದೆ. 2200ರಿಂದ 3000 ವರ್ಷ ಹಿಂದೆ ಈ ಪ್ರದೇಶದಲ್ಲಿ ವಾಸಿಸಿದ್ದ ಬುಡಕಟ್ಟು ಸಮುದಾಯಕ್ಕೆ ಸೇರಿದ ಸಮಾಧಿ ಇದಾಗಿದೆ. ಶಿಲಾಯುಗಕ್ಕೆ ಸೇರಿದ ಈ ಜನ ಸತ್ತವರಿಗಾಗಿ ಹಲವು ರೀತಿಯ ಸಮಾಧಿಗಳನ್ನು ನಿರ್ಮಿಸುವ ಪದ್ಧತಿ ಹೊಂದಿದ್ದರು. ಅವುಗಳಲ್ಲಿ ಶವಗುಣಿಯ ಮೇಲೆ ಈ ರೀತಿ ಎತ್ತರವಾದ ನೈಸರ್ಗಿಕ ಶಿಲಾ ಚಪ್ಪಡಿಯನ್ನು ನಿಲ್ಲಿಸಿ ಅದರ ಸುತ್ತಲೂ ತುಂಡುಕಲ್ಲುಗಳಿಂದ ವೃತ್ತಾಕಾರದಲ್ಲಿ ಜೋಡಿಸುವ ಪದ್ಧತಿಯೂ ಒಂದಾಗಿದೆ. ಈ ಪ್ರಕಾರಕ್ಕೆ ಶಿಲಾ ವೃತ್ತದೊಳಗಿನ ನಿಲುಸುಗಲ್ಲು (ಮೆನ್ಹಿರ್ ವಿತ್ ಸ್ಟೋನ್ ಸರ್ಕಲ್) ಎಂದು ಪುರಾತತ್ವ ಶಾಸ್ತ್ರಜ್ಞರು ಹೆಸರಿಸಿದ್ದಾರೆ.



ಸಾಮಾನ್ಯವಾಗಿ ಹಿರೇಬೆಣಕಲ್ ಮೋರೇರ್‌ಗುಡ್ಡದಲ್ಲಿ ಇರುವಂತೆ ಈ ಜನರ ವಿವಿಧ ರೀತಿಯ ಸಮಾಧಿಗಳು ಒಂದೇ ಕಡೆ ಕಂಡುಬರುತ್ತವೆ. ಆದರೆ ಈ ನಿಲುಸುಗಲ್ಲಿನಂತೆ ಅಪರೂಪವಾಗಿ ಅಲ್ಲಲ್ಲಿ ಒಂದೊಂದೇ ಕಂಡುಬರುತ್ತವೆ. ಈ ಜನ ತಮ್ಮವರು ವಸತಿಯ ಜಾಗದಲ್ಲಿ ಸತ್ತರೆ ಅವರನ್ನು ನಿರ್ದಿಷ್ಟಪಡಿಸಿದ ಸ್ಥಳ (ಸ್ಮಶಾನ) ದಲ್ಲಿ ಹೂತು ಸಮಾಧಿ ಕಟ್ಟುತ್ತಿದ್ದರು. ಆದರೆ ಇವರು ಬೇಟೆಗಾಗಿಯೋ ಅಥವಾ ಇನ್ನಿತರ ಕಾರಣಕ್ಕಾಗಿಯೋ ದೂರ ತೆರಳಿದ್ದಾಗ ಅವರಲ್ಲಿ ಯಾರಾದರೂ ಒಬ್ಬರು ಆಕಸ್ಮಿಕವಾಗಿ ಮರಣ ಹೊಂದಿದರೆ ಅವರ ಶವವನ್ನು ಒಯ್ಯಲು ಸಾಧ್ಯವಾಗದೇ ಆ ಜಾಗದಲ್ಲಿಯೇ ಹೂಳುತ್ತಿದ್ದರು. ಕೆಲದಿನಗಳ ಆನಂತರ ಬಂದು ಆ ಶವಗುಣಿಯ ಮೇಲೆ ಬೆಟ್ಟದಿಂದ ಆಯ್ದು ತಂದ ಚಪ್ಪಡಿಕಲ್ಲನ್ನು ನೆಡುತ್ತಿದ್ದರು. ಕೆಲವು ಸಲ ಅದರ ಸುತ್ತಲೂ ತುಂಡುಕಲ್ಲುಗಳನ್ನು ವೃತ್ತಾಕಾರದಲ್ಲಿ ಜೋಡಿಸುತ್ತಿದ್ದರು. ಹಾಗೇ ನಿರ್ಮಿಸಿದ ಒಂದು ಸಮಾಧಿಯೇ ಆಗೋಲಿಯ ಈ ನಿಲುಸುಗಲ್ಲು. ಇದರಿಂದ ಗಂಗಾವತಿ ಪ್ರದೇಶದ ಆದಿಮ ಬುಡಕಟ್ಟು ಸಮುದಾಯಗಳ ಚಲನವಲನ ಮತ್ತು ಶವ ಸಂಸ್ಕಾರ ಪದ್ಧತಿ ತಿಳಿಯಬಹುದಾಗಿದೆ ಮತ್ತು ಈ ನಿಲುಸುಗಲ್ಲುಗಳೇ ಮುಂದೆ ಕಲ್ಲು ಗೊಂಬೆಯ (ಆಂಥ್ರೋಪೋಮರ್‌ಫಿಕ್ ಟೂಮ್ಸ್) ಆಕಾರ ಪಡೆದುಕೊಂಡವೆಂದು ಡಾ। ಕೋಲ್ಕಾರ ಅಭಿಪ್ರಾಯಪಟ್ಟರು. ಈ ನಿಲುಸುಗಲ್ಲು ಶೋಧನೆಯ ತಂಡದಲ್ಲಿ ಹಿರೇಬೆಣಕಲ್ಲಿನ ಮಂಜುನಾಥ ದೊಡ್ಡಮನಿ ಮತ್ತು ಗಂಗಾವತಿಯ ಹರನಾಯಕ ಇದ್ದರು.

ಸುಪ್ರೀಂನಲ್ಲಿ ನಟ ದರ್ಶನ್ ಬೇಲ್ ಅರ್ಜಿ ವಿಚಾರಣೆ 1 ವಾರ ಮುಂದೂಡಿಕೆ

ಜೈಲಿನಲ್ಲಿ ನಟನಿಗೆ ಮೂಲಸೌಕರ್ಯ ಬಗ್ಗೆ ವರದಿ ಕೇಳಿದ ಸುಪ್ರೀಂಕೋರ್ಟ್



• **ಕನ್ನಡಪ್ರಭ ವಾರ್ತೆ** ನವದೆಹಲಿ

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ನಟ ದರ್ಶನ್ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಒಂದು ವಾರ ಮುಂದೂಡಿದೆ. ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 2025ರ ಆ.14ರಂದು ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, ದರ್ಶನ್ ಹಾಗೂ ಇತರ ಆರೋಪಿಗಳಿಗೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸಿತ್ತು. ಆದರೆ, ಎಂಟು ತಿಂಗಳು ಕಳೆದರೂ ಸಾಕ್ಷಿಗಳ ವಿಚಾರಣೆ ಪೂರ್ಣಗೊಳ್ಳದ ಕಾರಣ ದರ್ಶನ್ ಪರ ವಕೀಲರು ಸುಪ್ರೀಂಕೋರ್ಟ್‌ಗೆ ಹೊಸ ರಿಟ್ ಅರ್ಜಿ ಸಲ್ಲಿಸಿದ್ದು, ಜಾಮೀನಿಗೆ ಮನವಿ ಮಾಡಿದ್ದರು.


ನ್ಯಾಯಮೂರ್ತಿ ಪರ್ದೀವಾಲ ನೇತೃತ್ವದ ಪೀಠದಲ್ಲಿ ಪ್ರಕರಣದ ವಿಚಾರಣೆ ನಡೆಯಿತು. ದರ್ಶನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, ದರ್ಶನ್‌ಗೆ ಜೈಲಿನಲ್ಲಿ ಮೂಲಸೌಕರ್ಯಗಳನ್ನು ನಿರಾಕರಿಸಲಾಗುತ್ತಿದೆ ಮತ್ತು ಸಾಕ್ಷಿಗಳ ವಿಚಾರಣೆ ವಿಳಂಬವಾಗುತ್ತಿದೆ ಎಂದು ಹೇಳಿದರು. ವಾದ ಆಲಿಸಿದ ನ್ಯಾಯಪೀಠ, ಪ್ರಕರಣದ ಸಾಕ್ಷಿಗಳ ವಿಚಾರಣೆ ವಿಳಂಬ ಮತ್ತು ಜೈಲಿನಲ್ಲಿ ಮೂಲಸೌಕರ್ಯಗಳ ಕೊರತೆ ಕುರಿತು ಕರ್ನಾಟಕ ಸರ್ಕಾರದಿಂದ ಒಂದು ವಾರದೊಳಗೆ ವರದಿ ಕೇಳಿತು. ಎಷ್ಟು ಸಾಕ್ಷಿಗಳ ವಿಚಾರಣೆ ನಡೆದಿದೆ ಮತ್ತು ಎಷ್ಟು ಬಾಕಿ ಉಳಿದಿದೆ ಎಂಬುದರ ಕುರಿತು ವಿಚಾರಣಾ ನ್ಯಾಯಾಲಯದಿಂದ ವರದಿ ಸಲ್ಲಿಸಲು ಸೂಚಿಸಿತು. ಬಳಿಕ, ಪ್ರಕರಣದ ವಿಚಾರಣೆಯನ್ನು ಒಂದು ವಾರ ಮುಂದೂಡಿತು.

ಬಾತುಕೋಳಿ ಹಿಡಿಯಲು ಹೋದ 4 ಮಕ್ಕಳು ಕೆರೆಪಾಲು

ಚಿಕ್ಕಮಗಳೂರು ತಾಲೂಕಲ್ಲಿ ಘಟನೆ

ಚಿಕ್ಕಮಗಳೂರು: ಆಟವಾಡುವಾಗ ಬಾತುಕೋಳಿ ಹಿಡಿಯಲು ಹೋಗಿ ನಾಲ್ವರು ಮಕ್ಕಳು ಕೆರೆಯಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಸೋಮವಾರ ಚಿಕ್ಕಮಗಳೂರು ತಾಲೂಕಿನ ಅರಳುಗುಪ್ಪೆ ಗ್ರಾಮದ ಕಾರಂಜಿ ಕೆರೆಯಲ್ಲಿ ನಡೆದಿದೆ. ಅಬ್ದುಲ್ ರೆಹಮಾನ್ (13), ನಯಾಜ್ (12), ಮೈದಿಹಾ (9), ಅರ್ಮಾನ್ (8) ಮೃತಪಟ್ಟ ಮಕ್ಕಳು. ಕೆರೆ ಪಾತ್ರದಲ್ಲಿ ಮಕ್ಕಳು ಆಟವಾಡುವಾಗ ತಮ್ಮೊಂದಿಗಿದ್ದ ಬಾತುಕೋಳಿ ನೀರಿಗಿಳಿದಿದೆ. ಆ ವೇಳೆ ಅದನ್ನು ಹಿಡಿಯಲು ಬಾಲಕಿ ನೀರಿಗೆ ಇಳಿದಿದ್ದಾಳೆ. ಆಗ ಬಾಲಕಿಯನ್ನು ರಕ್ಷಿಸಲು ಹೋದ ಇತರ ಮಕ್ಕಳೂ ಕರೆ ಪಾಲಾಗಿದ್ದಾರೆ.

ಮಾಹಿತಿ ಆಯೋಗದ ಮುಖ್ಯ ಆಯುಕ್ತರಾಗಿ ಸತ್ಯವತಿ ಶಪಥ



ಕರ್ನಾಟಕ ಮಾಹಿತಿ ಆಯೋಗದ ಮುಖ್ಯ ಆಯುಕ್ತರಾಗಿ ನೇಮಕವಾಗಿರುವ ನಿವೃತ್ತ ಐಎಎಸ್ ಅಧಿಕಾರಿ ಜಿ.ಸತ್ಯವತಿ ಅವರು ಲೋಕಭವನದಲ್ಲಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸತ್ಯವತಿ ಅವರಿಗೆ ಪ್ರಮಾಣವಚನ ಬೋಧಿಸಿದರು. ಸಿಎಂ ಸಿದ್ದರಾಮಯ್ಯ, ಸಚಿವರಾದ ಎಚ್.ಕೆ. ಪಾಟೀಲ್, ಕೆ.ಜೆ.ಜಾರ್ಜ್, ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಇತರರಿದ್ದರು.

ಡಿಸಿಇಟಿ: ಅರ್ಜಿ ತಿದ್ದುಪಡಿಗೆ ಮೇ 20ರವರೆಗೆ ಅವಕಾಶ

ಬೆಂಗಳೂರು: ಲ್ಯಾಟರಲ್ ಎಂಟ್ರಿ ಮೂಲಕ ಎಂಜಿನಿಯರಿಂಗ್ 2ನೇ ವರ್ಷ ಅಥವಾ 3ನೇ ಸೆಮಿಸ್ಟರ್ ಪ್ರವೇಶಕ್ಕೆ ನಡೆಸಲಾಗುವ ಡಿ–ಸಿಇಟಿಗೆ ಅರ್ಜಿ ಸಲ್ಲಿಸಿರುವ ಡಿಪ್ಲೊಮಾ ಅಭ್ಯರ್ಥಿಗಳು, ಮೀಸಲಾತಿ ಸೇರಿ ಸಣ್ಣಪುಟ್ಟ ತಪ್ಪುಗಳ ತಿದ್ದುಪಡಿಗೆ ಮೇ 20ರವರೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ಕಲ್ಪಿಸಿದೆ.



ಅಭ್ಯರ್ಥಿಗಳು ಮೇ 5ರಿಂದಲೇ ವೆಬ್ ಪೋರ್ಟಲ್‌ನಲ್ಲಿ ಲಾಗಿನ್ ಆಗಿ ತಮ್ಮ ಅರ್ಜಿಯಲ್ಲಿ ಬದಲಾವಣೆ ಅಗತ್ಯವಿದ್ದರೆ ಮಾಡಿಕೊಳ್ಳಬಹುದು. ರಕ್ಷಣೆ, ಮಾಜಿ ಸೈನಿಕ, ಸಿಆರ್‌ಪಿಎಫ್ ಸೇರಿ ಇತರ ವಿಶೇಷ ವರ್ಗಗಳಲ್ಲಿ ಅರ್ಹತೆ ಇದ್ದು ಕ್ಲೇಮ್ ಮಾಡಿರುವ ಬಗ್ಗೆ ಅಭ್ಯರ್ಥಿಗಳು ಖಚಿತಪಡಿಸಿಕೊಳ್ಳಬಹುದು. ಕ್ಲೇಮ್ ಮಾಡಿದ್ದಲ್ಲಿ ಪ್ರಮಾಣ ಪತ್ರ ಸಲ್ಲಿಸಬಹುದು. ಮೀಸಲಾತಿ ಸಂಬಂಧ ಜಾತಿ ಪ್ರಮಾಣ ಪತ್ರದ ಆರ್‌ಡಿ ಸಂಖ್ಯೆ ನಮೂದಿಸುವುದನ್ನು ಕೂಡ ಖಚಿತಪಡಿಸಿಕೊಳ್ಳುವಂತೆ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಸಲಹೆ ನೀಡಿದ್ದಾರೆ.

ಇಂದಿನಿಂದ 10ರ ತನಕ ದಕ್ಷಿಣ ಒಳನಾಡಿನ ವಿವಿಧೆಡೆ ಮಳೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿ ಬೆಂಗಳೂರು ಸೇರಿ ರಾಜ್ಯದ ದಕ್ಷಿಣ ಒಳನಾಡಿನ ವಿವಿಧೆಡೆ ಮೇ 10ರವರೆಗೆ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೇ 5 ರಿಂದ 10ರವರೆಗೆ ದಕ್ಷಿಣ ಒಳನಾಡಿನ ಮೈಸೂರು, ಕೊಡಗು, ಚಾಮರಾಜನಗರ, ಹಾಸನ, ತುಮಕೂರು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಸೇರಿ ಬಹುತೇಕ ಜಿಲ್ಲೆಗಳಲ್ಲಿ ಸಾಧಾರಣ ಮಳೆ ಮತ್ತು 30–40 ಕಿ.ಮೀ. ವೇಗದ ಬಿರುಗಾಳಿ ಬೀಸುವ ಸಾಧ್ಯತೆಯಿದೆ. ಮೇ 6, 7ರಂದು ಚಾಮರಾಜನಗರ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಜೋರು ಮಳೆಯಾಗುವ ಮುನ್ಸೂಚನೆ ಇದೆ.

ಕರಾವಳಿ, ಉತ್ತರ ಒಳನಾಡಿನಲ್ಲಿ ಒಣಹವೆ: ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಮೇ 10ರ ವರೆಗೆ ಸಾಧಾರಣ ಮಳೆಯಾಗಲಿದೆ. ಉಳಿದ ಕರಾವಳಿ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರೆಯಲಿದೆ. ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಒಣ ಹವೆ ಮುಂದುವರೆಯಲಿದೆ. ಚದುರಿದಂತೆ ಆಗಾಗ ಹಗುರ ಮಳೆಯಾಗಬಹುದು.

ರಾಜ್ಯದಲ್ಲಿ ಮದ್ಯ ಮಾರಾಟ: ಕಳೆದ 13 ವರ್ಷಗಳ ದಾಖಲೆ ಉಡೀಸ್!

ಏಪ್ರಿಲಲ್ಲಿ 118 ಲಕ್ಷ ಬಾಕ್ಸ್ ಸೇಲ್ | ನೆರೆ ರಾಜ್ಯಗಳ ಎಲೆಕ್ಷನ್ ಎಫೆಕ್ಟ್?

• **ಸಿದ್ದು ಚಿಕ್ಕಬಳ್ಳೇಕೆರೆ**
ಕನ್ನಡಪ್ರಭ ವಾರ್ತೆ ಬೆಂಗಳೂರು

ಏಪ್ರಿಲ್ ತಿಂಗಳು ರಾಜ್ಯದಲ್ಲಿ ದಾಖಲೆಯ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿದೆ. ಅಬಕಾರಿ ಇಲಾಖೆಯ ಕಳೆದ 13 ವರ್ಷದ ಇತಿಹಾಸದಲ್ಲೇ ತಿಂಗಳೊಂದರಲ್ಲಿ ಇಷ್ಟೊಂದು ಭಾರೀ ಪ್ರಮಾಣದಲ್ಲಿ ಮದ್ಯ ಮಾರಾಟ ಆಗಿರುವುದು ಐತಿಹಾಸಿಕ ದಾಖಲೆಯಾಗಿದೆ.

ವಿಸ್ಕಿ, ಬ್ರಾಂಡಿ, ರಮ್, ಜಿನ್ ಸೇರಿದಂತೆ 68.17 ಲಕ್ಷ ಬಾಕ್ಸ್ (ಒಂದು ಬಾಕ್ಸ್‌ಗೆ 8.64 ಲೀಟರ್) ದಾಖಲೆಯ ಐಎಂಎಲ್ ಮದ್ಯ ಮಾರಾಟವಾಗಿದೆ. ಮತ್ತೊಂದೆಡೆ, 50.39 ಲಕ್ಷ ಬಾಕ್ಸ್ (ಒಂದು ಬಾಕ್ಸ್‌ಗೆ 7.80 ಲೀಟರ್) ಬಿಯರ್ ಮಾರಾಟವಾಗಿದೆ. ಒಟ್ಟಾರೆ 118.56 ಲಕ್ಷ ಬಾಕ್ಸ್ ಮದ್ಯ ಮಾರಾಟವಾಗಿದ್ದು 2013ರಿಂದ ಈಚೆಗೆ ಕಳೆದ 13 ವರ್ಷದಲ್ಲಿ ಯಾವ ತಿಂಗಳಿನಲ್ಲೂ ಈ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿಲ್ಲ ಎಂಬುದು ವಿಶೇಷವಾಗಿದೆ.

2025 ಏಪ್ರಿಲ್‌ನಲ್ಲಿ 57.44 ಲಕ್ಷ ಬಾಕ್ಸ್ ಐಎಂಎಲ್ ಮದ್ಯ ಮಾರಾಟವಾಗಿದ್ದು ಪ್ರಸಕ್ತ ಸಾಲಿನ ಏಪ್ರಿಲ್‌ನಲ್ಲಿ 68.17 ಲಕ್ಷ ಬಾಕ್ಸ್ ಮಾರಾಟವಾಗಿ ಶೇ.18.68 ರಷ್ಟು ಬೆಳವಣಿಗೆಯಾಗಿದೆ. ಇನ್ನು ಬಿಯರ್ ವಿಷಯಕ್ಕೆ ಬರುವುದಾದರೆ, 2025 ಏಪ್ರಿಲ್‌ನಲ್ಲಿ 41.60 ಲಕ್ಷ ಬಾಕ್ಸ್ ಮಾರಾಟವಾಗಿತ್ತು. ಪ್ರಸಕ್ತ ಏಪ್ರಿಲ್‌ನಲ್ಲಿ 50.39 ಲಕ್ಷ ಬಾಕ್ಸ್ ಮಾರಾಟವಾಗಿ ಶೇ.21.13 ಬೆಳವಣಿಗೆಯಾಗಿದೆ.



ಏಪ್ರಿಲಲ್ಲಿ ಐಎಂಎಲ್ ಮದ್ಯ ಸೇಲ್ (ಲಕ್ಷ ಬಾಕ್ಸ್‌ಗಳಲ್ಲಿ)

ವರ್ಷ	2023	2024	2025	2026
ಬಾಕ್ಸ್	52.90	54.46	57.44	68.17

ಏಪ್ರಿಲಲ್ಲಿ ಬಿಯರ್ ಮಾರಾಟ (ಲಕ್ಷ ಬಾಕ್ಸ್‌ಗಳಲ್ಲಿ)

ವರ್ಷ	2023	2024	2025	2026
ಬಾಕ್ಸ್	38.59	49.72	41.60	50.39

ನೆರೆ ರಾಜ್ಯಗಳಲ್ಲಿನ ಎಲೆಕ್ಷನ್ ಎಫೆಕ್ಟ್?

ಕರ್ನಾಟಕದ ಗಡಿಗೆ ಹೊಂದಿಕೊಂಡಿರುವ ಕೇರಳ ಮತ್ತು ತಮಿಳುನಾಡು ವಿಧಾನ ಸಭೆಗೆ ಏಪ್ರಿಲ್‌ನಲ್ಲಿ ನಡೆದ ಚುನಾವಣೆಯು ರಾಜ್ಯದಲ್ಲಿ ಮದ್ಯ ಮಾರಾಟ ಹೆಚ್ಚಳವಾಗಲು 'ಕಾಣಿಕೆ' ನೀಡಿರಬಹುದು. ಮತದಾನಕ್ಕೂ ಮುನ್ನ ಈ ರಾಜ್ಯಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿತ್ತು. ಆದ್ದರಿಂದ ಕೇರಳ, ತಮಿಳುನಾಡಿಗೆ ಹೊಂದಿಕೊಂಡ ರಾಜ್ಯದ ಗಡಿ ಭಾಗಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮದ್ಯ ಮಾರಾಟವಾಗಿದೆ. ಅಷ್ಟೇ ಅಲ್ಲ, ರಾಜ್ಯದ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನ ಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯೂ ಮದ್ಯ ಮಾರಾಟ ಹೆಚ್ಚಳವಾಗಲು ಕಾರಣವಾಗಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ.

₹3688 ಕೋಟಿ ರಾಜಸ್ವ ಸಂಗ್ರಹ: 2023 ಜುಲೈನಲ್ಲಿ 66.22 ಲಕ್ಷ ಬಾಕ್ಸ್ ಐಎಂಎಲ್ ಮದ್ಯ ಮಾರಾಟವಾಗಿದ್ದೇ ಕಳೆದ 13 ವರ್ಷಗಳಲ್ಲಿನ ದಾಖಲೆಯಾಗಿತ್ತು. ಈ ದಾಖಲೆಯನ್ನು ಏಪ್ರಿಲ್‌ನ ಮದ್ಯ ಮಾರಾಟ ಹಿಂದಿಕ್ಕಿದೆ. 2025 ಏಪ್ರಿಲ್‌ನಲ್ಲಿ ಮದ್ಯ ಮರಾಟದಿಂದ ಒಟ್ಟಾರೆ ₹2904 ಕೋಟಿ ರಾಜಸ್ವ ಸಂಗ್ರಹವಾಗಿತ್ತು. ಪ್ರಸಕ್ತ ಏಪ್ರಿಲ್‌ನಲ್ಲಿ ₹3688 ಕೋಟಿ ರಾಜಸ್ವ ಸಂಗ್ರಹವಾಗಿ ಶೇ.27 ರಷ್ಟು ಬೆಳವಣಿಗೆಯಾಗಿದೆ.

IN THE SUPREME COURT OF INDIA EXTRA-ORDINARY APPELLATE JURISDICTION
Petition for Special Leave to Appeal (Civil) No. Dy 63157 OF 2025
WITH PRAYER FOR INTERIM RELIEF

MANJUNATHA. Y ....Petitioner(s)

VERSUS

THE STATE OF KARNATAKA AND OTHERS ....Respondent(s)

To,

1. **MS MOHAN KUMAR,** SON OF LATE KN SRINIVAS GUPTA, AGED ABOUT 63 YEARS R/O NO.9, 100 FEET ROAD, BANASHANKARI 2ND STAGE, 4TH BLOCK, BENGALURU-560 085.	**PID: 99380/2026 FOR R[3] IN DIARY NO. 63157/2025 (SEC IV-A)**
2. **K. S SURENDRA BABU,** SON OF LATE K N SRINIVAS GUPTA, AGED ABOUT 65YEARS R/O NO.9, 100 FEET ROAD, BANASHANKARI 2ND STAGE, 4TH BLOCK, BENGALURU-560 085.	**PID: 99381/2026 FOR R[4] IN DIARY NO. 63157/2025 (SEC IV-A)**
3. **KS VISHWAKIRAN,** SON OF LATE K N SRINIVAS GUPTA, AGED ABOUT 59 YEARS R/O NO.9, 100 FEET ROAD, BANASHANKARI 2ND STAGE, 4TH BLOCK, BENGALURU-560 085.	**PID: 99382/2026 FOR R[5] IN DIARY NO. 63157/2025 (SEC IV-A)**
4. **KS SUBBARAJU,** SON OF LATE K N SRINIVAS GUPTA, AGED ABOUT 60 YEARS, R/O NO.9, 100 FEET ROAD, BANASHANKARI 2ND STAGE, 4TH BLOCK, BENGALURU-560 085.	**PID: 99383/2026 FOR R[6] IN DIARY NO. 63157/2025 (SEC IV-A)**
5. **A MUDLAPPA,** SON OF LATE VENKATARAMAN, R/O AT 37/55, SURVEYOR ROAD, BASAVANAGUDI, BENGALURU -560004.	**PID: 99384/2026 FOR R[11] IN DIARY NO. 63157/2025 (SEC IV-A)**
6. **CHANDRAN,** SON OF LATE NANJUNDAPPA, AGED ABOUT 71 YEARS. R/O ULLALA VILLAGE, YESHWANTHPURA HOBLI, BENGALURU-560 091.	**PID: 99385/2026 FOR R[24] IN DIARY NO. 63157/2025 (SEC IV-A)**
7. **NARASAPPA,** SON OF LATE BASAPPA, AGED ABOUT 61 YEARS. R/O ULLALA VILLAGE, YESHWANTHPURA HOBLI, BENGALURU-560 091.	**PID: 99386/2026 FOR R[25] IN DIARY NO. 63157/2025 (SEC IV-A)**
8. **GANGARAJU,** SON OF NAGARAJU, AGED ABOUT 61 YEARS. R/O ULLALA VILLAGE, YESHWANTHPURA HOBLI, BENGALURU-560 091.	**PID: 99387/2026 FOR R[26] IN DIARY NO. 63157/2025 (SEC IV-A)**
9. **MUDDUHONNAIAH,** SON OF JAYANNA, AGED ABOUT 70 YEARS. R/O ULLALA VILLAGE, YESHWANTHPURA HOBLI, BENGALURU- 560 091.	**PID: 99388/2026 FOR R[27] IN DIARY NO. 63157/2025 (SEC IV-A)**
10. **CHANDRAPPA,** SON OF LATE RAJAPPA, AGED ABOUT 50 YEARS. R/O ULLALA VILLAGE, YESHWANTHPURA HOBLI, BENGALURU-560 091.	**PID: 99389/2026 FOR R[28] IN DIARY NO. 63157/2025 (SEC IV-A)**
11. **KARNATAKA INSTITUTE OF LEATHER TECHNOLOGY,** BY ITS DEVELOPMENT OFFICER KADUGONDANAHALLI, ARABIC COLLEGE POST, BENGALURU-560 045.	**PID: 99390/2026 FOR R[32] IN DIARY NO. 63157/2025 (SEC IV-A)**
12. **Y. NAGARAJ,** SON OF LATE. YELLAPPA SINCE DECEASED BY HIS LR DR. N. AJAY SON OF LATE. Y. NAGARAJ AGED ABOUT 41 YEARS, R/AT NO.24, 2ND CROSS, 2ND MAIN, VIJAYANAGARA, BENGALURU-560 040.	**PID: 99391/2026 FOR R[36] IN DIARY NO. 63157/2025 (SEC IV-A)**
13. **B.V.VENKATALAKSHMAMMA,** DAUGHTER OF LATE VENKATARAMAIAH, AGED ABOUT 68 YEARS. NO.33, 12TH 'E' CROSS, AGRAHARA DASARAHALLI, MAGADI ROAD, BENGALURU-560079.	**PID: 99392/2026 FOR R[45] IN DIARY NO. 63157/2025 (SEC IV-A)**
14. **B.V. PARVATHAMMA,** DAUGHTER OF LATE VENKATARAMAIAH, AGED ABOUT 75 YEARS. R/O NO.33, 12TH 'E' CROSS, AGRAHARA DASARAHALLI, MAGADI ROAD, BENGALURU-560079.	**PID: 99393/2026 FOR R[46] IN DIARY NO. 63157/2025 (SEC IV-A)**
15. **B.V. CHANDAMMA,** DAUGHTER OF LATE VENKATARAMAIAH, AGED ABOUT 58 YEARS. R/O NO.33, 12TH 'E' CROSS, AGRAHARA DASARAHALLI, MAGADI ROAD, BENGALURU-560079.	**PID: 99394/2026 FOR R[47] IN DIARY NO. 63157/2025 (SEC IV-A)**
16. **B.V. MANJULA,** DAUGHTER OF LATE VENKATARAMAIAH, AGED ABOUT 58 YEARS. R/O NO.33, 12TH 'E' CROSS, AGRAHARA DASARAHALLI, MAGADI ROAD, BENGALURU-560079.	**PID: 99395/2026 FOR R[48] IN DIARY NO. 63157/2025 (SEC IV-A)**
17. **H DAYAKAR,** SON OF LATE HANUMAIAH, AGED ABOUT 72 YEARS.R/O ULLALU VILLAGE, YESHWANTHPURA HOBLI, BENGALURU NORTH TALUK-560 023.	**PID: 99396/2026 FOR R[52] IN DIARY NO. 63157/2025 (SEC IV-A)**
18. **H JANARDHAN,** SON OF LATE HANUMAIAH, AGED ABOUT 65 YEARS. R/O ULLALU VILLAGE, YESHWANTHPURA HOBLI, BENGALURU NORTH TALUK-560 023.	**PID: 99397/2026 FOR R[53] IN DIARY NO. 63157/2025 (SEC IV-A)**
19. **H RAMACHANDRA,** SON OF LATE HANUMAIAH, AGED ABOUT 63 YEARS. R/O ULLALU VILLAGE, YESHWANTHPURA HOBLI, BENGALURU NORTH TALUK-560 023.	**PID: 99398/2026 FOR R[54] IN DIARY NO. 63157/2025 (SEC IV-A)**
20. **CHANDRASHEKAR,** SON OF LATE HANUMAIAH, AGED ABOUT 55 YEARS R/O ULLALU VILLAGE, YESHWANTHPURA HOBLI, BENGALURU A) NORTH TALUK-560023.	**PID: 99399/2026 FOR R[55] IN DIARY NO. 63157/2025 (SEC IV-A)**
21. **D PRAKASH,** SON OF LATE DASAPPA, AGED ABOUT 35 YEARS. R/O NO.20, 'E' STREET, 2ND CROSS, GOPALAPURA, MAGADI ROAD, BENGALURU -560 023.	**PID: 99400/2026 FOR R[62] IN DIARY NO. 63157/2025 (SEC IV-A)**
22. **SHASHIKALA,** DAUGHTER OF LATE NAGARAJU, AGED ABOUT 44 YEAR R/AT NO.24, 2ND CROSS, 2ND MAIN, HOSAHALLI COLONY, NEAR PLAGUE MARAMMA TEMPLE, VIJAYANAGAR, BENGALURE-560 040.	**PID: 99401/2026 FOR R[72] IN DIARY NO. 63157/2025 (SEC IV- A)**
23. **VEDHA,** DAUGHTER OF LATE Y. NAGARAJU, AGED ABOUT 49 YEARS R/AT NO.24, 2ND CROSS, 2ND MAIN, HOSAHALLI COLONY, NEAR PLAGUE MARAMMA TEMPLE, VIJAYANAGAR, BENGALURE-560 040.	**PID: 99402/2026 FOR R[73] IN DIARY NO. 63157/2025 (SEC IV-A)**
24. **CHAMPA,** DAUGHTER OF LATE Y.NAGARAJU, AGED ABOUT 47 YEARS R/AT NO.24, 2ND CROSS, 2ND MAIN, HOSAHALLI COLONY, NEAR PLAGUE MARAMMA TEMPLE, VIJAYANAGAR, BENGALURE-560 04.	**PID: 99403/2026 FOR R[74] IN DIARY NO. 63157/2025 (SEC IV-A)**
25. **N AJAY** SON OF LATE Y. NAGARAJ, AGED ABOUT 41 YEARS R/AT NO.24, 2ND CROSS, 2ND MAIN, HOSAHALLI COLONY, NEAR PLAGUE MARAMMA TEMPLE, VIJAYANAGAR, BENGALURE-560 040.	**PID: 99404/2026 FOR R[75] IN DIARY NO. 63157/2025 (SEC IV-A)**

WHEREAS the Petition for Diary to Appeal with application for PERMISSION TO FILE ADDITIONAL DOCUMENTS/FACTS/ANNEXURES, EXEMPTION FROM FILING O.T., CONDONATION OF DELAY IN FILING above mentioned (copy enclosed) filed in the Registry by Ms. SMRITI CHURIWAL, Advocate on behalf of the Petitioner above named was listed for hearing before this Court on 07th January, 2026, when the Court was pleased to pass the following order:-

1. Issue notice on the special leave petition(s) as well as on the application for condonation of delay.

2. Tag with SLP(C) Nos.30025-30028/2024."

AND, WHEREAS, the matter was listed for hearing before this Court on 09th April, 2026 along with the other connected matters, when the Court was pleased to pass the following order:-

"1. Mr. Kapil Sibal, learned senior counsel appearing for the State of Karnataka in SLP(C) No. 28248-28258/2024, submits that documents dating back to 1890 have since been traced which would prove the character of the lands in dispute as 'gomal'. According to him, these documents need to be placed on record since they have a material bearing on the special leave petitions under consideration.

2. Let such additional documents be placed on record by filing an appropriate application within three weeks.

3. Exception to such application may be taken by the petitioners within a week thereafter.

4. We have heard Mr. Debal Banerji, learned senior counsel appearing for K.S. Subbaraju respondent No.7 in SLP (C) No. 30028/2024 in support of the prayer that the said petition should be dismissed.

5. Considering the submissions made by Mr. Sibal recorded above that the Government has since traced old records to the effect that disputed lands are gomal', we are of the considered opinion that the application seeking dismissal of SLP (C) No. 30028/2024 ought to be heard along with the special leave petitions.

6. Re-list the special leave petitions and all connected applications on **21st May, 2026 at 12:00 noon.**

7. Interim order, passed earlier, shall continue till the next date of hearing.

8. The latest office report has been read. Some of the respondents are yet to be served.

9. Fresh steps be taken by the State of Karnataka to effect service through paper publication, within two weeks from date. Notice may be published in one English daily newspaper, viz. Deccan Herald and one Kannada newspaper, viz. Kannada Prabha.

10. Once the paper publications are made, the related documents be filed before the Registry a week prior to the returnable date. Put up an appropriate office report."

NOW, THEREFORE, TAKE NOTICE that the above petition along with SLP(C) No. 30025-30028/2024 will be posted for hearing before this Court on 21st May, 2026 at 10.30 O' Clock in the forenoon or so soon thereafter as may be convenient to the Court and show cause to the court as to why condonation of delay in filing be not condoned and the resultant appeal be not allowed.

You may file your affidavit in opposition to the petition as provided under Rule 14(1) of Order XXI, S.C.R.2013 within 30 days from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPs and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted.

TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Dated: 15th April, 2026

Copy to :- 1 Ms. Smriti Churiwal (adv.), 2. Mr. Deepak Prakash (adv.), 3. Mr. Sanchit Garga (adv.), 4. M/s. Nuli & Nuli (adv.)

Note: * Counsel for the State of Karnataka is required to file affidavit of Paper Publication in respect of aforementioned respondents along with the proof of service well before next date of Listing i.e. 21.05.2026.

Sd/-
ASSISTANT REGISTRAR

DIPR/CP/495/Zen/2026-27

ರೈಲ್ವೆ ಪರೀಕ್ಷೆಯಲ್ಲಿ ಮತ್ತೆ ಕನ್ನಡ ಕಡೆಗಣನೆ?

ನೈಋತ್ಯ ರೈಲ್ವೆ ಎಲ್‌ಡಿಸಿಇ ಪರೀಕ್ಷೆ ಸುತ್ತೋಲೆ | ಈ ಸುತ್ತೋಲೆಯಲ್ಲಿ ಅಕೃತ ಭಾಷೆಗಷ್ಟೇ ಆದ್ಯತೆ
ಇಲಾಖೇಲಿ ಹಿಂದಿ-ಇಂಗ್ಲಿಷ್ ಅಕೃತ ಭಾಷೆ | ರಾಜ್ಯದಲ್ಲಿ ಅಕೃತ ಭಾಷೆ ಕನ್ನಡ, ಹೀಗಾಗಿ ಗೊಂದಲ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನೈಋತ್ಯ ರೈಲ್ವೆ ಎಲ್‌ಡಿಸಿಇ ಪರೀಕ್ಷೆಗೆ ಹೊರಡಿಸಿರುವ ಸುತ್ತೋಲೆಯಲ್ಲಿ ಅಕೃತ ಭಾಷೆಗೆ ಆದ್ಯತೆ ನೀಡಲಾಗಿದ್ದು, ಆ ಮೂಲಕ ಮತ್ತೊಮ್ಮೆ ರೈಲ್ವೆ ಪರೀಕ್ಷೆಯಲ್ಲಿ ಕನ್ನಡವನ್ನು ಕಡೆಗಣಿಸಿರುವ ಆರೋಪ ಕೇಳಿಬಂದಿದೆ.



ನೈಋತ್ಯ ರೈಲ್ವೆ ಹುಬ್ಬಳ್ಳಿ ವಿಭಾಗವು ಇತ್ತೀಚೆಗೆ ಆಫೀಸ್ ಸೂಪರಿಂಟೆಂಡೆಂಟ್ ಹಂತ 6ರ 39 ಹುದ್ದೆಗಳು, ಸೀನಿಯರ್ ಕ್ಲರ್ಕ್ ಹಂತ 5ರ 25 ಹುದ್ದೆ ಹಾಗೂ ಇಂಟರ್‌ಮೀಡಿಯಟ್ ಅಪ್ರೆಂಟಿಸ್ ಮೆಕ್ಯಾನಿಕ್‌ನ 9 ಹುದ್ದೆಗಳಿಗೆ ಎಲ್‌ಡಿಸಿಇ ಪರೀಕ್ಷೆ ನಡೆಸಲು ಸುತ್ತೋಲೆ ಹೊರಡಿಸಿದೆ. ಆದರೆ, ಈ ಪದೋನ್ನತಿ ಪರೀಕ್ಷೆಯ ಸುತ್ತೋಲೆಯಲ್ಲಿ ಅಕೃತ ಭಾಷೆಯಲ್ಲಿ ಮಾತ್ರ ನಡೆಸಲಾಗುವುದು ಎಂದು ತಿಳಿಸಲಾಗಿದೆ.

ಅಕೃತ ಭಾಷೆ ಯಾವುದು?: ಆದರೆ, ಪ್ರತಿ ಬಾರಿ ನೈಋತ್ಯ ರೈಲ್ವೆಯಿಂದ ಕೈಗೊಳ್ಳುವ ಪರೀಕ್ಷೆಯ ಸುತ್ತೋಲೆಗಳಲ್ಲಿ ಯಾವ ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ ಎಂದು ಸ್ಪಷ್ಟವಾಗಿ ಹೇಳಲಾಗುತ್ತದೆ. ಈ ಹಿಂದಿನ ಪರೀಕ್ಷಾ ಸುತ್ತೋಲೆಗಳಲ್ಲಿ ಹಿಂದಿ, ಇಂಗ್ಲಿಷ್‌ನಲ್ಲಿ ಮಾತ್ರ ಪರೀಕ್ಷೆ ಎಂದು ಸ್ಪಷ್ಟವಾಗಿ ತಿಳಿಸಲಾಗಿತ್ತು.

ಇದೀಗ ಅಕೃತ ಭಾಷೆಯಲ್ಲಿ ಮಾತ್ರ ಪರೀಕ್ಷೆ ನಡೆಸಲಾಗುವುದು ಎಂದು ತಿಳಿಸುವ ಮೂಲಕ ಗೊಂದಲ ಸೃಷ್ಟಿಸಲಾಗಿದೆ. ರೈಲ್ವೆ ಇಲಾಖೆಯಲ್ಲಿ ಹಿಂದಿ-ಇಂಗ್ಲಿಷ್‌ಗಳನ್ನು ಅಕೃತ ಭಾಷೆ ಎಂದು ಕರೆಯಲಾಗುತ್ತದೆ. ಇನ್ನು ರಾಜ್ಯದ ಅಕೃತ ಭಾಷೆ ಕನ್ನಡವಾಗಿದೆ. ಆದರೆ, ನೈರುತ್ಯ ರೈಲ್ವೆ ಹೊರಡಿಸಿರುವ ಸುತ್ತೋಲೆಯಂತೆ ಅಕೃತ ಭಾಷೆಯಲ್ಲಿ ಪರೀಕ್ಷೆ ನಡೆಸುವುದಾದರೆ ರೈಲ್ವೆ ಅಕೃತ ಭಾಷೆಗಳಾದ ಹಿಂದಿ, ಇಂಗ್ಲಿಷ್‌ನಲ್ಲಿ ಪರೀಕ್ಷೆ ನಡೆಸಲಾಗುತ್ತದೆಯೇ ಅಥವಾ ರಾಜ್ಯದ ಅಕೃತ ಭಾಷೆ ಕನ್ನಡದಲ್ಲಿ ಪರೀಕ್ಷೆ ನಡೆಯುವುದೇ ಎಂಬ ಗೊಂದಲ ಅಭ್ಯರ್ಥಿಗಳಲ್ಲಿ ಮೂಡುವಂತಾಗಿದೆ.

ಇನ್ನು, ರೈಲ್ವೆ ಇಲಾಖೆಯು ಪದೇಪದೇ ಸ್ಥಳೀಯ ಭಾಷೆ ಕನ್ನಡ ಕಡೆಗಣಿಸಿ ಪರೀಕ್ಷೆ ನಡೆಸಿರುವುದರಿಂದ ಈ ಬಾರಿ ಅಕೃತ ಭಾಷೆಯಲ್ಲಿ ಪರೀಕ್ಷೆ ನಡೆಸಲಾಗುವುದು ಎಂದು ಹೇಳಿದ್ದರೂ ರೈಲ್ವೆಯ ಅಕೃತ ಭಾಷೆಯಲ್ಲೇ ಪರೀಕ್ಷೆ ನಡೆಸಲಿದೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಅಲ್ಲದೆ, ಸಾಕಷ್ಟು ಹೋರಾಟದ ಬಳಿಕವೂ ಸುತ್ತೋಲೆಯಲ್ಲಿ ಕನ್ನಡದಲ್ಲಿ ಪರೀಕ್ಷೆ ನಡೆಸುವ ಅಂಶ ಸೇರ್ಪಡೆ ಮಾಡದಿರುವುದು ಪರೀಕ್ಷಾರ್ಥಿಗಳಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ.

ಕನ್ನಡ ಕಡೆಗಣಿಸಿದರೆ ಹೋರಾಟ: ಕರವೇ ಎಚ್ಚರಿಕೆ



ಹಲವು ಬಾರಿ ಹೋರಾಟ ನಡೆಸಿದ್ದರೂ ಮತ್ತೆ ಪರೀಕ್ಷಾ ಸುತ್ತೋಲೆಯಲ್ಲಿ ಕನ್ನಡವನ್ನು ನಮೂದಿಸದೆ ಗೊಂದಲ ಸೃಷ್ಟಿಸಿ, ಕನ್ನಡ ಕಡೆಗಣನೆಗೆ ಕಾರಣವಾಗಿರುವುದಕ್ಕೆ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣ ಗೌಡ, ಪರೀಕ್ಷಾ ಸುತ್ತೋಲೆಯಲ್ಲಿ ಪ್ರಶ್ನೆ ಪತ್ರಿಕೆಯ ಭಾಷೆಗಳ ಆಯ್ಕೆಯಲ್ಲಿ ಕನ್ನಡ ಉಲ್ಲೇಖಿಸದಿರುವುದು ಸ್ಪಷ್ಟವಾಗಿ ಭಾಷಾ ದ್ರೋಹವಾಗಿದೆ. ಇದು ಕರ್ನಾಟಕದ ಅಧಿಕೃತ ನುಡಿಯಾದ ಕನ್ನಡಕ್ಕೆ ಮಾಡಿದ ಅಪಮಾನ. ತಮ್ಮ ಮಾತೃಭಾಷೆ ಯಲ್ಲಿ ಪರೀಕ್ಷೆ ಬರೆಯುವ ಕನ್ನಡಿಗರ ರೈಲ್ವೆ ಉದ್ಯೋಗಗಳ ಹಕ್ಕು ಕಸಿದುಕೊಳ್ಳಲಾಗುತ್ತಿದೆ. ಇದು ಕನ್ನಡಿಗರ ಉದ್ಯೋಗಾವಕಾಶಗಳನ್ನು ಕಿತ್ತುಕೊಂಡು ಹಿಂದಿ ರಾಜ್ಯದವರಿಗೆ ನೀಡುವ ಸ್ಪಷ್ಟ ಹುನ್ನಾರವಾಗಿದೆ ಎಂದು ಆರೋಪಿಸಿದ್ದಾರೆ.

ಕರ್ನಾಟಕದಲ್ಲಿ ಕನ್ನಡವನ್ನು ಅಧಿಕೃತ ಭಾಷೆಯಾಗಿ ಘೋಷಿಸಲಾಗಿದೆ. ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಕನ್ನಡ ಅನುಷ್ಠಾನ ಕಡ್ಡಾಯವಾಗಿದೆ. ಆದರೆ ಕೇಂದ್ರ ಸರ್ಕಾರದ ಅಡಿಯಲ್ಲಿರುವ ನೈಋತ್ಯ ರೈಲ್ವೆ ಇಲಾಖೆಯು ಕರ್ನಾಟಕದಲ್ಲಿ ಕನ್ನಡವನ್ನು ಪೂರ್ಣವಾಗಿ ಕಡೆಗಣಿಸುತ್ತಿದೆ. ಇದು ಕನ್ನಡಿಗರ ಭಾವನೆಗಳನ್ನು ತಿರಸ್ಕಾರದಿಂದ ನೋಡುವ, ಅವರ ಗೌರವವನ್ನು ಕುಗ್ಗಿಸುವ ಕೆಟ್ಟ ಬೆಳವಣಿಗೆಯಾಗಿದೆ. ರೈಲ್ವೇ ಪರೀಕ್ಷೆಗಳಲ್ಲಿ ತ್ರಿಭಾಷಾ (ಕನ್ನಡ-ಇಂಗ್ಲಿಷ್-ಹಿಂದಿ) ವ್ಯವಸ್ಥೆ ಅಳವಡಿಸದಿದ್ದಲ್ಲಿ ಕರವೇ ತೀವ್ರ ಸ್ವರೂಪದ ಹೋರಾಟ ನಡೆಸಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರು ತಕ್ಷಣವೇ ಕೇಂದ್ರ ಸರ್ಕಾರರದ ಮೇಲೆ ಒತ್ತಡ ಹೇರಬೇಕು. ಕರ್ನಾಟಕದಿಂದ ಆಯ್ಕೆಯಾಗಿರುವ ಸಂಸದರು, ಕೇಂದ್ರ ಸಚಿವರು ಮೌನ ಮುರಿಯಬೇಕು. ರೈಲ್ವೆ ಇಲಾಖೆ ರಾಜ್ಯ ಖಾತೆ ಸಚಿವರಾಗಿರುವ ವಿ. ಸೋಮಣ್ಣ ಅವರು ತಕ್ಷಣ ಕ್ರಿಯಾಶೀಲರಾಗಿ ಈ ಅನ್ಯಾಯ ತಡೆಯಬೇಕು ಎಂದು ಆಗ್ರಹಿಸಿದ್ದಾರೆ.

ಶೃಂಗೇರಿ: ಅಂಚೆ ಮತ ಮರು ಎಣಿಕೇಲಿ ಜೀವರಾಜ್‌ಗೆ ಜಯ

ಚುನಾವಣೆ ನಡೆದ 3 ವರ್ಷ ಬಳಿಕ 52 ಮತಗಳಿಂದ ಗೆಲುವು | ಚುನಾವಣಾಧಿಕಾರಿಗಳಿಂದ ಫಲಿತಾಂಶ ಪ್ರಕಟ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ತೀವ್ರ ಗೊಂದಲ, ಹೈಡ್ರಾಮಾ ನಡುವೆ ನಡೆದ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ಕಾರ್ಯ ಶನಿವಾರ ತಡರಾತ್ರಿ ವೇಳೆಗೆ ಮುಕ್ತಾಯಗೊಂಡಿದ್ದು, ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಅವರು 52 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಹೈಕೋರ್ಟ್ ಆದೇಶದಂತೆ ಶನಿವಾರ ಅಂಚೆ ಮತಗಳ ಮರುಎಣಿಕೆ ನಡೆಸಲಾಗಿತ್ತು. ಅಂಚೆ ಮತಪತ್ರಗಳ ಪರಿಶೀಲನೆ ಮತ್ತು ಮರು ಎಣಿಕೆ ಬಳಿಕ ಜೀವರಾಜ್ ಅವರ ಅಂಚೆ ಮತಗಳು 690 (2 ಇಳಿಕೆ) ಆಗಿದ್ದರೆ, ರಾಜೇಗೌಡ ಅವರ ಮತಗಳು 314ಕ್ಕೆ ಇಳಿದಿವೆ. ರಾಜೇಗೌಡ ಅವರಿಗೆ 255 ಮತಗಳು ಕಡಿಮೆಯಾಗಿವೆ. ಅಂದರೆ, ಇವಿಎಂ-ಅಂಚೆಮತ ಎರಡನ್ನೂ ಗಣನೆಗೆ ತೆಗೆದುಕೊಂಡರೆ ಜೀವರಾಜ್ ಅವರಿಗೆ 52 ಮತಗಳ ಮುನ್ನಡೆ ಸಿಕ್ಕಿದ್ದು, ಅವರು ಜಯಸಾಧಿಸಿದ್ದಾರೆ. ಚುನಾವಣಾಧಿಕಾರಿಗಳು ಫಲಿತಾಂಶ ಪ್ರಕಟಿಸಿ, ಡಿ.ಎನ್. ಜೀವರಾಜ್ ಅವರಿಗೆ ಶಾಸಕ ಸ್ಥಾನದ ಪ್ರಮಾಣಪತ್ರವನ್ನು ಸೋಮವಾರ ಹಸ್ತಾಂತರಿಸಿದ್ದಾರೆ.



ಜೀವರಾಜ್‌ಗೆ ಶಾಸಕ ಸ್ಥಾನದ ಪ್ರಮಾಣಪತ್ರ ವಿತರಿಸಿದ ಅಧಿಕಾರಿ

ಅಂಚೆ ಮತ ಅಕ್ರಮ ಆರೋಪ: ಶಾಸಕ ಜೀವರಾಜ್ ವಿರುದ್ಧ ಕೇಸ್

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಅಕ್ರಮದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ವಿಜೇತ ಅಭ್ಯರ್ಥಿ ಜೀವರಾಜ್ ಸೇರಿ ಮೂವರ ವಿರುದ್ಧ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2023ರ ಮೇ 13ರಂದು ನಡೆದ ಅಂಚೆ ಮತಗಳ ಎಣಿಕೆ ವೇಳೆ ಅಕ್ರಮ ನಡೆದಿದೆ ಎಂಬ ಅನುಮಾನ ವ್ಯಕ್ತಪಡಿಸಿ, ಮತ ಎಣಿಕೆ ಟೇಬಲ್‌ನ ಕಾಂಗ್ರೆಸ್ ಅಭ್ಯರ್ಥಿಯ ಬೂತ್ ಏಜೆಂಟ್ ಹಾಗೂ ವಕೀಲ ಸುಧೀರ್ ಕುಮಾರ್ ಮುರೊಳ್ಳಿ ನೀಡಿದ ದೂರಿನ ಅನ್ವಯ ನಗರ ಪೊಲೀಸ್ ಠಾಣೆಯಲ್ಲಿ 3 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಎ1 ಆರೋಪಿಯಾಗಿ ಮತ ಎಣಿಕಾ ಕೇಂದ್ರ ಅಂದಿನ ಚುನಾವಣಾಧಿಕಾರಿ ವೇದಮೂರ್ತಿ, ಎ2 ಆರೋಪಿಯಾಗಿ ಜೀವರಾಜ್ ಹಾಗೂ ಎ3 ಆರೋಪಿಯಾಗಿ ಅಂದಿನ ಜಿಲ್ಲಾ ಚುನಾವಣಾಧಿಕಾರಿ ರಮೇಶ್ ವಿರುದ್ಧ ಪ್ರಕರಣ ದಾಖಲಾಗಿದೆ.

ಗೆದ್ದ ಬಳಿಕ ಬಿಎಸ್‌ವೈ ಭೇಟಿಯಾಗಿ ಆಶೀರ್ವಾದ ಪಡೆದ ಜೀವರಾಜ್



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಮತ ಎಣಿಕೆಯಲ್ಲಿ ಗೆಲುವು ಸಾಧಿಸಿದ ಬಿಜೆಪಿ ಶಾಸಕ ಡಿ.ಎನ್.ಜೀವರಾಜ್ ಅವರು ಪಕ್ಷದ ಹಿರಿಯ ನಾಯಕ, ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಸೋಮವಾರ ಧವಳಗಿರಿ ನಿವಾಸದಲ್ಲಿ ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಭೇಟಿಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಮೂರು ವರ್ಷದ ಹೋರಾಟದ ಬಳಿಕ ಜಯ ಸಿಕ್ಕಿದೆ. 2023ರಲ್ಲೇ ಮರು ಮತ ಎಣಿಕೆಗೆ ಮನವಿ ಮಾಡಿದ್ದೆ. ಆ ಅಧಿಕಾರಿ ಎಣಿಕೆ ಮಾಡಲಿಲ್ಲ. ಹೀಗಾಗಿ ಕೋರ್ಟ್ ಮೊರೆ ಹೋಗಿದ್ದೆ ಎಂದರು.

ಎಫ್‌ಐಆರ್ ರದ್ದತಿ ಕೋರಿ ಶಾಸಕ ಜೀವರಾಜ್ ಅರ್ಜಿ

ಮತ್ತೆ ಹೈಕೋರ್ಟ್ ಮೆಟ್ಟಿಲೇರಿದ ಪ್ರಕರಣ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶೃಂಗೇರಿ ವಿಧಾನಸಭಾ ಕ್ಷೇತ್ರ ಚುನಾವಣೆಯಲ್ಲಿ ತಿರಸ್ಕೃತ ಅಂಚೆ ಮತಗಳ ಮರು ಎಣಿಕೆಯಲ್ಲಿ ಮತಗಳನ್ನು ತಿರುಚಿದ ಆರೋಪದ ಮೇಲೆ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದು ಕೋರಿ ಬಿಜೆಪಿ ಶಾಸಕ ಡಿ.ಎನ್.ಜೀವರಾಜ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.



ಅಂಚೆ ಮತಗಳ ಮರು ಎಣಿಕೆಯಲ್ಲಿ ಜೀವರಾಜ್ ಅವರು ಗೆಲುವು ಸಾಧಿಸಿದ ಬೆನ್ನಲ್ಲೇ ಮತಗಳನ್ನು ತಿರುಚಲಾಗಿದೆ ಎಂದು ಆರೋಪಿಸಿ ಚಿಕ್ಕಮಗಳೂರು ಟೌನ್ ಠಾಣಾ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂತೆ ಜೀವರಾಜ್ ಅವರು ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯಲ್ಲಿ ಚಿಕ್ಕಮಗಳೂರು ಟೌನ್ ಠಾಣಾ ಪೊಲೀಸರು ಮತ್ತು ದೂರುದಾರ ಸುಧೀರ್ ಕುಮಾರ್ ಮುರೊಳ್ಳಿ ಅವರನ್ನು ಪ್ರತಿವಾದಿ ಮಾಡಲಾಗಿದೆ. ಅರ್ಜಿಯು ಮಂಗಳವಾರ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರ ರಜಾಕಾಲದ ಏಕಸದಸ್ಯ ಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿದೆ.

ಶೃಂಗೇರಿ ಮರು ಮತ ಎಣಿಕೆ ವಿವಾದದ ಬಗ್ಗೆ ಸರ್ಕಾರ ಮಟ್ಟದಲ್ಲಿ ತನಿಖೆ: ಡಿಕೆಶಿ

ಶೃಂಗೇರಿಯಲ್ಲಿ ನಡೆದಿರುವುದು ಷಡ್ಯಂತ್ರ ಈ ಮತ ಎಣಿಕೆ ಪ್ರಕರಣ ದೇಶಕ್ಕೇ ಮಾರಕ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶೃಂಗೇರಿ ಮತ ಮರುಎಣಿಕೆ ಫಲಿತಾಂಶ ಇಡೀ ದೇಶಕ್ಕೆ ಮಾರಕವಾದದ್ದಾಗಿದೆ. ಬಿಜೆಪಿಯಲ್ಲಿ ಇಷ್ಟರ ಮಟ್ಟಿಗೆ ಕ್ರಿಮಿನಲ್‌ಗಳಿದ್ದಾರೆ ಎಂದು ಎಣಿಸಿರಲಿಲ್ಲ. ಈ ಕುರಿತು ನಾವು ಸರ್ಕಾರದ ಮಟ್ಟದಲ್ಲಿ ತನಿಖೆ ಮಾಡಿಸುತ್ತೇವೆ ಮತ್ತು ಕಾನೂನಾತ್ಮಕ ಹೋರಾಟ ಮಾಡುತ್ತೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.



ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್ ಪ್ರಜಾಪ್ರಭುತ್ವದಲ್ಲಿ ಸೋಲು, ಗೆಲುವು ಸಾಮಾನ್ಯ. ಆದರೆ, ಶೃಂಗೇರಿಯಲ್ಲಿ ನಡೆದಿರುವುದು ಷಡ್ಯಂತ್ರ. ಅದು ಅತ್ಯಂತ ಅಘಾತಕಾರಿ ವಿಚಾರ. ನಾವು ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ತನಿಖೆ ಮಾಡಿಸುತ್ತೇವೆ. ಕಾನೂನಾತ್ಮಕವಾಗಿ ಹೋರಾಟ ಮಾಡುತ್ತೇವೆ. ಇದು ಅಂತಾರಾಷ್ಟ್ರೀಯ ಸಂಚಿನ ರೀತಿ ನಡೆದಿದೆ. ಇಲ್ಲಿ ಮತ ಎಣಿಕೆ ಬಾಕ್ಸ್‌ಗಳನ್ನು ತೆರೆಯಲಾಗಿದೆ. ಕೆಲವರನ್ನು ಬಳಸಿಕೊಂಡು ನಮ್ಮ ಅಭ್ಯರ್ಥಿ ಪರವಾಗಿದ್ದ ಬ್ಯಾಲೆಟ್ ಪೇಪರ್‌ಗಳ ಮೇಲೆ ಮತ್ತೊಂದು ಗುರುತು ಹಾಕಲಾಗಿದೆ. ಎಲ್ಲ ಬಂಡಲ್‌ಗಳು ಮಾನ್ಯ ಎಂದು ತೀರ್ಮಾನಿಸಿದ ಮೇಲೆ ತಿದ್ದುಪಡಿ ಆಗಿದೆ ಎಂದರು.

ಯಾರಿಗೆ ಮತ ಬಿದ್ದಿದೆ ಎಂದು ಪ್ರತಿ ಮತಗಳನ್ನು ಎಲ್ಲರಿಗೂ ತೋರಿಸಿರುತ್ತಾರೆ. ಅದನ್ನು ಕ್ಯಾಮೆರಾದಲ್ಲಿ ದಾಖಲೀಕರಣ ಮಾಡಿಕೊಳ್ಳಲಾಗಿರುತ್ತದೆ. ಎಲ್ಲ ಎಣಿಕೆಯಾದ ಮೇಲೆ ಬಂಡಲ್‌ಗಳನ್ನು ಒಳಗೆ ಹಾಕಿ ಸೀಲ್ ಮಾಡಲಾಗಿರುತ್ತದೆ. ಇದಾದ ನಂತರ ಬಂಡಲ್ ತೆಗೆದು ಮತ್ತೊಂದು ಗುರುತು ಮಾಡಲಾಗಿದೆ. ಈಗ ಆ ಬಂಡಲ್ ಮಾತ್ರ ಎಣಿಕೆಯಾಗಬೇಕು ಎಂದು ನ್ಯಾಯಾಲಯದ ಮೂಲಕ ಆದೇಶ ತರಲಾಗಿದೆ ಎಂದರು. ಮರು ಮತ ಎಣಿಕೆ ಕುರಿತು ದೊಡ್ಡ ತನಿಖೆಯ ಅವಶ್ಯಕತೆಯಿದೆ. ಈ ಹಿಂದೆ ಫಲಿತಾಂಶ ಸರಿಯಾಗಿತ್ತು ಎಂದು ಎಲ್ಲರೂ ಸಹಿ ಹಾಕಿದ್ದರು. ಚುನಾವಣಾ ಆಯೋಗದ ಬಳಿಯೂ ದಾಖಲೆಗಳಿವೆ. ಆದರೆ, ಮರುಎಣಿಕೆಯಲ್ಲಿ ಅದು ಬದಲಾಗಿದೆ. ಒಬ್ಬರಿಗೆ ಮತ ಬಿದ್ದ ಕಡೆ ಇನ್ನೊಬ್ಬರಿಗೂ ಗುರುತು ಹಾಕಲಾಗಿದೆ. ಈ ಬಗ್ಗೆ ದೂರು ನೀಡಲಾಗಿದೆ ಎಂದರು.

IN THE SUPREME COURT OF INDIA EXTRA-ORDINARY APPELLATE JURISDICTION
Petition for Special Leave to Appeal (Civil) No(s) 30025-30028 OF 2024
WITH PRAYER FOR INTERIM RELIEF

HARISH KUMAR (DEAD) BY LRS AND OTHERS ....Petitioner(s)
VERSUS
THE STATE OF KARNATAKA AND OTHERS ....Respondent(s)

To,

1 SRI.DALI MUNIYAPPA, AGED ABOUT 65 YEARS, S/O MUNI OBALAPPA, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU -560110. KARNATAKA.	**PID: 98100/2026 FOR R[19] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
2 SMT.B.V. RATHNAMMA, AGED ABOUT 60 YEARS, D/O LATE VENKATARAMAIAH, R/A NO.33, 12TH E CROSS, MAGADI ROAD, BENGALURU-560023., KARNATAKA.	**PID: 98101/2026 FOR R[21] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
3 SRI.H.CHANDRAKEERTHI, AGED ABOUT 41 YEARS, S/O LATE HANUMAIAH, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU-560110, KARNATAKA	**PID: 98102/2026 FOR R[24] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
4 SMT.PARVATHAMMA, AGED ABOUT 71 YEARS, D/O LATE DASAPPA, RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA.	**PID: 98103/2026 FOR R[34] IN IN SLP(C) NO. 30025/2024, SLP© NO. 30026/ 2024SLP(C) NO.30025-30028/2024 (SEC IV-A)**
5 SRI.NARASIMHA MURTHY, S/O LATE PUTTAIAH, AGED ABOUT 55 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98104/2026 FOR R[35] IN IN SLP(C) NO. 30025/2024, SLP(C) NO. 30026/2024SLP(C) NO.30025-30028/2024 (SEC IV-A)**
6 SRI.NARASIMHA MURTHY, SON OF LATE MALLAIAH AGED ABOUT 63 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98105/2026 FOR R[36] IN IN SLP(C) NO. 30025/2024SLP(C) NO.30025-30028/2024 (SEC IV-A)**
7 V.HARISH KUMAR, S/O LATE M.VENKATARAMAIAH, MAJOR, R/O NO.33, 13TH STREET, AGRAHARA DASARAHALLI, MAGADI ROAD, BANGALORE-560079. KARNATAKA	**PID: 98106/2026 FOR R[60] IN IN SLP(C) NO. 30027/2024SLP(C) NO.30025-30028/2024 (SEC IV-A)**
8 R.SHOBHA, D/O Y.RAMAKRISHNA, W/O M.C. KESHAVAMURTHY, AGED ABOUT 37 YEARS, R/A NO.11/1, 1ST MAIN, 1ST CROSS, VALMIKINAGAR, MYSORE ROAD, BANGALORE-560026 KARNATAKA.	**PID: 98107/2026 FOR R[61] IN IN SLP(C) NO. 30027/2024SLP© NO.30025-30028/2024 (SEC IV-A)**
9 SAROJAMMA, AGED ABOUT 77 YEARS, W/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA.	**PID: 98108/2026 FOR R[66] IN IN SLP(C) NO.30028/2024SLP© NO.30025-30028/2024 (SEC IV-A)**
10 SRI. M. S MOHAN KUMAR, ABOUT 60 YEARS, S/O LATE K.N SRINIVASA GUPTA. RESIDING AT NO.9, BANASHANKARI, 2ND STAGE, 100 FEET ROAD, 4TH BLOCK, BANGALORE-560083., KARNATAKA.	**PID: 98109/2026 FOR R[67] IN IN SLP(C) NO. 30028/2024SLP(C) NO.30025-30028/2024 (SEC IV-A)**
11 SRI.K.S. SURENDRA BABU, AGED ABOUT 51 YEARS, S/O LATE K.N SRINIVASA GUPTA.RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA	**PID: 98110/2026 FOR R[68] IN IN SLP(C) NO. 30028/2024SLP(C) NO.30025-30028/2024 (SEC IV-A)**
12 SRI.K.S VISHWAKIRAN, AGED ABOUT 46 YEARS, S/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083., KARNATAKA.	**PID: 98111/2026 FOR R[69] IN IN SLP(C) NO.30028/2024SLP© NO.30025-30028/2024 (SEC IV-A)**
13 SRI. R. V. SUDHIR, S/O LATE RAJA VENKATARAMANA SHETTY. RESIDING AT NO.37/55, SURVEYOR ROAD, BASAVANAGUDI, BENGALURU-560004 KARNATAKA.	**PID: 98112/2026 FOR R[72] IN IN SLP(C) NO. 30028/2024SLP© NO.30025-30028/2024 (SEC IV-A)**
14 RUDRA MURTHY S/O H. S. SADASHIVAIAH, R/O ILLALU VILLAGE, YESWANTHAPURA HOBLI BENGALURU NORTH TALUK -560056, KARNATAKA.	**PID: 98113/2026 FOR R[77] IN IN SLP(C) NO.30028/2024SLP© NO.30025-30028/2024 (SEC IV-A)**
15 CHANDRAN S/O LATE NANJUNDAPPA, R/O ILLALU VILLAGE YESWANTHAPURA HOBLI, BENGALURU NORTH TALUK-560056 KARNATAKA	**PID: 98113/2026 FOR R[77] IN IN SLP(C) NO. 30028/2024SLP(C) NO.30025-30028/2024 (SEC IV-A)**
16 NARASAPPA S/O BASAPPA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98115/2026 FOR R[79] IN IN SLP(C) NO.30028/2024SLP(C) NO.30025-30028/2024 (SEC IV-A)**
17 GANGARAJU S/O NAGARAJU, R/O ILLALU VILLAGE YESWANTHAPURA HOBLI BENGALURU NORTH TALUK – 560056. KARNATAKA	**PID: 98116/2026 FOR R[80] IN IN SLP(C) NO. 30028/2024SLP(C) NO.30025-30028/2024 (SEC IV-A)**
18 MUDDUHAHONNAIAH S/O JAYANNA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98117/2026 FOR R[81] IN IN SLP(C) NO.30028/2024SLP(C) NO.30025-30028/2024 (SEC IV-A)**
19 CHANDRAPPA S/O LATE RAJAPPA, R/O ILLALU VILLAGE YESWANTHAPURA HOBLI BENGALURU NORTH TALUK – 560056 KARNATAKA	**PID: 98118/2026 FOR R[82] IN IN SLP(C) NO.30028/2024SLP(C) NO.30025-30028/2024 (SEC IV-A)**

WHEREAS the Petition for SPECIAL LEAVE PETITION (CIVIL) to Appeal with application for EXEMPTION FROM FILING O.T., EXEMPTION FROM FILING C/C OF THE IMPUGNED JUDGMENT, CONDONATION OF DELAY IN FILING, DISMISSAL OF APPEAL, INTERVENTION/IMPLEADMENT, EXEMPTION FROM FILING O.T., APPLICATION FOR SUBSTITUTION, EARLY HEARING APPLICATION, PERMISSION TO FILE APPLICATION FOR DIRECTION, EXEMPTION FROM APPOINTMENT OF OFFICIAL TRANSLATOR, PERMISSION TO FILE ADDITIONAL DOCUMENTS/FACTS/ANNEXURES, PERMISSION TO FILE ADDITIONAL DOCUMENTS/FACTS/ANNEXURES, EXEMPTION FROM FILING O.T., PERMISSION TO FILE APPLICATION FOR TO FILE DIRECTION, PERMISSION ADDITIONAL DOCUMENTS/FACTS/ANNEXURES above mentioned (copy enclosed) filed in the Registry by Ms. JAYASREE NARASIMHAN, Advocate on behalf of the Petitioner above named was listed for hearing before this Court on 09th December, 2024 along with the connected matters, when the Court was pleased to inter-alia pass the following order:-

"SPECIAL LEAVE PETITION (CIVIL) DIARY NO.
53577/2024

1. Delay condoned.
2. Issue notice.
3. Till the next date of hearing, the possession of the disputed property shall not be disturbed

WHEREAS, the matter was listed for hearing before this Court on 09th April, 2026 along with the connected matters, when the Court was pleased to pass the following order:-

"1. Mr. Kapil Sibal, learned senior counsel appearing for the State of Karnataka in SLP(C) No. 28248-28258/2024, submits that documents dating back to 1890 have since been traced which would prove the character of the lands in dispute as gomal'. According to him, these documents need to be placed on record since they have a material bearing on the special leave petitions under consideration.
2. Let such additional documents be placed on record by filing an appropriate application within three weeks.
3. Exception to such application may be taken by the petitioners within a week thereafter.
4. We have heard Mr. Debal Banerji, learned senior counsel appearing for K.S. Subbaraju - respondent No.7 in SLP (C) No. 30028/2024 in support of the prayer that the said petition should be dismissed.
5. Considering the submissions made by Mr. Sibal recorded above that the Government has since traced old records to the effect that disputed lands are 'gomal', we are of the considered opinion that the application seeking dismissal of SLP (C) No. 30028/2024 ought to be heard along with the special leave petitions.
6. Re-list the special leave petitions and all connected applications ca 21st May, 2026 at 12:00 noon.
7. Interim order, passed earlier, shall continue till the next date of hearing.
8. The latest office report has been read. Some of the respondents are yet to be served.
9. Fresh steps be taken by the State of Karnataka to effect service through paper publication, within two weeks from date. Notice may be published in one English daily newspaper, viz. Deccan Herald and one Kannada newspaper, viz. Kannada Prabha.
10. Once the paper publications are made, the related documents be filed before the Registry a week prior to the returnable date. Put up an appropriate office report."

NOW, THEREFORE, TAKE NOTICE that the above petition will be posted for hearing before this Court on 21st May, 2026 at 10.30 O' Clock in the forenoon or so soon thereafter as may be convenient to the Court when you may appear before the court either in person or through Counsel and show cause to the Court as to why Special Leave and interim relief as prayed for be not granted and the resultant appeal be not allowed.

You may file your affidavit in opposition to the petition as provided under Rule 14(1) of Order XXI, S.C.R.2013 immediately from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPS and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted..

TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.

Dated: 13th April, 2026

Copy to :-
1 Mr. Anirudh Sanganeria (adv.), **2** Ms. Jayasree Narasimhan (adv.), **3** Mr. Deepak Prakash (adv.) **4** Mr. Lzafeer Ahmad B. F. (adv.), **5** Ms. Patil Rekha Chandra Gouda (adv.), **6** Ms. Smriti Churiwal (adv.), **7** Mr. Javedur Rahman (adv.), **8** Mr. Vishnu Sharma A.s. (adv.)

Sd/-
ASSISTANT REGISTRAR

DIPR/CP/496/Zen/2026-27

ಮಿಲಾಗ್ರಿಸ್ ಕಾಲೇಜ್: 10ರಂದು ಅಪೆಕ್ಸ್ ರನ್ 2026 ಮ್ಯಾರಥಾನ್

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮಂಗಳೂರು ಮಿಲಾಗ್ರಿಸ್ ಕಾಲೇಜು, ಐಸಿವೈಎಂ ಮಂಗಳೂರು ಡಯಸಿಸ್ ಹಾಗೂ ಮಂಗಳೂರು ರನ್ನರ್ಸ್ ಕ್ಲಬ್ ಸಹಯೋಗದಲ್ಲಿ 'ಅಪೆಕ್ಸ್ ರನ್ 2026' ಮ್ಯಾರಥಾನ್ ಮೇ 10ರಂದು ಬೆಳಗ್ಗೆ 5ಕ್ಕೆ ಮಿಲಾಗ್ರಿಸ್ ಕಾಲೇಜು ಆವರಣದಲ್ಲಿ ನಡೆಯಲಿದೆ ಎಂದು ಕಾಲೇಜಿನ ಪ್ರಾಂಶುಪಾಲ ಆಲ್ವಿನ್ ಸೆರಾವೋ ತಿಳಿಸಿದರು.

ಅವರು ಮಂಗಳವಾರ ಮಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

'ಅಪೆಕ್ಸ್ ರನ್ 2026' ನಗರ ಮಟ್ಟದ ಮ್ಯಾರಥಾನ್ ಆಗಿದ್ದು, ದೈಹಿಕ ಕ್ಷಮತೆ, ಆರೋಗ್ಯ ಜಾಗೃತಿ, ಯುವಜನರ ಭಾಗವಹಿಸುವಿಕೆ, ಸಮುದಾಯದ ಒಗ್ಗಟ್ಟು ಉತ್ತೇಜಿಸುವ ಉದ್ದೇಶ ಹೊಂದಿದ್ದು, ಸುಮಾರು 2,500 ಕ್ಕೂ ಹೆಚ್ಚು ಓಟಗಾರರು ಭಾಗವಹಿಸುವ ನಿರೀಕ್ಷೆಯಿದೆ. 2010ರಲ್ಲಿ ಸ್ಥಾಪಿತವಾದ ಮಿಲಾಗ್ರಿಸ್ ಕಾಲೇಜು 176 ವರ್ಷಗಳ ಶ್ರೇಷ್ಠ ಇತಿಹಾಸವನ್ನು ಹೊಂದಿರುವ ಮಿಲಾಗ್ರಿಸ್ ಶಿಕ್ಷಣ ಸಂಸ್ಥೆಗಳ ಘಟಕವಾಗಿದ್ದು, ಗುಣಮಟ್ಟದ ಮತ್ತು ಮೌಲ್ಯಾಧಾರಿತ ಶಿಕ್ಷಣ ನೀಡುವುದರ ಜೊತೆಗೆ ಸಮುದಾಯ ಸೇವೆಗೆ ಉತ್ತೇಜನ ನೀಡುತ್ತದೆ ಎಂದರು.

ಮೂರು ವಿಭಾಗಗಳಲ್ಲಿ ಮ್ಯಾರಥಾನ್ ನಡೆಯಲಿದ್ದು 3 ಕಿ.ಮೀ. ಓಟದಲ್ಲಿ (ನೋಂ.ಶುಲ್ಕ 250 ರು.) ಎಲ್ಲರೂ ಮುಕ್ತವಾಗಿ ಭಾಗವಹಿಸಬಹುದು. ನಗದು ಬಹುಮಾನ ಇರುವುದಿಲ್ಲ, ಭಾಗವಹಿಸುವ ಎಲ್ಲರಿಗೂ ಟಿಶರ್ಟ್, ಬಿಬ್ ಸಂಖ್ಯೆ, ಫಿನಿಷರ್‌ಪದಕ, ಉಪಹಾರ, ಭಾಗವಹಿಸುವಿಕೆ ಪ್ರಮಾಣಪತ್ರ ನೀಡಲಾಗುತ್ತದೆ. ಮಿಲಾಗ್ರಿಸ್ ಕಾಲೇಜು-ಅಥೆನಾ ಆಸ್ಪತ್ರೆ-ಯುನಿಟಿ ಆಸ್ಪತ್ರೆ-ಎಸ್.ಎಲ್. ಮಥಾಯಸ್ ರಸ್ತೆ-ಕಾಸಾ ಗ್ರಾಂಡೆ-ಸ್ಟರ್ರಾಕ್ ರಸ್ತೆ-ಏವರಿ ಜಂಕ್ಷನ್-ಮಿಲಾಗ್ರಿಸ್ ಕಾಲೇಜು ಮಾರ್ಗ ನಕ್ಷೆಯಾಗಿದೆ.



5 ಕಿ.ಮೀ. (ನೋಂ.ಶುಲ್ಕ 350 ರು.) ಮತ್ತು 10 ಕಿ.ಮೀ.(ನೋಂ. ಶುಲ್ಕ 450 ರು.) ಓಟದ ಪ್ರಥಮ ಬಹುಮಾನ 5 ಸಾವಿರ ರು. ಮತ್ತು ಟ್ರೋಫಿ, ದ್ವಿತೀಯ ಬಹುಮಾನ 3 ಸಾವಿರ ರು. ಮತ್ತು ಟ್ರೋಫಿ. ಮಿಲಾಗ್ರಿಸ್ ಕಾಲೇಜು-ಅಥೇನಾ ಆಸ್ಪತ್ರೆ-ಯುನಿಟಿ ಆಸ್ಪತ್ರೆ-ಫಾದರ್ ಮುಲ್ಲರ್‌ಆಸ್ಪತ್ರೆ-ಜೆಪ್ಪು-ಕೋಟಿ ಚೆನ್ನಯ್ಯ ವೃತ್ತ-ಕೆಎಂಸಿ ಆಸ್ಪತ್ರೆ-ಕಾಸಾ ಗ್ರಾಂಡೆ-ಸ್ಟರ್ರಾಕ್ ರಸ್ತೆ-ಏವರಿ ಜಂಕ್ಷನ್-ಮಿಲಾಗ್ರಿಸ್ ಕಾಲೇಜು ಓಟ ಮಾರ್ಗ ನಕ್ಷೆಯಾಗಿದೆ. ಭಾಗವಹಿಸುವ ಎಲ್ಲರಿಗೂ ಟಿಶರ್ಟ್, ಬಿಬ್ ಸಂಖ್ಯೆ, ಫಿನಿಷರ್‌ಪದಕ, ಉಪಹಾರ, ಓಟದ ಸಹಾಯ ವ್ಯವಸ್ಥೆ ಲಭ್ಯವಾಗುತ್ತದೆ. ಅಪೆಕ್ಸ್ ರನ್ 2026ಗಾಗಿ ನೋಂದಣಿಗಳು ಈಗಾಗಲೇ ಪ್ರಾರಂಭಗೊಂಡಿದ್ದು, ಆನ್‌ಲೈನ್ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು. ಕಾರ್ಯಕ್ರಮದಲ್ಲಿ ಮಾರ್ಗ ನಿರ್ವಹಣೆ, ನೀರಿನ ವ್ಯವಸ್ಥೆ, ಸ್ವಯಂಸೇವಕರ ಸಹಾಯ, ವೈದ್ಯಕೀಯ ನೆರವು, ಆಂಬ್ಯುಲೆನ್ಸ್ ಸೇವೆ, ಭದ್ರತಾ ವ್ಯವಸ್ಥೆಗಳನ್ನು ಒದಗಿಸಲಾಗುತ್ತದೆ. ಬೆಳಗ್ಗೆ 8 ಗಂಟೆಗೆ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಲಿದೆ ಎಂದರು.

ಅಪೆಕ್ಸ್ ರನ್ 2026 ಸಂಯೋಜಕ ಕ್ಲೈಡ್ ಡಿಸೋಜಾ, ಐಸಿಎಂ ಮಂಗಳೂರು ಡಯಸಿಸ್ ಅಧ್ಯಕ್ಷ ವಿಜೊಯ್ ಕರ್ಡೋಝ, ಕಾರ್ಯದರ್ಶಿ ಮರಿಯ ಡಿ ಸಿಲ್ವಾ, ಜೊತೆ ಕಾರ್ಯದರ್ಶಿ ಫ್ಲಾಯ್ಡ್ ಪಿಂಟೋ, ಉಪನ್ಯಾಸಕರಾದ ಡೆನ್ಸಿಲ್ ಡಿಕೋಸ್ಟಾ, ಮಮತಾ ಶೆಟ್ಟಿ ಇದ್ದರು.

ಬಸ್ ಟೈಮಿಂಗ್ ವಿಚಾರ ಹೊಡೆದಾಟ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಟೈಮಿಂಗ್ ವಿಚಾರಕ್ಕೆ ಸಂಬಂಧಿಸಿದಂತೆ ಎರಡು ಖಾಸಗಿ ಬಸ್‌ಗಳ ಚಾಲಕ ಮತ್ತು ನಿರ್ವಾಹಕ ಹೊಡೆದಾಡಿಕೊಂಡ ಘಟನೆ ಭಾನುವಾರ ಬಜಪೆ ಬಸ್ ನಿಲ್ದಾಣದಲ್ಲಿ ನಡೆದಿದೆ. ಟೈಮಿಂಗ್ ವಿಚಾರದಲ್ಲಿ ಈ ಹಿಂದೆಯೂ ಗಲಾಟೆ ನಡೆದಿದ್ದು, ಇದೀಗ ಮತ್ತೆ ಇವರೊಳಗೆ ಗಲಾಟೆ ನಡೆದಿದೆ ಎನ್ನಲಾಗಿದೆ. ಬಸ್ಸು ನಿಲ್ದಾಣದಲ್ಲಿ ಬಸ್‌ಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಿ ಸಾರ್ವಜನಿಕ ರಸ್ತೆ ಸಂಚಾರಕ್ಕೆ ಮತ್ತು ಸಾರ್ವಜನಿಕರ ನೆಮ್ಮದಿಗೆ ಭಂಗ ತರುವ ರೀತಿಯಲ್ಲಿ, ಒಂದು ಬಸ್‌ನ ಚಾಲಕ ಇನ್ನೊಂದು ಬಸ್‌ನ ನಿರ್ವಾಹಕ ಪರಸ್ಪರ ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ದೂಡಾಟ ಮತ್ತು ಹೊಡೆದಾಟ ಮಾಡಿಕೊಂಡಿದ್ದಾರೆ. ಈ ವೇಳೆಗೆ ಅಲ್ಲಿಗೆ ಆಗಮಿಸಿದ ಪೊಲೀಸರು, ಸಾರ್ವಜನಿಕ ಸ್ಥಳದಲ್ಲಿ ಗಲಾಟೆ ಮಾಡಬೇಡಿ ಎಂದು ತಿಳಿ ಹೇಳಿದರೂ ಮತ್ತೆ ಮತ್ತೆ ಅವಾಚ್ಯ ಶಬ್ದಗಳಿಂದ ಬೈದಾಡಿಕೊಂಡಿದ್ದಾರೆ. ಬಜಪೆ ಠಾಣೆಯಲ್ಲಿ ಈರ್ವರ ವಿರುದ್ಧ ಪ್ರಕರಣ ದಾಖಲಾಗಿದೆ.


ಐಪಿಎಲ್-2026 ಅಂಕಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ರದ್ದು	ನೆಟ್ ರನ್‌ರೇಟ್	ಅಂಕ
ಪಂಜಾಬ್	09	06	02	01	+0.855	13
ಆರ್‌ಸಿಬಿ	09	06	03	00	+1.420	12
ಹೈದ್ರಾಬಾದ್	10	06	04	00	+0.644	12
ರಾಜಸ್ಥಾನ	10	06	04	00	+0.510	12
ಗುಜರಾತ್	10	06	04	00	-0.147	12
ಚೆನ್ನೈ	09	04	05	00	+0.005	08
ಡೆಲ್ಲಿ	09	04	05	00	-0.895	08
ಕೋಲ್ಕತಾ	09	03	05	01	-0.539	07
ಮುಂಬೈ	10	03	07	00	-0.649	06
ಲಖನೌ	09	02	07	00	-1.076	04

ಸುದ್ದಿ ಸಿಂಚನ

ಕೈ ಬೆರಳಿನ ಸ್ಕ್ಯಾನಿಂಗ್‌ಗಾಗಿ ಆರ್‌ಸಿಬಿ ಬ್ಯಾಟರ್ ಸಾಲ್ಟ್ ಇಂಗ್ಲೆಂಡ್‌ಗೆ ವಾಪಸ್

ನವದೆಹಲಿ: ಏ.18ರಂದು ಡೆಲ್ಲಿ ವಿರುದ್ಧ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ವೇಳೆ ಕೈ ಬೆರಳಿನ



ಗಾಯಕ್ಕೆ ತುತ್ತಾಗಿದ್ದ ಆರ್‌ಸಿಬಿ ಬ್ಯಾಟರ್ ಫಿಲ್ ಸಾಲ್ಟ್ ಸ್ಕ್ಯಾನಿಂಗ್‌ಗಾಗಿ ಇಂಗ್ಲೆಂಡ್‌ಗೆ ಮರಳಿದ್ದಾರೆ. ಇಂಗ್ಲೆಂಡ್ ಕ್ರಿಕೆಟ್ ಮಂಡಳಿಯ ಮನವಿ ಮೇರೆಗೆ ಅವರು ತವರಿಗೆ ಹಿಂದಿರುಗಿದ್ದಾರೆ. ಈಗಾಗಲೇ 3 ಪಂದ್ಯಕ್ಕೆ ಗೈರಾಗಿರುವ ಸಾಲ್ಟ್ ಇನ್ನೂ ಕೆಲ ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ. ಆದರೆ ನಾಕೌಟ್‌ಗೂ ಮುನ್ನ ತಂಡ ಸೇರ್ಪಡೆಗೊಳ್ಳುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಕಿಂಗ್ಸ್‌ಗೆ ಸತತ 2 ಸೋಲು

ಅಹಮದಾಬಾದ್: ಈ ಐಪಿಎಲ್‌ನಲ್ಲಿ ಸತತ 6 ಪಂದ್ಯಗಳಲ್ಲಿ ಗೆದ್ದು ಬೀಗಿದ್ದ ಪಂಜಾಬ್ ಕಿಂಗ್ಸ್ ಈಗ ಸತತ 2ನೇ ಸೋಲು ಅನುಭವಿಸಿದೆ. ಭಾನುವಾರ ಗುಜರಾತ್ ಟೈಟಾನ್ಸ್ ವಿರುದ್ಧ ಪಂಜಾಬ್‌ಗೆ 4 ವಿಕೆಟ್ ಸೋಲು ಎದು ರಾಯಿತು. ಗುಜರಾತ್ 10 ಪಂದ್ಯದಲ್ಲಿ 6ನೇ ಗೆಲುವು ದಾಖಲಿಸಿತು. ಮೊದಲು ಬ್ಯಾಟ್ ಮಾಡಿದ ಪಂಜಾಬ್ 9 ವಿಕೆಟ್ ನಷ್ಟದಲ್ಲಿ 163 ರನ್ ಗಳಿಸಿತು. ಸ್ಟೋಯ್ನಿಸ್ ರನ್ ಗಳಿಸಿ 40ಕ್ಕೆ ಔಟಾದರೆ, ಸೂರ್ಯಾನ್ಶ್ ಶೆಡ್ಗೆ ಕೇವಲ 29 ಎಸೆತಗಳಲ್ಲಿ 57 ರನ್ ಸಿಡಿಸಿದರು. ಹೋಲ್ಡರ್ 4, ಸಿರಾಜ್, ರಬಾಡ ತಲಾ 2 ವಿಕೆಟ್ ಪಡೆದರು. ಸ್ಪರ್ಧಾತ್ಮಕ ಗುರಿ ಪಡೆದ ಗುಜರಾತ್‌ಗೆ ಸುದರ್ಶನ್, ವಾಷಿಂಗ್ಟನ್ ಗೆಲುವು ತಂದುಕೊಟ್ಟರು. ಸುದರ್ಶನ್ 41 ಎಸೆತಕ್ಕೆ 57 ರನ್, ವಾಷಿಂಗ್ಟನ್ 23 ಎಸೆತಕ್ಕೆ 40 ರನ್ ಗಳಿಸಿ 19.5 ಓವರ್‌ಗಳಲ್ಲಿ ಗೆಲ್ಲಿಸಿದರು.

ಪ್ಲೇ-ಆಫ್ ರೇಸ್ ಮತ್ತಷ್ಟು ರೋಚಕ

ಅಗ್ರ-4 ಸ್ಥಾನಕ್ಕೆ 7 ಟೀಂ ಪ್ರಬಲ ಪೈಪೋಟಿ | ಅಗ್ರ-2 ಸ್ಥಾನಕ್ಕೇ 5 ಟೀಂ ಫೈಟ್
ಉಳಿದ 3 ತಂಡಗಳು ಸ್ಪರ್ಧೆಯಲ್ಲಿದ್ದರೂ ಪ್ಲೇ-ಆಫ್ ಪ್ರವೇಶಿಸುವ ಹಾದಿ ಕಠಿಣ

ನವದೆಹಲಿ: ಈ ಬಾರಿ ಐಪಿಎಲ್‌ನಲ್ಲಿ ಅರ್ಧಕ್ಕಿಂತ ಹೆಚ್ಚು ಪಂದ್ಯಗಳು ಮುಕ್ತಾಯಗೊಂಡಿದ್ದು, ಇನ್ನು ಪ್ರತಿ ತಂಡಕ್ಕೆ ತಲಾ 4-5 ಪಂದ್ಯಗಳಷ್ಟೇ ಬಾಕಿಯಿವೆ. ಪ್ಲೇ-ಆಫ್ ಗೇರುವ ಅಗ್ರ-4 ತಂಡಗಳು ಯಾವುವು ಎಂಬ ಕುತೂಹಲ ಪ್ರತಿದಿನವೂ ಹೆಚ್ಚಾಗುತ್ತಿದ್ದು, ತಂಡಗಳ ನಡುವೆ ಬಿರುಸಿನ ಪೈಪೋಟಿ ಕಂಡುಬರುತ್ತಿವೆ.

ಟೂರ್ನಿಯ 10 ತಂಡಗಳ ಪೈಕಿ ಅಗ್ರ-4 ತಂಡ ಪ್ಲೇ-ಆಫ್‌ಗೇರಲಿವೆ. ಇದಕ್ಕೆ ಕನಿಷ್ಠ 16 ಅಂಕ ಅಗತ್ಯ. ಕೊನೆ 4 ಆವೃತ್ತಿಗಳಲ್ಲಿ, ಅಂದರೆ 10 ತಂಡಗಳ ಸ್ಪರ್ಧೆ ಆರಂಭಗೊಂಡ ಬಳಿಕ ಪ್ಲೇ-ಆಫ್ ಪ್ರವೇಶಿಸಿದ ತಂಡಗಳು ತಲಾ 16ಕ್ಕಿಂತ ಹೆಚ್ಚು ಅಂಕ ಗಳಿಸಿವೆ. 2024ರಲ್ಲಿ ಆರ್‌ಸಿಬಿ, ಚೆನ್ನೈ ತಲಾ 14 ಅಂಕ ಗಳಿಸಿದ್ದರೂ, ನೆಟ್ ರನ್ ರೇಟ್ ಆಧಾರದಲ್ಲಿ ಆರ್‌ಸಿಬಿ ಪ್ಲೇ-ಆಫ್ ಗೇರಿತ್ತು. ಹೀಗಾಗಿಯೇ ಯಾವುದೇ ತಂಡಕ್ಕೂ ಪ್ಲೇ-ಆಫ್‌ಗೇರಲು 16 ಎಂಬುದು ಸುರಕ್ಷಿತ ಅಂಕ. 14, 15 ಅಂಕ ಗಳಿಸಿ ಪ್ಲೇ-ಆಫ್ ಗೇರಬೇಕಿದ್ದರೆ ಪವಾಡವೇ ನಡೆಯಬೇಕು.



5 ತಂಡಕ್ಕೆ ತಲಾ 12+ ಅಂಕ: ಈ ಐಪಿಎಲ್‌ನಲ್ಲಿ ಅಗ್ರ-4 ಸ್ಥಾನಕ್ಕೆ 7 ತಂಡಗಳು ಪೈಪೋಟಿ ನಡೆಸುತ್ತಿದೆ. ಈ ಪೈಕಿ ಅಗ್ರ-2 ಸ್ಥಾನಕ್ಕೇ 5 ತಂಡಗಳ ಸ್ಪರ್ಧೆಯಿವೆ. ಪಂಜಾಬ್ 13, ಆರ್‌ಸಿಬಿ, ಹೈದರಾಬಾದ್, ರಾಜಸ್ಥಾನ, ಗುಜರಾತ್ ತಲಾ 12 ಅಂಕ ಹೊಂದಿವೆ. ಡೆಲ್ಲಿ, ಚೆನ್ನೈ ತಲಾ 9 ಪಂದ್ಯಗಳಲ್ಲಿ 8 ಅಂಕ ಸಂಪಾದಿಸಿವೆ. ಈ 2 ತಂಡಕ್ಕೂ ಪ್ಲೇ-ಆಫ್ ಅವಕಾಶಗಳಿವೆ. ಉಳಿದಂತೆ ಕೆಕೆಆರ್, ಮುಂಬೈ, ಲಖನೌ ತಂಡಗಳು ಸ್ಪರ್ಧೆಯಲ್ಲಿದ್ದರೂ ಪ್ಲೇ-ಆಫ್ ಹಾದಿ ಕಠಿಣಗೊಂಡಿದೆ.

ಟಾಪ್-2 ಮೇಲಿದೆ ಐದು ತಂಡಗಳ ಕಣ್ಣು

ಐಪಿಎಲ್‌ನಲ್ಲಿ ಅಗ್ರ-2 ಸ್ಥಾನ ಪಡೆದ ತಂಡಗಳು ಕ್ವಾಲಿಫೈಯರ್-1 ಆಡಲಿವೆ. ಇದರಲ್ಲಿ ಗೆದ್ದರೆ ನೇರವಾಗಿ ಫೈನಲ್‌ಗೇರಲಿದ್ದು, ಸೋತ ತಂಡಕ್ಕೆ ಮತ್ತೊಂದು ಅವಕಾಶ ಸಿಗಲಿದೆ. ಹೀಗಾಗಿಯೇ ಯಾವುದೇ ತಂಡಕ್ಕೂ ಪ್ಲೇ-ಆಫ್‌ಗೇರುವುದಷ್ಟೇ ಅಲ್ಲ, ಅಗ್ರ- 2ರಲ್ಲಿ ಸ್ಥಾನ ಪಡೆಯುವುದೇ ಪ್ರಮುಖ ಗುರಿಯಾಗಿರುತ್ತದೆ. ಈ ಬಾರಿ ಅಗ್ರ-2 ಸ್ಥಾನದ ರೇಸ್‌ನಲ್ಲಿ ಪಂಜಾಬ್, ಆರ್‌ಸಿಬಿ ಮುಂಚೂಣಿಯಲ್ಲಿವೆ. ಉಳಿದಂತೆ ಸನ್‌ರೈಸರ್ಸ್, ರಾಜಸ್ಥಾನ, ಗುಜರಾತ್ ಕೂಡಾ ಟಾಪ್-2 ಸ್ಥಾನಕ್ಕಾಗಿ ಹೋರಾಡಲಿವೆ.

ಯಾವ ತಂಡಕ್ಕೆ ಎಷ್ಟು ಗೆಲುವು ಅಗತ್ಯ?

ತಂಡ	ಅಂಕ	ಉಳಿದ ಪಂದ್ಯ	ಜಯ ಅಗತ್ಯ
ಪಂಜಾಬ್	13	5	2
ಆರ್‌ಸಿಬಿ	12	5	2
ಸನ್‌ರೈಸರ್ಸ್	12	4	2
ರಾಜಸ್ಥಾನ	12	4	2
ಗುಜರಾತ್	12	4	2
ಸಿಎಸ್‌ಕೆ	8	5	4
ಡೆಲ್ಲಿ	8	5	4
ಕೋಲ್ಕತಾ	7	5	5
ಮುಂಬೈ	6	4	4
ಲಖನೌ	4	5	5

ಲಖನೌ ವಿರುದ್ಧ 229 ರನ್ ಚೇಸ್ ಮಾಡಿ ಗೆದ್ದ ಮುಂಬೈ

ಪೂರನ್, ಮಾರ್ಷ್ ಅಬ್ಬರ, ಲಖನೌ 5ಕ್ಕೆ 228 ರನ್
ರಿಕೆಲ್ಟನ್ 63, ರೋಹಿತ್ 84, ಮುಂಬೈ 4ಕ್ಕೆ 229

ಮುಂಬೈ: ಲಖನೌ ಸೂಪರ್ ಜೈಂಟ್ಸ್ ನೀಡಿದ್ದ 229 ರನ್ ಗುರಿಯನ್ನು ಮುಂಬೈ ಇಂಡಿಯನ್ಸ್ ತಂಡ ಯಶಸ್ವಿಯಾಗಿ ಬೆನ್ನತ್ತಿ ಗೆದ್ದಿದೆ. ಇದರೊಂದಿಗೆ ಲಖನೌ ತಂಡದ ಪ್ಲೇ-ಆಫ್ ಕನಸು ಬಹುತೇಕ ಭಗ್ನಗೊಂಡಿದೆ. ಸದ್ಯ ಮುಂಬೈ ಆಡಿರುವ 10 ಪಂದ್ಯಗಳ ಪೈಕಿ 3ರಲ್ಲಿ ಗೆದ್ದಿದ್ದು, ಲಖನೌ 9 ಪಂದ್ಯಗಳಲ್ಲಿ ಕೇವಲ 2 ಗೆಲುವಿನೊಂದಿಗೆ ಕೊನೆ ಸ್ಥಾನದಲ್ಲೇ ಉಳಿದುಕೊಂಡಿದೆ.

ಮೊದಲು ಬ್ಯಾಟ್ ಮಾಡಿದ ಲಖನೌ ತಂಡ 5 ವಿಕೆಟ್ ನಷ್ಟದಲ್ಲಿ 228 ರನ್ ಗಳಿಸಿತು. ನಿಕೋಲಸ್ ಪೂರನ್ 21 ಎಸೆತಕ್ಕೆ 63, ಮಿಚೆಲ್ ಮಾರ್ಷ್ 25 ಎಸೆತಕ್ಕೆ 44, ಹಿಮ್ಮತ್ ಸಿಂಗ್ 31 ಎಸೆತಕ್ಕೆ 49 ರನ್ ಸಿಡಿಸಿದರು. ದೊಡ್ಡ ಗುರಿಯನ್ನು ಮುಂಬೈ 18.4 ಓವರ್‌ಗಳಲ್ಲಿ ಬೆನ್ನತ್ತಿ ಜಯಗಳಿಸಿತು. ಆರಂಭಿಕ ಜೋಡಿ ರ್‍ಯಾನ್ ರಿಕೆಲ್ಟನ್ ಹಾಗೂ ರೋಹಿತ್ ಶರ್ಮಾ ಮೊದಲ ವಿಕೆಟ್‌ಗೆ 10.5 ಓವರ್‌ಗಳಲ್ಲಿ 143 ರನ್ ಸೇರಿಸಿತು. ರೋಹಿತ್ 84, ರಿಕೆಲ್ಟನ್ 83 ರನ್ ಗಳಿಸಿದರು. ಬಳಿಕ ನಮನ್, ಜ್ಯಾಕ್ಸ್ ತಂಡವನ್ನು ಗೆಲ್ಲಿಸಿದರು.


ರೋಹಿತ್

ಸ್ಕೋರ್: ಲಖನೌ 20 ಓವರಲ್ಲಿ 228/5 (ಪೂರನ್ 63, ಮಾರ್ಷ್ 44, ಹಿಮ್ಮತ್ 40, ಬಾಶ್ 2-20), ಮುಂಬೈ 18.4 ಓವರಲ್ಲಿ 229/4 (ರೋಹಿತ್ 84, ರಿಕೆಲ್ಟನ್ 83, ಸಿದ್ದಾರ್ಥ್ 2-47)

ಚೆನ್ನೈ vs ಡೆಲ್ಲಿ ನಡುವೆ ಜಯಕ್ಕಾಗಿ ಹೋರಾಟ

ನವದೆಹಲಿ: ಈ ಬಾರಿ ಐಪಿಎಲ್‌ನಲ್ಲಿ ಪ್ಲೇ-ಆಫ್ ಸ್ಥಾನದ ರೇಸ್‌ನಲ್ಲಿ ಉಳಿದುಕೊಳ್ಳಲು ಹೋರಾಡುತ್ತಿರುವ 5 ಬಾರಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಮಂಗಳವಾರ ಪರಸ್ಪರ ಸೆಣಸಾಡಲಿವೆ. ಇದರಲ್ಲಿ ಗೆದ್ದ ತಂಡದ ನಾಕೌಟ್ ಕನಸು ಜೀವಂತವಾಗಿರಲಿದ್ದು, ಸೋಲುವ ತಂಡ ಹಾದಿ ಕಠಿಣಗೊಳ್ಳಲಿದೆ.

ಚೆನ್ನೈ ಹಾಗೂ ಡೆಲ್ಲಿ ತಂಡಗಳು ತಲಾ 9 ಪಂದ್ಯಗಳನ್ನಾಡಿವೆ. ತಲಾ 4ರಲ್ಲಿ ಗೆದ್ದಿರುವ ತಂಡ 8 ಅಂಕ ಸಂಪಾದಿಸಿ ಕ್ರಮವಾಗಿ 6 ಮತ್ತು 7ನೇ ಸ್ಥಾನಗಳಲ್ಲಿವೆ. ಚೆನ್ನೈ ಅಸ್ಥಿರ ಆಟವಾಡುತ್ತಿದ್ದು, ಒಂದರಲ್ಲಿ ಉತ್ತಮ ಪ್ರದರ್ಶನ ನೀಡಿ ಗೆದ್ದರೆ ಮುಂದಿನ ಪಂದ್ಯದಲ್ಲಿ ತೀರಾ ಕಳಪೆ ಆಟವಾಡುತ್ತಿದೆ. ಮತ್ತೊಂದೆಡೆ ಡೆಲ್ಲಿ ತಂಡ ಹ್ಯಾಟ್ರಿಕ್ ಸೋಲಿನ ಬಳಿಕ ಕಳೆದ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್‌ಅನ್ನು ಮಣಿಸಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

ಪಂದ್ಯ ಆರಂಭ: ಸಂಜೆ 7.30ಕ್ಕೆ

ತುಮಕೂರು ಟೆನಿಸ್: ಸ್ನಿಗ್ಧಾ ಮುಖ್ಯ ಸುತ್ತಿಗೆ

ತುಮಕೂರು: ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಟೂರ್ನಿಯಲ್ಲಿ ಕರ್ನಾಟಕದ ಸ್ನಿಗ್ಧಾ ಕಾಂತ ಮುಖ್ಯ ಸುತ್ತು ಪ್ರವೇಶಿಸಿದ್ದಾರೆ. ಸೋಮವಾರ ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ಸ್ನಿಗ್ಧಾ ಅವರು ಭಾರತದವರೇ ಆದ ವನ್ಶಿತಾ ಪಠಾಣಿಯಾ ವಿರುದ್ಧ ಗೆದ್ದರು. ಪಂದ್ಯದ ನಡುವೆ ವನ್ಶಿತಾ ಗಾಯಗೊಂಡ ಕಾರಣ ಸ್ನಿಗ್ಧಾ ವಿಜೇತರಾದರು. ಉಳಿದಂತೆ ಬೇಲಾ ತಮ್ಹಾಣ್ಕರ್, ಲಕ್ಷ್ಮಿ ಸಿರಿ ದಂಡು, ಚೆವಿಕಾ ರೆಡ್ಡಿ, ಕಶಿಶ್ ಭಾಟಿಯಾ, ಐಶ್ವರ್ಯಾ ಜಾಧವ್, ಡ್ಯಾನಿಕಾ ಫೆರ್ನಾಂಡೊ, ಶ್ರೀಮನ್ಯ ರೆಡ್ಡಿ ಕೂಡಾ ಪ್ರಧಾನ ಸುತ್ತು ತಲುಪಿದರು.

ಇನ್ನು, ಸೋಮವಾರ ನಡೆದ ಡ್ರಾ ಸಮಾರಂಭದಲ್ಲಿ ಲಿಥುವಾನಿಯಾ ದೇಶದ ಜಸ್ಟಿನಾ ಮಿಕುಲ್‌ಸ್ಕೈಟ್ ಅಗ್ರ ಶ್ರೇಯಾಂಕ ಪಡೆದರೆ, ಪೋಲೆಂಡ್‌ನ ಜುಜುನಾ ಪಾವ್ಲಿಕೊವ್‌ಸ್ಕಾ 2ನೇ, ಭಾರತದ ವೈದೇಹಿ ಚೌಧರಿ, ಝೀಲ್ ದೇಸಾಯಿ ಕ್ರಮವಾಗಿ 3 ಮತ್ತು 4ನೇ ಶ್ರೇಯಾಂಕ ಪಡೆದುಕೊಂಡರು.

ಈ ಸಲ ಐಪಿಎಲ್‌ನಲ್ಲಿ ಧೋನಿ ಆಟ ಡೌಟ್?

ನವದೆಹಲಿ: ಚೆನ್ನೈ ಸೂಪರ್ ಕಿಂಗ್ಸ್ ತಂಡದ ಹಿರಿಯ ಆಟಗಾರ ಎಂ.ಎಸ್.ಧೋನಿ ಈ ಬಾರಿ



ಐಪಿಎಲ್‌ನಲ್ಲಿ ಆಡುವುದೇ ಅನುಮಾನ ಎಂದು ಹೇಳಲಾಗುತ್ತಿದೆ. ಸ್ನಾಯು ಸೆಳೆತಕ್ಕೆ ಒಳಗಾಗಿರುವ ಧೋನಿ ಈ ವರ್ಷ ಒಂದೂ ಪಂದ್ಯದಲ್ಲಿ ಆಡಿಲ್ಲ. ಅವರು ಮಂಗಳವಾರದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪಂದ್ಯಕ್ಕಾಗಿ ನವದೆಹಲಿಗೂ ಪ್ರಯಾಣಿಸಿಲ್ಲ. ಇದರೊಂದಿಗೆ ಅವರ ಕಮ್‌ಬ್ಯಾಕ್ ಸಾಧ್ಯತೆ ಮತ್ತಷ್ಟು ಕ್ಷೀಣಿಸಿದೆ ಎಂದು ವರದಿಯಾಗಿದೆ.

ಧೋನಿ ಬಗ್ಗೆ ಮಾಹಿತಿ ನೀಡಿರುವ ತಂಡದ ಬೌಲಿಂಗ್ ಕೋಚ್ ಎರಿಕ್ ಸಿಮೊನ್ಸ್, 'ಧೋನಿ ನಮ್ಮ ಜೊತೆ ನವದೆಹಲಿಗೆ ಪ್ರಯಾಣಿಸಿಲ್ಲ. ಅವರು ಚೇತರಿಸಿಕೊಳ್ಳುತ್ತಿದ್ದರೂ ಆಟಕ್ಕೆ ಯಾವ ಸಿದ್ಧವಾಗುತ್ತಾರೆ ಎಂಬುದು ಅವರಿಗಷ್ಟೇ ಗೊತ್ತು' ಎಂದಿದ್ದಾರೆ.

ಬಿಎಫ್‌ಸಿ vs ಒಡಿಶಾ ಮ್ಯಾಚ್ 1-1ರಲ್ಲಿ ಡ್ರಾ

ಭುವನೇಶ್ವರ: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್ಬಾಲ್ ಟೂರ್ನಿಯಲ್ಲಿ ಸೋಮವಾರ ಮಾಜಿ ಚಾಂಪಿಯನ್ ಬೆಂಗಳೂರು ಎಫ್‌ಸಿ ತಂಡ ಒಡಿಶಾ ಎಫ್‌ಸಿ ವಿರುದ್ಧ 1-1 ಗೋಲುಗಳಿಂದ ಡ್ರಾಗೆ ತೃಪ್ತಿಪಟ್ಟುಕೊಂಡಿದೆ.

ಪಂದ್ಯದ 34ನೇ ನಿಮಿಷದಲ್ಲೇ ಒಡಿಶಾ ಗೋಲು ಬಾರಿಸಿದರೂ, 48ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಅವಕಾಶವನ್ನು ಸ್ಯಾಂಚೆಜ್ ಗೋಲಾಗಿ ಪರಿವರ್ತಿಸುವ ಮೂಲಕ ಬಿಎಫ್‌ಸಿ ತಂಡದ ಸಮಬಲಕ್ಕೆ ಕಾರಣರಾದರು. ಈ ಪಂದ್ಯ ಡ್ರಾದಿಂದಾಗಿ ಬಿಎಫ್‌ಸಿ 1 ಅಂಕ ಗಳಿಸಿದ್ದು, ಆಡಿರುವ 11 ಪಂದ್ಯಗಳಲ್ಲಿ ಒಟ್ಟು 17 ಅಂಕಗಳೊಂದಿಗೆ 6ನೇ ಸ್ಥಾನದಲ್ಲೇ ಉಳಿದುಕೊಂಡಿದೆ. ತಂಡಕ್ಕೆ ಲೀಗ್ ಹಂತದಲ್ಲಿ ಇನ್ನು 2 ಪಂದ್ಯಗಳು ಉಳಿದಿದ್ದು, ಪ್ಲೇ-ಆಫ್ ಪ್ರವೇಶಿಸಬೇಕಿದ್ದರೆ 2 ಪಂದ್ಯಗಳಲ್ಲೂ ಗೆಲ್ಲಬೇಕಿದೆ. ಮೇ 9ಕ್ಕೆ ಜಮ್ಶೆಡ್‌ಪುರ ಹಾಗೂ ಮೇ 17ಕ್ಕೆ ಚೆನ್ನೈಯಿನ್ ತಂಡದ ವಿರುದ್ಧ ಆಡಲಿದೆ.

ಸತತ 5 ಎಟಿಪಿ 1000 ಕಪ್: ಸಿನ್ನರ್ ದಾಖಲೆ

ಮ್ಯಾಡ್ರಿಡ್: ಇಟಲಿಯ ತಾರಾ ಟೆನಿಸಿಗ ಯಾನಿಕ್ ಸಿನ್ನರ್ ಮತ್ತೊಂದು ದಾಖಲೆ ಬರೆದಿದ್ದಾರೆ. ಸತತವಾಗಿ 5 ಬಾರಿ ಎಟಿಪಿ ಮಾಸ್ಟರ್ಸ್ 1000 ಟೂರ್ನಿಯಲ್ಲಿ ಚಾಂಪಿಯನ್ ಆದ ಮೊದಲ ಟೆನಿಸಿಗ ಖ್ಯಾತಿಗೆ ಪಾತ್ರರಾಗಿದ್ದಾರೆ.

ಭಾನುವಾರ ಅವರು ಮ್ಯಾಡ್ರಿಡ್ ಓಪನ್ ಫೈನಲ್‌ನಲ್ಲಿ ಜರ್ಮನಿಯ ಆಟಗಾರ ಅಲೆಕ್ಸಾಂಡರ್ ಜ್ವೆರೆವ್‌ರನ್ನು ಸೋಲಿಸಿ ಟ್ರೋಫಿ ತಮ್ಮದಾಗಿಸಿಕೊಂಡರು. ಇದು ಸಿನ್ನರ್ ಗೆದ್ದ ಸತತ 5ನೇ ಹಾಗೂ ಒಟ್ಟಾರೆ 9ನೇ ಎಟಿಪಿ ಮಾಸ್ಟರ್ಸ್ 1000 ಕಪ್. ಈ ಮೂಲಕ ಸತತವಾಗಿ ಅತಿ ಹೆಚ್ಚು ಬಾರಿ ಈ ಸಾಧನೆ ಮಾಡಿದ ಟೆನಿಸಿಗರ ಪಟ್ಟಿಯಲ್ಲಿ ಸ್ಪೇನ್‌ನ ದಿಗ್ಗಜ ರಾಫೆಲ್ ನಡಾಲ್ ಹಾಗೂ ಸರ್ಬಿಯಾದ ನೋವಾಕ್ ಜೋಕೋವಿಚ್‌ರನ್ನು ಹಿಂದಿಕ್ಕಿದರು. ನಡಾಲ್ 2013ರಲ್ಲಿ ಸತತವಾಗಿ 4 ಎಟಿಪಿ ಮಾಸ್ಟರ್ಸ್ 1000 ಟೂರ್ನಿಯಲ್ಲಿ ಗೆದ್ದಿದ್ದರು. ಜೋಕೋವಿಚ್ ಅವರು ಒಟ್ಟು 3 ಬಾರಿ ಸತತವಾಗಿ 4 ಟ್ರೋಫಿ ಗೆದ್ದಿದ್ದರು.

ಇತರೆ

ಮುಸ್ಲಿಂ ಒಳ ಹೊಡೆತವಿದ್ದರೂ ಶಾಮನೂರು ಮೊಮ್ಮಗ ಜಯ

ಮೊದಲ ಪುಟದಿಂದ

ಪಕ್ಷೇತರರಾದ ಖಾದರ್‌ಆದಿಲ್ ಬಾಷಾ 1081 ಮತ, ಡಿ. ಸೈಯದ್ ರಿಯಾಜ್ 1186 ಮತ ಪಡೆದಿದ್ದನ್ನು ಬಿಟ್ಟರೆ, ಉಳಿದ ಯಾವುದೇ ಅಭ್ಯರ್ಥಿಗಳು ನಾಲ್ಕು ಅಂಕಿಗಳ ಮತ ಪಡೆಯಲಿಲ್ಲ. ಮೊದಲ 7 ಸುತ್ತಿನ ಮತ ಎಣಿಕೆಯಲ್ಲಿ ಬಿಜೆಪಿ ಮುನ್ನಡೆ ಸಾಧಿಸಿತ್ತು. ಆದರೆ, 8ನೇ ಸುತ್ತಿನ ಮತ ಎಣಿಕೆ ಬಳಿಕ ಸಮರ್ಥ ಅವರು ಮುನ್ನಡೆ ಸಾಧಿಸಲು ಆರಂಭಿಸಿದ್ದು, ಅಂತಿಮವಾಗಿ ಗೆಲುವಿನ ನಗೆ ಬೀರಿದರು.

ಕಿರಿಯ ಶಾಸಕ: ದೇಶದಲ್ಲೇ ಅತಿ ಹಿರಿಯ ವಯಸ್ಸಿನ ಶಾಸಕರೆಂಬ ಹೆಗ್ಗಳಿಕೆ ಹೊಂದಿದ್ದ ಶಾಮನೂರು ಶಿವಶಂಕರಪ್ಪನವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಏ.9ರಂದು ಉಪ ಚುನಾವಣೆ ನಡೆದಿತ್ತು. ಇಲ್ಲಿ ಮುಸ್ಲಿಂ ಸಮುದಾಯ ಕಾಂಗ್ರೆಸ್ ಟಿಕೆಟ್‌ಗೆ ಪಟ್ಟು ಹಿಡಿದಿತ್ತು. ಶಾಮನೂರು ಕುಟುಂಬಕ್ಕೆ ಟಿಕೆಟ್ ನೀಡಿದ ಹಿನ್ನೆಲೆಯಲ್ಲಿ ಸ್ಥಳೀಯ ಅಲ್ಪಸಂಖ್ಯಾತ ನಾಯಕರಲ್ಲಿ ಅಸಮಾಧಾನ ಸ್ಫೋಟಗೊಂಡಿತ್ತು. ಒಟ್ಟು 25 ಅಭ್ಯರ್ಥಿಗಳು ಕಣದಲ್ಲಿದ್ದು, ಆ ಪೈಕಿ 14 ಮುಸ್ಲಿಂ ಅಭ್ಯರ್ಥಿಗಳು ಕೈ ಅಭ್ಯರ್ಥಿಗೆ ಸೆಡ್ಡು ಹೊಡೆದು ಸ್ಪರ್ಧೆಗಿಳಿದಿದ್ದರು. ಅಲ್ಪಸಂಖ್ಯಾತ ಮುಖಂಡರ ಅಪಸ್ವರದ ಮಧ್ಯೆಯೂ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಸಮರ್ಥ ಅವರು ಜಯ ಸಾಧಿಸುವ ಮೂಲಕ ಕಾಂಗ್ರೆಸ್ ಮತ್ತು ಶಾಮನೂರುಕುಟುಂಬದಪಾರಮ್ಯವನ್ನುಮುಂದುವರಿಸಿದ್ದಾರೆ. ಇದರೊಂದಿಗೆದಕ್ಷಿಣಕ್ಷೇತ್ರ ಕಾಂಗ್ರೆಸ್ಸಿನಭದ್ರಕೋಟೆಎಂಬುದನ್ನು ಮತ್ತೊಮ್ಮೆ ಪುಷ್ಟೀಕರಿಸಿದ್ದಾರೆ. ಇದೀಗ ರಾಜ್ಯದಲ್ಲೇ ಅತಿ ಕಿರಿಯ ಶಾಸಕ ಎಂಬ ಕೀರ್ತಿಗೆ ಸಮರ್ಥ ಪಾತ್ರರಾಗಿರುವುದು ವಿಶೇಷ.


ಗೆಲುವಿನ ಬಳಿಕ ಶಾಸಕ ಸಮರ್ಥ್ ಕುಟುಂಬದೊಂದಿಗೆ ವಿಜಯೋತ್ಸವ ಆಚರಿಸಿದರು. ತಂದೆ ಮಲ್ಲಿಕಾರ್ಜುನ್, ತಾಯಿ ಪ್ರಭಾ ಇದ್ದರು.

> ದಾವಣಗೆರೆಯ ಜನ ನನ್ನನ್ನು ಗೆಲ್ಲಿಸುವ ಮೂಲಕ ನನಗೆ ಬೆಣ್ಣೆದೋಸೆ ತಿನ್ನಿಸಿದ್ದಾರೆ. ಜನರು ನನ್ನ ಮೇಲಿಟ್ಟ ವಿಶ್ವಾಸ ನನಗೆ ಸಂತೋಷ ತಂದಿದೆ. ನಾನು ಮಾತುಗಳಿಂದಲ್ಲ, ಕೆಲಸದ ಮೂಲಕ ಉತ್ತರ ನೀಡುತ್ತೇನೆ. ಮುಂದಿನ 2 ವರ್ಷದಲ್ಲಿ ದಕ್ಷಿಣ ಕ್ಷೇತ್ರವನ್ನು ಅಭಿವೃದ್ಧಿಯ ದಾರಿಗೆ ಕೊಂಡೊಯ್ಯುವೆ.
>
> • **ಸಮರ್ಥ ಎಂ.ಶಾಮನೂರು** ನೂತನ ಶಾಸಕ

ನಿರೀಕ್ಷೆಯಂತೆಯೇ ಮೇಟಿ ಪುತ್ರಗೆ ಜಯ

ಮೊದಲ ಪುಟದಿಂದ

ಬಾಗಲಕೋಟೆಯಲ್ಲಿ ಕಾಂಗ್ರೆಸ್‌ನ ಎಚ್.ವೈ. ಮೇಟಿ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಏ.9ರಂದು ಮತದಾನ ನಡೆದಿತ್ತು. ಮೇಟಿ ಕುಟುಂಬದ ಮಕ್ಕಳಾದ ಮಲ್ಲಿಕಾರ್ಜುನ ಮೇಟಿ ಮತ್ತು ಉಮೇಶ್ ಮೇಟಿ ನಡುವೆ ಟಿಕೆಟ್‌ಗಾಗಿ ತೀವ್ರ ಪೈಪೋಟಿ ಏರ್ಪಟ್ಟು, ಭಿನ್ನಮತಕ್ಕೆ ಕಾರಣವಾಗಿತ್ತು. ಅಂತಿಮವಾಗಿ ಕಾಂಗ್ರೆಸ್ ಉಮೇಶ್ ಮೇಟಿಗೆ ಟಿಕೆಟ್ ನೀಡಿದ್ದು, ಅವರೀಗ 22,332 ಮತಗಳ ಅಂತರ ದಿಂದ ಗೆಲುವಿನ ನಗೆ ಬೀರಿದ್ದಾರೆ. ಒಟ್ಟು 9 ಅಭ್ಯರ್ಥಿಗಳು ಕಣದಲ್ಲಿದ್ದು, ಉಳಿದವರು ಠೇವಣಿ ಉಳಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ.

ಮೊದಲ ಬಾರಿಗೆ ವಿಧಾನಸಭೆಗೆ: ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಬಿಜೆಪಿಯ ವೀರಣ್ಣ ಚರಂತಿಮಠ ಅವರನ್ನು 22,332 ಮತಗಳ ಅಂತರದಿಂದ ಸೋಲಿಸಿ ಕಾಂಗ್ರೆಸ್‌ನ ಉಮೇಶ ಮೇಟಿ ಮೊದಲ ಬಾರಿಗೆ ವಿಧಾನಸಭೆ ಮೆಟ್ಟಿಲು ತುಳಿದಿದ್ದಾರೆ. ಅಭೂತಪೂರ್ವ ಗೆಲುವು ಕಂಡ ಉಮೇಶ ಮೇಟಿಗೆ ಅನುಕಂಪದ ಅಲೆ, ಜೊತೆಗೆ ಆಡಳಿತಾರೂಢ ಸರ್ಕಾರ ಜೊತೆಯಾಗಿದ್ದರಿಂದ ಈ ಗೆಲುವು ಸಾಧ್ಯವಾಗಿದೆ.


ಕಾಂಗ್ರೆಸ್ ಕಾರ್ಯಕರ್ತರೊಂದಿಗೆ ಗೆಲುವಿನ ಸಂಭ್ರಮ ಆಚರಿಸಿದ ಶಾಸಕ ಉಮೇಶ ಮೇಟಿ.

> ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ನಗರ ಹಾಗೂ ಗ್ರಾಮೀಣ ಭಾಗದ ಎಲ್ಲಾ ಮತದಾರರಿಗೆ ಧನ್ಯವಾದಗಳು. ಈ ಗೆಲುವು ನನ್ನ ವೈಯಕ್ತಿಕ ಸಾಧನೆಯಲ್ಲ. ಇಡೀ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಹಾಗೂ ಗ್ಯಾರಂಟಿ ಸರಕಾರದ ಗೆಲುವಾಗಿದೆ.
>
> • **ಉಮೇಶ ಮೇಟಿ** ನೂತನ ಶಾಸಕ

3 ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ: ರಾಜ್ಯಾದ್ಯಂತ ಸಂಭ್ರಮ

ಪಟಾಕಿ ಸಿಡಿಸಿ, ಚುರುಮುರಿ, ಸಿಹಿ ಹಂಚಿ ವಿಜಯೋತ್ಸವ | ವಿಜಯೇಂದ್ರ, ಅಶೋಕ್, ಛಲವಾದಿ ಸಂತಸ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪಂಚ ರಾಜ್ಯಗಳ ಪೈಕಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಬಿಜೆಪಿ ಕಾರ್ಯಕರ್ತರ ಸಂಭ್ರಮ ಮುಗಿಲು ಮುಟ್ಟಿದೆ.

ಬೆಂಗಳೂರಿನ ಮಲ್ಲೇಶ್ವರಂನಲ್ಲಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ನೇತೃತ್ವದಲ್ಲಿ ಸಂಭ್ರಮಾಚರಣೆ ನಡೆಯಿತು.

ಮಂಗಳೂರಿನಲ್ಲಿ ನಗರದ ಪಿವಿಎಸ್ ವೃತ್ತ ಬಳಿಯ ಬಿಜೆಪಿ ಜಿಲ್ಲಾ ಕಾರ್ಯಾಲಯದ ಮುಂಭಾಗ ಬಿಜೆಪಿ ಕಾರ್ಯಕರ್ತರು ಸೋಮವಾರ ವಿಜಯೋತ್ಸವ ಆಚರಿಸಿದರು. ಪಶ್ಚಿಮ ಬಂಗಾಳದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರ ಸಂದರ್ಭ ಜಲ್‌ಮುರಿ ಅಂಗಡಿಗೆ ಭೇಟಿ ನೀಡಿ ಜಲ್‌ಮುರಿ ಸವಿದಿರುವುದು ಚುನಾವಣಾ ಪ್ರಚಾರದಲ್ಲಿ ವ್ಯಾಪಕ ಜನಪ್ರಿಯತೆ ಗಳಿಸಿದ ಹಿನ್ನೆಲೆಯಲ್ಲಿ ಬಿಜೆಪಿ ವಿಜಯೋತ್ಸವ ಸಂದರ್ಭದಲ್ಲೂ ಕಾರ್ಯಕರ್ತರು ಚುರುಮುರಿ ಹಂಚಿ ಸಂಭ್ರಮಿಸಿದರು. ಮಹಿಳಾ ಕಾರ್ಯಕರ್ತರು ಕುಣಿದು ಸಂತಸ ಹಂಚಿಕೊಂಡರು. ಸಿಹಿ ಹಂಚಿದರು. ಬೀದರ್‌ನಲ್ಲಿ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ಅವರ ನೇತೃತ್ವದಲ್ಲಿ ಅಭಿಮಾನಿಗಳು ಭರ್ಜರಿ ವಿಜಯೋತ್ಸವ ಆಚರಿಸಿದರು.

ಹುಬ್ಬಳ್ಳಿಯ ದುರ್ಗದಬೈಲ್‌ನಲ್ಲಿ ನಡೆದ ಬಿಜೆಪಿ ವಿಜಯೋತ್ಸವದಲ್ಲಿ ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಶಾಸಕ ಮಹೇಶ ಟೆಂಗಿನಕಾಯಿ ಮೇಯರ್ ಜ್ಯೋತಿ ಪಾಟೀಲ ಪಾಲ್ಗೊಂಡಿದ್ದರು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಭಾವಚಿತ್ರ ಹಿಡಿದು ಕಾರ್ಯಕರ್ತರು ಬಿಜೆಪಿ ಪರ ಘೋಷಣೆಗಳನ್ನು ಕೂಗಿದರು. ಗದಗದಲ್ಲಿ ನಡೆದ ವಿಜಯೋತ್ಸವದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಪಾಲ್ಗೊಂಡಿದ್ದರು. ಹಾವೇರಿಯ ಎಂ.ಜಿ.ವೃತ್ತ, ಕೊಪ್ಪಳದ ಬಸವೇಶ್ವರ ವೃತ್ತದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ವಿತರಿಸಿದರು.


ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಮೊದಲ ಬಾರಿಗೆ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ಕಚೇರಿಯ ಬಳಿ ರಾಜ್ಯ ನಾಯಕರು ಚುರುಮುರಿಯನ್ನು ತಯಾರಿಸಿ ವಿತರಿಸುವ ಮೂಲಕ ಸಂಭ್ರಮಿಸಿದರು. ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಮಂಡಲದ ಉಭಯ ಸದನಗಳ ಪ್ರತಿಪಕ್ಷಗಳ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಮುಖಂಡರಾದ ಸಿ.ಟಿ.ರವಿ, ಡಾ| ಸಿ.ಎನ್.ಅಶ್ವತ್ಥನಾರಾಯಣ ಉಪಸ್ಥಿತರಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ಬಂಗಾಳದಲ್ಲಿ ಚುನಾವಣಾ ಪ್ರಚಾರದ ವೇಳೆ ಚುರುಮುರಿ ಸೇವಿಸಿದ್ದರು.

ಉಪಚುನಾವಣೆ ಜಯ: ಕೈ ವಿಜಯೋತ್ಸವ

ಸಿಹಿ ಹಂಚಿ, ಪಟಾಕಿ ಸಿಡಿಸಿ ಕಾಂಗ್ರೆಸ್ ಕಾರ್ಯಕರ್ತರಿಂದ ಸಂಭ್ರಮಾಚರಣೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮರಳಿ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ಹಾಗೂ ರಾಜ್ಯದ ಬಾಗಲಕೋಟೆ, ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಕಾಂಗ್ರೆಸ್‌ನಿಂದ ವಿಜಯೋತ್ಸವ ಆಚರಿಸಲಾಯಿತು.


ಬೆಂಗಳೂರಿನಲ್ಲಿ ಕೆಪಿಸಿಸಿ ಕಚೇರಿ ಮುಂಭಾಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಸಂಭ್ರಮಾಚರಣೆ ನಡೆಸಲಾಯಿತು.

ಹುಬ್ಬಳ್ಳಿಯ ಗೋಕುಲ್ ರಸ್ತೆಯ ಖಾಸಗಿ ಹೋಟೆಲ್ ಎದುರು ಗುಲಾಲ ಎರಚಿ, ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು, ಪರಸ್ಪರ ಸಿಹಿ ತಿನಿಸಿ ಸಂಭ್ರಮಿಸಿದರು. ಕಾಂಗ್ರೆಸ್ ಹಾಗೂ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಪರ ಘೋಷಣೆ ಕೂಗಿ, ಹರ್ಷ ವ್ಯಕ್ತಪಡಿಸಿದರು.

ದಾವಣಗೆರೆಯಲ್ಲಿ ನೂತನ ಶಾಸಕ ಸಮರ್ಥ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ನೇತೃತ್ವದಲ್ಲಿ ವಿಜಯೋತ್ಸವ ಆಚರಿಸಲಾಯಿತು. ದಾವಣಗೆರೆಯ ಕಲ್ಲೇಶ್ವರ ಮಿಲ್ ಆವರಣ ದಲ್ಲಿರುವ ತಮ್ಮ ಅಜ್ಜ ಡಾ.ಶಾಮನೂರು ಶಿವಶಂಕರಪ್ಪನವರ ಸಮಾಧಿ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಸಮರ್ಥ್ ಪೂಜೆ ಸಲ್ಲಿಸಿದರು.

ಬಾಗಲಕೋಟೆಯಲ್ಲಿ ನೂತನ ಶಾಸಕ ಉಮೇಶ ಮೇಟಿ, ಸಚಿವ ಆರ್. ಬಿ.ತಿಮ್ಮಾಪೂರ, ಸತೀಶ್ ಜಾರಕಿಹೊಳಿ ನೇತೃತ್ವದಲ್ಲಿ ಸಂಭ್ರಮಾಚರಣೆ ನಡೆಯಿತು.

ಬಾಗಲಕೋಟೆ ಜಿಲ್ಲೆ ಕಮತಗಿ, ಲೋಕಾಪುರದ ಬಸವೇಶ್ವರ ವೃತ್ತದಲ್ಲಿ ಕಾಂಗ್ರೆಸ್ ಯುವ ಮುಖಂಡರು ಪಟಾಕಿ ಸಿಡಿಸಿ ಸಚಿವ ಸತೀಶ್ ಜಾರಕಿಹೊಳಿ ಮತ್ತು ಕೆಪಿಸಿಸಿ ಯೂತ್ ಪ್ರಧಾನ ಕಾರ್ಯದರ್ಶಿ ವಿನಯ ತಿಮ್ಮಾಪುರ ಅವರ ಭಾವಚಿತ್ರ ಹಿಡಿದು ಸಂಭ್ರಮಿಸಿದರು. ಸಿಎಂ, ಡಿಸಿಎಂ, ಸಚಿವರಾದ ತಿಮ್ಮಾಪುರ, ಸತೀಶ್‌ಗೆ ಜೈಕಾರ ಹಾಕಿದರು. ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ, ಮುಂಡಗೋಡ, ಶಿರಸಿಯಲ್ಲಿ, ಹಾವೇರಿಯ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ, ಕೊಪ್ಪಳದ ಬಸವೇಶ್ವರ ವೃತ್ತದಲ್ಲಿ ಕಾಂಗ್ರೆಸ್ ನಾಯಕರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.


ಬಾಗಲಕೋಟೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ಸಂಭ್ರಮಾಚರಣೆ.